ಬುಧವಾರ, ಜುಲೈ 16, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 196 | ಪುಟ 14

prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪಡಿಕ್ಕಲ್‌ಗೆ ಬಂಪರ್



ಎಡಗೈ ಬ್ಯಾಟರ್ ದೇವದತ್ತ ಪಡಿಕ್ಕಲ್ ಅವರು ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಗಾಗಿ ನಡೆದ ಹರಾಜು ಪ್ರಕ್ರಿಯೆಯಲ್ಲಿ ₹13.20 ಲಕ್ಷ ಮೊತ್ತಕ್ಕೆ ಹುಬ್ಬಳ್ಳಿ ಟೈಗರ್ಸ್ ತಂಡದ ಪಾಲಾದರು

ಮರಳು ಶಿಲ್ಪ ಕೋರ್ಸ್



ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯವು ಮರಳು ಶಿಲ್ಪ ಕಲಾವಿದ ಸುದರ್ಶನ್ ಪಟ್ನಾಯಕ್ ಸಹಭಾಗಿತ್ವದಲ್ಲಿ ಮರಳು ಶಿಲ್ಪಕ್ಕೆ ಸಂಬಂಧಿಸಿದ ಎರಡು ಆನ್‌ಲೈನ್ ಕೋರ್ಸ್‌ಗಳನ್ನು ಆರಂಭಿಸಲಿದೆ

ಸೆನ್ಸೆಕ್ಸ್ 82,570 | ನಿಫ್ಟಿ 25,149 | $/₹ 85.76 | ಚಿನ್ನ (Std. 10g) ₹1,03,100 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,18,800 (ಬೆಂಗಳೂರು)

ಭೂಸ್ವಾಧೀನ: ಹಿಂದೆ ಸರಿದ ಸರ್ಕಾರ

ದೇವನಹಳ್ಳಿ ರೈತರ ಹಿತಾಸಕ್ತಿ ಪರ ನಿರ್ಧಾರ ಕೈಗೊಂಡ ಸರ್ಕಾರ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂಸ್ವಾಧೀನ ವಿರೋಧಿಸಿ ದೇವನಹಳ್ಳಿ ತಾಲ್ಲೂಕು ಚನ್ನರಾಯ ಪಟ್ಟಣ ಹೋಬಳಿ ರೈತರು 1,198 ದಿನ ನಡೆಸಿದ ಹೋರಾಟಕ್ಕೆ ಮನ್ನಣೆ ನೀಡಿದ ರಾಜ್ಯ ಸರ್ಕಾರ, ಜಮೀನು ಸ್ವಾಧೀನಕ್ಕೆ ಹೊರಡಿಸಿದ್ದ ಅಧಿಸೂಚನೆ ಹಿಂಪಡೆದಿದೆ.

ಭೂಸ್ವಾಧೀನಕ್ಕೆ ವಿರೋಧ ವ್ಯಕ್ತಪಡಿಸುತ್ತಿರುವ ರೈತರು, ರೈತ ಸಂಘದ ಮುಖಂಡರು, ಹೋರಾಟಗಾರರ ಜತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚರ್ಚೆ ನಡೆಸಿದ ಬಳಿಕ ಅಧಿಸೂಚನೆ ಹಿಂಪಡೆಯುವ ನಿರ್ಧಾರ ಪ್ರಕಟಿಸಿದರು. ಸರ್ಕಾರದ ನಿರ್ಧಾರ ಹೊರಬೀಳುತ್ತಿದ್ದಂತೆಯೇ ರೈತರು ಚಪ್ಪಾಳೆ ತಟ್ಟಿ ಹರ್ಷ ವ್ಯಕ್ತಪಡಿಸಿದರು. ಸಿದ್ದರಾಮಯ್ಯ, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್. ಮುನಿಯಪ್ಪ ಅವರಿಗೆ ಅಭಿನಂದನೆ ಸಲ್ಲಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಸಿದ್ದರಾಮಯ್ಯ, ಜಮೀನು ಸ್ವಾಧೀನ ಕೈಬಿಟ್ಟರೆ ಉದ್ದೇಶಿತ ಯೋಜನೆ, ಕೈಗಾರಿಕೆಗಳು ಬೇರೆ ರಾಜ್ಯಕ್ಕೆ ಹೋಗುವ ಸಾಧ್ಯತೆ ಇದೆ' ಎಂದು ಅವರು ಹೇಳಿದರು.

6

‘ಸ್ವಇಚ್ಛೆಯ ಜಮೀನಿಗೆ ಹೆಚ್ಚಿನ ಪರಿಹಾರ’

ಚನ್ನರಾಯಪಟ್ಟಣ ಹೋಬಳಿಯ ಕೆಲ ರೈತರು ಜಮೀನು ನೀಡಲು ಮುಂದೆ ಬಂದಿದ್ದಾರೆ. ಸ್ವಯಂ ಪ್ರೇರಣೆಯಿಂದ ನೀಡುವ ಜಮೀನಿಗೆ ಮಾರ್ಗಸೂಚಿ ದರಕ್ಕಿಂತ ಹೆಚ್ಚಿನ ಪರಿಹಾರ ನೀಡಲಾಗುವುದು ಅಥವಾ ಅಭಿವೃದ್ಧಿಪಡಿಸಿದ ಪ್ರದೇಶದಲ್ಲಿ ಪ್ರತಿ ಎಕರೆಗೆ ಶೇ 50ರಷ್ಟು ವಿಸ್ತೀರ್ಣದ ನಿವೇಶನ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.



ದೇವನಹಳ್ಳಿ ಭೂಸ್ವಾಧೀನ ಅಧಿಸೂಚನೆ ಹಿಂಪಡೆದ ನಿರ್ಧಾರ ಪ್ರಕಟಿಸಿದ ಬಳಿಕ ಸ್ಥಳೀಯ ರೈತ ಮಹಿಳೆ ಮುನಿವೆಂಕಟಮ್ಮ ನೇತೃತ್ವದಲ್ಲಿ ರೈತರು ಸಿದ್ದರಾಮಯ್ಯ ಅವರಿಗೆ ಕೃತಜ್ಞತೆ ಸಲ್ಲಿಸಿದರು — ಚಿತ್ರ: ರಂಜು ಪಿ

‘ಆಂಧ್ರಕ್ಕೆ ಬನ್ನಿ...’



ವೈಮಾನಿಕ ಉದ್ಯಮದಲ್ಲಿರುವವರೇ ಈ ವಿಷಯ ಕೇಳಿ ಬೇಸರವಾಯಿತು. ವೈಮಾನಿಕ ಉದ್ಯಮ ಆಂಧ್ರ ಪ್ರದೇಶಕ್ಕೆ ಬಂದರೆ ಸ್ವಾಗತಿಸುತ್ತೇವೆ. ನಮ್ಮಲ್ಲಿ ನಿಮಗಾಗಿ ಆಕರ್ಷಕವಾದ ವೈಮಾನಿಕ ನೀತಿಯಿದೆ. ಅತ್ಯುತ್ತಮ ಪ್ರೋತ್ಸಾಹದಾಯಕ ಯೋಜನೆಗಳು ಕಾಯುತ್ತಿವೆ. ಅಲ್ಲದೆ ಬಳಕೆಗೆ ಸಿದ್ಧವಿರುವ 8,000 ಎಕರೆ ಜಮೀನು ಸಹ ಇದೆ. ಈ ಬಗ್ಗೆ ನೀವು ನಮ್ಮೊಂದಿಗೆ ಮಾತುಕತೆ ನಡೆಸುತ್ತೀರಿ ಎಂದು ನಿರೀಕ್ಷಿಸುತ್ತೇನೆ

ನಾರಾ ಲೋಕೇಶ್, ಮಾಹಿತಿ ತಂತ್ರಜ್ಞಾನ ಸಚಿವ, ಆಂಧ್ರಪ್ರದೇಶ

ದೇವನಹಳ್ಳಿ ಬೆಂಗಳೂರಿಗೆ ಹತ್ತಿರವಿದೆ. ಅಂತರರಾಷ್ಟ್ರೀಯ ವಿಮಾನನಿಲ್ದಾಣ ಇದ್ದು, ಕೈಗಾರಿಕೆ ಸ್ಥಾಪನೆಗೆ ಪ್ರಶಸ್ತ ಸ್ಥಳ. ಆದರೆ, ರೈತರ ಬದುಕೂ ಅಷ್ಟೇ ಮುಖ್ಯ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಸ್ವಾಧೀನ ಕೈಬಿಟ್ಟರೆ ಉದ್ದೇಶಿತ ಯೋಜನೆಗೆ ಹಿನ್ನಡೆಯಾಗುವುದು ಸಹಜ. ಆದರೂ, ಸಿದ್ದರಾಮಯ್ಯ ನುಡಿದಂತೆ ನಡೆದಿದ್ದಾರೆ. ರೈತರಿಗೆ ನ್ಯಾಯ ಒದಗಿಸಿದ್ದಾರೆ

ಪ್ರಕಾಶ್‌ರಾಜ್, ನಟ

ಸ್ವಯಂಪ್ರೇರಣೆಯಿಂದ ಜಮೀನು ನೀಡಲು ಬಯಸಿದ್ದ ರೈತರಿಗೂ ನಿರಾಸೆಯಾಗದಂತೆ ಸರ್ಕಾರ ಸೂಕ್ತ ನಿರ್ಧಾರ ತೆಗೆದುಕೊಂಡಿದೆ. ಬಹಳಷ್ಟು ರೈತರು ಜಮೀನು ನೀಡಲು ಮುಂದೆ ಬಂದಿದ್ದಾರೆ

ಎಂ.ಬಿ. ಪಾಟೀಲ, ಕೈಗಾರಿಕಾ ಸಚಿವ

ಭಾರತದ ಬಾಹ್ಯಾಕಾಶ ಕ್ಷೇತ್ರಕ್ಕೆ ‘ಶುಕ್ಲಾ ದೆಸೆ’

ಶುಭಾಂಶು ಶುಭಾಗಮನ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ/ಚೆನ್ನೈ: ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ತೆರಳಿದ್ದ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಹಾಗೂ ಇತರ ಮೂವರು ಗಗನಯಾನಿಗಳನ್ನು ಹೊತ್ತ ಬಾಹ್ಯಾಕಾಶ ಕೋಶ ‘ಡ್ರ್ಯಾಗನ್ ಗ್ರೇಸ್’, ಮಂಗಳವಾರ ಮಧ್ಯಾಹ್ನ 3.01ಕ್ಕೆ (ಭಾರತೀಯ ಕಾಲಮಾನ) ಅಮೆರಿಕದ ದಕ್ಷಿಣ ಕ್ಯಾಲಿಫೋರ್ನಿಯಾದ ಸ್ಯಾನ್ ಡಿಯೆಗೊ ಕರಾವಳಿಯಲ್ಲಿ ಬಂದಿಳಿಯಿತು.

ಈ ಮೂಲಕ, ಭಾರತದ ಗಗನಯಾನಿ ಶುಭಾಂಶು ಶುಕ್ಲಾ ಅವರು ದೇಶದ ಅಂತರಿಕ್ಷ ಯಾನ ಮತ್ತು ಅನ್ವೇಷಣೆ ಕ್ಷೇತ್ರದಲ್ಲಿ ಹೊಸ ಇತಿಹಾಸ ಸೃಷ್ಟಿಸಿದರು. ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಪಯಣಿಸಿದ ಮೊದಲ ಭಾರತೀಯ ಎಂಬ ಗೌರವಕ್ಕೂ ಪಾತ್ರರಾಗಿದ್ದಾರೆ.

‘ಡ್ರ್ಯಾಗನ್ ಗ್ರೇಸ್’ ಅನ್ನು ಮುನ್ನಡೆಸಿದ ಶುಕ್ಲಾ, ಅದನ್ನು ಪೆಸಿಫಿಕ್ ಸಾಗರದಲ್ಲಿ ಇಳಿಸಿದರು.

7

ಇನ್ನೊಂದು ಸುದ್ದಿ 9



ಐಎಸ್‌ಎಸ್‌ನಿಂದ ಭೂಮಿಗೆ ಮಂಗಳವಾರ ಮರಳಿದ ಭಾರತದ ಗಗನಯಾನಿ ಶುಭಾಂಶು ಶುಕ್ಲಾ ಅವರು ಕೈಬೀಸಿದರು —ಪಿಟಿಐ ಚಿತ್ರ

28 ಗಂಟೆ	ಭೂಮಿಯಿಂದ ಐಎಸ್‌ಎಸ್‌ಗೆ ತೆರಳಲು ತೆಗೆದುಕೊಂಡ ಸಮಯ
23 ಗಂಟೆ	ಐಎಸ್‌ಎಸ್‌ನಿಂದ ಮರಳಿ ಭೂಮಿಗೆ ಬರಲು ತೆಗೆದುಕೊಂಡ ಸಮಯ
60	ಐಎಸ್‌ಎಸ್‌ನಲ್ಲಿ ಕೈಗೊಂಡ ಒಟ್ಟು ಪ್ರಯೋಗಗಳು/ಸಂಶೋಧನೆಗಳು
320	ಭೂಮಿ ಸುತ್ತ ಗಗನಯಾನಿಗಳು ಕೈಗೊಂಡ ಒಟ್ಟು ಪರಿಭ್ರಮಣೆಗಳು
₹550 ಕೋಟಿ	ಈ ಅಂತರಿಕ್ಷ ಕಾರ್ಯಕ್ರಮಕ್ಕೆ ಇಸ್ರೊ ಮಾಡಿರುವ ವೆಚ್ಚ

ಚಿನಕುರುಳಿ ಪ್ರಕಾಶ್ ಶೆಟ್ಟಿ



ಮಲ್ಟಿಪ್ಲೆಕ್ಸ್ ಟಿಕೆಟ್: ₹200ರ ಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಟಿಪ್ಲೆಕ್ಸ್ ಸಿನಿಮಾ ಮಂದಿರಗಳ ಟಿಕೆಟ್ ದರಕ್ಕೆ ಗರಿಷ್ಠ ₹200 ಮಿತಿ ಹೇರಿ, ರಾಜ್ಯ ಗೃಹ ಇಲಾಖೆ ಕರಡು ಅಧಿಸೂಚನೆಯನ್ನು ಮಂಗಳವಾರ ಹೊರಡಿಸಿದೆ.

‘ಕರ್ನಾಟಕ ಚಲನಚಿತ್ರ (ನಿಯಂತ್ರಣ) (ತಿದ್ದುಪಡಿ) ಮಸೂದೆ–2025’ರ ಕರಡು ಅಧಿಸೂಚನೆ ಇದಾಗಿದೆ.



ಮಲ್ಟಿಪ್ಲೆಕ್ಸ್‌ಗಳಲ್ಲಿ ಅನ್ಯ ಭಾಷೆಯ ಸಿನಿಮಾಗಳಿಗೂ ಅನ್ವಯವಾಗುವಂತೆ, ತೆರಿಗೆ ಒಳಗೊಂಡು ಟಿಕೆಟ್‌ಗೆ ಗರಿಷ್ಠ ₹200 ವಿಧಿಸಬಹುದು ಎಂದು ಕರಡು ಅಧಿಸೂಚನೆ ವಿವರಿಸಿದೆ. ಈ ಅಧಿಸೂಚನೆಗೆ ಆಕ್ಷೇಪ ಸಲ್ಲಿಸಲು 15 ದಿನ ಅವಕಾಶ ನೀಡಲಾಗಿದೆ.

ಮಲ್ಟಿಪ್ಲೆಕ್ಸ್‌ಗಳಲ್ಲಿ ಸಿನಿಮಾಗಳ ಟಿಕೆಟ್‌ಗೆ ವಿಪರೀತ ದರ ನಿಗದಿ ಮಾಡಲಾಗುತ್ತಿದ್ದು, ಏಕರೂಪತೆ ಇಲ್ಲ. ವಿಪರೀತ ದರ ಇರುವ ಕಾರಣದಿಂದಲೇ ಜನರು ಸಿನಿಮಾಕ್ಕೆ ಬರುತ್ತಿಲ್ಲ. ಹೀಗಾಗಿ ಟಿಕೆಟ್ ದರಕ್ಕೆ ಮಿತಿ ಹೇರಬೇಕು ಎಂದು ನಿರ್ಮಾಪಕರು, ನಿರ್ದೇಶಕರು ಮುಖ್ಯ ಮಂತ್ರಿಗೆ ಮನವಿ ಸಲ್ಲಿಸಿದ್ದರು.

‘ಟಿಕೆಟ್ ದರವನ್ನು ₹200ಕ್ಕೆ ಮಿತಿಗೊಳಿಸುತ್ತೇವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಲವು ಬಾರಿ ಹೇಳಿದ್ದರು. ಈ ಸಾಲಿನ ಬಜೆಟ್ ಮೇಲಿನ ಚರ್ಚೆಯ ವೇಳೆಯೂ ಈ ವಿಷಯ ಪ್ರಸ್ತಾಪವಾಗಿತ್ತು.

ವಿದ್ಯಾರ್ಥಿನಿ ಮೇಲೆ ಅತ್ಯಾಚಾರ

ಮೂಡುಬಿದಿರೆಯ ಉಪನ್ಯಾಸಕರಿಬ್ಬರು ಸೇರಿ ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿನಿಯನ್ನು ಬ್ಲ್ಯಾಕ್‌ಮೇಲ್ ಮಾಡಿ ಅತ್ಯಾಚಾರ ಎಸಗಿದ್ದ ಆರೋಪದಡಿ ಮೂಡುಬಿದಿರೆಯ ಕಾಲೇಜೊಂದರ ಇಬ್ಬರು ಉಪನ್ಯಾಸಕರು ಹಾಗೂ ಅವರ ಸ್ನೇಹಿತನನ್ನು ಮಾರತ್‌ಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಕಾಲೇಜಿನ ಭೌತವಿಜ್ಞಾನ ವಿಭಾಗದ ಉಪನ್ಯಾಸಕ ನರೇಂದ್ರ, ಜೀವವಿಜ್ಞಾನ ವಿಭಾಗದ ಉಪನ್ಯಾಸಕ ಸಂದೀಪ್ ಹಾಗೂ ಅವರ ಸ್ನೇಹಿತ, ಬೆಂಗಳೂರಿನ ನಿವಾಸಿ ಅನೂಪ್ ಬಂಧಿತರು.



ನರೇಂದ್ರ



ಸಂದೀಪ್



ಅನೂಪ್

19 ವರ್ಷದ ಸಂತ್ರಸ್ತೆಯ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಘಟನೆಯು ಕೆಲವು ತಿಂಗಳ ಹಿಂದೆ ನಡೆದಿತ್ತು. ಆರೋಪಿಗಳ ಬ್ಲ್ಯಾಕ್‌ಮೇಲ್ ಹೆಚ್ಚಾದ ಮೇಲೆ ಕಳೆದ ವಾರ ಪೋಷಕರ ಜತೆಗೆ ಮಹಿಳಾ ಆಯೋಗಕ್ಕೆ ಬಂದು ವಿದ್ಯಾರ್ಥಿನಿ ದೂರು ನೀಡಿದ್ದರು. ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಅವರು ದೂರನ್ನು ವೈಟ್‌ಫೀಲ್ಡ್ ವಿಭಾಗದ ಡಿಸಿಪಿಗೆ ವರ್ಗಾಯಿಸಿ ತನಿಖೆಗೆ ಸೂಚನೆ ನೀಡಿದ್ದರು. ಮಾರತ್‌ಹಳ್ಳಿ ಠಾಣೆಯ ಪೊಲೀಸರು ತನಿಖೆ ನಡೆಸಿ ಮೂವರನ್ನು ಬಂಧಿಸಿದ್ದಾರೆ.

10

‘ಎಸ್‌ಎಂಎಸ್ ಉದ್ದೇಶ ಗುರುತಿಸಲು ಅಕ್ಷರದ ಸುಳಿವು’

ನವದೆಹಲಿ (ಪಿಟಿಐ): ಎಸ್‌ಎಂಎಸ್ ಕಳುಹಿಸಿದವರು ಯಾವ ಉದ್ದೇಶಕ್ಕೆ ಅದನ್ನು ಕಳುಹಿಸಿದ್ದಾರೆ ಎಂಬುದನ್ನು ಸುಲಭವಾಗಿ ಗುರುತಿಸುವುದು ಬಳಕೆದಾರರಿಗೆ ಇನ್ನು ಮುಂದೆ ಸಾಧ್ಯವಾಗಲಿದೆ.

ಸಂದೇಶ ಕಳುಹಿಸಿದವರ ಹೆಸರಿನ ನಂತರದಲ್ಲಿ ನಿರ್ದಿಷ್ಟ ಇಂಗ್ಲಿಷ್ ಅಕ್ಷರಗಳನ್ನು ಸೇರಿಸಿ, ಸಂದೇಶ ಕಳುಹಿಸಿದ ಉದ್ದೇಶ ಏನು ಎಂಬುದನ್ನು ತಿಳಿಯುವಂಥ ವ್ಯವಸ್ಥೆ ಜಾರಿಯಾಗಿದೆ.

ಜಿಯೋ, ಏರ್‌ಟೆಲ್, ವೊಡಾಫೋನ್, ಐಡಿಯಾ ಕಂಪನಿಗಳ ಭಾರತೀಯ ಸೆಲ್ಯುಲಾರ್ ಆಪರೇಟರ್‌ಗಳ ಸಂಘವು (ಸಿಒಎಐ) ಈ ವಿಷಯ ತಿಳಿಸಿದೆ.

10

ಯಾವ ಸಂದೇಶಕ್ಕೆ ಯಾವ ಅಕ್ಷರ?

ಪ್ರಚಾರದ ಉದ್ದೇಶ	ಪಿ
ಸೇವಾ ಉದ್ದೇಶ	ಎಸ್
ವಹಿವಾಟಿಗೆ ಸಂಬಂಧಿಸಿದ್ದು	ಟಿ
ಸರ್ಕಾರಿ ಸಂದೇಶ	ಜಿ

(ಎಸ್‌ಎಂಎಸ್ ಸಂದೇಶದ ಶೀರ್ಷಿಕೆಯ ನಂತರ ಈ ಅಕ್ಷರಗಳು ಇದ್ದರೆ, ಅವು ಸಂದೇಶದ ಉದ್ದೇಶವನ್ನು ಹೇಳುತ್ತವೆ)



ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣವಿದ್ದು, ಅಲ್ಲಲ್ಲಿ ತುಂತುರು ಮಳೆ ಬೀಳಲಿದೆ

ಮೂರು ಅಂತಸ್ತಿನ ಕಟ್ಟಡ ಒಸಿಗೆ ವಿನಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿನ ಎಲ್ಲ ಕಡೆ 1200 ಚದರಡಿ ನಿವೇಶನಗಳಲ್ಲಿ ಇರುವ ಮೂರು ಅಂತಸ್ತಿನ ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣ ಪತ್ರ (ಒಸಿ) ಪಡೆಯುವುದಕ್ಕೆ ವಿನಾಯಿತಿ ನೀಡಲು ನಗರಾಭಿವೃದ್ಧಿ ಇಲಾಖೆ ತೀರ್ಮಾನಿಸಿದೆ.

ಇದಕ್ಕೆ ಸಂಬಂಧಿಸಿದಂತೆ, ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ (ಜಿಬಿಎ)–2024, ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆ 1976 (ಕೆಎಂಸಿ ಕಾಯ್ದೆ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾದರಿ ಕಟ್ಟಡ ಬೈ-ಲಾಗಳನ್ನು ತಿದ್ದುಪಡಿ ಮಾಡಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ನಿರ್ಧರಿಸಲಾಗಿದೆ.

1200 ಚದರಡಿ ವಿಸ್ತೀರ್ಣದ ನಿವೇಶನದಲ್ಲಿ ನೆಲ ಅಂತಸ್ತು + ಎರಡು ಅಂತಸ್ತು ಅಥವಾ ಸ್ಟಿಲ್ಟ್ + ಮೂರು ಅಂತಸ್ತಿನವರೆಗಿನ ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆಯುವುದರಿಂದ ವಿನಾಯಿತಿ ನೀಡಲಾಗುತ್ತದೆ.

ಜಿಬಿಎ–2024 ಕಾಯ್ದೆಯಲ್ಲಿ ಒಸಿಗೆ ವಿನಾಯಿತಿ ನೀಡಲು ಸರ್ಕಾರ ಅಧಿಸೂಚನೆ ಹೊರಡಿಸಬಹುದು ಎಂದು ಸೆಕ್ಷನ್ 241(7)ರಲ್ಲಿ ಹೇಳಲಾಗಿದೆ. ಆದರೆ, ಬಿಬಿಎಂಪಿ ಕಾಯ್ದೆ–2020, ಕೆಎಂಸಿ– 1976 ಕಾಯ್ದೆ, ಕರ್ನಾಟಕ ಪುರಸಭೆ ಕಾಯ್ದೆ 1964ರಲ್ಲಿ ಈ ಅವಕಾಶ ಇರುವುದಿಲ್ಲ.

ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಉಪಮುಖ್ಯಮಂತ್ರಿ, ಸಂಸದೀಯ ವ್ಯವಹಾರಗಳ ಸಚಿವರು, ಆಹಾರ, ಕೈಗಾರಿಕೆ, ಇಂಧನ, ಕಂದಾಯ, ನಗರಾಭಿವೃದ್ಧಿ, ಪೌರಾಡಳಿತ ಸಚಿವರೊಂದಿಗೆ ನಡೆದ ಸಭೆಯಲ್ಲಿ ಎಲ್ಲ ಕಾಯ್ದೆಗಳಲ್ಲೂ ಸಮಾನಾಂತರ ಅವಕಾಶ ಗಳು ಇರಬೇಕು ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಆದ್ದರಿಂದ, ಒಸಿಗೆ ವಿನಾಯಿತಿ ನೀಡಲು ನಿಯಮಗಳನ್ನು ರಚಿಸಿ, ಕಾಯ್ದೆಗಳಿಗೆ ತಿದ್ದುಪಡಿ ತರರಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನೇತೃತ್ವದ ಸಭೆಯಲ್ಲಿ ನಿರ್ಧರಿಸಲಾಗಿದೆ.

ನಗರಾಭಿವೃದ್ಧಿ ಇಲಾಖೆ, ಬಿಬಿಎಂಪಿ, ಬೆಸ್ಕಾಂ, ಪೌರಾಡಳಿತ, ಇಂಧನ, ಪಂಚಾಯತ್ ರಾಜ್ ಆಯುಕ್ತಾಲಯದ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಅವಳಿ ಸುರಂಗ ರಸ್ತೆಗೆ ಟೆಂಡರ್

ನಿರ್ಮಾಣ ಅವಧಿ 50 ತಿಂಗಳು

• 34 ವರ್ಷ ನಿರ್ವಹಣೆ ಗುತ್ತಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ಜಂಕ್ಷನ್‌ನಿಂದ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೆ (ಉತ್ತರ–ದಕ್ಷಿಣ ಕಾರಿಡಾರ್) ಮೂರು ಪಥಗಳ ಅವಳಿ ಸುರಂಗ ರಸ್ತೆ (ಟ್ವಿನ್ ಟನಲ್) ನಿರ್ಮಾಣಕ್ಕೆ ₹17,698 ಕೋಟಿ ಅಂದಾಜು ವೆಚ್ಚದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.

ನಗರದ ಬೃಹತ್ ಮೂಲಸೌಕರ್ಯಗಳ ಅಭಿವೃದ್ಧಿಗೆ ರಚಿಸಲಾಗಿರುವ ವಿಶೇಷ ಉದ್ದೇಶದ ಸಂಸ್ಥೆ (ಎಸ್‌ಪಿವಿ)– 'ಬೆಂಗಳೂರು ಸ್ಮಾರ್ಟ್ ಇನ್ ಫ್ರಾಸ್ಟ್ರಕ್ಚರ್ ಲಿಮಿಟೆಡ್ ಸಂಸ್ಥೆ' (ಬಿ-ಸ್ಮೈಲ್) ವತಿಯಿಂದ ಎರಡು ಪ್ಯಾಕೇಜ್‌ಗಳಲ್ಲಿ 'ನಿರ್ಮಾಣ– ಕಾರ್ಯಾಚರಣೆ– ವರ್ಗಾವಣೆ' (ಬೂಟ್) ಮಾದರಿಯಲ್ಲಿ ಟೆಂಡರ್ ಕರೆಯಲಾಗಿದೆ.

ಅವಳಿ ಸುರಂಗ ರಸ್ತೆಯ ಜೊತೆಗೆ ಮೂರು ಪಥ ಅಥವಾ ಎರಡು ಪಥದ ಪ್ರವೇಶ ನಿರ್ಗಮನದ ರ‍್ಯಾಂಪ್‌ಗಳನ್ನು ನಿರ್ಮಿಸಿ, ಕಾರ್ಯಾಚರಣೆ ಮಾಡಿ, ನಿರ್ವಹಣೆ ಮಾಡಲು ಟೆಂಡರ್ ಆಹ್ವಾನಿಸಲಾಗಿದೆ. ಸೆಪ್ಟೆಂಬರ್ 3ರಂದು ಬಿಡ್ ಸಲ್ಲಿಸಲು ಅಂತಿಮ ದಿನವಾಗಿದ್ದು, 4ರಂದು ಆರ್ಥಿಕ ಬಿಡ್ ತೆರೆಯಲಾಗುತ್ತದೆ.

16.745 ಕಿ.ಮೀ ಉತ್ತರ–ದಕ್ಷಿಣ ಕಾರಿಡಾರ್ ಒಟ್ಟು ಉದ್ದ

ಪ್ಯಾಕೇಜ್–1

8.748 ಕಿ.ಮೀ, ಹೆಬ್ಬಾಳ ಜಂಕ್ಷನ್ ಎಸ್ಟೀಮ್ ಮಾಲ್‌ನಿಂದ ಶೇಷಾದ್ರಿ ರಸ್ತೆ, ರೇಸ್ ಕೋರ್ಸ್ ಜಂಕ್ಷನ್‌ವರೆಗೆ

₹8,770 ಕೋಟಿ ಪ್ಯಾಕೇಜ್ –1ರ ಅಂದಾಜು ವೆಚ್ಚ

ಪ್ಯಾಕೇಜ್–2

7.997 ಕಿ.ಮೀ, ಶೇಷಾದ್ರಿ ರಸ್ತೆ, ರೇಸ್ ಕೋರ್ಸ್ ಜಂಕ್ಷನ್‌ನಿಂದ ಸಿಲ್ಕ್‌ಬೋರ್ಡ್ ಜಂಕ್ಷನ್‌ವರೆಗೆ

₹8,928 ಕೋಟಿ ಪ್ಯಾಕೇಜ್ –2ರ ಅಂದಾಜು ವೆಚ್ಚ



'ಅವಳಿ ಸುರಂಗ ರಸ್ತೆ' ಮಾದರಿ

ಬಿಬಿಎಂಪಿ, ಬಿ-ಸ್ಮೈಲ್ ನೋಂದಣಿಯಾಗಿರುವ ಗುತ್ತಿಗೆದಾರರು ಅಥವಾ ಕೇಂದ್ರ ಲೋಕೋಪಯೋಗಿ, ರಾಜ್ಯ ಲೋಕೋಪಯೋಗಿ ಇಲಾಖೆ, ರೈಲ್ವೆ, ರಾಷ್ಟ್ರೀಯ ಹೆದ್ದಾರಿಗಳಲ್ಲಿ ನೋಂದಣಿಯಾಗಿರುವ ಗುತ್ತಿಗೆದಾರರು ಬಿಡ್ ಸಲ್ಲಿಸಲು ಅರ್ಹರಾಗಿರುತ್ತಾರೆ. ಜಂಟಿ ಸಂಸ್ಥೆಗಳಾಗಿ ಅಥವಾ ಒಕ್ಕೂಟ ಗಳಾಗಿಯೂ ಬಿಡ್ ಸಲ್ಲಿಬಹುದಾಗಿದೆ ಎಂದು ಟೆಂಡರ್ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ಯಾವುದೇ ಕಾರಣವನ್ನು ನೀಡದೆ ಎಲ್ಲ ಅಥವಾ ಯಾವುದೇ ಬಿಡ್ ಅನ್ನು ಒಪ್ಪಿಕೊಳ್ಳುವ ಇಲ್ಲವೇ ತಿರಸ್ಕರಿಸುವ ಹಕ್ಕನ್ನು ಬಿ-ಸ್ಮೈಲ್ ಕಾಯ್ದಿರಿಸಿಕೊಂಡಿದೆ' ಎಂದು ಸ್ಪಷ್ಟಪಡಿಸಲಾಗಿದೆ.

ಅವಳಿ ಸುರಂಗ ರಸ್ತೆಯನ್ನು ಬೂಟ್ ಆಧಾರದಲ್ಲಿ ನಿರ್ಮಿಸಲು ಜೂನ್ 5ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿತ್ತು.

ಸುದ್ದಿ 2 ನಿಮಿಷ

ಸಾರಿಗೆ ಹಬ್‌ಗೆ 45 ಎಕರೆ: ಸಿ.ಎಂ.ಗೆ ಶೋಭಾ ಕರಂದ್ಲಾಜೆ ಪತ್ರ

ಬೆಂಗಳೂರು: ವಿಶ್ವದರ್ಜೆಯ ಬಹುಮಾದರಿ ಸಾರಿಗೆ ಹಬ್ ಸ್ಥಾಪಿಸಲು ಹೆಬ್ಬಾಳದ ಬಳಿ ಕೇಳಿದ್ದ 45 ಎಕರೆ ಬದಲು, 9 ಎಕರೆ ಜಾಗ ಮಂಜೂರು ಮಾಡಿರುವ ನಿರ್ಧಾರವನ್ನು ಮರು ಪರಿಶೀಲಿಸುವಂತೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

ಬೆಂಗಳೂರಿನ ಸಂಚಾರ ದಟ್ಟಣೆ, ಭವಿಷ್ಯದ ಸುಗಮ ಸಂಚಾರದ ವ್ಯವಸ್ಥೆಗೆ ಬಹು ಮಾದರಿ ಸಾರಿಗೆ ಹಬ್ ನಿರ್ಮಿಸಲು ಬೆಂಗಳೂರು ಮೆಟ್ರೊ ರೈಲು ನಿಗಮಕ್ಕೆ 45 ಎಕರೆ ಜಾಗ ಬೇಕಿದೆ. ಅಗತ್ಯವಿರುವ ಪೂರ್ಣ ಭೂಮಿಯನ್ನು ನಿರಾಕರಿಸುವುದರಿಂದ ಮೂಲಸೌಕರ್ಯ ಯೋಜನೆ ಹಳಿತಪ್ಪುವ ಅಪಾಯವಿದೆ ಎಂದಿದ್ದಾರೆ.



ಸಾರಿಗೆ ಹಬ್ ಸ್ಥಗಿತವಾದರೆ ಸಂಚಾರ ದಟ್ಟಣೆಗೆ ಜನರು ಪರಿತಪಿಸಬೇಕಾಗುತ್ತದೆ. ಬೆಂಗಳೂರಿನ ಬೆಳವಣಿಗೆಯನ್ನು ಕುಂಠಿತಗೊಳಿಸುವ ಅಪಾಯವಿದೆ. ಸ್ಥಾಪಿತ ಲಾಬಿಗಳ ಒತ್ತಡಕ್ಕಿಂತ ಸಾರ್ವಜನಿಕ ಹಿತಾಸಕ್ತಿಗೆ ರಾಜ್ಯ ಸರ್ಕಾರ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಐಐಎಂಬಿ: ಇದೇ ಮೊದಲ ಬಾರಿ ಬಿ.ಎಸ್‌ಸಿ ಪದವಿ

ಬೆಂಗಳೂರು: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್–ಬೆಂಗಳೂರು (ಐಐಎಂಬಿ) 2026-27ನೇ ಶೈಕ್ಷಣಿಕ ಸಾಲಿನಿಂದ ಪದವಿ ತರಗತಿಗಳನ್ನು ಆರಂಭಿಸುತ್ತಿದೆ.

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಬಳಿ ಇರುವ ಹೊಸ ಕ್ಯಾಂಪಸ್‌ನಲ್ಲಿ ನಾಲ್ಕು ವರ್ಷಗಳ ಬಿ.ಎಸ್‌ಸಿ ಪದವಿ ಆರಂಭಿಸಲಾಗುತ್ತಿದ್ದು, ಅರ್ಥಶಾಸ್ತ್ರ ಮತ್ತು ದತ್ತಾಂಶ ವಿಜ್ಞಾನ ವಿಷಯಗಳನ್ನು ಮೊದಲ ವರ್ಷ ಪರಿಚಯಿಸಲಾಗುತ್ತಿದೆ. ರಾಷ್ಟ್ರೀಯ ಶಿಕ್ಷಣ ನೀತಿ ಪ್ರಕಾರ ಮೂರು ವರ್ಷಗಳನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ನಿರ್ಗಮನ ಆಯ್ಕೆ ನೀಡಲಾಗಿದೆ.

ಅರ್ಥಶಾಸ್ತ್ರದಲ್ಲಿ ಸಾರ್ವಜನಿಕ ನೀತಿ, ಅಭಿವೃದ್ಧಿ ಅರ್ಥಶಾಸ್ತ್ರ, ಅಲ್ಗಾರಿದಮಿಕ್ ಗೇಮ್, ಪರಿಸರ ಅರ್ಥಶಾಸ್ತ್ರ, ಆರೋಗ್ಯ ಅರ್ಥಶಾಸ್ತ್ರ ಹಾಗೂ ದತ್ತಾಂಶ ವಿಜ್ಞಾನದಲ್ಲಿ ಪರಿಮಾಣಾತ್ಮಕ ಅಪಾಯ ನಿರ್ವಹಣೆ, ಪೂರೈಕೆ ಸರಪಳಿ, ದತ್ತಾಂಶ ಕಂಪ್ಯೂಟಿಂಗ್ ಮೊದಲಾದ ಹಲವು ಆಯ್ಕೆಗಳಿರುತ್ತವೆ ಎಂದು ಐಐಎಂಬಿ ನಿರ್ದೇಶಕ ರಿಷಿಕೇಶ ಟಿ. ಕೃಷ್ಣನ್ ಹೇಳಿದರು.

ಈ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ದ್ವಿತೀಯ ಪಿಯುನಲ್ಲಿ ಗಣಿತವನ್ನು ಅಧ್ಯಯನ ಮಾಡಿರುವುದು ಕಡ್ಡಾಯ. ಪ್ರತಿ ವಿಷಯಕ್ಕೂ 40 ವಿದ್ಯಾರ್ಥಿಗಳಿಗೆ ಅವಕಾಶ ಇರುತ್ತದೆ. ರಾಷ್ಟ್ರ ಮಟ್ಟದ ಪ್ರವೇಶ ಪರೀಕ್ಷೆ ಮತ್ತು ಸಂದರ್ಶನದ ಮೂಲಕ ಆಯ್ಕೆ ನಡೆಯಲಿದೆ. ವಾರ್ಷಿಕ ಶುಲ್ಕ ₹8.5 ಲಕ್ಷ ನಿಗದಿ ಮಾಡಲಾಗಿದೆ ಎಂದರು.

'ವಿರೋಧ ಪಕ್ಷದ ನಾಯಕನಿಗೇ ವಸತಿಗೃಹ ಕೊಟ್ಟಿಲ್ಲ'



ಆಶೋಕ

ಬೆಂಗಳೂರು: 'ರಾಜ್ಯ ಸರ್ಕಾರಕ್ಕೆ ಆರು ಬಾರಿ ಪತ್ರ ಬರೆದರೂ, ಎರಡು ವರ್ಷಗಳಿಂದ ಅಧಿಕೃತ ಸರ್ಕಾರಿ ವಸತಿಗೃಹ ಕೊಟ್ಟಿಲ್ಲ' ಎಂದು ವಿಧಾನಸಭೆ ವಿರೋಧ ಪಕ್ಷ ನಾಯಕ ಆರ್. ಅಶೋಕ ಆರೋಪಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕಳೆದ ಅವಧಿಯಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ಅಂದು ವಿಧಾನಸಭೆ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ ಅವರಿಗೆ ನೀಡಿದ್ದ ವಸತಿಗೃಹವನ್ನೇ ನೀಡಲು ಕೇಳಿಕೊಂಡಿದ್ದೆ. ಆದರೆ, ಅವರೇ ಮುಖ್ಯಮಂತ್ರಿಯಾಗಿದ್ದರೂ ಸ್ಪಂದನೆ ಇಲ್ಲ, ಪತ್ರಕ್ಕೆ ಪ್ರತಿಕ್ರಿಯೆಯನ್ನೂ ನೀಡಿಲ್ಲ. ಇದು ಕಾಂಗ್ರೆಸ್ ಪಕ್ಷ ಶಿಷ್ಟಾಚಾರ ಪಾಲನೆ ಮಾಡುವ ಪರಿ' ಎಂದು ಟೀಕಿಸಿದರು.

'ಸಿಗಂದೂರು ಸೇತುವೆ ಉದ್ಘಾಟನೆ ಕಾರ್ಯಕ್ರಮದಲ್ಲಿ ಶಿಷ್ಟಾಚಾರ ಉಲ್ಲಂಘನೆ ಆಗಿಲ್ಲ. ಸಿದ್ದರಾಮಯ್ಯ ಮೊಸರಲ್ಲಿ ಕಲ್ಲು ಹುಡುಕುವ ಕೆಲಸ ಮಾಡುತ್ತಿದ್ದಾರೆ. ಪ್ರಧಾನಮಂತ್ರಿಗೆ ಪತ್ರ ಬರೆದಿರುವುದು ಸರಿ ಅಲ್ಲ. ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಸಾಗರದಲ್ಲಿದ್ದರೂ, ಕಾರ್ಯಕ್ರಮಕ್ಕೆ ಹೋಗಿಲ್ಲ. ಸೇತುವೆ ನಿರ್ಮಾಣದ ಕ್ರೆಡಿಟ್ ಬಿಜೆಪಿಗೆ ಹೋಗುತ್ತಿದೆ ಎನ್ನುವ ಹತಾಶೆಯಿಂದ ಗೊಂದಲ ಸೃಷ್ಟಿ ಮಾಡಲು ಹೊರಟಿದ್ದಾರೆ' ಎಂದರು.

ಬಡವರ ಕಲ್ಯಾಣಕ್ಕೆ ವರ್ಷಕ್ಕೆ ₹1 ಲಕ್ಷ ಕೋಟಿ ಮೀಸಲು: ಉಪ ಮುಖ್ಯಮಂತ್ರಿ ಡಿಕೆಶಿ

'ಗ್ಯಾರಂಟಿ ಸಮಿತಿ ಕೈಯಲ್ಲಿ 2028ರ ಭವಿಷ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ 2028ರಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಭವಿಷ್ಯ ಗ್ಯಾರಂಟಿ ಸಮಿತಿಗಳ ಕೈಯಲ್ಲಿದೆ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿಯ ಭಾರತ್ ಜೋಡೊ ಭವನದಲ್ಲಿ ಮಂಗಳವಾರ ನಡೆದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ರಾಜ್ಯ, ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದ ಪದಾಧಿಕಾರಿಗಳ ಸಮಾವೇಶದಲ್ಲಿ ಅವರು ಮಾತನಾಡಿದರು.

'ರಾಜ್ಯ ಸರ್ಕಾರ ಬಜೆಟ್‌ನ ಶೇ 25ರಷ್ಟು ಹಣವನ್ನು ಜನರ ಕಲ್ಯಾಣಕ್ಕೆ ವಿನಿಯೋಗಿಸುತ್ತಿದೆ. ಸಮಾಜ ಹಾಗೂ ಬಡವರ ಕಲ್ಯಾಣಕ್ಕೆ ಸರ್ಕಾರ ₹1 ಲಕ್ಷ ಕೋಟಿ ಹಣ ಮೀಸಲಿಟ್ಟಿದೆ. ₹50 ಸಾವಿರ ಕೋಟಿ ಗ್ಯಾರಂಟಿಗಳಿಗೆ ವೆಚ್ಚವಾದರೆ, ₹19 ಸಾವಿರ ಕೋಟಿ ರೈತರ ಪಂಪ್ ಸೆಟ್‌ಗಳಿಗೆ ಉಚಿತ ವಿದ್ಯುತ್, ಸುಮಾರು ₹11 ಸಾವಿರ ಕೋಟಿ ಪಿಂಚಣಿಗಳಿಗೆ ವ್ಯಯವಾಗುತ್ತಿದೆ' ಎಂದರು.

'ಗ್ಯಾರಂಟಿ ಸಮಿತಿಗಳು ಕೇವಲ ಪಂಚ ಗ್ಯಾರಂಟಿ ಯೋಜನೆಗೆ ಸೀಮಿತವಲ್ಲ. ಸರ್ಕಾರದ ಎಲ್ಲ ಜನಪರ ಯೋಜನೆಗಳ ಧ್ವನಿಯಾಗಬೇಕು. ಸಮಿತಿಯ ಪದಾಧಿಕಾರಿಗಳು ಗ್ಯಾರಂಟಿ ಯೋಜನೆ, ಖಾತಾ ದಾಖಲೆ ಹಂಚಿಕೆ ಹೆಸರಿನಲ್ಲಿ ಮನೆ ಬಾಗಿಲಿಗೆ ಹೋಗಿ ಜನರ ಮನ ಗೆಲ್ಲಬೇಕು. ಮುಂದೆ ಬರುವ ಸ್ಥಳೀಯ ಸಂಸ್ಥೆಯ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಲು ಶ್ರಮಿಸಬೇಕು' ಎಂದರು.



ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ರಾಜ್ಯ, ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದ ಪದಾಧಿಕಾರಿಗಳ ಸಮಾವೇಶದಲ್ಲಿ ಡಿ.ಕೆ. ಶಿವಕುಮಾರ್ ಮಾತನಾಡಿದರು

'ಗ್ಯಾರಂಟಿ ಸಮಿತಿಗಳನ್ನು ರಚಿಸಿ, ಕಾರ್ಯಕರ್ತರು ಸರ್ಕಾರದ ಈ ಯೋಜನೆಯ ಭಾಗವಾಗುವಂತೆ ಮಾಡಬೇಕು. ಸರ್ಕಾರದ ಮುಖವಾಣಿಯಾಗಿ ಕೆಲಸ ಮಾಡಬೇಕೆಂದು ಪಕ್ಷದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಸಲಹೆ ನೀಡಿದ್ದರು. ಅದರಂತೆ ಈ ಸಮಿತಿಗಳನ್ನು ಮಾಡಲಾಗಿದೆ. ಪ್ರತಿ ಕ್ಷೇತ್ರದಲ್ಲಿ ಪಕ್ಷಕ್ಕಾಗಿ ದುಡಿದ ಎಲ್ಲ ವರ್ಗಗಳ 15 ಜನರನ್ನು ಗುರುತಿಸಿ ಅಧಿಕಾರ ನೀಡಲಾಗಿದೆ. ಆದರೆ, ಸಮಿತಿಯಲ್ಲಿ ಇರುವವರಿಗೆ ತಮ್ಮ ಬೆಲೆ ಏನೆಂಬುದು ಇನ್ನೂ ಅರ್ಥವಾಗಿಲ್ಲ. ಸಮಿತಿಯಲ್ಲಿರುವವರು ಸರ್ಕಾರದ ಪ್ರತಿನಿಧಿಗಳು. ಸರ್ಕಾರದ ಧ್ವನಿ' ಎಂದರು.

'ನಾಯಕತ್ವ ಬೆಳೆಸುವಂತೆ ರಾಹುಲ್ ಗಾಂಧಿ ಸೂಚನೆ ನೀಡಿದ್ದಾರೆ. ಹೀಗಾಗಿ, ಕಾಲೇಜುಗಳಲ್ಲಿ ವಿದ್ಯಾರ್ಥಿ ಮಟ್ಟದ ಚುನಾವಣೆ ಮತ್ತೆ ನಡೆಸುವ ಬಗ್ಗೆ ಚರ್ಚಿಸುತ್ತಿದ್ದೇವೆ' ಎಂದರು.

'ಪಂಚಾಯಿತಿ ಮಟ್ಟದಲ್ಲಿ ಸಮಾವೇಶ'

'ಗ್ಯಾರಂಟಿ ಸಮಿತಿಯ ಪದಾಧಿಕಾರಿಗಳಿಗೆ ಗುರುತಿನ ಚೀಟಿ ಕೊಡಲು ಪಾಲಿಕೆ ಅಧಿಕಾರಿಗಳಿಗೆ ಸೂಚನೆ ನೀಡಲಾಗುವುದು. ಆಗ ಮನೆ ಮನೆಗೆ ಹೋಗಿ ಜನರನ್ನು ಸಂಪರ್ಕಿಸುವ ಅಧಿಕಾರ ಸಿಗಲಿದೆ. ಪ್ರತಿ ವಾರ್ಡ್, ಪಂಚಾಯಿತಿ ಮಟ್ಟದಲ್ಲಿ ಗ್ಯಾರಂಟಿ ಸಮಾವೇಶಗಳನ್ನು ಆಯೋಜಿಸುವ ಬಗ್ಗೆ ಚರ್ಚಿಸುತ್ತಿದ್ದೇವೆ. ಆ ಮೂಲಕ, ಕಾರ್ಯಕರ್ತರಿಗೆ ಶಕ್ತಿ ತುಂಬುವ ಕೆಲಸ ಮಾಡಲಾಗುವುದು' ಎಂದ ಡಿ.ಕೆ. ಶಿವಕುಮಾರ್, 'ನನ್ನ ಹಿಂದೆ ಗಿರಕಿ ಹೊಡೆದರೆ ಪಾಲಿಕೆ ಚುನಾವಣೆ ಟಿಕೆಟ್ ಸಿಗುತ್ತದೆ ಎಂದು ಯಾರಾದರೂ ಭಾವಿಸಿದ್ದರೆ, ಅದನ್ನು ತಲೆಯಿಂದ ತೆಗೆದುಹಾಕಿ' ಎಂದರು.

5 ಪಾಲಿಕೆ ರಚಿಸಿ ಶೀಘ್ರ ಚುನಾವಣೆ

ಬೆಂಗಳೂರು: 'ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಅಡಿಯಲ್ಲಿ ಐದು ಪಾಲಿಕೆ ರಚಿಸಿ ಶೀಘ್ರ ಚುನಾವಣೆ ನಡೆಸುತ್ತೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

'ಐದು ಪಾಲಿಕೆಗಳ ರಚನೆಗೆ ಕೆಲವರು ವಿರೋಧ ಮಾಡಬಹುದು. ಆದರೆ, ಆಡಳಿತ ದೃಷ್ಟಿಯಿಂದ ಇದನ್ನು ಮಾಡಲೇಬೇಕಾಗಿದೆ. ಪಾಲಿಕೆಗಳು ರಚನೆಯಾದರೆ ನಮ್ಮ ಪಕ್ಷದ ಕಾರ್ಯಕರ್ತರಿಗೆ ಹೆಚ್ಚಿನ ಸ್ಥಾನಮಾನ ನೀಡಲೇಬೇಕೆಂದು ತೀರ್ಮಾನಿಸಿದ್ದೇವೆ. ಇದಕ್ಕೆ ಅಡಿಪಾಯ ತಯಾರಿ ಮಾಡಬೇಕಿದೆ. ಡಿ.ಕೆ.ಶಿವಕುಮಾರ್ ಒಬ್ಬನೇ ಪಕ್ಷವನ್ನು ಅಧಿಕಾರಕ್ಕೆ ತರಲು ಸಾಧ್ಯವಿಲ್ಲ. ಕಾರ್ಯಕರ್ತರೇ ಜೀವಾಳ' ಎಂದರು.

'ಸುರಂಗ ರಸ್ತೆ ನಿರ್ಮಾಣ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಟ್ಟಿದೆ' ಎನ್ನುವ ಸಂಸದ ತೇಜಸ್ವಿ ಸೂರ್ಯ ಅವರ ಆರೋಪಕ್ಕೆ ಪ್ರತಿಕ್ರಿಯಿಸಿದ ಶಿವಕುಮಾರ್, 'ದೆಹಲಿ, ಮುಂಬೈ ಸೇರಿದಂತೆ ದೇಶದ ವಿವಿಧ ಭಾಗಗಳಲ್ಲಿ ಸುರಂಗ ರಸ್ತೆ ಮಾಡಲಾಗುತ್ತಿದೆ. ಅಲ್ಲೆಲ್ಲ ಯಾವ ಕಾರಣಕ್ಕೆ ಸುರಂಗ ರಸ್ತೆ ಮಾಡಲಾಗುತ್ತಿದೆ. ಇಲ್ಲಿ ಮಾತ್ರ ಯಾಕೆ ವಿರೋಧ. ನಾವು ಏನೇ ಮಾಡಿದರೂ ಟೀಕೆ ಮಾಡುತ್ತಾರೆ. ಬಿಜೆಪಿ ಯಾವತ್ತಿಗೂ ಅಭಿವೃದ್ಧಿಯ ವಿರುದ್ಧವಾಗಿರುವ ಪಕ್ಷ. ಬೆಂಗಳೂರಿಗೆ ಅವರ ಕೊಡುಗೆ ಶೂನ್ಯ' ಎಂದರು.

ಕಾನೂನು ಕ್ರಮ ಕೈಗೊಳ್ಳಲು ಆಗ್ರಹ

ಬೆಂಗಳೂರು: ಮಂತ್ರ, ತಂತ್ರ, ವಶೀಕರಣ, ವಾಮಾಚಾರದ ಮೂಲಕ ಸಮಾಜದಲ್ಲಿ ಮೌಢ್ಯ ಹೆಚ್ಚಿಸುವ ಜಾಹೀರಾತುಗಳನ್ನು ಮಾಧ್ಯಮಗಳು ಸೇರಿದಂತೆ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಕಟಣೆಗೆ ನೀಡುತ್ತಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಲಾ ಪೀಪಲ್ ಟ್ರಸ್ಟ್ ಆಗ್ರಹಿಸಿದೆ.

ಈಚೆಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಟ್ರಸ್ಟ್‌ನ ಕಾರ್ಯದರ್ಶಿ ಗೋವರ್ಧನ್ ಸಿ., 'ಇತ್ತೀಚೆಗೆ ಕೆಲವು ಜೋತಿಷಿಗಳು, ಮಾಂತ್ರಿಕರು, ಬಾಬಾಗಳು, ಸ್ವಾಮೀಜಿಗಳ ವೇಷಧರಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಸ್ತ್ರೀ ವಶೀಕರಣ, ಸತಿಪತಿ ಕಲಹ, ವ್ಯಾಪಾರ ಉದ್ಯೋಗದ ಸಮಸ್ಯೆಗಳಿಗೆ ಪರಿಹಾರ ನೀಡುತ್ತೇವೆ ಎಂಬ ಜಾಹೀರಾತುಗಳನ್ನು ನೀಡುತ್ತಿದ್ದಾರೆ. ಆದ್ದರಿಂದ ಇಂತಹವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಬೆಂಗಳೂರು ನಗರ ಪೊಲೀಸ್ ಕಮಿಷನರ್‌ಗೆ ದೂರು ನೀಡಲಾಗಿದೆ' ಎಂದು ಮಾಹಿತಿ ನೀಡಿದರು.

ನಿಧನ ವಾರ್ತೆ

ಚಂದ್ರು



ಬೆಂಗಳೂರು: ನಗರದ ಅಗರ ನಿವಾಸಿ, ಪತ್ರಿಕಾ ವಿತರಕ ಚಂದ್ರು(56) ಸೋಮವಾರ ನಿಧನರಾಗಿದ್ದಾರೆ.

ಮೃತರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ.

ಮಂಗಳವಾರ ಸಂಜೆ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಂದ್ರು ಅವರು, 30 ವರ್ಷಗಳಿಂದ ಅಗರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ಸೇರಿದಂತೆ ಹಲವು ಪತ್ರಿಕೆಗಳ ವಿತರಕರಾಗಿ ಕಾರ್ಯನಿರ್ವಹಿಸಿದ್ದರು.

35 ಐಪಿಎಸ್ ಅಧಿಕಾರಿಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ 35 ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆದೇಶ ಹೊರಡಿಸಿದೆ.

ಡಾ. ಚಂದ್ರಗುಪ್ತ– ಐಜಿಪಿ, ಈಶಾನ್ಯ ವಲಯ, ಕಲಬುರಗಿ; ಅಜಯ್ ಹಿಲೋರಿ– ಜಂಟಿ ಕಮಿಷನರ್, ಬೆಂಗಳೂರು ಅಪರಾಧ ವಿಭಾಗ; ಎಂ.ಎನ್. ಅನುಚೇತ್– ಡಿಐಜಿಪಿ, ನೇಮಕಾತಿ; ಯಡಾ ಮಾರ್ಟಿನ್ ಮಾರ್ಬನ್ಯಾಂಗ್– ಡಿಐಜಿಪಿ, ಆಡಳಿತ, ಬೆಂಗಳೂರು; ವರ್ತಿಕಾ ಕಟಿಯಾರ್– ಡಿಐಜಿಪಿ, ಬಳ್ಳಾರಿ ವಲಯ; ಕಾರ್ತಿಕ್ ರೆಡ್ಡಿ– ಜಂಟಿ ಕಮಿಷನರ್, ಬೆಂಗಳೂರು ಸಂಚಾರ; ಕೆ.ಎಂ. ಶಾಂತರಾಜು– ಎಸ್ಪಿ, ಗುಪ್ತಚರ; ಡಿ.ಆರ್. ಸಿರಿ ಗೌರಿ– ಎಸ್ಪಿ, ರಾಜ್ಯ ಅಪರಾಧ ದಾಖಲೆಗಳ ಬ್ಯುರೊ (ಎಸ್‌ಸಿಆರ್‌ಬಿ).

ಕೆ. ಪರಶುರಾಮ– ಡಿಸಿಪಿ, ವೈಟ್‌ಫೀಲ್ಡ್, ಬೆಂಗಳೂರು; ಡಾ. ಅನೂಪ್ ಎ. ಶೆಟ್ಟಿ– ಡಿಸಿಪಿ, ಸಂಚಾರ, ಪಶ್ಚಿಮ– ಬೆಂಗಳೂರು; ಡಾ. ಸುಮನ್ ಡಿ. ಪೆನ್ನೇಕರ್– ಡಿಸಿಪಿ, ಗುಪ್ತಚರ; ಶಿವಪ್ರಕಾಶ್ ದೇವರಾಜು– ಎಸ್ಪಿ, ಲೋಕಾಯುಕ್ತ; ಜಯಪ್ರಕಾಶ್– ಡಿಸಿಪಿ, ಸಂಚಾರ, ಉತ್ತರ– ಬೆಂಗಳೂರು; ಎಂ. ನಾರಾಯಣ– ಡಿಸಿಪಿ, ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು; ಅನಿತಾ ಭೀಮಪ್ಪ ಹದ್ದಣ್ಣವರ– ಡಿಸಿಪಿ, ನೈರುತ್ಯ; ಅಕ್ಷಯ್ ಮಚ್ಚೀಂದ್ರ– ಡಿಸಿಪಿ, ಸೆಂಟ್ರಲ್– ಬೆಂಗಳೂರು; ಡಿ.ಎಲ್. ನಾಗೇಶ್– ಡಿಸಿಪಿ, ವಾಯವ್ಯ– ಬೆಂಗಳೂರು; ಸಿಮಿ ಮೇರಿಯಮ್ ಜಾರ್ಜ್– ಡಿಸಿಪಿ, ಸಂಚಾರ, ದಕ್ಷಿಣ– ಬೆಂಗಳೂರು.

ಎನ್. ಯತೀಶ್– ಎಸ್ಪಿ, ರೈಲ್ವೇಸ್; ಸೈದುಲು ಅದಾವತ್– ಎಸ್ಪಿ, ಸಿಐಡಿ; ಡಾ. ಶಿವಕುಮಾರ್– ಎಐಜಿಪಿ, ಬೆಂಗಳೂರು; ವೈ. ಅಮರನಾಥ ರೆಡ್ಡಿ– ಕಮ್ಯಾಂಡೆಂಟ್, ಕೆಎಸ್‌ಆರ್‌ಪಿ, ಬೆಂಗಳೂರು; ಬಿ.ಎಲ್. ಶ್ರೀಹರಿ ಬಾಬು– ಡಿಸಿಪಿ, ಅಪರಾಧ–1; ಯಶೋದಾ ವಂಟಗೋಡಿ– ಎಸ್ಪಿ, ಹಾವೇರಿ; ಡಾ. ಎಸ್.ಕೆ. ಸೌಮ್ಯಲತಾ– ಡಿಸಿಪಿ, ಸಿಎಆರ್; ಅಂಶುಕುಮಾರ್– ಎಸ್ಪಿ, ಬಂದಿಖಾನೆ; ಗುಂಜನ್ ಆರ್ಯ– ಎಸ್ಪಿ, ಧಾರವಾಡ; ಬಾಬಾಸಾಬ್ ನೇಮಗೌಡ– ಡಿಸಿಪಿ, ಉತ್ತರ– ಬೆಂಗಳೂರು; ಡಾ. ಗೋಪಾಲ್ ಎಂ. ಬ್ಯಾಕೋಡ್– ಜಂಟಿ ನಿರ್ದೇಶಕ, ವಿಧಿವಿಜ್ಞಾನ ಪ್ರಯೋಗಾಲಯ, ಬೆಂಗಳೂರು; ಸಿದ್ಧಾರ್ಥ್ ಗೋಯಲ್– ಎಸ್ಪಿ, ಬಾಗಲಕೋಟೆ; ರೋಹನ್ ಜಗದೀಶ್– ಎಸ್ಪಿ, ಗದಗ; ಶಿವಾಂಶು ರಜಪೂತ್– ಎಸ್ಪಿ, ಕೆಜಿಎಫ್. ಜಿತೇಂದ್ರ ಕುಮಾರ್– ಡಿಸಿಪಿ, ಕಾನೂನು ಮತ್ತು ಸುವ್ಯವಸ್ಥೆ, ಮಂಗಳೂರು ನಗರ; ಎಂ.ಎನ್. ದೀಪನ್– ಎಸ್ಪಿ, ಉತ್ತರ ಕನ್ನಡ; ಎಸ್. ಜಾಹ್ನವಿ– ಎಸ್ಪಿ, ವಿಜಯನಗರ.

ಸಂಕ್ಷಿಪ್ತ ಸುದ್ದಿ

'ಅಟ್ಟಣಿಕೆಗಳು ಹದಿನೆಂಟು' ನಾಟಕ ಪ್ರದರ್ಶನ 20ಕ್ಕೆ

ಬೆಂಗಳೂರು: ವಿಮಾನ ಕಾರ್ಖಾನೆ ಬಸವ ಸಮಿತಿಯು ವಿಶ್ವಗುರು ಬಸವಣ್ಣನವರ ಜಯಂತಿ ಹಾಗೂ ಸಮಿತಿಯ 41ನೇ ವಾರ್ಷಿಕೋತ್ಸವ ಅಂಗವಾಗಿ ಜುಲೈ 20ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಕೊಪ್ಪಳ ಗವಿಮಠಮದ ಇದುವರೆಗಿನ ಪೀಠಾಧಿಪತಿಗಳ ಕುರಿತು ಈಶ್ವರ ಹತ್ತಿ ಅವರು ರಚಿಸಿರುವ 'ಅಟ್ಟಣಿಕೆಗಳು ಹದಿನೆಂಟು' ನಾಟಕ ಪ್ರದರ್ಶನಗೊಳ್ಳಲಿದೆ.

ಬೆಳಿಗ್ಗೆ 8.30 ರಿಂದ ಕಾರ್ಯಕ್ರಮಗಳು ಪ್ರಾರಂಭವಾಗಲಿದ್ದು, ರಂಗೋಲಿ ಸ್ಪರ್ಧೆ, ವಚನ ಗಾಯನ, ಮಕ್ಕಳಿಂದ ಶರಣ, ಶರಣೆಯರ ವೇಷ ಭೂಷಣ ಪ್ರದರ್ಶನ ಮತ್ತಿತರ ಸ್ಪರ್ಧೆಗಳು ಜರುಗಲಿವೆ. ಬೆಳಿಗ್ಗೆ 10 ಗಂಟೆಗೆ ಗವಿಮಠದ ಗವಿಸಿದ್ಧೇಶ್ವರ ಸ್ವಾಮೀಜಿ ಅವರ ಸಾನಿಧ್ಯದಲ್ಲಿ ಉದ್ಘಾಟನೆ ಕಾರ್ಯಕ್ರಮ ನಡೆಲಿದೆ. ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು ತಾಲ್ಲೂಕಿನ ಅಶೋಕ ಸಿದ್ದಾಪುರದ ಸೋಮಶೇಖರ ಸ್ವಾಮೀಜಿಗಳಿಗೆ 'ಬಸವ ಸೇವಾ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಸಮಿತಿಯ ಅಧ್ಯಕ್ಷ ಓ. ಬೇಲೂರಪ್ಪ ತಿಳಿಸಿದ್ದಾರೆ.

ಮಧ್ಯಾಹ್ನ 2.30ಕ್ಕೆ ಎಚ್‌ಎಎಲ್ ಕಲಾವಿದರು 'ಅಟ್ಟಣಿಕೆಗಳು ಹದಿನೆಂಟು' ನಾಟಕವನ್ನು ಪ್ರಸ್ತುತಪಡಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾನನಷ್ಟ ಮೊಕದ್ದಮೆ ಎಚ್ಚರಿಕೆ

ಬೆಂಗಳೂರು: 'ಸುಳ್ಳು ಪ್ರಕರಣವನ್ನು ಮುನ್ನೆಲೆಗೆ ತಂದು ನನ್ನ ಮಾನಹಾನಿಗೆ ಕಾರಣವಾಗಿರುವ ಶಿರಸಿ ಪೊಲೀಸರು ಹಾಗೂ ಕಿಡಿಗೇಡಿಗಳ ವಿರುದ್ಧ ನ್ಯಾಯಾಲಯದಲ್ಲಿ ಮಾನನಷ್ಟ ಮೊಕದ್ದಮೆ ದಾಖಲಿಸಲಾಗುವುದು' ಎಂದು ಕರ್ನಾಟಕ ಗಡಿ ಹೋರಾಟ ಸಮಿತಿಯ ಸಂಸ್ಥಾಪಕ ಅಧ್ಯಕ್ಷ ಬಿ.ಕೆ.ಆರ್. ರಾವ್ ಬೈಂದೂರು ಎಚ್ಚರಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಾನು 30 ವರ್ಷಗಳ ಹಿಂದೆ ಸರ್ಕಾರಿ ನೌಕರಿ ಕೊಡಿಸುವುದಾಗಿ ₹200 ಪಡೆದುಕೊಂಡು ತಲೆಮರೆಸಿ ಕೊಂಡಿದ್ದೇನೆ ಎಂಬ ಸುಳ್ಳು ಸುದ್ದಿಯನ್ನು ಶಿರಸಿಯ ಗ್ರಾಮೀಣ ಪೊಲೀಸರು ಹಾಗೂ ಕೆಲ ಕಿಡಿಗೇಡಿಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಡುತ್ತಿದ್ದಾರೆ. ನನ್ನ ಹೆಸರಿಗೆ ಕಳಂಕ ಹಚ್ಚುತ್ತಿರುವ ವ್ಯಕ್ತಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ಮುಜರಾಯಿಗೆ ಗಾಳಿ ಆಂಜನೇಯ ಸ್ವಾಮಿ ದೇಗುಲ: ಇಂದು ಆದೇಶ

ಭಾಷಣ ಬೇಡ–ಕಾನೂನು ತೋರಿಸಿ...

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ಕಾನೂನು ತಳಹದಿಯ ಮೇಲೆ ಸರ್ಕಾರದ ಆದೇಶವನ್ನು ಆಕ್ಷೇಪಿಸಿದರೆ ನೀವು ಮುಜರಾಯಿ ವಿಚಾರಣೆಯ ಅನವಶ್ಯಕ ವಿವರಣೆಯನ್ನು ಓದುತ್ತಿದ್ದೀರಿ. ನಿಮಗೆ ಭಾಷಣ ಮಾಡಬೇಕು ಎನಿಸಿದ್ದರೆ ಕೋರ್ಟ್‌ನಿಂದ ಆಚೆ ಹೋಗಿ ಮಾಡಿ...'

ನಗರದ ಪ್ರಸಿದ್ಧ ಗಾಳಿ ಆಂಜನೇಯ ಸ್ವಾಮಿ ದೇವಾಲಯವನ್ನು ಮುಜರಾಯಿ ಇಲಾಖೆ ಸುಪರ್ದಿಗೆ ಒಪ್ಪಿಸಿರುವ ಸರ್ಕಾರದ ಕ್ರಮವನ್ನು ಪ್ರಶ್ನಿಸಲಾದ ಅರ್ಜಿ ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಅವರ ಪ್ರತಿಪಾದನೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಪರಿ ಇದು.

ಈ ಕುರಿತ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು. ಈ ವೇಳೆ



ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಎನ್. ದೇವದಾಸ್, 'ದೇಗುಲದಲ್ಲಿ ಹಣದ ಲೂಟಿಯಾಗುತ್ತಿದೆ. ಹಾಗಾಗಿಯೇ, ಸರ್ಕಾರ ವಿಚಾರಣೆ ನಡೆಸಿ ಮುಜರಾಯಿ ಸುಪರ್ದಿಗೆ ತೆಗೆದುಕೊಂಡಿದೆ' ಎಂದು ಸುದೀರ್ಘ ವಿಚಾರಣಾ ವರದಿಯನ್ನು ಓದಿದರು.

ಇದಕ್ಕೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಪಿ.ಪ್ರಸನ್ನ ಕುಮಾರ್, 'ಸರ್ಕಾರದ ಆದೇಶ ಕಾನೂನುಬಾಹಿರವಾಗಿದೆ ಎಂದು ನಾನು ಕಾನೂನಾತ್ಮಕ ಅಂಶಗಳನ್ನು ನ್ಯಾಯಪೀಠಕ್ಕೆ ಅರುಹಿದರೆ ಸರ್ಕಾರದ ಪರ ವಕೀಲರು, ಜಿಲ್ಲಾಧಿಕಾರಿ ಆ ರೀತಿ ಹೇಳಿದ್ದಾರೆ, ಈ ರೀತಿ ಹೇಳಿದ್ದಾರೆ ಎಂಬ ಆದೇಶದಲ್ಲಿನ ಸಾಲುಗಳನ್ನು ಓದುತ್ತಿದ್ದಾರೆ. ವಾಸ್ತವದಲ್ಲಿ ಮುಜರಾಯಿ ಇಲಾಖೆ ದೇಗುಲ ಸುಪರ್ದಿಗೆ ಪಡೆಯಬೇಕಾದ ಕಾನೂನು ತಳಹದಿಯನ್ನೇ ಉಲ್ಲೇಖಿಸಿಲ್ಲ' ಎಂದರು.

'ದೇಗುಲದಲ್ಲಿ ಈಗಾಗಲೇ ಹಣ ಕದ್ದವರ ವಿರುದ್ಧ 2024ರ ಜೂನ್ 15ರಂದೇ ಎಫ್‌ಐಆರ್ ಆಗಿದೆ. ಅವರಿಬ್ಬರನ್ನೂ ಟ್ರಸ್ಟ್‌ನಿಂದ ಹೊರಗೆ ಹಾಕಲಾಗಿದೆ. ತನಿಖೆ ಇನ್ನೂ ನಡೆಯುತ್ತಿದ್ದು ದೋಷಾರೋಪ ಪಟ್ಟಿಯನ್ನೇ ಸಲ್ಲಿಸಿಲ್ಲ. ಆದರೆ, ಸರ್ಕಾರ ಮಿಂಚಿನ ವೇಗದಲ್ಲಿ ಎರಡನೇ ಶನಿವಾರದ ದಿನ ದೇಗುಲದ ಹುಂಡಿಗೆ ಬೀಗ ಹಾಕಿದೆ. ಕಳ್ಳನನ್ನು ಓಡಾಡಲು ಬಿಟ್ಟು ಈಗ ಹಣ ಲೂಟಿಯಾಗುತ್ತಿದೆ ಎಂದು ಅಲವತ್ತುಕೊಳ್ಳುತ್ತಿದೆ' ಎಂದರು. ಸುದೀರ್ಘ ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ ಮಧ್ಯಂತರ ಆದೇಶವನ್ನು ಬುಧವಾರ (ಜುಲೈ 16) ಪ್ರಕಟಿಸುವುದಾಗಿ ತಿಳಿಸಿತು.

ಪ್ರಕರಣವೇನು?: 'ಗಾಳಿ ಆಂಜನೇಯ ಸ್ವಾಮಿ ದೇವಾಲಯದ ಆಡಳಿತ ಮಂಡಳಿಯ ಪದಾಧಿಕಾರಿಗಳಲ್ಲಿ ಹೊಂದಾಣಿಕೆ ಇಲ್ಲ. ಲಕ್ಷಾಂತರ ರೂಪಾಯಿ ಆದಾಯ ಬರುತ್ತಿದ್ದರೂ ಪ್ರತಿ ವರ್ಷ ಉಳಿತಾಯವಿಲ್ಲದೇ ವೆಚ್ಚ ಮಾಡಲಾಗುತ್ತಿದೆ. ಆದಾಯ ಹಾಗೂ ವೆಚ್ಚಕ್ಕೆ ಸಂಬಂಧಿಸಿದಂತೆ ಕಳೆದ 25 ವರ್ಷಗಳಿಂದ ದಾಖಲೆ ಇಡದೆ, ಸಹಾಯಕ ಆಯುಕ್ತರು ಮತ್ತು ಮುಜರಾಯಿ ಇಲಾಖೆ ನೋಟಿಸ್ ನೀಡಿದ ಬಳಿಕ ದಾಖಲೆ ಸೃಷ್ಟಿಸಿರುವುದು ಕಂಡು ಬಂದಿದೆ' ಎಂದು ಮುಜರಾಯಿ ಇಲಾಖೆ, ದೇಗುಲವನ್ನು ತನ್ನ ಸುಪರ್ದಿಗೆ ಪಡೆದಿದೆ.

ಲಂಚ ಆರೋಪ: ಪಾಲಿಕೆ ಸದಸ್ಯ ಗೋವಿಂದರಾಜ ಶಿಕ್ಷೆ ರದ್ದು

ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಲು ₹2 ಲಕ್ಷ ಲಂಚ ಪಡೆದ ಆರೋಪದಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಗಣೇಶ ಮಂದಿರ ವಾರ್ಡ್ ಸದಸ್ಯರಾಗಿದ್ದ ಎಲ್.ಗೋವಿಂದರಾಜ ಅವರಿಗೆ ಲೋಕಾಯುಕ್ತ ವಿಶೇಷ ನ್ಯಾಯಾಲಯ ವಿಧಿಸಿದ್ದ ನಾಲ್ಕು ವರ್ಷಗಳ ಜೈಲು ಶಿಕ್ಷೆಯನ್ನು ಹೈಕೋರ್ಟ್ ರದ್ದುಪಡಿಸಿದೆ.

'ಬೆಂಗಳೂರು ನಗರ ಜಿಲ್ಲಾ ಲೋಕಾಯುಕ್ತ ವಿಶೇಷ ನ್ಯಾಯಾಲಯ ನನಗೆ ವಿಧಿಸಿರುವ ಜೈಲು ಶಿಕ್ಷೆ ರದ್ದುಪಡಿಸಬೇಕು' ಎಂದು ಕೋರಿದ್ದ ಗೋವಿಂದರಾಜ ಅವರ ಕ್ರಿಮಿನಲ್ ಮೇಲ್ಮನವಿ ಹಾಗೂ 'ಅಪರಾಧಿಗೆ ವಿಧಿಸಲಾಗಿರುವ ಶಿಕ್ಷೆಯ ಪ್ರಮಾಣ ಹೆಚ್ಚಳ ಮಾಡಬೇಕು' ಎಂದು ಕೋರಿದ್ದ ಲೋಕಾಯುಕ್ತ ಪೊಲೀಸರ ಮೇಲ್ಮನವಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಜಿ.ಉಮಾ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ. 'ಅರ್ಜಿದಾರರ ವಿರುದ್ಧದ ಆರೋಪವನ್ನು ಸಾಬೀತು ಪಡಿಸುವಲ್ಲಿ ಲೋಕಾಯುಕ್ತ ಪೊಲೀಸರು ಸೂಕ್ತ ಸಾಕ್ಷ್ಯಾಧಾರ ಒದಗಿಸಲು ವಿಫಲರಾಗಿದ್ದಾರೆ ಮತ್ತು ತನಿಖಾ ಪ್ರಕ್ರಿಯೆಯಲ್ಲಿ ದೋಷಗಳಿವೆ' ಎಂಬ ಅಭಿಪ್ರಾಯದೊಂದಿಗೆ ನ್ಯಾಯಪೀಠ ಶಿಕ್ಷೆ ರದ್ದುಪಡಿಸಿ ಆದೇಶಿಸಿದೆ. ಗೋವಿಂದರಾಜ ಪರ ಪದಾಂಕಿತ ಹಿರಿಯ ವಕೀಲ ಸಿ.ವಿ.ನಾಗೇಶ್ ವಾದ ಮಂಡಿಸಿದ್ದರು. ಕೆ.ರಾಘವೇಂದ್ರ ವಕಾಲತ್ತು ವಹಿಸಿದ್ದರು.

58 ಲಕ್ಷ ಪ್ರಕರಣ ಇತ್ಯರ್ಥ

ರಾಷ್ಟ್ರೀಯ ಲೋಕ ಅದಾಲತ್: ₹2,878 ಕೋಟಿ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 12ರಂದು ರಾಜ್ಯದಾದ್ಯಂತ ನಡೆದ ಪ್ರಸಕ್ತ ಸಾಲಿನ 2ನೇ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ, ನ್ಯಾಯಾಲಯಗಳಲ್ಲಿ ಬಾಕಿ ಇದ್ದ 3.11 ಲಕ್ಷ ಪ್ರಕರಣಗಳೂ ಸೇರಿದಂತೆ ಒಟ್ಟು 58.67 ಲಕ್ಷ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದ್ದು, ಸಂಬಂಧಿಸಿದವರಿಗೆ ₹2,878 ಕೋಟಿ ಪರಿಹಾರ ಕೊಡಿಸಲಾಗಿದೆ.

ಈ ಕುರಿತಂತೆ, ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷರೂ ಆದ ರಾಜ್ಯ ಹೈಕೋರ್ಟ್‌ನ ಹಿರಿಯ ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

'ಅದಾಲತ್‌ನಲ್ಲಿ 1,756 ವೈವಾಹಿಕ ಪ್ರಕರಣಗಳನ್ನು ಪರಿಹರಿಸಲಾಗಿದ್ದು, ಒಟ್ಟು 331 ದಂಪತಿಗಳು ರಾಜಿ ಸಂಧಾನದ ಮೂಲಕ ಪುನಃ ಒಟ್ಟಿಗೇ ಜೀವನ ನಡೆಸುತ್ತಿದ್ದಾರೆ' ಎಂದರು.

'ಅದಾಲತ್‌ನಲ್ಲಿ ಒಟ್ಟು 1,022 ಪೀಠಗಳನ್ನು ಸ್ಥಾಪಿಸಲಾಗಿತ್ತು. ಅವುಗಳಲ್ಲಿ ಹೈಕೋರ್ಟ್‌ಗಳಲ್ಲಿದ್ದ 1,182, ಜಿಲ್ಲಾ ಹಾಗೂ ತಾಲ್ಲೂಕು ನ್ಯಾಯಾಲಯಗಳಲ್ಲಿದ್ದ 3,09,995 ಕೇಸುಗಳೂ ಸೇರಿದಂತೆ ಒಟ್ಟು 3,11,177 ಬಾಕಿ ಪ್ರಕರಣಗಳು ಮತ್ತು 55,56,255 ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗಿದೆ. ಒಂದು ವೇಳೆ ಕೋರ್ಟ್‌ಗಳಲ್ಲಿ ಬಾಕಿ ಇದ್ದ 3.11ಲಕ್ಷ ಪ್ರಕರಣಗಳನ್ನು ಇತ್ಯರ್ಥಪಡಿಸಬೇಕಾದರೆ 1,152 ನ್ಯಾಯಾಧೀಶರು 68 ದಿನಗಳ ಕಾಲ ಕಾರ್ಯ ನಿರ್ವಹಿಸಬೇಕಾಗುತ್ತಿತ್ತು' ಎಂದು ವಿವರಿಸಿದರು.

ಈ ಬಾರಿಯ ಅದಾಲತ್‌ನ ವಿಶೇಷತೆಗಳು

- 4,015 ವಿಭಾಗ ದಾವೆ (ಪಾರ್ಟಿಷನ್ ಸೂಟ್) ಇತ್ಯರ್ಥ; 4,961 ಮೋಟಾರು ವಾಹನ ಅಪಘಾತ ಪರಿಹಾರ ಪ್ರಕರಣಗಳ ಇತ್ಯರ್ಥ. ಸಂತ್ರಸ್ತರಿಗೆ ₹290 ಕೋಟಿ ಪರಿಹಾರ
- 13,542 ಚೆಕ್ ಬೌನ್ಸ್ ಪ್ರಕರಣ ವಿಲೇವಾರಿ. ₹572 ಕೋಟಿ ಪರಿಹಾರ
- 456 ಎಲ್‌ಎಸಿ ಅಮಲ್ಜಾರಿ ಪ್ರಕರಣ ಇತ್ಯರ್ಥ. ₹64 ಕೋಟಿ ಪರಿಹಾರ
- 375 ಗ್ರಾಹಕ ವ್ಯಾಜ್ಯಗಳ ಇತ್ಯರ್ಥ. ₹406 ಕೋಟಿ ಪರಿಹಾರ
- 5 ವರ್ಷಕ್ಕೂ ಹಳೆಯದಾದ 2,377, 10 ವರ್ಷಕ್ಕೂ ಹಳೆಯದಾದ 275 ಹಾಗೂ 15 ವರ್ಷಕ್ಕೂ ಹಳೆಯದಾದ 38 ಪ್ರಕರಣಗಳೂ ಸೇರಿದಂತೆ ಒಟ್ಟು 2,689 ಹಳೆಯ ಪ್ರಕರಣಗಳ ಇತ್ಯರ್ಥ
- ರಾಜಿ ಸಂಧಾನದ ಮೂಲಕ ಬೆಂಗಳೂರಿನ 8ನೇ ಹೆಚ್ಚುವರಿ ಮೆಟ್ರೊಪಾಲಿಟನ್ ಕೋರ್ಟ್‌ನಲ್ಲಿದ್ದ 28 ವರ್ಷ ಹಾಗೂ 27 ವರ್ಷಗಳಷ್ಟು ಹಳೆಯದಾದ ಕ್ರಿಮಿನಲ್ ಪ್ರಕರಣಗಳ ವಿಲೇವಾರಿ
- ಬೆಂಗಳೂರು ನಗರ ಜಿಲ್ಲೆಯಲ್ಲಿ ₹1.75 ಕೋಟಿ ಮೊತ್ತದ ಒಂದು ಎಂವಿಸಿ (ಮೋಟಾರು ವಾಹನ ಕಾಯ್ದೆ), ₹6.56 ಕೋಟಿ ಮೊತ್ತದ ಒಂದು ಹಾಗೂ ₹5.15 ಕೋಟಿ ಮೊತ್ತದ ಮತ್ತೊಂದು ಚೆಕ್ ಅಮಾನ್ಯ ಪ್ರಕರಣಗಳ ಇತ್ಯರ್ಥ
- ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ₹40.66 ಕೋಟಿ ಪರಿಹಾರದ ಅಸಲು ದಾವೆ ಇತ್ಯರ್ಥ
- ಮುಂದಿನ ರಾಷ್ಟ್ರೀಯ ಲೋಕ ಅದಾಲತ್ ಸೆಪ್ಟೆಂಬರ್ 13ಕ್ಕೆ ನಡೆಯಲಿದೆ.

ಚಟಿಕೆ ಸುದ್ದಿ

ಅರ್ಜಿ ಆಹ್ವಾನ


ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು 2025-26ನೇ ಸಾಲಿನ ಕನ್ನಡ ಪ್ರವೇಶ, ಕಾವ, ಜಾಣ ಹಾಗೂ ರತ್ನ ಪರೀಕ್ಷೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ.

2025ರ ಡಿಸೆಂಬರ್ ಕೊನೆಯ ವಾರದಲ್ಲಿ ನಡೆಯುವ ಈ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 15 ಕೊನೆಯ ದಿನ. ₹50 ದಂಡ ಶುಲ್ಕದೊಂದಿಗೆ ಸೆ.30 ರವರೆಗೆ ಅರ್ಜಿ ಸಲ್ಲಿಸಬಹುದು. ಪರಿಷತ್ತಿನ ಮಾರಾಟ ಮಳಿಗೆಯಲ್ಲಿ ₹25 ಪಾವತಿಸಿ, ಪರೀಕ್ಷಾ ನಿಯಮಾವಳಿ ಹಾಗೂ ಅರ್ಜಿ ನಮೂನೆಯನ್ನು ಜುಲೈ 16ರಿಂದ ಪಡೆಯಬಹುದು. ಪರಿಷತ್ತಿನ ಹೆಸರಿಗೆ ₹65 ಮನಿಯಾರ್ಡರ್ ಮಾಡಿದರೆ ಅರ್ಜಿ ನಮೂನೆಯನ್ನು ಅಂಚೆ ಮೂಲಕ ಕಳುಹಿಸಲಾಗುತ್ತದೆ.

ಪರೀಕ್ಷಾ ಅರ್ಜಿಗಳನ್ನು ಅಂತರ್ಜಾಲ ತಾಣ www.kasapa.in ಮೂಲಕವೂ ಪಡೆದುಕೊಳ್ಳಬಹುದು. ಪರೀಕ್ಷಾ ಶುಲ್ಕದೊಂದಿಗೆ ₹25 ಅರ್ಜಿ ಶುಲ್ಕವನ್ನು ಪ್ರತ್ಯೇಕವಾಗಿ ಪಾವತಿಸಬೇಕು ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ. ಸಂಪರ್ಕಕ್ಕೆ: 080 26612991 ಅಥವಾ 224238567

ಸುರೇಂದ್ರಗೆ 'ಬಾರ್ಟನ್ಸ್ ಜೀವಮಾನ ಸಾಧನೆ ಪ್ರಶಸ್ತಿ'

ಬೆಂಗಳೂರು: ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿಯು ತನ್ನ 18ನೇ ವಾರ್ಷಿಕೋತ್ಸವದ ಪ್ರಯುಕ್ತ ನೀಡುತ್ತಿರುವ 'ಬಾರ್ಟನ್ಸ್ ಜೀವಮಾನ ಸಾಧನೆ' ಪ್ರಶಸ್ತಿಗೆ ವ್ಯಂಗ್ಯ ಚಿತ್ರಕಾರ ಸುರೇಂದ್ರ ಆಯ್ಕೆಯಾಗಿದ್ದಾರೆ.


ಸುರೇಂದ್ರ

ಬೆಂಗಳೂರಿನಲ್ಲಿ 1861ರಲ್ಲಿ ಪ್ರಾರಂಭವಾದ 'ಬಾರ್ಟನ್ಸ್' ಸಂಸ್ಥೆಯು ಈ ವಾರ್ಷಿಕ ಪ್ರಶಸ್ತಿಯನ್ನು ಸ್ಥಾಪಿಸಿದೆ. ಈ ಬಾರಿ ಪ್ರಶಸ್ತಿಗೆ ಆಯ್ಕೆಯಾಗಿರುವ ಸುರೇಂದ್ರ ಅವರು ವಿವಿಧ ದಿನಪತ್ರಿಕೆಗಳಿಗೆ ವ್ಯಂಗ್ಯಚಿತ್ರ ಬರೆದಿದ್ದಾರೆ.

ಆ.2ರಂದು ಬೆಳಿಗ್ಗೆ 11 ಗಂಟೆಗೆ ಟ್ರಿನಿಟಿ ವೃತ್ತದಲ್ಲಿರುವ ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿಯಲ್ಲಿ ಪ್ರಶಸ್ತಿ ಪ್ರದಾನ ಹಾಗೂ ವ್ಯಂಗ್ಯಚಿತ್ರ ಪ್ರದರ್ಶನದ ಉದ್ಘಾಟನೆ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಆ.23ರವರೆಗೆ, ಸಾರ್ವಜನಿಕ ರಜಾ ದಿನಗಳನ್ನು ಹೊರತುಪಡಿಸಿ ಉಳಿದ ದಿನಗಳು ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ಸುರೇಂದ್ರ ಅವರು ರಚಿಸಿದ ವ್ಯಂಗ್ಯಚಿತ್ರಗಳ ಪ್ರದರ್ಶನ ನಡೆಯಲಿದೆ. ಸಾರ್ವಜನಿಕರಿಗೆ ಮುಕ್ತ ಪ್ರವೇಶವಿದೆ ಎಂದು ಪ್ರಕಟಣೆ ತಿಳಿಸಿದೆ.

ಲಾಲ್‌ಬಾಗ್ ಗ್ರಂಥಾಲಯಕ್ಕೆ ಹೈಟೆಕ್ ಸ್ಪರ್ಶ

12 ಸಾವಿರ ಪುಸ್ತಕಗಳ ಡಿಜಿಟಲೀಕರಣ
• ₹1 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ

• ಕೆ.ಎಸ್.ಸುನಿಲ್

ಬೆಂಗಳೂರು: ನಗರದ ಹಳೆಯ ಗ್ರಂಥಾಲಯಗಳಲ್ಲಿ ಒಂದಾಗಿರುವ ಲಾಲ್‌ಬಾಗ್‌ನ ಡಾ.ಎಂ.ಎಚ್. ಮರಿಗೌಡ ರಾಷ್ಟ್ರೀಯ ತೋಟಗಾರಿಕೆ ಗ್ರಂಥಾಲಯವು ಈಗ ಹೈಟೆಕ್ ಸ್ಪರ್ಶ ಪಡೆದುಕೊಳ್ಳುತ್ತಿದೆ.

ಓದುವ ಕೊಠಡಿ, ಸುಸಜ್ಜಿತ ಸಭಾಂಗಣ, ಅತ್ಯಾಧುನಿಕ ಬೆಳಕಿನ ವ್ಯವಸ್ಥೆ ಸೇರಿ ಹಲವು ಸೌಲಭ್ಯಗಳನ್ನು ಇಲ್ಲಿ ಒದಗಿಸಲಾಗಿದೆ. ಉದ್ಯಾನದಲ್ಲಿ ಸಸ್ಯಗಳ ಮಾಹಿತಿ ನೀಡುವ ಅಂದಾಜು 12 ಸಾವಿರ ಪುಸ್ತಕಗಳನ್ನು ಡಿಜಿಟಲೀಕರಣ ಮಾಡಲಾಗುತ್ತಿದೆ. ಅಲ್ಲದೇ ಡಾ. ಎಂ.ಎಚ್. ಮರಿಗೌಡ ಅವರ ಜೀವನ ಚರಿತ್ರೆ ತಿಳಿಸುವ ವಸ್ತುಸಂಗ್ರಹಾಲಯಕ್ಕೆ ಬೇಕಾದ ಫೋಟೊಗಳನ್ನು ಸಂಗ್ರಹಿಸಲಾಗುತ್ತಿದೆ.

ಲಾಲ್‌ಬಾಗ್‌ನ ಹೂವಿನ ಗಡಿಯಾರದ ಬಳಿ ಇರುವ ಗ್ರಂಥಾಲಯಕ್ಕೆ ಸುಮಾರು 140 ವರ್ಷದ ಇತಿಹಾಸವಿದೆ. ಹಿಂದೆ ತೋಟಗಾರಿಕೆ ಇಲಾಖೆಯ ನಿರ್ದೇಶಕರ ನಿವಾಸವಾಗಿತ್ತು. ಗ್ರಂಥಾಲಯದ ಕಟ್ಟಡವು 10,000 ಚದರ ಅಡಿ ವಿಸ್ತೀರ್ಣ ಹೊಂದಿದ್ದು, ತೋಟಗಾರಿಕೆ, ಸಸ್ಯವಿಜ್ಞಾನ ಸಂಬಂಧಿತ ವಿಷಯಗಳ ಪುಸ್ತಕಗಳು ಇವೆ.

ಒಂದು ಕೋಟಿ ರೂಪಾಯಿ ವೆಚ್ಚದಲ್ಲಿ ನವೀಕರಣ ಕಾರ್ಯ ಭರದಿಂದ ಸಾಗಿದ್ದು, ಶೇಕಡ 80ರಷ್ಟು ಕೆಲಸ ಪೂರ್ಣಗೊಂಡಿದೆ. ಪಾರಂಪರಿಕ ಕಟ್ಟಡವಾಗಿರುವ ಕಾರಣ ಕಟ್ಟಡದ ಮೂಲ ಸ್ವರೂಪ, ವಿನ್ಯಾಸಗಳಿಗೆ ಧಕ್ಕೆಯಾಗದಂತೆ ನವೀಕರಣ ಮಾಡುತ್ತಿರುವುದು ವಿಶೇಷ.

ಮುಖ್ಯಾಂಶಗಳು

- ಡಾ.ಎಂ.ಎಚ್. ಮರಿಗೌಡ ಬದುಕಿಗೆ ಕನ್ನಡಿ ಹಿಡಿಯುವ ಫೋಟೊಗಳ ಸಂಗ್ರಹ
- ಏಕಕಾಲಕ್ಕೆ 70 ಮಂದಿಗೆ ಆಸನ ವ್ಯವಸ್ಥೆ
- ಪುಸ್ತಕ ಸಂಗ್ರಹಾಲಯ ನವೀಕರಣ, ಡಿಜಿಟಲೀಕರಣಕ್ಕೆ ₹16 ಲಕ್ಷ ವೆಚ್ಚ

ಮಳೆ ಬಿದ್ದಾಗ ಗೋಡೆಗಳು ಪೂರ್ತಿ ಒದ್ದೆಯಾಗಿ ನೀರಿಳಿಯುತ್ತಿತ್ತು. ಕಟ್ಟಡದ ಚಾವಣಿಯಲ್ಲಿ ನೀರು ಸೋರಿಕೆಯಾಗುತ್ತಿತ್ತು. ಇದರಿಂದ ಗ್ರಂಥಾಲಯದ ಕೃತಿಗಳಿಗೆ ಹಾನಿಯಾಗುವ ಸಾಧ್ಯತೆ ಇತ್ತು. ಹಾಗಾಗಿ ನವೀಕರಣ ಕಾರ್ಯ ಕೈಗೊಳ್ಳಲಾಗಿದೆ.

ಕಟ್ಟಡಕ್ಕೆ ಚಾವಣಿ ಹೊದಿಸುವುದು, ಮರದ ಕೆಲಸ ಹಾಗೂ ನೆಲ ಹಾಸು ಕಾರ್ಯ ನಡೆದಿದೆ. ಹೊಸ ಟೇಬಲ್, ಕುರ್ಚಿಗಳನ್ನು ಹಾಕಲಾಗಿದೆ. ಕಪಾಟುಗಳನ್ನು ನಿರ್ಮಿಸಲಾಗಿದೆ. ವಸ್ತುಸಂಗ್ರಹಾಲಯ ಹಾಗೂ ಪುಸ್ತಕಗಳ ಡಿಜಿಟಲೀಕರಣಕ್ಕೆ ಸುಮಾರು ₹16 ಲಕ್ಷ ಖರ್ಚು ಮಾಡಲಾಗುತ್ತಿದೆ.

'ಗ್ರಂಥಾಲಯ ಕಟ್ಟಡವು ಪುರಾತತ್ವ ಇಲಾಖೆಗೆ ಒಳಪಡುವುದರಿಂದ ಮೂಲ ಕಟ್ಟಡಕ್ಕೆ ಯಾವುದೇ ರೀತಿಯ ಧಕ್ಕೆಯಾಗದಂತೆ ಇಂಟ್ಯಾಕ್ ನೇತೃತ್ವದಲ್ಲಿ ನವೀಕರಣಗೊಳಿಸಲಾಗಿದೆ. ಇಲ್ಲಿನ ಪುಸ್ತಕಗಳನ್ನು ಸ್ಕ್ಯಾನ್ ಮಾಡಿಸಿ, ಡಿಜಿಟಲೀಕರಣ ಮಾಡಲಾಗುತ್ತಿದೆ. ಏಕಕಾಲಕ್ಕೆ 70 ಮಂದಿ ಕುಳಿತುಕೊಳ್ಳಲು ಆಸನ ವ್ಯವಸ್ಥೆ ಮಾಡಲಾಗಿದೆ.


ಲಾಲ್‌ಬಾಗ್ ಆವರಣದಲ್ಲಿರುವ ಡಾ.ಎಂ.ಎಚ್. ಮರಿಗೌಡ ರಾಷ್ಟ್ರೀಯ ತೋಟಗಾರಿಕೆ ಗ್ರಂಥಾಲಯದಲ್ಲಿ ಪುಸ್ತಕಗಳನ್ನು ಜೋಡಿಸುತ್ತಿರುವ ಸಿಬ್ಬಂದಿ –ಚಿತ್ರ: ರಂಜು ಪಿ.





ಬ್ರ್ಯಾಂಡ್ ಬೆಂಗಳೂರು

ತೈಲ ಚಿತ್ರ ಆಕರ್ಷಣೆ

19ನೇ ಶತಮಾನದ ಚಿತ್ರಗಳು, ಸುಮಾರು 750 ತೈಲಚಿತ್ರ ಹಾಗೂ ಪೆನ್ಸಿಲ್ ಸ್ಕೆಚ್‌ಗಳು ಪ್ರಮುಖ ಆರ್ಕಷಣೆಯಾಗಿವೆ. ಗ್ರಂಥಾಲಯದಲ್ಲಿ ಅತ್ಯಮೂಲ್ಯ ಪೇಂಟಿಂಗ್‌ಗಳನ್ನು ಸಂಗ್ರಹಿಸಿಡಲಾಗಿದೆ.

ಗ್ರಂಥಾಲಯವು ಸಸ್ಯವಿಜ್ಞಾನ ಲೋಕದ ಮಾಹಿತಿಯ ಆಗರವಾಗಿದೆ. ಪ್ರತಿಯೊಂದು ಸಸ್ಯಪ್ರಭೇದಕ್ಕೂ ಪ್ರತ್ಯೇಕ ಮಾಹಿತಿ ಗ್ರಂಥ ಲಭಿಸಬೇಕೆಂಬ ಉದ್ದೇಶದಿಂದ ಸ್ಥಾಪಕರು ಕಲೆಹಾಕಿದ ಮಾಹಿತಿ ಸಂಪತ್ತು ಇದೆ. ಉದ್ಯಾನ ವಿನ್ಯಾಸ, ಸಸ್ಯ ಪ್ರಭೇದ, ವಿಶ್ವಕೋಶ, ಪರಾಮರ್ಶನ ಗ್ರಂಥಗಳು, ಉದ್ಯಾನ ವಿನ್ಯಾಸ ಕೋಶಗಳು, ಕೆಲವು ಪ್ರಭೇದಗಳಿಗೆ ಸಂಬಂಧಿಸಿದ ಗೆಜೆಟಿಯರ್ ಒಳಗೊಂಡ ಮಾಹಿತಿ ಇದೆ' ಎಂದು ತೋಟಗಾರಿಕೆ ಇಲಾಖೆ ನಿರ್ದೇಶಕ (ಲಾಲ್‌ಬಾಗ್) ಬಾಲಕೃಷ್ಣ 'ಪ್ರಜಾವಾಣಿ'ಗೆ ತಿಳಿಸಿದರು.

'ನಿತ್ಯ ನೂರಾರು ಜನರು ಗ್ರಂಥಾಲಯಕ್ಕೆ ಭೇಟಿ ನೀಡುತ್ತಾರೆ. ವಿವಿಧ ಇಲಾಖೆಗಳ ಸಿಬ್ಬಂದಿ, ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು, ಸಾಹಿತಿಗಳು, ಸಂಶೋಧಕರು ಸದುಪಯೋಗ ಪಡೆದುಕೊಂಡಿದ್ದಾರೆ. ಆಗಸ್ಟ್ 7ರಿಂದ 18ರವರೆಗೆ ಸ್ವಾತಂತ್ರ್ಯೋತ್ಸವ ಫಲಪುಷ್ಪ ಪ್ರದರ್ಶನ ನಡೆಯಲಿದೆ. ಈ ಅವಧಿಯಲ್ಲಿಯೇ ನವೀಕೃತ ಗ್ರಂಥಾಲಯ ಉದ್ಘಾಟನೆ ಮಾಡಲು ಉದ್ದೇಶಿಸಲಾಗಿತ್ತು. ಆದರೆ ಕೆಲವೊಂದು ಕೆಲಸಗಳು ಬಾಕಿ ಇರುವ ಕಾರಣ ಉದ್ಘಾಟನೆ ಸ್ವಲ್ಪ ದಿನ ತಡವಾಗಲಿದೆ' ಎಂದು ಹೇಳಿದರು.

'ಭವಿಷ್ಯದಲ್ಲಿ ಗ್ರಂಥಾಲಯ ಕಟ್ಟಡಕ್ಕೆ ಯಾವುದೇ ರೀತಿಯ ಧಕ್ಕೆ ಉಂಟಾಗದಿರಲಿ, ಮಳೆ ನೀರು ತಾಗದಿರಲಿ ಎಂಬ ಉದ್ದೇಶದಿಂದ ಗ್ರಂಥಾಲಯ ಕಟ್ಟಡ ಪಕ್ಕದಲ್ಲಿ ಎಡ ಮತ್ತು ಬಲ ಬದಿಗೆ ಮೋರಿ ನಿರ್ಮಿಸಲಾಗಿದೆ. ಮೂಲ ಕಟ್ಟಡಕ್ಕೆ ಯಾವುದೇ ಧಕ್ಕೆಯಾಗದಂತೆ ನವೀಕರಣ ಮಾಡಲಾಗುತ್ತಿದೆ' ಎಂದು ವಿವರಿಸಿದರು.

ಮೂವರು ಗಾಯಕಿಯರಿಗೆ 'ಉಪಾಸನಾ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪಾಸನಾ ಸಂಸ್ಥೆ ನೀಡುವ 'ಉಪಾಸನಾ ಪ್ರಶಸ್ತಿ'ಗೆ ಅಪರ್ಣಾ ನರೇಂದ್ರ ಹಾಗೂ 'ಗಾನೋಪಾಸನಾ ಪ್ರಶಸ್ತಿ'ಗೆ ವರ್ಷ ಸುರೇಶ್ ಮತ್ತು ಮೇಘನಾ ಭಟ್ ಆಯ್ಕೆಯಾಗಿದ್ದಾರೆ.

ಮೂವರೂ ಗಾಯಕಿಯರಾಗಿದ್ದಾರೆ. ನಗರದ ಎನ್.ಆರ್. ಕಾಲೊನಿಯ ಪತ್ತಿ ಸಭಾಂಗಣದಲ್ಲಿ ಇದೇ 26ರಂದು ಸಂಜೆ 6 ಗಂಟೆಗೆ ನಡೆಯಲಿರುವ ಸಂಸ್ಥೆಯ 26ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್, ಸುಗಮ ಸಂಗೀತ ಗಾಯಕಿ ಮಾಲತಿ ಶರ್ಮಾ, ಕವಯತ್ರಿ ರಂಜನಿಪ್ರಭು ಹಾಗೂ ಉಪಾಸನಾ ಸಂಸ್ಥೆಯ ಗೌರವಾಧ್ಯಕ್ಷೆ ವಿ.ಎಸ್.ಭಾಗ್ಯಲಕ್ಷ್ಮೀ ಅವರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಉಪಾಸನಾ ಸಂಸ್ಥೆಯ ಸಂಸ್ಥಾಪಕ ಉಪಾಸನಾ ಮೋಹನ್ ತಿಳಿಸಿದ್ದಾರೆ.


ಅಪರ್ಣಾ ನರೇಂದ್ರ


ವರ್ಷ ಸುರೇಶ್


ಮೇಘನಾ ಭಟ್

ಗಣಿತ ಕಲಿಕೆ: ಕರೆ ಮಾಡುವ ಶಿಕ್ಷಕರಿಗೆ ₹800

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲೆಗಳ 3 ರಿಂದ 8ನೇ ತರಗತಿಯ ಮಕ್ಕಳಿಗಾಗಿ ರೂಪಿಸಿರುವ 'ಗಣಿತ–ಗಣಕ' ಕಲಿಕೆ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಶಾಲಾ ಶಿಕ್ಷಣ ಇಲಾಖೆ ಮುಂದಾಗಿದ್ದು, ಪ್ರತಿಯೊಬ್ಬ ಶಿಕ್ಷಕರಿಗೂ ₹800 ಭತ್ಯೆ ನೀಡಲು ಆದೇಶ ಹೊರಡಿಸಿದೆ.

ಶಾಲಾ ಅವಧಿ ಮುಗಿಸಿ ಮಕ್ಕಳು ಮನೆಗೆ ತೆರಳಿದ ನಂತರ ಶಿಕ್ಷಕರು ವಾರಕ್ಕೆ ಒಂದು ದಿನ ಮೂಲ ಗಣಿತದ ಪರಿಕಲ್ಪನೆ, ಸಮಸ್ಯೆಗಳನ್ನು ಮೊಬೈಲ್ ಕರೆ ಮಾಡಿ ಪರಿಹರಿಸಬೇಕಿದೆ. ರಾಜ್ಯದಲ್ಲಿನ 38,548 ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 3ರಿಂದ 8ನೇ ತರಗತಿಯ 13.51 ಲಕ್ಷ ಮಕ್ಕಳು ಕಲಿಯುತ್ತಿದ್ದಾರೆ. ಇಂತಹ ಮಕ್ಕಳಿಗೆ ತರಗತಿ ಅವಧಿಯ ನಂತರ ಕರೆ ಮಾಡಲು 75,000 ಶಿಕ್ಷಕರನ್ನು ಆಯ್ಕೆ ಮಾಡಲಾಗಿದೆ. ಅವರಿಗೆ ಮೊಬೈಲ್ ಕರೆ ಭತ್ಯೆ ನೀಡಲು ₹60 ಕೋಟಿ ಬಿಡುಗಡೆ ಮಾಡಲಾಗಿದೆ.

ಶಿಕ್ಷಕರು ಪ್ರತಿ ವಿದ್ಯಾರ್ಥಿಗೆ ವಾರಕ್ಕೆ ಒಮ್ಮೆ ಕರೆ ಮಾಡಿ 30ರಿಂದ 40 ನಿಮಿಷ ಗಣಿತ ವಿಷಯ ಕುರಿತು ಮಾಹಿತಿ ಒದಗಿಸಲಿದ್ದಾರೆ. ಪೋಷಕರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಬಹುದಾಗಿದೆ. ಒಬ್ಬ ಶಿಕ್ಷಕರಿಗೆ 18–20 ವಿದ್ಯಾರ್ಥಿಗಳ ಗುಂಪು ನಿಗದಿ ಮಾಡಲಾಗಿದೆ.

ಶಿಕ್ಷಕರಿಗೂ ವಾರಕ್ಕೆ ಒಂದು ದಿನ ಕನಿಷ್ಠ 45 ನಿಮಿಷ ಮೊಬೈಲ್ ಫೋನ್‌ಗಳ ಮೂಲಕ ವಿಶೇಷ ತರಗತಿ ನೀಡಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಪರಿಕಲ್ಪನೆಗಳನ್ನು ವಿವರಿಸಲು, ಗಣಿತದ ಸಮಸ್ಯೆಗಳನ್ನು ಪರಿಹರಿಸಲು ಸ್ವಯಂಸೇವಾ ಸಂಸ್ಥೆಯ ಪ್ರತಿನಿಧಿಗಳು ನೆರವಾಗುತ್ತಿದ್ದಾರೆ.

ಪುಲಕೇಶಿನಗರ ಶಾಸಕ ಎ.ಸಿ. ಶ್ರೀನಿವಾಸ್ ಹೇಳಿಕೆ
100 ಹಾಸಿಗೆಗಳ ಹೈಟೆಕ್ ಆಸ್ಪತ್ರೆ ನಿರ್ಮಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಗಾಯಪುರದ ಪೆರಿಯರ್ ಸರ್ಕಲ್ ಬಳಿ ₹25 ಕೋಟಿ ವೆಚ್ಚದಲ್ಲಿ 100 ಹಾಸಿಗೆಗಳ ಹೈಟೆಕ್ ಆಸ್ಪತ್ರೆ ನಿರ್ಮಾಣ ಮಾಡಲಾಗುತ್ತಿದೆ' ಎಂದು ಪುಲಕೇಶಿನಗರ ಶಾಸಕ ಎ.ಸಿ.ಶ್ರೀನಿವಾಸ್ ತಿಳಿಸಿದರು.

ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ವಿಕಾಸ್ ಸುರಳ್ಕರ್ ಕಿಶೋರ್ ಅವರ ಜತೆಯಲ್ಲಿ ಆಸ್ಪತ್ರೆ ನಿರ್ಮಾಣ ಕಾಮಗಾರಿಯನ್ನು ಮಂಗಳವಾರ ಪರಿಶೀಲನೆ ನಡೆಸಿದ ಅವರು, ವಿವಿಧ ಇಲಾಖೆಗಳ ಅಧಿಕಾರಿಗಳ ಜತೆಗೆ ಸಭೆ ನಡೆಸಿದರು.

ಬಳಿಕ ಮಾತನಾಡಿದ ಶಾಸಕರು, 'ಸಗಾಯಪುರದಲ್ಲಿ 20 ಗುಂಟೆ ಜಾಗದಲ್ಲಿ ಮೂರು ಅಂತಸ್ತಿನ ಆಸ್ಪತ್ರೆ ನಿರ್ಮಿಸಲಾಗುತ್ತಿದೆ. ಈ ಆಸ್ಪತ್ರೆಯ ಕಟ್ಟಡದಲ್ಲಿ ಡಯಾಲಿಸಿಸ್ ಜತೆಗೆ, ಎಲ್ಲ ಕಾಯಿಲೆಗಳಿಗೆ ಒಂದೇ ಕಡೆ ಚಿಕಿತ್ಸೆ ಲಭ್ಯವಾಗಲಿದೆ. ₹10 ಕೋಟಿ ವೆಚ್ಚದಲ್ಲಿ ಕುಶಾಲ ನಗರದ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ನವೀಕರಣ ಮಾಡಲಾಗುತ್ತದೆ. ಕ್ಷೇತ್ರದಲ್ಲಿರುವ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೆರಿಸಲಾಗುತ್ತದೆ' ಎಂದರು.

'14 ಕೊಳವೆಬಾವಿಗಳ ಮರು ಕೊರೆಯುವಿಕೆಗೆ ಚಾಲನೆ ನೀಡುವ ಜತೆಗೆ, 10 ಕೊಳವೆಬಾವಿಗಳನ್ನು ಹೊಸದಾಗಿ ಕೊರೆಸಲಾಗುತ್ತಿದೆ' ಎಂದು ವಿವರಿಸಿದರು.

ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ.ಸೈಯದ್ ಮದನಿ, ಬಿಬಿಎಂಪಿ ಕಾರ್ಯನಿರ್ವಾಹಕ ಎಂಜಿನಿಯರ್ ತಿಪ್ಪೇಸ್ವಾಮಿ, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ದೇವರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಜೊಶ್ವಾ, ಫಯಾಜ್ ಖಾನ್ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಸಚ್ಚಿದಾನಂದೇಂದ್ರ ಸರಸ್ವತೀ ಸದ್ಗುರುಗಳ 50ನೇ ಆರಾಧನಾ ಮಹೋತ್ಸವ: 'ಶಾಂಕರ ವೇದಾಂತದ ಮೂಲ ತತ್ವಗಳು' ಉಪನ್ಯಾಸ: ಅಕ್ಷರಾನಂದೇಂದ್ರ ಸರಸ್ವತೀ ಸ್ವಾಮೀಜಿ, ಆಯೋಜನೆ ಮತ್ತು ಸ್ಥಳ: ಅಧ್ಯಾತ್ಮಪ್ರಕಾಶ ಕಾರ್ಯಾಲಯ, ತ್ಯಾಗರಾಜನಗರ, ಬೆಳಿಗ್ಗೆ 10

ಮಾಸದ ಮಾತು 'ಮಹಿಳಾ ಕಥಾಲೋಕ' ಉಪನ್ಯಾಸ: ಪದ್ಮಿನಿ ನಾಗರಾಜು, ಅತಿಥಿ: ಟಿ.ಎನ್. ವೀರಭದ್ರೇಗೌಡ, ಬಿ. ಶ್ರೀನಿವಾಸಮೂರ್ತಿ, ಆಯೋಜನೆ: ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘ, ಸ್ಥಳ: ಬಿ. ವಿಜಯಕುಮಾರ್ ಸಭಾಂಗಣ, ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘ, ವಿಮಾನಪುರ, ಮಧ್ಯಾಹ್ನ 3.30

ಕೆಎಸ್‌ಆರ್‌ಪಿ ಸಮುದಾಯ ಭವನದ ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಜಿ. ಪರಮೇಶ್ವರ, ಅಧ್ಯಕ್ಷತೆ: ರಾಮಲಿಂಗಾರೆಡ್ಡಿ, ಆಯೋಜನೆ: ಕರ್ನಾಟಕ ರಾಜ್ಯ ಪೊಲೀಸ್, ಬಿಎಂಆರ್‌ಸಿಎಲ್, ಸ್ಥಳ: ಸಿಲ್ಕ್ ಬೋರ್ಡ್ ಜಂಕ್ಷನ್, ಕೋರಮಂಗಲ, ಸಂಜೆ 4.30

ಕರ್ನಾಟಕ ಕಾರಾಗೃಹ ಮತ್ತು ಸುಧಾರಣಾ ಅಕಾಡೆಮಿ, ನೂತನ ಕಟ್ಟಡ ಹಾಗೂ ಬೆಂಗಳೂರು ಕೇಂದ್ರ ಕಾರಾಗೃಹದ ಹೊರ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಸಿಬ್ಬಂದಿ ವಸತಿ ಗೃಹಗಳ ಉದ್ಘಾಟನೆ, ಕಾರಾಗೃಹ ಪ್ರಧಾನ ಕಚೇರಿಯ ಅನೆಕ್ಸ್ ಕಟ್ಟಡ ನಿರ್ಮಾಣದ ಕಾಮಗಾರಿಯ ಶಂಕುಸ್ಥಾಪನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ.ಶಿವಕುಮಾರ್, ಜಿ.ಪರಮೇಶ್ವರ, ಸತೀಶ್ ಜಾರಕಿಹೊಳಿ, ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಆಯೋಜನೆ: ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆ, ಸ್ಥಳ: ಕರ್ನಾಟಕ ಕಾರಾಗೃಹ ಸುಧಾರಣಾ ಸೇವಾ ಅಕಾಡೆಮಿ, ಕಾಳಿದಾಸ ರಸ್ತೆ, ಗಾಂಧಿನಗರ, ಸಂಜೆ 4.30

'ಜಾನಪದ ಸಂಶೋಧಕರಾಗಿ ಪ್ರೊ.ಡಿ. ಲಿಂಗಯ್ಯ' ದತ್ತಿ ಉಪನ್ಯಾಸ: ಟಿ.ಕೆ. ಕೆಂಪೇಗೌಡ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5


ಬೈರಮಂಗಲ ರಾಮೇಗೌಡ

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಕಲಾ ಸ್ಪರ್ಧೆ, ಪ್ರದರ್ಶನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿಯು 53ನೇ ವಾರ್ಷಿಕ ಕಲಾ ಸ್ಪರ್ಧೆ ಹಾಗೂ ಕಲಾ ಪ್ರದರ್ಶನಕ್ಕೆ ಚಿತ್ರಕಲಾವಿದರಿಂದ ಅರ್ಜಿ ಆಹ್ವಾನಿಸಿದೆ.

ತೀರ್ಪುಗಾರರು ಆಯ್ಕೆ ಮಾಡಿದ ಒಟ್ಟು 10 ಕಲಾಕೃತಿಗಳ ಕಲಾವಿದರಿಗೆ ತಲಾ ₹25 ಸಾವಿರ ನಗದು ಬಹುಮಾನ ಹಾಗೂ ಪ್ರಶಸ್ತಿ ಫಲಕವನ್ನು ನೀಡಲಾಗುತ್ತದೆ. ಪ್ರವೇಶ ಶುಲ್ಕ ₹300 ನಗದು ರೂಪದಲ್ಲಿ ಅಥವಾ ಡಿಡಿ ಮೂಲಕ ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡೆಮಿಗೆ ಪಾವತಿಸಬೇಕಾಗುತ್ತದೆ.

ಭರ್ತಿ ಮಾಡಿದ ಅರ್ಜಿ ನಮೂನೆಯ ಜತೆಗೆ ಕಲಾಕೃತಿಯ ಛಾಯಾಚಿತ್ರ ಹಾಗೂ ದಾಖಲಾತಿಗಳನ್ನು ಆ.16ರೊಳಗೆ ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ, 2ನೇ ಮಹಡಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560002 ಈ ವಿಳಾಸಕ್ಕೆ ನೇರವಾಗಿ ಅಥವಾ ಅಂಚೆಯ ಮೂಲಕ ಸಲ್ಲಿಸಬಹುದಾಗಿದೆ.

ಲಕೋಟೆಯ ಮೇಲೆ 53ನೇ ವಾರ್ಷಿಕ ಕಲಾ ಪ್ರದರ್ಶನಕ್ಕಾಗಿ ಅರ್ಜಿ ಎನ್ನುವುದನ್ನು ಸ್ಪಷ್ಟವಾಗಿ ಸಮೂದಿಸಿರಬೇಕು. ವಿವರಕ್ಕೆ www.lalitkala.karnataka.gov.inಗೆ ಭೇಟಿ ನೀಡಿ ಎಂದು ಪ್ರಕಟಣೆಯಲ್ಲಿ ಅಕಾಡೆಮಿಯ ರಿಜಿಸ್ಟ್ರಾರ್ ಬಿ. ನೀಲಮ್ಮ ತಿಳಿಸಿದ್ದಾರೆ.

18 ರಿಂದ 3 ದಿನ 'ವಿ–ಎಕ್ಸ್‌ಪೊ'

ಬೆಂಗಳೂರು: ವಿ-ವೈಶ್ಯ ಸಂಸ್ಥೆಯಿಂದ ಜುಲೈ 18ರಿಂದ 20ರವರೆಗೆ ವಿ-ಎಕ್ಸ್‌ಪೊ ಪ್ರದರ್ಶನ ಮೇಳವನ್ನು ಅರಮನೆ ಮೈದಾನದಲ್ಲಿ ಆಯೋಜಿಸಲಾಗಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿ–ವೈಶ್ಯ ಸಂಸ್ಥಾಪಕ ಅನಿಲ್ ಗುಪ್ತಾ, 'ಮೇಳದಲ್ಲಿ ಜೀವನ ಶೈಲಿ, ಆಹಾರ, ಆರೋಗ್ಯ, ಆಭರಣ ಸೇರಿದಂತೆ 120ಕ್ಕೂ ಹೆಚ್ಚು ಮಳಿಗೆಗಳು ಇರಲಿವೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮೇಳಕ್ಕೆ ಚಾಲನೆ ನೀಡಲಿದ್ದಾರೆ. ಉಚಿತ ಪ್ರವೇಶವಿದೆ' ಎಂದರು.


ಕಾರ್ಯಕ್ರಮದಲ್ಲಿ ರಾಧಾ ಆರ್, ಆನಂದ್‌ರಾಜ್ ದೇಶಪ್ಪ ತವರ್‌ದಾರ್, ವಿಶ್ವ ವಿನ್ಯಾಸ್ ಅವರಿಗೆ 'ಡಾ. ಪದ್ಮಿನಿ ಮಕ್ಕಳ ಹಕ್ಕುಗಳ ಪ್ರಶಸ್ತಿ'ಯನ್ನು ಎಸ್‌.ವಿ. ಮಂಜುನಾಥ್ ಅವರು ಪ್ರದಾನ ಮಾಡಿದರು. ಚೈಲ್ಡ್ ರೈಟ್ಸ್ ಟ್ರಸ್ಟ್‌ನ ಕಾರ್ಯಕಾರಿ ನಿರ್ದೇಶಕ ವಾಸುದೇವ ಶರ್ಮಾ ಸಿ.ಎನ್., ಸಿವಿಕ್ ಸಂಸ್ಥೆಯ ರಾಜರಾಜೇಶ್ವರಿ, ಅಂಜಲಿ ರಾಮಣ್ಣ, ಆಲ್ಫಾನ್ಸ್ ಜೆಮೋನಿ ಹಾಗೂ ಆನ್ಸೆಲಂ ರೋಸಾರಿಯೊ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ರಾಧಾ, ಆನಂದ್‌ರಾಜ್‌ಗೆ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೈಲ್ಡ್ ರೈಟ್ಸ್ ಟ್ರಸ್ಟ್ ಸಂಸ್ಥೆ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇಲ್ಲಿನ ರಾಧಾ ಆರ್. ಮತ್ತು ಕಲಬುರಗಿಯ ಆನಂದ್‌ರಾಜ್ ದೇಶಪ್ಪ ತವರ್‌ದಾರ್ ಅವರಿಗೆ 'ಡಾ. ಪದ್ಮಿನಿ ಮಕ್ಕಳ ಹಕ್ಕುಗಳ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ 15 ವರ್ಷಗಳ ನಿರಂತರ ಕಾರ್ಯನಿರ್ವಹಣೆಯನ್ನು ಪರಿಗಣಿಸಿ, ಈ ಪ್ರಶಸ್ತಿಗೆ ಅವರನ್ನು ಆಯ್ಕೆ ಮಾಡಲಾಗಿತ್ತು. ಕಲಾವಿದ ವಿಶ್ವ ವಿನ್ಯಾಸ್ ಅವರಿಗೆ ತೀರ್ಪುಗಾರರ ವಿಶೇಷ ಪ್ರಶಸ್ತಿಯನ್ನು ಪ್ರದಾನ ಮಾಡಿ, ಗೌರವಿಸಲಾಯಿತು. ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಸಹ ನಿರ್ದೇಶಕ ಎಸ್. ವಿ. ಮಂಜುನಾಥ್ ಅವರು ವಿಶೇಷ ಉಪನ್ಯಾಸ ನೀಡಿದರು.

ಇದೇ ವೇಳೆ ಟ್ರಸ್ಟ್ 2025ನೇ ಸಾಲಿಗೆ ನೀಡುವ 'ಡಾ.ಪದ್ಮಿನಿ ಮಕ್ಕಳ ಹಕ್ಕುಗಳ ಫೆಲೋಶಿಪ್'ಗೆ ಆಯ್ಕೆಯಾದವರ ಹೆಸರನ್ನು ಘೋಷಿಸಲಾಯಿತು. ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದ ಒಂದು ವರ್ಷದ ಈ ಫೆಲೋಶಿಪ್‌ಗೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನವೀನ್ ಕುಮಾರ್ ಬಿ., ತುಮಕೂರಿನ ಭವ್ಯ ಎನ್., ಕೊಪ್ಪಳದ ಮಂಜುಳ ಕುಡಗುಂಟಿ, ಸುಭಾನ್ ಸಾಬ್, ವಿಜಯನಗರದ ನಾಗರಾಜ್ ಕೆ. ಹಾಗೂ ಚಿಕ್ಕಬಳ್ಳಾಪುರದ ಗಾಯತ್ರಿ ಪಿ. ಅವರು ಆಯ್ಕೆಯಾಗಿರುವುದಾಗಿ ಟ್ರಸ್ಟ್‌ನ ನಾಗಮಣಿ ಸಿ.ಎನ್ ಘೋಷಿಸಿದರು.

'ಈ ಫೆಲೋಶಿಪ್‌ಗೆ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದ ವಿಚಾರಗಳ ಕುರಿತು ತರಬೇತಿ ಮತ್ತು ಕ್ಷೇತ್ರಾನುಭವ ನೀಡಲಾಗುತ್ತದೆ. ತಮ್ಮ ಜಿಲ್ಲೆಗಳಲ್ಲಿ ನಿರ್ದಿಷ್ಟ ಗ್ರಾಮ ಪಂಚಾಯಿತಿ ಪ್ರದೇಶಗಳನ್ನು ಆಯ್ಕೆ ಮಾಡಿ, ಅಲ್ಲಿ ಮಕ್ಕಳ ಹಕ್ಕುಗಳ ಸಂವೇದನೆ ಬೆಳೆಸಲು ಸ್ಥಳೀಯ ಸಂಸ್ಥೆಗಳು, ಸೇವಾ ಪೂರೈಕೆದಾರರು, ಸಮುದಾಯ ಮತ್ತು ಮಕ್ಕಳೊಂದಿಗೆ ಕೆಲಸ ಮಾಡುತ್ತಾರೆ' ಎಂದು ಹೇಳಿದರು.

ಮೈಸೂರು ರೇಸ್

ಟಚ್ ಆಫ್ ಗ್ರೇ ಗೆಲ್ಲುವ ನಿರೀಕ್ಷೆ

ಶಿವಾಜಿನಗರ್ ಪ್ಲೇಟ್ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಟಚ್ ಆಫ್ ಗ್ರೇ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಫ್ರೀ ಸ್ಪಿರಿಟೆಡ್ 8, ಮೈ ಲೈಫ್ ಮೈ ರೂಲ್ಸ್ 2, ದಿ ಏಂಜೆಲ್ ಪವರ್ 6
2ನೇ ರೇಸ್: ಫ್ಯೂರಿಯಸ್ ಫನ್ 9, ನ್ಯಾಚುರಲ್ ಲೈಟ್ 5, ಡಿ ರೋಮನ್ ರೀನ್ಸ್ 3
3ನೇ ರೇಸ್: ಪೋಲಾರ್ ವಿಂಡ್ 3, ಟೂ ಹಾಟ್ ಟು ಟಚ್ 8, ಡಿ ಲಾರ್ಡ್ 9
4ನೇ ರೇಸ್: ಮೋನ 6, ಮೈಸೂರು ಫಾರೊ 2, ಮಿಸ್ಟಿ ವಾರಿಯರ್ 1
5ನೇ ರೇಸ್: ಟಚ್ ಆಫ್ ಗ್ರೇ 1, ಮಿಸ್ಟಿಕ್ ಬಾಂಡ್ 2, ಬ್ರೇವ್ ಟ್ರೂಪರ್ 5
6ನೇ ರೇಸ್: ಅಶ್ವ ಕಲಿ ಭಾನಿ 5, ಡಿ ರೋಮನ್ ಪವರ್ 7, ಆಶೀರ್ವಾದ್ 11

ಉತ್ತಮ ಬೆಟ್: ಮೋನ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಚಿತ್ರಾವಳಿ


ಪರ್ಯಾವರಣ ಸಂರಕ್ಷಣ ಗತಿವಿಧಿ (ಪಿಎಸ್‌ಜಿ), ಕೇಂದ್ರ ಸರ್ಕಾರದ ಉನ್ನತ ಶಿಕ್ಷಣ ಸಚಿವಾಲಯ, ಪರಿಸರ ಅರಣ್ಯ ಹಾಗೂ ಹವಾಮಾನ ಬದಲಾವಣೆ ಸಚಿವಾಲಯದ ಸಹಯೋಗದಲ್ಲಿ ಆಯೋಜಿಸುತ್ತಿರುವ ನ್ಯಾಷನಲ್ ಸ್ಟೂಡೆಂಟ್ ಪರ್ಯಾವರಣ ಕಾಂಪಿಟೀಶನ್ (ಎನ್‌ಎಸ್‌ಪಿಸಿ) ಪೋಸ್ಟರ್ ಅನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಂಗಳವಾರ ಬಿಡುಗಡೆಗೊಳಿಸಿದರು. ಪಿಎಸ್‌ಜಿಯ ದಕ್ಷಿಣ ಕರ್ನಾಟಕ ಪ್ರಾಂತ್ಯದ ಸಂಯೋಜಕ ವೆಂಕಟೇಶ್ ಸಂಗನಾಳ್, ಕಾರ್ಯಕರ್ತರಾದ ಶ್ರೀಹರ್ಷ, ಸುರಭಿ ಥಾಮರ್, ಸಹನಾ ಹೆಗಡೆ ಉಪಸ್ಥಿತರಿದ್ದರು



ಮೂಡುಬಿದಿರೆಯ ಕಾಲೇಜಿನ ಇಬ್ಬರು ಉಪನ್ಯಾಸಕರು ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರ ಎಸಗಿರುವುದನ್ನು ಖಂಡಿಸಿ ಎಐಡಿಎಸ್‌ಒ ಜಿಲ್ಲಾ ಸಮಿತಿಯಿಂದ ನಗರದಲ್ಲಿ ಮಂಗಳವಾರ ರಾತ್ರಿ ಕ್ಯಾಂಡಲ್ ಹಿಡಿದು ಪ್ರತಿಭಟನೆ ನಡೆಸಲಾಯಿತು. ಬೆಂಗಳೂರು ಜಿಲ್ಲಾ ಅಧ್ಯಕ್ಷೆ ಸಿ.ಎಂ. ಅಪೂರ್ವ, ಜಿಲ್ಲಾ ಕಾರ್ಯದರ್ಶಿ ಕಲ್ಯಾಣ್ ಕುಮಾರ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು

ಬಿಷ್ಣೋಯಿ ಗ್ಯಾಂಗ್ ಸೋಗಿನಲ್ಲಿ ಬೆದರಿಕೆ

₹1 ಕೋಟಿ ನೀಡುವಂತೆ ಬೆದರಿಕೆ, ನಾಲ್ವರ ಸೆರೆ, ಶೇಷಾದ್ರಿಪುರ ಪೊಲೀಸರ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ಭಾರತದ ಕುಖ್ಯಾತ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯಿ ತಂಡದ ಸದಸ್ಯರೆಂದು ಹೇಳಿಕೊಂಡು ನಗರದ ಉದ್ಯಮಿಗೆ ಬೆದರಿಕೆ ಹಾಕಿ, ಹಣ ಸುಲಿಗೆ ಮಾಡಲು ಪ್ರಯತ್ನಿಸಿದ್ದ ನಾಲ್ವರನ್ನು ಶೇಷಾದ್ರಿಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರಿನ ಮಾವಳ್ಳಿಯ ಮೊಹಮ್ಮದ್ ರಫೀಕ್, ಉತ್ತರ ಪ್ರದೇಶದ ಶಿಶುಪಾಲ್ ಸಿಂಗ್, ವಂಶ್ ಸಚ್‌ದೇವ್ ಹಾಗೂ ಅಮಿತ್ ಚೌಧರಿ ಬಂಧಿತರು.

ಆರೋಪಿಗಳಿಂದ ಒಂದು ಕಾರು, ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

ಉತ್ತರ ಪ್ರದೇಶದ ಮೂವರು ಆರೋಪಿಗಳನ್ನು ಮೊಹಮ್ಮದ್ ರಫೀಕ್ ನಗರಕ್ಕೆ ಕರೆಸಿಕೊಂಡು ನಗರದ ಉದ್ಯಮಿಗೆ ಬೆದರಿಕೆ ಹಾಕಿದ್ದ. ಉದ್ಯಮಿ ನೀಡಿದ ದೂರು ಆಧರಿಸಿ ಆರೋಪಿಗಳನ್ನು ಪತ್ತೆ ಹಚ್ಚಲಾಯಿತು ಎಂದು ಪೊಲೀಸರು ಹೇಳಿದರು.

'ಶೇಷಾದ್ರಿಪುರ ಪೊಲೀಸ್ ಠಾಣಾ ವ್ಯಾಪ್ತಿಯ ನೆಹರೂ ನಗರದ ಅಪಾರ್ಟ್‌ಮೆಂಟ್‌ನಲ್ಲಿ ಉದ್ಯಮಿ ನೆಲಸಿದ್ದಾರೆ. ಪ್ಲೈವುಡ್ ವ್ಯಾಪಾರ ಮಾಡುತ್ತಿದ್ದಾರೆ. ಉದ್ಯಮಿಗೆ ಆರೋಪಿಗಳು ಕರೆ ಮಾಡಿ ಬೆದರಿಕೆ ಹಾಕಿದ್ದರು.

ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್ ಸದಸ್ಯರಾಗಿದ್ದು, ಒಂದು ಕೋಟಿ ರೂಪಾಯಿ ನೀಡುವಂತೆ ಬೇಡಿಕೆ ಇಟ್ಟಿದ್ದರು. 'ಹಣ ಕೊಡದಿದ್ದರೆ ನಿನ್ನ ಮಗನನ್ನು ಅಪಹರಣ ಮಾಡುತ್ತೇವೆ' ಎಂದು ಬೆದರಿಸಿದ್ದರು. ಈ ಸಂಬಂಧ ಶೇಷಾದ್ರಿಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

'ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತನಿಖೆಗಾಗಿ ಕೇಂದ್ರ ವಿಭಾಗ ಮತ್ತು ಸಿಸಿಬಿ ಒಳಗೊಂಡಂತೆ ಪ್ರತ್ಯೇಕ ತಂಡ ರಚಿಸಲಾಗಿತ್ತು. ಪ್ರಕರಣದ ತನಿಖೆ ಕೈಗೊಂಡಾಗ ಜೆ.ಸಿ.ರಸ್ತೆಯಲ್ಲಿ ಕಾರ್ ಸೌಂಡ್ಸ್ ಶಾಪ್‌ನಲ್ಲಿ ಬಿಡಿ ಭಾಗಗಳನ್ನು ಮಾರಾಟ ಮಾಡುತ್ತಿದ್ದ ಮೊಹಮ್ಮದ್ ರಫೀಕ್ ಬೆದರಿಕೆ ಹಾಕಿದ್ದು ಪತ್ತೆಯಾಗಿತ್ತು. ಆತ ನೀಡಿದ ಸುಳಿವು ಆಧರಿಸಿ ಉತ್ತರ ಪ್ರದೇಶದ ಮೂವರನ್ನು ಬಂಧಿಸಲಾಯಿತು' ಎಂದು ಸೀಮಂತ್ ಕುಮಾರ್ ಸಿಂಗ್ ಹೇಳಿದರು.


ರಫೀಕ್


ಅಮಿತ್


ದೇವ್


ಶಿಶುಪಾಲ್

ಬಿಷ್ಣೋಯಿ ಗ್ಯಾಂಗ್‌ಗೆ ಸಂಬಂಧವಿಲ್ಲ

ಪ್ರಕರಣವೊಂದರಲ್ಲಿ ದೆಹಲಿ ಪೊಲೀಸರಿಂದ ಬಂಧನವಾಗಿದ್ದ ಮಾವಳ್ಳಿಯ ನಿವಾಸಿ ಮೊಹಮ್ಮದ್ ರಫೀಕ್ ಕೆಲವು ತಿಂಗಳು ತಿಹಾರ್ ಜೈಲಿನಲ್ಲಿದ್ದ. ಆ ಸಂದರ್ಭದಲ್ಲಿ ಉತ್ತರ ಪ್ರದೇಶದ ಮೂವರು ಆರೋಪಿಗಳು ಪರಿಚಯ ಆಗಿದ್ದರು. ಜೈಲಿನಲ್ಲಿದ್ದಾಗ ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್ ಬಗ್ಗೆ ರಫೀಕ್ ತಿಳಿದುಕೊಂಡಿದ್ದ. ಆತನ ಹೆಸರು ಹೇಳಿಕೊಂಡು ಬೆದರಿಸಲು ಸಂಚು ರೂಪಿಸಿದ್ದ.

ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್‌ಗೂ, ಬಂಧಿತ ಆರೋಪಿಗಳಿಗೂ ಯಾವುದೇ ಸಂಬಂಧ ಇಲ್ಲ. ಲಾರೆನ್ಸ್ ಬಿಷ್ಣೋಯಿ ಹೆಸರು ಬಳಸಿಕೊಂಡು ಸುಲಿಗೆ ಮಾಡಲು ಪ್ರಯತ್ನಿಸಿದ್ದು, ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

'ಪ್ರತೀಕಾರಕ್ಕಾಗಿ ಕೃತ್ಯ'

'ದೂರುದಾರ ಉದ್ಯಮಿ ಇತರೆ ಮೂವರೊಂದಿಗೆ ಸೇರಿಕೊಂಡು ಕಾರು ಬಿಡಿಭಾಗಗಳ ಮಾರಾಟ ಹಾಗೂ ರಿಯಲ್ ಎಸ್ಟೇಟ್‌ನಲ್ಲಿ ಮೋಸ ಮಾಡಿದ್ದರು. 'ಉದ್ಯಮಿಯ ವಿರುದ್ಧ ಸೇಡು ತೀರಿಸಿಕೊಳ್ಳಲು ಸಂಚು ರೂಪಿಸಿದ್ದೆ. ಬೆದರಿಕೆಯೊಡ್ಡಿ ಹಣ ವಸೂಲಿ ಮಾಡುವ ಉದ್ದೇಶದಿಂದ ಉತ್ತರ ಪ್ರದೇಶದಿಂದ ಮೂವರನ್ನು ಕರೆಸಿಕೊಂಡು ಕೃತ್ಯ ಎಸಗಿದೆ' ಎಂದು ರಫೀಕ್ ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದಾನೆ. ಆರೋಪಿಗಳು ಕೃತ್ಯ ಎಸಗಲು ಪಿಸ್ತೂಲ್ ಮತ್ತು ಗುಂಡುಗಳೊಂದಿಗೆ ನಗರಕ್ಕೆ ಬಂದು ಲಾಡ್ಜ್‌ನಲ್ಲಿದ್ದರು. ಪಿಸ್ತೂಲ್ ಹಾಗೂ ಗುಂಡುಗಳನ್ನು ಆರೋಪಿಗಳು ಬಚ್ಚಿಟ್ಟಿದ್ದು, ಶೋಧ ನಡೆಯುತ್ತಿದೆ' ಎಂದು ಪೊಲೀಸರು ಹೇಳಿದರು.

47 ನಕಲಿ ಆಧಾರ್ , 122 ನಕಲಿ ದಾಖಲೆಗಳ ವಶ

ನಕಲಿ ಜಾಮೀನು ನೀಡುತ್ತಿದ್ದವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಪಿಗಳ ಪರವಾಗಿ ನ್ಯಾಯಾಲಯಗಳಲ್ಲಿ ನಕಲಿ ಜಾಮೀನು ನೀಡುತ್ತಿದ್ದ ಎಂಟು ಮಂದಿ ಆರೋಪಿಯನ್ನು ಕೇಂದ್ರ ವಿಭಾಗದ ಹಲಸೂರು ಗೇಟ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಹೂವಿನಹಡಗಲಿಯ ಕೆ.ರಫಿ (33), ಯಲಹಂಕ ತಾಲ್ಲೂಕಿನ ಸಿಂಗಹಳ್ಳಿಯ ಎಸ್.ಜಿ.ಪ್ರವೀಣ್ ಕುಮಾರ್ (32), ತಿಪಟೂರಿನ ಅಭಿಷೇಕ್ (33), ಆನೇಕಲ್ ತಾಲ್ಲೂಕಿನ ಮೈಸೂರಮ್ಮ ದೊಡ್ಡಿಯ ನಿವಾಸಿ ಗೋವಿಂದನಾಯ್ಕ್ (37), ರಾಮನಗರ ಜಿಲ್ಲೆಯ ಗಂಗೋಣ ಹಳ್ಳಿಯ ನಿವಾಸಿ ದೊರೆರಾಜು (32), ಬೆಂಗಳೂರಿನ ಬಿಟಿಎಂ ಲೇಔಟ್‌ನ ಗುರಪ್ಪಪಾಳ್ಯದ ಅಬೀದ್ ವಾಸೀಂ (46), ಯಶವಂತಪುರದ ಅಹಮ್ಮದ್ ಜುಬೇರ್ (23) ಹಾಗೂ ತುರುವೇಕೆರೆ ತಾಲ್ಲೂಕು ತಾವರೆಕೆರೆಯ ಟಿ.ಡಿ.ಗೋವಿಂದರಾಜು ಬಂಧಿತರು.

ಆರೋಪಿಗಳಿಂದ 47 ನಕಲಿ ಆಧಾರ್ ಕಾರ್ಡ್‌ಗಳು, ಆರ್‌ಟಿಸಿ, ವಿವಿಧ ಮಾದರಿಯ 122 ನಕಲಿ ದಾಖಲೆಗಳು, ಪೆನ್ ಡ್ರೈವ್, ಏಳು ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ನಾಲ್ಕನೇ ಎಸಿಜೆಎಂ ನ್ಯಾಯಾಲಯದ ಶಿರಸ್ತೇದಾರ್ ಡಿ.ಸೆಲ್ವರಾಜ್ ಹಾಗೂ ಹಲಸೂರು ಗೇಟ್ ಠಾಣೆಯ ಪಿಎಸ್‌ಐ ಭಗವಂತ್ರಾಲಯ ಮಾಶ್ಯಾಳ್ ಅವರು ನೀಡಿದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಎಂಟು ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

'ನಕಲಿ ಆಧಾರ್ ಕಾರ್ಡ್, ಆರ್‌ಟಿಸಿ, ಮ್ಯುಟೇಷನ್ ಹಾಗೂ ವಿವಿಧ ಸರ್ಕಾರಿ ಇಲಾಖೆಯ ನಕಲಿ ವೇತನ ಚೀಟಿಗಳನ್ನು ಸೃಷ್ಟಿಸಿಕೊಳ್ಳುತ್ತಿದ್ದ ಆರೋಪಿಗಳು, ನ್ಯಾಯಾಲಯದಲ್ಲಿ ಜಾಮೀನು ಕೋರಿರುವ ಆರೋಪಿಗಳನ್ನು ಪತ್ತೆ ಹಚ್ಚುತ್ತಿದ್ದರು. ಜಾಮೀನು ಕೋರಿರುವ ಆರೋಪಿಗಳ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿ ನಕಲಿ ದಾಖಲೆಗಳನ್ನು ಸಲ್ಲಿಸುತ್ತಿದ್ದರು' ಎಂದು ಮೂಲಗಳು ತಿಳಿಸಿವೆ.

'ಭೂಮಿ ಆ್ಯಪ್' ಮೂಲಕ ಬೇರೆಯವರ ಪಹಣಿಯ ವಿವರ ಪಡೆದುಕೊಳ್ಳುತ್ತಿದ್ದ ಆರೋಪಿಗಳು, ಅದರಲ್ಲಿನ ವಿಳಾಸಕ್ಕೆ ಹೊಂದಿಕೆ ಆಗುವಂತೆ ನಕಲಿ ಆಧಾರ್ ಕಾರ್ಡ್ ಮಾದರಿ ಸೃಷ್ಟಿಸುತ್ತಿದ್ದರು. ಆ ಆಧಾರ್‌ಗೆ ಯಾವುದೊ ಒಂದು ನಂಬರ್ ನಮೂದಿಸಿ, ಶೂರಿಟಿ ನೀಡಲು ಹೋಗುವವರ ಫೋಟೊ ಸೇರಿಸುತ್ತಿದ್ದರು. ಅದರೊಂದಿಗೆ ಶೂರಿಟಿ ನೀಡುವ ವ್ಯಕ್ತಿ, ಬ್ಯಾಂಕ್ ಪಾಸ್‌ಬುಕ್ ಜೊತೆ ನ್ಯಾಯಾಲಯಕ್ಕೆ ಸಲ್ಲಿಸಿ ಜಾಮೀನು ಪಡೆಯಲು ನೆರವಾಗುತ್ತಿದ್ದ. ಪ್ರಕರಣವೊಂದರಲ್ಲಿ ನ್ಯಾಯಾಲಯದ ಕಲಾಪ ಪ್ರಕ್ರಿಯೆ ನಡೆಯುವಾಗ ಆರೋಪಿಗಳ ವಂಚನೆ ಬಯಲಾಗಿತ್ತು. ಕೂಡಲೇ 4ನೇ ಎಸಿಜೆಎಂ ನ್ಯಾಯಾಲಯದ ಶಿರಸ್ತೇದಾರರು ಹಲಸೂರು ಗೇಟ್ ಠಾಣೆಗೆ ದೂರು ನೀಡಿದ್ದರು ' ಎಂದು ಪೊಲೀಸರು ಹೇಳಿದರು.


ಹಲಸೂರು ಗೇಟ್ ಠಾಣೆಯ ಪೊಲೀಸರು ಆರೋಪಿಗಳಿಂದ ಜಪ್ತಿ ಮಾಡಿಕೊಂಡ ನಕಲಿ ದಾಖಲೆಗಳನ್ನು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಅವರು ಮಂಗಳವಾರ ಪರಿಶೀಲಿಸಿದರು

ಅಪರಾಧ ಸುದ್ದಿ

ರೌಡಿ ಶೀಟರ್ ಕೊಲೆ

ಬೆಂಗಳೂರು: ಮನೆಯ ಎದುರು ನಿಂತಿದ್ದ ರೌಡಿ ಶೀಟರ್ ಶಿವಕುಮಾರ್ ಅಲಿಯಾಸ್ ಬಿಕ್ಲು ಶಿವನನ್ನು (40) ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿದೆ.

ಹಲಸೂರು ಕೆರೆ ಬಳಿಯ ಮನೆಯ ಎದುರು ಶಿವಕುಮಾರ್ ನಿಂತಿದ್ದರು. ಕಾರಿನಲ್ಲಿ ಬಂದ ನಾಲ್ವರು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿ ಪರಾರಿ ಆಗಿದ್ದಾರೆ. ಮೃತದೇಹವನ್ನು ಆಸ್ಪತ್ರೆಯ ಶವಾಗಾರದಲ್ಲಿ ಇಡಲಾಗಿದೆ. ಹಳೇ ದ್ವೇಷದ ಹಿನ್ನೆಲೆಯಲ್ಲಿ ಆರೋಪಿಗಳು ಕೃತ್ಯ ಎಸಗಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ಶಿವಕುಮಾರ್ ಕುಟುಂಬದವರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕೊಲೆಯಾದ ಶಿವಕುಮಾರ್ ವಿರುದ್ಧ 11 ಪ್ರಕರಣಗಳು ದಾಖಲಾಗಿದ್ದವು. ಭಾರತಿನಗರ ಠಾಣೆಯಲ್ಲಿ ರೌಡಿ ಪಟ್ಟಿ ತೆರೆಯಲಾಗಿತ್ತು.

₹1.70 ಕೋಟಿ ಮೌಲ್ಯದ ಮಾದಕ ವಸ್ತು ಜಪ್ತಿ

ಇಬ್ಬರು ವಿದೇಶಿಯರೂ ಸೇರಿ ಮೂವರು ಡ್ರಗ್ಸ್ ಪೆಡ್ಲರ್‌ಗಳ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಕಾರ್ಯಾಚರಣೆ ನಡೆಸಿದ ಕೋರಮಂಗಲ ಹಾಗೂ ಯಲಹಂಕ ಉಪನಗರ ಠಾಣೆಯ ಪೊಲೀಸರು, ಇಬ್ಬರು ವಿದೇಶಿಯರೂ ಸೇರಿ ಮೂವರು ಡ್ರಗ್ಸ್ ಪೆಡ್ಲರ್‌ಗಳನ್ನು ಬಂಧಿಸಿದ್ದಾರೆ.

ಬಂಧಿತರಿಂದ ₹1.70 ಕೋಟಿ ಮೌಲ್ಯದ ವಿವಿಧ ಮಾದರಿಯ ಮಾದಕ ವಸ್ತುಗಳನ್ನು ಜಪ್ತಿ ಮಾಡಲಾಗಿದೆ.

ಯಲಹಂಕ ಉಪನಗರ ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿ ಘಾನಾ ದೇಶದ ಬ್ರೈಟ್ (45) ಹಾಗೂ ಕೋಫಿ (44) ಎಂಬುವವರನ್ನು ಬಂಧಿಸಿದ್ದಾರೆ.

ಬಂಧಿತರಿಂದ ₹70 ಲಕ್ಷ ಮೌಲ್ಯದ ಎಂಡಿಎಂಎ ವಶಕ್ಕೆ ಪಡೆದಿದ್ದಾರೆ. ವಿದೇಶದಿಂದ ಬಂದಿದ್ದ ಇಬ್ಬರು ದೊಡ್ಡಬೆಟ್ಟದಹಳ್ಳಿಯ ಮೂರನೇ ಕ್ರಾಸ್‌ನ ಮನೆಯೊಂದರಲ್ಲಿ ಮಾದಕ ವಸ್ತುಗಳನ್ನು ಸಂಗ್ರಹಿಸಿಕೊಂಡು ಮಾರಾಟ ಮಾಡುತ್ತಿರುವ ಕುರಿತು ದೂರು ಬಂದಿತ್ತು. ಇದನ್ನು ಆಧರಿಸಿ ಮನೆಯ ಮೇಲೆ ದಾಳಿ ನಡೆಸಿದಾಗ ಎಂಡಿಎಂಎ ಸಂಗ್ರಹ ಮಾಡಿಕೊಂಡಿದ್ದು ಪತ್ತೆಯಾಗಿತ್ತು ಎಂದು ಪೊಲೀಸರು ಹೇಳಿದರು.

'ಅನಾರೋಗ್ಯದಿಂದ ಬಳಲುತ್ತಿದ್ದ ಇಬ್ಬರು, 2023ರಲ್ಲಿ ಚಿಕಿತ್ಸೆಗೆಂದು ಬೆಂಗಳೂರಿಗೆ ಬಂದಿದ್ದರು. ಬಂದವರು ದೊಡ್ಡಬೆಟ್ಟಹಳ್ಳಿಯಲ್ಲಿ ಬಾಡಿಗೆ ಮನೆ ಪಡೆದು ನೆಲಸಿದ್ದರು. ಹೆಚ್ಚಿನ ಹಣ ಗಳಿಸುವ, ಮೋಜಿನ ಜೀವನ ನಡೆಸುವ ಉದ್ದೇಶದಿಂದ ಮತ್ತಿಕೆರೆ ಜೆ.ಪಿ. ಪಾರ್ಕ್ ಬಳಿ ಅಪರಿಚಿತರಿಂದ ಕಡಿಮೆ ಬೆಲೆಗೆ ಮಾದಕ ವಸ್ತುಗಳನ್ನು ಖರೀದಿಸಿ ಹೆಚ್ಚಿನ ಬೆಲೆಗೆ ಸಾರ್ವಜನಿಕರು, ವಿದ್ಯಾರ್ಥಿಗಳು ಹಾಗೂ ಪಿ.ಜಿಯಲ್ಲಿ ನೆಲಸಿದ್ದವರಿಗೆ ಮಾರಾಟ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

ಹವ್ಯಾಸಿ ಬರಹಗಾರನ ಬಂಧನ: ಕೋರಮಂಗಲ ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿ ಹೈಡ್ರೊ ಗಾಂಜಾ ಮಾರಾಟ ಮಾಡುತ್ತಿದ್ದ ಹವ್ಯಾಸಿ ಬರಹಗಾರ, ಕೇರಳದ ಆಂಥೋನಿ ಮ್ಯಾಥ್ಯುನನ್ನು ಬಂಧಿಸಿದ್ದಾರೆ. ಆರೋಪಿಯಿಂದ ₹1 ಕೋಟಿ ಮೌಲ್ಯದ ಹೈಡ್ರೊ ಗಾಂಜಾವನ್ನು ಜಪ್ತಿ ಮಾಡಿಕೊಂಡಿದ್ದಾರೆ.

ಠಾಣಾ ವ್ಯಾಪ್ತಿಯ ಎನ್.ಜಿ.ವಿ ಗೇಟ್ ಬಳಿ ಆರೋಪಿ ಹೈಡ್ರೊ ಗಾಂಜಾ ಮಾರಾಟ ಮಾಡುತ್ತಿದ್ದ. ಬಾತ್ಮೀದಾರರು ನೀಡಿದ ಮಾಹಿತಿ ಆಧರಿಸಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಕೇರಳದಿಂದ ಕೆಲಸ ಹುಡುಕಿಕೊಂಡು ಆರೋಪಿ ನಗರಕ್ಕೆ ಬಂದಿದ್ದ. ಹೆಚ್ಚಿನ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಕೇರಳದಿಂದ ಹೈಡ್ರೊ ಗಾಂಜಾ ತರಿಸಿಕೊಂಡು ನಗರದಲ್ಲಿ ಮಾರಾಟ ಮಾಡುತ್ತಿದ್ದ ಎಂದು ಮೂಲಗಳು ತಿಳಿಸಿವೆ.

ಲಕ್ಷ ಸಂಬಳದ ಕೆಲಸ ಬಿಟ್ಟು ಕಳ್ಳತನಕ್ಕೆ ಇಳಿದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಹಕರ ಸೋಗಿನಲ್ಲಿ ಚಿನ್ನಾಭರಣ ಮಳಿಗೆಗಳಿಗೆ ತೆರಳಿ ಮಾಲೀಕರ ಗಮನ ಬೇರೆಡೆ ಸೆಳೆದು ಚಿನ್ನಾಭರಣ ಕಳವು ಮಾಡುತ್ತಿದ್ದ ಬಿ.ಟೆಕ್ ಪದವೀಧರನನ್ನು ಮಲ್ಲೇಶ್ವರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಿಚರ್ಡ್ (25) ಬಂಧಿತ ಆರೋಪಿ.

ಆರೋಪಿಯಿಂದ ₹13 ಲಕ್ಷ ಮೌಲ್ಯದ 134 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಕೊಡಗಿನ ವಿರಾಜಪೇಟೆಯ ನೆಹರೂ ನಗರದ ನಿವಾಸಿ ರಿಚರ್ಡ್ ನಗರದ ಖಾಸಗಿ ಕಾಲೇಜಿನಲ್ಲಿ ಬಿ.ಟೆಕ್ ಪದವಿ ಪಡೆದಿದ್ದ. ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಆತನಿಗೆ ₹1 ಲಕ್ಷ ಸಂಬಳವಿತ್ತು. ಹಣದಾಸೆಗಾಗಿ ಕೆಲಸ ಬಿಟ್ಟು ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಎಂದು ಪೊಲೀಸರು ತಿಳಿಸಿದರು.

'ಮೋಜು ಜೀವನ ನಡೆಸಲು ಕಳ್ಳತನ ಮಾಡುತ್ತಿದ್ದ' ಎಂದು ಪೊಲೀಸರು ತಿಳಿಸಿದರು.


ರಿಚರ್ಡ್

ಗ್ರಾಹಕನ ಸೋಗಿನಲ್ಲಿ ಆರೋಪಿಯು ಭದ್ರತಾ ಸಿಬ್ಬಂದಿಗಳಿಲ್ಲದ ಚಿನ್ನಾಭರಣ ಅಂಗಡಿಗಳನ್ನು ಗುರುತಿಸಿ ಕಳ್ಳತನ ಮಾಡುತ್ತಿದ್ದ. ಖರೀದಿ ನೆಪದಲ್ಲಿ ತರಹೇವಾರಿ ವಿನ್ಯಾಸವಿರುವ ಚಿನ್ನಾಭರಣಗಳನ್ನು ತೋರಿಸುವಂತೆ ಸಿಬ್ಬಂದಿಗೆ ಹೇಳುತ್ತಿದ್ದ. ಬಳಿಕ ಸಿಬ್ಬಂದಿಯ ಗಮನವನ್ನು ಬೇರೆಡೆ ಸೆಳೆದು ಕಳ್ಳತನ ಮಾಡುತ್ತಿದ್ದ. ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ 9 ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ಹೇಳಿದರು.

ಹಣ ವಸೂಲಿ: ಶ್ರೀನಾಥ್ ಜೋಷಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಐದು ತಾಸು ವಿಚಾರಣೆ ಎದುರಿಸಿದ ಐಪಿಎಸ್ ಅಧಿಕಾರಿ
- ಶ್ರೀನಾಥ್ ಅವರಿಂದ ಎರಡು ಮೊಬೈಲ್ ವಶಕ್ಕೆ ಪಡೆದ ತನಿಖಾ ತಂಡ

ಬೆಂಗಳೂರು: ಲೋಕಾಯುಕ್ತದ ಹೆಸರಿನಲ್ಲಿ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳಿಂದ ಹಣ ವಸೂಲಿ ಮಾಡಿದ ಪ್ರಕರಣದಲ್ಲಿ, ಲೋಕಾಯುಕ್ತ ಎಸ್‌ಪಿಯಾಗಿದ್ದ ಐಪಿಎಸ್ ಅಧಿಕಾರಿ ಶ್ರೀನಾಥ್ ಜೋಷಿ ಅವರನ್ನು ಮಂಗಳವಾರ ವಿಚಾರಣೆ ನಡೆಸಲಾಗಿದೆ.

ಹೈಕೋರ್ಟ್‌ನ ಆದೇಶದ ನಂತರ ಲೋಕಾಯುಕ್ತ ಪೊಲೀಸ್‌ನ ತನಿಖಾಧಿಕಾರಿ, ಡಿವೈಎಸ್‌ಪಿ ತಿಪ್ಪೇಸ್ವಾಮಿ ಅವರು ಶ್ರೀನಾಥ್ ಅವರಿಗೆ ನೋಟಿಸ್ ನೀಡಿದ್ದರು. ಹತ್ತು ದಿನಗಳ ಒಳಗೆ ವಿಚಾರಣೆಗೆ ಹಾಜರಾಗಿ ಎಂದು ಸೂಚಿಸಿದ್ದರು. ಅದರಂತೆ ಶ್ರೀನಾಥ್ ಅವರು ಮಂಗಳವಾರ ಬೆಳಿಗ್ಗೆ ಲೋಕಾಯುಕ್ತ ಕಚೇರಿಗೆ ಬಂದು, ತನಿಖಾಧಿಕಾರಿಯ ಎದುರು ವಿಚಾರಣೆಗೆ ಹಾಜರಾದರು.


ಶ್ರೀನಾಥ್ ಜೋಷಿ

‘ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ 5 ತಾಸು ಅವರನ್ನು ವಿಚಾರಣೆಗೆ ಒಳಪಡಿಸಲಾಯಿತು. ನಿಂಗಪ್ಪ ಮತ್ತು ಅವರ ನಡುವಣ ವ್ಯಾವಹಾರಿಕ ಸಂಬಂಧಗಳ ಬಗ್ಗೆ ಮಾಹಿತಿ ಕೇಳಲಾಯಿತು. ನಿಂಗಪ್ಪ ಜತೆಗೆ ಹೋಟೆಲ್ ಒಂದರಲ್ಲಿ ಅಬಕಾರಿ ಸಚಿವರ ಆಪ್ತರನ್ನು ಭೇಟಿ ಮಾಡಿದ್ದರ ಬಗ್ಗೆಯೂ ಪ್ರಶ್ನೆಗಳನ್ನು ಕೇಳಲಾಯಿತು’ ಎಂದು ಮೂಲಗಳು ಮಾಹಿತಿ ನೀಡಿವೆ.

‘ನಿಂಗಪ್ಪ ಅವರ ಮನೆಗೆ ಭೇಟಿ ನೀಡಿದ್ದು, ಅವರ ಮನೆಯಲ್ಲಿ ಸಂಭ್ರಮಾಚರಣೆ ನಡೆಸಿದ್ದು, ಹಣಕಾಸು ವ್ಯವಹಾರಗಳ ಬಗ್ಗೆ ವಿಚಾರಿಸಲಾಯಿತು. ಕ್ರಿಪ್ಟೋ ವ್ಯಾಲೆಟ್‌ಗಳಲ್ಲಿ ಹಣ ಹೂಡಿಕೆ ಬಗ್ಗೆ ಮಾಹಿತಿ ಕಲೆಹಾಕಲಾಗಿದೆ. ಹಲವು ಪ್ರಶ್ನೆಗಳಿಗೆ ಅವರು ವ್ಯತಿರಿಕ್ತವಾದ ಉತ್ತರಗಳನ್ನು ನೀಡಿದ್ದು, ಮತ್ತೆ ವಿಚಾರಣೆಗೆ ಕರೆಸಲಾಗುತ್ತದೆ’ ಎಂದು ತಿಳಿಸಿವೆ.

‘ಅವರ ಮೊಬೈಲ್‌ಗಳನ್ನು ವಶಕ್ಕೆ ಪಡೆದು, ಪರಿಶೀಲನೆ ನಡೆಸಲಾಯಿತು. ಅದರಲ್ಲಿನ ಹಲವು ಮಾಹಿತಿಗಳನ್ನು ಡಿಲೀಟ್ ಮಾಡಲಾಗಿದೆ. ಹೀಗಾಗಿ ಹೆಚ್ಚಿನ ಪರಿಶೀಲನೆ ಮತ್ತು ದತ್ತಾಂಶ ಮರುಸ್ಥಾಪಿಸಲು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಆ ಮೊಬೈಲ್‌ಗಳನ್ನು ಕಳುಹಿಸಲಾಗಿದೆ’ എಂದು ಮೂಲಗಳು ಮಾಹಿತಿ ನೀಡಿವೆ.

ಬಿಜೆಪಿ ವರಿಷ್ಠರ ಭೇಟಿಯಾದ ಬೆಲ್ಲದ

ನವದೆಹಲಿ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿರುವ ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಅವರು ಪಕ್ಷದ ವರಿಷ್ಠರನ್ನು ಭೇಟಿ ಮಾಡಿ ಸಮಾಲೋಚಿಸಿದರು.

ಮಂಗಳವಾರ ಮಾತನಾಡಿದ ಬೆಲ್ಲದ, ‘ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆ ಬಗ್ಗೆ ಪ್ರತಿಕ್ರಿಯಿಸಲ್ಲ. ವರಿಷ್ಠರನ್ನು ಭೇಟಿ ಮಾಡಿ ರಾಜಕೀಯ ವಿದ್ಯಮಾನಗಳ ಕುರಿತು ಚರ್ಚಿಸಿದ್ದೇನೆ’ ಎಂದರು.



ಕಲ್ಕೆರೆ: ಉರುಳಿದ ಬೃಹತ್ ಮರ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬೃಹತ್ ಗಾತ್ರದ ಅರಳಿ ಮರವೊಂದು ಮಂಗಳವಾರ ಬೆಳಿಗ್ಗೆ ಕಲ್ಕೆರೆ ಮುಖ್ಯರಸ್ತೆ ಮತ್ತು ಸರ್ಕಾರಿ ಶಾಲೆಯ ಕಾಂಪೌಂಡ್ ಮೇಲೆ ಉರುಳಿದೆ.

ಬೆಳಿಗ್ಗೆ 9 ಗಂಟೆ ಸುಮಾರಿಗೆ ಇದ್ದಕ್ಕಿದ್ದಂತೆ ಮರ ಉರುಳಿ ರಸ್ತೆಗೆ ಬಿತ್ತು. ಪಕ್ಕದಲ್ಲಿರುವ ಶಾಲಾ ಕಾಂಪೌಂಡ್‌ಗೆ ಹಾನಿಯಾಗಿದೆ.

ಬೆಳಿಗ್ಗೆ ಶಾಲೆ ಆರಂಭವಾದಾಗ ಮಕ್ಕಳು ಹಾಲು ಸೇವಿಸಿ ಲೋಟ ತೊಳೆಯಲು ಶಾಲೆಯ ಕಾಂಪೌಂಡ್ ಬಳಿ ಬಂದು ವಾಪಸ್ ತರಗತಿಗಳಿಗೆ ಹಿಂದಿರುಗಿದ್ದಾರೆ. ಇದಾದ ಅರೆಕ್ಷಣದಲ್ಲಿ ಮರ ಉರುಳಿ ಬಿದ್ದಿದೆ. ಅದೃಷ್ಟವಶಾತ್ ಮಕ್ಕಳಿಗೆ ಯಾವುದೇ ತೊಂದರೆಯಾಗಿಲ್ಲ.

ರಸ್ತೆಯ ಮೇಲೆ ಮರ ಬಿದ್ದ ಪರಿಣಾಮ ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು. ವಾಹನ ಸವಾರರು ಪರ್ಯಾಯ ಮಾರ್ಗಗಳಲ್ಲಿ ಸಂಚರಿಸಿದರು. ಬಿಬಿಎಂಪಿ ಸಿಬ್ಬಂದಿ ಯಂತ್ರಗಳ ಮೂಲಕ ಸ್ಥಳಕ್ಕೆ ಬಂದು ಮರ ಕತ್ತರಿಸಿ ತೆರವುಗೊಳಿಸಿದರು.

‘ಒಂದು ದೊಡ್ಡ ದುರಂತ ತಪ್ಪಿದೆ. ಬಿಬಿಎಂಪಿ ಈ ರೀತಿಯ ಅವಘಡ ಸಂಭವಿಸುವ ಮುನ್ನ ಎಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು’ ಎಂದು ಸ್ಥಳೀಯ ಮುಖಂಡ ಕಲ್ಕೆರೆ ಶ್ರೀನಿವಾಸ್ ಆಗ್ರಹಿಸಿದರು.


ಕಲ್ಕೆರೆ ಮುಖ್ಯರಸ್ತೆಯಲ್ಲಿ ಉರುಳಿ ಬಿದ್ದ ಮರವನ್ನು ಬಿಬಿಎಂಪಿ ಕಾರ್ಮಿಕರು ತೆರವುಗೊಳಿಸಿದರು

ಕಾಂಪೌಂಡ್ ದುರಸ್ತಿಗೆ ಮನವಿ

ಬೃಹತ್ ಮರ ಬಿದ್ದು ನಮ್ಮ ಸರ್ಕಾರಿ ಶಾಲೆಯ ಕಾಂಪೌಂಡ್, ಶೌಚಾಲಯ ಹಾಳಾಗಿದೆ. ನೀರು ಸರಬರಾಜು ಕೊಳವೆಗಳು, ವಿದ್ಯುತ್ ತಂತಿಗಳೂ ಹಾನಿಗೊಳಗಾಗಿವೆ. ಶೌಚಾಲಯ ಮತ್ತು ನೀರು ಇಲ್ಲದೆ ವಿದ್ಯಾರ್ಥಿಗಳಿಗೆ ತುಂಬಾ ಕಷ್ಟವಾಗಿದೆ. ಶಾಲೆಯಲ್ಲಿ ಒಂದು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಓದುತ್ತಿದ್ದಾರೆ. ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲೆಯವರೆಗೆ ಓದುತ್ತಿರುವ ಮಕ್ಕಳಿದ್ದಾರೆ. ಸ್ವಯಂ ಸೇವಾ ಸಂಸ್ಥೆಗಳು ಸಹಾಯ ಹಸ್ತ ನೀಡಿ ಎಂದು ಶಾಲೆಯ ಶಿಕ್ಷಕರು ಮನವಿ ಮಾಡಿದ್ದಾರೆ.

‘50 ಸಾವಿರ ಉದ್ಯೋಗ ಘೋಷಣೆಗೆ ಸೀಮಿತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೆಹಲಿಯ ಮಹಾಪ್ರಭುಗಳು ಈಶಾನ್ಯ ರಾಜ್ಯಗಳ ಯುವಕರಿಗೆ 50 ಸಾವಿರ ಉದ್ಯೋಗಗಳನ್ನು ಕೊಡಿಸುವ ಹೇಳಿಕೆ ಘೋಷಣೆಗಷ್ಟೇ ಸೀಮಿತವಾಗಿದ್ದು, ಇದುವರೆಗೂ ಅನುಷ್ಠಾನವಾಗಿಲ್ಲ’ ಎಂದು ಸಾಹಿತಿ ಜಿ.ರಾಮಕೃಷ್ಣ ಹೇಳಿದರು.

ನವಕರ್ನಾಟಕ ಪ್ರಕಾಶನ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭೂಮಿಕಾ ಆರ್. ಅನುವಾದಿಸಿದ ‘ಜೊರಾಮಿ’ ಪುಸ್ತಕವನ್ನು ಜನಾರ್ಪಣೆಗೊಳಿಸಿ ಅವರು ಮಾತನಾಡಿದರು. ‘ದೇಶವು ಮೇಕ್ ಇನ್ ಇಂಡಿಯಾದಿಂದ ಪ್ರಾರಂಭವಾಗಿ ವಿಕಸಿತ ಭಾರತದತ್ತ ಸಾಗುತ್ತಿದೆ. ಆದರೆ ಅದು ಎಷ್ಟು ವಿಕಸಿತಗೊಂಡಿದೆ ಎಂಬುದು ಗೊತ್ತಿಲ್ಲ’ ಎಂದರು.

‘ಸ್ವಾಯತ್ತ, ಸ್ವಾತಂತ್ರ್ಯಕ್ಕಾಗಿ ಹಾಗೂ ಪ್ರತ್ಯೇಕ ರಾಜ್ಯದ ಸ್ಥಾನಮಾನ ಪಡೆಯಲು ಮಿಜೋರಾಂನಲ್ಲಿ ಅನೇಕ ವರ್ಷಗಳ ಕಾಲ ಹೋರಾಟ ನಡೆಯಿತು. ಈ ಹೋರಾಟ ಹತ್ತಿಕ್ಕಲು ನಮ್ಮ ಸೈನ್ಯವನ್ನು ನಿಯೋಜಿಸಲಾಗಿತ್ತು. ಈ ಚಳವಳಿಯ ಸಂಪೂರ್ಣ ಚಿತ್ರಣ ಜೊರಾಮಿ ಪುಸ್ತಕದಲ್ಲಿದೆ’ ಎಂದು ತಿಳಿಸಿದರು.

‘ಇತ್ತೀಚೆಗೆ ಮಣಿಪುರ, ಕಾಶ್ಮೀರದಲ್ಲಿ ನಡೆಯುತ್ತಿರುವ ಹೋರಾಟಗಳಲ್ಲಿ ಹುತಾತ್ಮರಾದವರಿಗೆ ಗೌರವ ಸಲ್ಲಿಸುವ ಸ್ವಾತಂತ್ರ್ಯವೂ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದನ್ನು ಪ್ರಶ್ನಿಸಿದವರಿಗೆ ನಗರ ನಕ್ಸಲರು ಎಂಬ ಹಣೆಪಟ್ಟಿ ಕಟ್ಟಲಾಗುತ್ತಿದೆ’ ಎಂದು ದೂರಿದರು.

ಪುಸ್ತಕದ ಕುರಿತು ನಿವೃತ್ತ ಉಪನ್ಯಾಸಕಿ ಶೈಲಜಾ ಮಾತನಾಡಿದರು.

ನಂತರ ಜೊರಾಮಿ ಪುಸ್ತಕದ ಮೂಲ ಲೇಖಕಿ ಮಾಲ್ಸಾಮಿ ಜೇಕಬ್ ಅವರೊಂದಿಗೆ ಪತ್ರಕರ್ತ ಡಿ. ಉಮಾಪತಿ ಅವರು ಸಂವಾದ ನಡೆಸಿದರು.


ನವಕರ್ನಾಟಕ ಪ್ರಕಾಶನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾಲ್ಸಾಮಿ ಜೇಕಬ್ ಹಾಗೂ ಭೂಮಿಕಾ ಆರ್. ಅವರು ಕುಶಲೋಪರಿಯಲ್ಲಿ ತೊಡಗಿದ್ದರು. ಜಿ. ರಾಮಕೃಷ್ಣ, ಸಿದ್ದನಗೌಡ ಪಾಟೀಲ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

ಚಿಟಿಕೆ ಸುದ್ದಿ

ಐಎಎಸ್ ಅಧಿಕಾರಿ ವಿರುದ್ಧ ಎಫ್‌ಐಆರ್


ಬೆಂಗಳೂರು: ಸರ್ಕಾರಿ ಜಮೀನಿಗೆ ನಿಯಮಬಾಹಿರವಾಗಿ ಆದೇಶ ಹೊರಡಿಸಿದ ಆರೋಪದ ಅಡಿ ಐಎಎಸ್ ಅಧಿಕಾರಿ ವಾಸಂತಿ ಅಮರ್ ವಿರುದ್ಧ ಹಲಸೂರು ಗೇಟ್ ಠಾಣೆಯಲ್ಲಿ ಮಂಗಳವಾರ ಎಫ್‌ಐಆರ್ ದಾಖಲಾಗಿದೆ.

ಜಿಲ್ಲಾಧಿಕಾರಿ ಕಚೇರಿ ಸಹಾಯಕ ಪ್ರಶಾಂತ್ ಖಾನಗೌಡ ಪಾಟೀಲ್ ಅವರು ಹಲಸೂರು ಠಾಣೆಯಲ್ಲಿ ದೂರು ನೀಡಿದ್ದರು. ಅದನ್ನು ಆಧರಿಸಿ ಪೊಲೀಸರು ಎನ್‌ಸಿಆರ್ ದಾಖಲಿಸಿದ್ದರು.

48ನೇ ಎಸಿಎಂಎಂ ನ್ಯಾಯಾಲಯದ ಎದುರು ದೂರುದಾರರು ಹಾಜರಾಗಿ ಪ್ರಕರಣದ ತನಿಖೆಗೆ ಮನವಿ ಮಾಡಿದ್ದರು. ನ್ಯಾಯಾಲಯದ ಸೂಚನೆ ಮೇರೆಗೆ ಬಿಎನ್‌ಎಸ್ ಸೆಕ್ಷನ್ 257ರ ಅಡಿ ಮಂಗಳವಾರ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ಹಿಂದಿನ ವಿಶೇಷ ಜಿಲ್ಲಾಧಿಕಾರಿ–3 ವಾಸಂತಿ ಅಮರ್ ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ಹುಚ್ಚನಪಾಳ್ಯ ಗ್ರಾಮದ ಸರ್ವೆ ನಂಬರ್ 8ರಲ್ಲಿ 10 ಎಕರೆ 20 ಗುಂಟೆ ಸರ್ಕಾರಿ ಜಮೀನಿಗೆ ಸಂಬಂಧಿಸಿದಂತೆ ನಿಯಮಬಾಹಿರ ಆದೇಶ ಹೊರಡಿಸಿದ್ದಾರೆ’ ಎಂಬ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

‘ಜಮೀರ್ ಬಗ್ಗೆ ಜನರು ಹೇಳಬೇಕು’


ಬಿ.ಆರ್. ಪಾಟೀಲ


ಬೆಂಗಳೂರು: ಸಚಿವ ಜಮೀರ್ ಅಹಮದ್ ಖಾನ್ ವಿರುದ್ಧ ಮತ್ತೆ ಅಸಮಾಧಾನ ಹೊರಹಾಕಿರುವ ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ, ‘ಜಮೀರ್ ಕೆಲಸದ ಬಗ್ಗೆ ಜನರು ಹೇಳಬೇಕು’ ಎಂದು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.



ಕಪಟಿಗಳು ಸಮಯಕ್ಕೆ ತಕ್ಕಂತೆ ತಮ್ಮ 'ಬಣ್ಣ'ವನ್ನು ಬದಲಾಯಿಸುತ್ತಿರುತ್ತಾರೆ, ಅಲ್ಲವೆ? ಮುಂದಿನ ದಿನಗಳಲ್ಲಿ ನಮ್ಮ ಇಷ್ಟಕ್ಕೆ ತಕ್ಕಂತೆ ಬಣ್ಣವನ್ನು ಬದಲಾಯಿಸುವ ಕಾರುಗಳು ಕೂಡ ಬರಲಿವೆಯಂತೆ!

ಲ್ಯಾಪ್ರೋಸ್ಕೋಪಿ

ಶಸ್ತ್ರಚಿಕಿತ್ಸೆಗೆ ಒದಗಿದ ವರ



ವೈದ್ಯಕೀಯಲೋಕಕ್ಕೆ ವರದಾನವಾಗಿರುವ ಶಸ್ತ್ರಚಿಕಿತ್ಸೆ ಎಂದರೆ ಲ್ಯಾಪ್ರೋಸ್ಕೋಪಿ. ಈಗ ಈ ಶಸ್ತ್ರಚಿಕಿತ್ಸೆಯನ್ನು ರೋಬಾಟ್ ಮೂಲಕವೂ ಮಾಡಬಹುದು...

• ಡಾ.ಶ್ರೀನಿವಾಸ ಹರಪನಹಳ್ಳಿ

ವೈದ್ಯಕೀಯಲೋಕದಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಹಾಗೂ ರೋಗಿಗಳಿಗೆ ವರದಾನವಾಗಿರುವ ಒಂದು ಶಸ್ತ್ರಚಿಕಿತ್ಸೆ ಎಂದರೆ ಅದು 'ಲ್ಯಾಪ್ರೋಸ್ಕೋಪಿ' ಶಸ್ತ್ರಚಿಕಿತ್ಸೆ ಎನ್ನಬಹುದು. ಇದು ತೀರ ಹೊಸತಲ್ಲವಾದರೂ ಅನೇಕ ಸಾಂಪ್ರದಾಯಿಕ ಶಸ್ತ್ರಚಿಕಿತ್ಸೆಗಳು ಈಗ ಲ್ಯಾಪ್ರೋಸ್ಕೋಪಿ ವಿಧಾನವನ್ನು ಅಳವಡಿಸಿಕೊಂಡಿದ್ದರಿಂದ ಇದರ ಬಳಕೆ ಗಮನೀಯವಾಗಿ ಏರಿದೆ ಎನ್ನಬಹುದು. 'ಉದರದರ್ಶಕ ಚಿಕಿತ್ಸೆ' ಎಂದೂ ಕರೆಯಲಾಗುತ್ತದೆ.

'ಲ್ಯಾಪ್ರೋಸ್ಕೋಪಿ' ಎಂದರೆ, ಹೊಟ್ಟೆಯ ಮೇಲಿನ ಚರ್ಮದ ಮೇಲೆ ಸುಮಾರು ಒಂದು ಸೆಂ.ಮೀ. ವ್ಯಾಸದ ರಂಧ್ರಮಾಡಿ, ಲೋಹದ ನಳಿಕೆಯನ್ನು ಒಳತೂರಿಸಿ, ಹೊಟ್ಟೆಯಲ್ಲಿನ ಅಂಗಗಳನ್ನು ನೋಡುವುದು ಎಂದರ್ಥ. ಇದರ ಪ್ರಥಮ ಉಪಯೋಗ ಆಗಿದ್ದು 1901ರಲ್ಲಿ. ಜರ್ಮನಿಯ ವೈದ್ಯನೊಬ್ಬ ನಾಯಿಯ ಹೊಟ್ಟೆಯನ್ನು ಇಂಥ ಒಂದು ಲ್ಯಾಪ್ರೋಸ್ಕೋಪ್ ನಳಿಕೆಯ ಮೂಲಕ ವೀಕ್ಷಿಸಿದ್ದ. ಅನಂತರ ಎಂಬತ್ತು-ತೊಂಬತ್ತರ ದಶಕಗಳಲ್ಲಿ ಲ್ಯಾಪ್ರೋಸ್ಕೋಪಿ ವಿಧಾನ ಜನಪ್ರಿಯವಾಗಿ ಅನೇಕ ಸಾಂಪ್ರದಾಯಿಕ ಶಸ್ತ್ರಚಿಕಿತ್ಸೆಗಳು ಈ ಹೊಸ ಆವಿಷ್ಕಾರಕ್ಕೆ ಹೊಂದಿಕೊಂಡವು.

ಕೆಲದಶಕಗಳ ಮೊದಲು ಹೊಟ್ಟೆಯ, ಸ್ತ್ರೀರೋಗಸಂಬಂಧಿ ಶಸ್ತ್ರಚಿಕಿತ್ಸೆಗಳು ಹೊಟ್ಟೆಯನ್ನು ಉದ್ದವಾಗಿ ಅಥವಾ ಅಡ್ಡವಾಗಿ ಕೊಯ್ಯುವ ಮೂಲಕ ನೆರವೇರುತ್ತಿದ್ದವು. ಉದಾಹರಣೆಗೆ, ಅಪೆಂಡಿಕ್ಸ್ ಅಥವಾ ಪಿತ್ತಕೋಶದ ತೊಂದರೆಗಳು, ಹರ್ನಿಯಾ, ಗರ್ಭಾಶಯ/ಅಂಡಾಶಯದ ತೊಂದರೆಗಳು ಇತ್ಯಾದಿ. ಇದರಿಂದ ರೋಗಿಗಳಿಗೆ ಸಹಜವಾಗಿಯೇ ಹೆಚ್ಚಿನ ನೋವು, ರಕ್ತಸ್ರಾವ ಉಂಟಾಗುತ್ತಿದ್ದವು. ಅಲ್ಲದೇ ಒಂದೆರಡು ವಾರ ಆಸ್ಪತ್ರೆಯಲ್ಲಿಯೇ ಆರೈಕೆ ಬೇಕಾಗುತ್ತಿತ್ತು. ಹೆಚ್ಚಿನ ಆ್ಯಂಟಿಬಯೋಟಿಕ್ ಔಷಧಗಳು, ನೋವುನಿವಾರಕ ಮಾತ್ರೆಗಳು ರೋಗಿಗಳಿಗೆ ಪಾರ್ಶ್ವಪರಿಣಾಮವನ್ನೂ ಉಂಟುಮಾಡುತ್ತಿದ್ದವು. ಈಗ ಈ ಶಸ್ತ್ರಚಿಕಿತ್ಸೆಗಳನ್ನು ಲ್ಯಾಪ್ರೋಸ್ಕೋಪಿ ವಿಧಾನದಲ್ಲಿ ಕೆಲವೇ ಚಿಕ್ಕ ರಂಧ್ರಗಳ ಮೂಲಕ ಮಾಡಬಹುದು. ಹಾಗಾಗಿ ಇದನ್ನು 'ಕೀ ಹೋಲ್' ಅಥವಾ 'ಕನಿಷ್ಠ ಛೇದನ' (ಮಿನಿಮಲಿ ಇನ್‌ವೇಸಿವ್) ಶಸ್ತ್ರಚಿಕಿತ್ಸೆಯೆಂದೂ ಕರೆಯುತ್ತಾರೆ.

ಲ್ಯಾಪ್ರೋಸ್ಕೋಪಿ ಶಸ್ತ್ರಚಿಕಿತ್ಸೆಗೆ ವಿಶೇಷ ಯಂತ್ರೋಪಕರಣಗಳ ಜೊತೆ ಹೆಚ್ಚಿನ ತರಬೇತಿಯೂ ಬೇಕಾಗುತ್ತದೆ. ಇಂಥ ಶಸ್ತ್ರಚಿಕಿತ್ಸೆಗಳಿಗೆ ಅರಿವಳಿಕೆ ನೀಡುವಲ್ಲಿ ಕೂಡ ಕೊಂಚ ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ.

ಲ್ಯಾಪ್ರೋಸ್ಕೋಪಿಯ ಹೃದಯಭಾಗವೆಂದರೆ ಅದರ ಕ್ಯಾಮೆರಾ. ಮೊದಲು ಸಾದಾ ಗುಣಮಟ್ಟದ ಕ್ಯಾಮೆರಾಗಳಿಂದ ಹಿಡಿದು '3ಡಿ' ಕ್ಯಾಮೆರಾಗಳವರೆಗೂ ಬಂದ ತಂತ್ರಜ್ಞಾನ ಈಗ 'ಎಚ್‌ಡಿ' ಕ್ಯಾಮೆರಾಗಳವರೆಗೂ ಬೆಳೆದಿದೆ. ಇದರಲ್ಲಿ ಉದರದರ್ಶಕದ ಮೂಲಕ ಕಾಣುವ ಅಂಗಗಳು ಹೆಚ್ಚು ಸ್ಫುಟವಾಗಿರುತ್ತವೆ. ಇವು ನಿಖರವಾಗಿ ರೋಗವನ್ನು ಪತ್ತೆಮಾಡುವುದಲ್ಲದೆ ಶಸ್ತ್ರಚಿಕಿತ್ಸೆಯಲ್ಲೂ ಹೆಚ್ಚು ಸಹಕಾರಿ. ಕ್ಯಾಮೆರಾಗಳಂತೆಯೇ ಶಸ್ತ್ರಚಿಕಿತ್ಸಾ ಉಪಕರಣಗಳೂ ಕೂಡ ವಿಶೇಷವಾಗಿರುತ್ತವೆ. ತೆರೆದ ಶಸ್ತ್ರಚಿಕಿತ್ಸೆ ಯಲ್ಲಿ ಮಾಡುವ ಅಂಗಚ್ಛೇದ, ರಕ್ತಸ್ರಾವದ ನಿಲ್ಲಿಸುವಿಕೆ ಇನ್ನಿತರ ಕೆಲಸಗಳನ್ನು ಈ ವಿಶೇಷ ಉಪಕರಣಗಳು ಕೊಳವೆಯ ಮೂಲಕವೇ ಮಾಡುತ್ತವೆ.

ಲ್ಯಾಪ್ರೋಸ್ಕೋಪಿಯಿಂದ ಏನಾದರೂ ತೊಂದರೆಗಳಿವೆಯೇ?

ವಿರಳ ಸಂದರ್ಭಗಳಲ್ಲಿ ಶಸ್ತ್ರಚಿಕಿತ್ಸೆ ಜಟಿಲವಾದರೆ ಹೊಟ್ಟೆಯನ್ನು ಕೊಯ್ದು ಸಾಂಪ್ರದಾಯಿಕ ರೀತಿಯಲ್ಲಿ ತೆರೆದ ಶಸ್ತ್ರಚಿಕಿತ್ಸೆ ಮಾಡಬೇಕಾಗುತ್ತದೆ. ಇದನ್ನು ಬಿಟ್ಟರೆ ರಕ್ತಸ್ರಾವ, ಸೋಂಕು, ನೋವು ಇತ್ಯಾದಿ ಪಾರ್ಶ್ವಪರಿಣಾಮಗಳು ತೆರೆದ ಶಸ್ತ್ರಚಿಕಿತ್ಸೆಗಳಿಗಿಂತಲೂ ತೀರಾ ಕಡಿಮೆಯೆಂದೇ ಹೇಳಬಹುದು. ಕೆಲವೊಮ್ಮೆ ಇಂಗಾಲದ ಡೈಆಕ್ಸೈಡ್‌ನಿಂದ ಬಲಭುಜದ ನೋವು ಕೊಂಚಮಟ್ಟಿಗೆ ಕಾಣಬಹುದು.

ಲ್ಯಾಪ್ರೋಸ್ಕೋಪಿಯಲ್ಲಿ ಮೊದಲು ಹೊಟ್ಟೆಯನ್ನು ಇಂಗಾಲದ ಡೈಆಕ್ಸೈಡನ್ನು ತೂರಿಸುವುದರ ಮೂಲಕ ಉಬ್ಬಿಸಲಾಗುತ್ತದೆ. ನಂತರ ಉಬ್ಬಿದ ಹೊಟ್ಟೆಯ ಮೇಲೆ 3-4 ಚಿಕ್ಕ ರಂಧ್ರಗಳನ್ನು ಮಾಡಿ ಅವುಗಳಲ್ಲಿ ಕೊಳವೆಗಳ ಮೂಲಕ ಕ್ಯಾಮೆರಾ ಮತ್ತಿತರ ಉಪಕರಣಗಳನ್ನು ತೂರಿಸಿ ಶಸ್ತ್ರಚಿಕಿತ್ಸೆಯನ್ನು ಮಾಡಲಾಗುತ್ತದೆ. ರೋಗಿಗೆ ಅರಿವಳಿಕೆ ನೀಡಿರುವುದರಿಂದ ಇವೆಲ್ಲವೂ ನೋವಿಲ್ಲದೇ ನಡೆಯುತ್ತವೆ. ಕೊನೆಗೆ ಇಂಗಾಲದ ಡೈಆಕ್ಸೈಡ್‌ನ್ನು ಹೊರಬಿಟ್ಟು ಕೊಳವೆಗಳನ್ನು ಹೊರತೆಗೆದು ರಂಧ್ರಗಳನ್ನು ಮುಚ್ಚಲಾಗುತ್ತದೆ. ಕೇವಲ ಚಿಕ್ಕ ಚಿಕ್ಕ ರಂಧ್ರಗಳನ್ನು ಮಾತ್ರ ಮಾಡುವುದರಿಂದ ಚರ್ಮದ ಮೇಲೆ ಹೆಚ್ಚಿನ ಗಾಯವಾಗುವುದಿಲ್ಲ. ನೋವೂ ಅತ್ಯಲ್ಪವಾಗಿರುವುದಲ್ಲದೇ ರಕ್ತಸ್ರಾವದ ತೊಂದರೆಯೂ ಕಡಿಮೆ. ಕೆಲಸಂದರ್ಭಗಳಲ್ಲಿ ಶಸ್ತ್ರಚಿಕಿತ್ಸೆಯಾದ ಕೆಲವೇ ಗಂಟೆಗಳಲ್ಲಿ ರೋಗಿ ಮನೆಗೂ ತೆರಳಬಹುದು. ಮುಖ್ಯವಾಗಿ ರೋಗಿಗೆ ಬಹುದಿನಗಳವರೆಗೂ ಆ್ಯಂಟಿಬಯೋಟಿಕ್ ಮತ್ತು ನೋವುನಿವಾರಕ ಮಾತ್ರೆ/ಇಂಜೆಕ್ಷನ್‌ಗಳನ್ನು ನೀಡುವ ಅವಶ್ಯಕತೆ ಬೀಳುವುದಿಲ್ಲ.

ಲ್ಯಾಪ್ರೋಸ್ಕೋಪಿ ಯಶಸ್ವಿಯಾದ ನಂತರ ಇದೇ ಎಂಡೋಸ್ಕೋಪಿ ತಂತ್ರಜ್ಞಾನವನ್ನು ಬಳಸಿಕೊಂಡು ಕೀಲುಗಳ (ಆರ್ಥ್ರೋಸ್ಕೋಪಿ), ಎದೆಗೂಡಿನ (ಥೊರ್‍ಯಾಕೋಸ್ಕೋಪಿ), ಮೂತ್ರಜನಕಾಂಗದ, ಕರುಳಿನ, ಮೂಗಿನ ಮತ್ತು ಮಿದುಳಿನ ಶಸ್ತ್ರಚಿಕಿತ್ಸೆಗಳೂ ಈಗ ಹೆಚ್ಚಿನಸಂಖ್ಯೆಯಲ್ಲಿ ನಡೆಯುತ್ತಿವೆ. ಹೊಟ್ಟೆ ಮತ್ತು ಕಿಬ್ಬೊಟ್ಟೆಯ ಅನೇಕ ಶಸ್ತ್ರಚಿಕಿತ್ಸೆಗಳಂತೂ ಬಹುತೇಕ ಲ್ಯಾಪ್ರೋಸ್ಕೋಪಿ ವಿಧಾನದಲ್ಲೇ ನಡೆಯುತ್ತವೆ. ಗ್ರಾಮೀಣ ಸ್ತ್ರೀಯರಲ್ಲಿ 'ಕರೆಂಟಿನ ಆಪರೇಷನ್' ಎಂದೇ ಕರೆಯಲ್ಪಡುವ ಸಂತಾನಹರಣ ಶಸ್ತ್ರಚಿಕಿತ್ಸೆ ತುಂಬ ಜನಪ್ರಿಯ ಕೂಡ. ಬೊಜ್ಜುತನದ ನಿವಾರಣೆಗಾಗಿ ಮಾಡುವ ಕೆಲವು ಶಸ್ತ್ರಚಿಕಿತ್ಸೆಗಳಿಗೂ ಲ್ಯಾಪ್ರೋಸ್ಕೋಪಿಯ ಕೊಡುಗೆ ಅಪಾರ.

ಈಗ ಲ್ಯಾಪ್ರೋಸ್ಕೋಪಿ ಶಸ್ತ್ರಚಿಕಿತ್ಸೆಗಳನ್ನು ರೋಬಾಟ್ ಮೂಲಕವೂ ಮಾಡಬಹುದು. ಶಸ್ತ್ರಚಿಕಿತ್ಸಕ ಆಪರೇಷನ್ ಕೋಣೆಯಲ್ಲಿರದೇ ಪಕ್ಕದ ಕೋಣೆಯಲ್ಲಿರುವ 'ಕನ್‌ಸೋಲ್'ನಲ್ಲಿ (ವೀಡಿಯೊ ಗೇಮಿನಂತೆ ಜಾಯ್‌ಸ್ಟಿಕ್, ಮತ್ತಿತರೇ ಪರಿಕರಗಳನ್ನೊಳಗೊಂಡ ಪುಟ್ಟ ಕೊಠಡಿ) ಕುಳಿತುಕೊಂಡು ಆಪರೇಷನ್ ಕೋಣೆಯಲ್ಲಿರುವ ರೋಬಾಟ್‌ಗೆ ನಿರ್ದೇಶನ ನೀಡುತ್ತ ಅತ್ಯಂತ ಜಟಿಲ ಶಸ್ತ್ರಚಿಕಿತ್ಸೆಗಳನ್ನು ಮಾಡಬಹುದು. ಸೂಕ್ಷ್ಮಾತಿಸೂಕ್ಷ್ಮ ಶಸ್ತ್ರಚಿಕಿತ್ಸೆಗಳ ಕೆಲವು ನಡೆಗಳು ಮಾನವಕೈಗಳಲ್ಲಿ ನಡುಕ, ಆಯಾಸ ತರಬಹುದು. ಆದರೆ ರೋಬಾಟ್ ಈ ಅಶಕ್ತತೆಯನ್ನು ಮೀರಿ ನಿಂತು ಜಟಿಲ ನಡೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತದೆ. ಈ ನಿಟ್ಟಿನಲ್ಲಿ ಮೂಡಿಬಂದ ಮಹತ್ಸಾಧನೆಯೆಂದರೆ 2001ರಲ್ಲಿ ಫ್ರೆಂಚ್ ವೈದ್ಯರು ನ್ಯೂಯಾರ್ಕ್‌ನಿಂದ ರೋಬಾಟ್ ಮೂಲಕ ಫ್ರಾನ್ಸಿನ ಸ್ಟ್ರಾಸ್‌ಬರ್ಗಿನ ಆಸ್ಪತ್ರೆಯಲ್ಲಿನ ರೋಗಿಯೊಬ್ಬನಿಗೆ ಪಿತ್ತಕೋಶದ ಶಸ್ತ್ರಚಿಕಿತ್ಸೆ ಮಾಡಿದ್ದು! ಲಿಂಡ್‌ಬರ್ಗ್ ಶಸ್ತ್ರಚಿಕಿತ್ಸೆ ಎಂದೇ ಪ್ರಸಿದ್ಧಿಯಾದ ಈ ಘಟನೆಯಿಂದ ವೈದ್ಯಕೀಯ ರಂಗದಲ್ಲಿ ಹೊಸ ಆಶಾಕಿರಣವೊಂದು ಉದಯವಾಯಿತು. ಮುಂಬರುವ ದಿನಗಳಲ್ಲಿ ಶಸ್ತ್ರಚಿಕಿತ್ಸಾತಜ್ಞ ಒಂದೇ ಕಡೆ ಕುಳಿತು ದೂರದ ಆಸ್ಪತ್ರೆಗಳಲ್ಲಿ ಗುಣಮಟ್ಟದ ಶಸ್ತ್ರಚಿಕಿತ್ಸೆಗಳನ್ನು ಮಾಡಬಹುದಾಗಿದೆ. ಭಾರತದಂತಹ ದೇಶಗಳಲ್ಲಿ ಇದು ರೋಗಿಗಳಿಗೆ ವರದಾನವಾಗಬಹುದಾದ ಎಲ್ಲ ಸಾಧ್ಯತೆಗಳಿವೆ.

ಎಲೆಕ್ಟ್ರಾನಿಕ್ಸ್‌ಗೂ ಡಿಎನ್‌ಎ

•ಸುಧೀರ ಎಚ್.ಎಸ್.
•ಕ್ಷಮಾ ವಿ. ಭಾನುಪ್ರಕಾಶ್



ಡಿ.ಎನ್.ಎ.ಯಲ್ಲಿ ವಿದ್ಯುತ್ ಹರಿವನ್ನು ಕುರಿತು ವಿಜ್ಞಾನಿಗಳು ಸಂಶೋಧನೆಯನ್ನು ನಡೆಸಿದ್ದಾರೆ. ಎಲೆಕ್ಟ್ರಾನಿಕ್ಸ್‌ಗೂ ಡಿ.ಎನ್.ಎ.ಗೂ ಒದಗುವ ನಂಟಿನಿಂದ ಪರಿಸರನಾಶಕ್ಕೆ ಸ್ವಲ್ಪವಾದರೂ ಕಡಿವಾಣ ಬೀಳಬಹುದು...

ಜಗತ್ತಿನಾದ್ಯಂತ ಇಂದು ತಂತ್ರಜ್ಞಾನದಲ್ಲಿ ಹೊಸ ಹೊಸ ಬೆಳವಣಿಗೆಗಳು ನಡೆಯುತ್ತಲೇ ಇರುತ್ತವೆ. ಎಲೆಕ್ಟ್ರಾನಿಕ್ ಸಾಧನಗಳನ್ನು ಇನ್ನೂ ಎಷ್ಟು ಚಿಕ್ಕದಾದ ರೂಪದಲ್ಲಿ, ಆದರೆ ಹೆಚ್ಚು ಪರಿಣಾಮಕಾರಿ ಉಪಕರಣಗಳನ್ನಾಗಿ ಮಾಡಬಹುದು ಎಂಬ ಸಂಶೋಧನೆಗೆ ಸಾಕಷ್ಟು ಆದ್ಯತೆ ಇದೆ. ನಾವು ಬಳಸುವ ಮೊಬೈಲ್ ಫೋನ್, ಲ್ಯಾಪ್ಟಾಪ್‌ನಿಂದ ಹಿಡಿದು ವೈದ್ಯಕೀಯ ಉಪಕರಣಗಳಲ್ಲಿ, ವಿಮಾನವೂ ಸೇರಿದಂತೆ ಬೇರೆ ಬೇರೆ ವಾಹನಗಳಲ್ಲಿ ಬಳಸುವ ಹಾಗೂ ಇನ್ನು ಅನೇಕ ಉಪಕರಣಗಳಲ್ಲಿ ಅತ್ಯಾಧುನಿಕ ಎಲೆಕ್ಟ್ರಾನಿಕ್ಸ್‌ನ ಅವಲಂಬನೆ, ಅದರಲ್ಲೂ ವಿಶೇಷವಾಗಿ ಸೆಮಿಕಂಡಕ್ಟರ್(ಅರೆವಾಹಕ)ಗಳ ಅವಲಂಬನೆ ಹೆಚ್ಚು.

ಈ ಸೆಮಿಕಂಡಕ್ಟರ್‌ಗಳು ತುಂಬಾ ಪರಿಣಾಮಕಾರಿಯಾದರೂ ಅವು ಅಷ್ಟು ಪರಿಸರ ಸ್ನೇಹಿಯಲ್ಲ. ಅವುಗಳ ತಯಾರಿಕೆಗೆ ಬೇಕಾಗುವ ಅಪರೂಪದ ಕಚ್ಚಾವಸ್ತುಗಳನ್ನು (ರೇರ್ ಅರ್ಥ್ ಮೆಟೀರಿಯಲ್ಸ್) ಪಡೆಯುವುದು ತುಂಬಾ ಕಷ್ಟ.

ಹೀಗಿರುವಾಗ ಮುಂಬರುವ ದಿನಗಳಲ್ಲಿ ಎಲೆಕ್ಟ್ರಾನಿಕ್ಸ್‌ನ ಸಾಧನಗಳಲ್ಲಿ ಸಿಲಿಕಾನ್ ಬದಲಿಗೆ ಜೈವಿಕ (organic) ಅಣುಗಳಿಂದ ತಯಾರಿಸಲು ಸಾಧ್ಯವಾದರೆ ಹೇಗಿರುತ್ತದೆ? 1953ರಲ್ಲಿ ಜೇಮ್ಸ್ ವಾಟ್ಸನ್ ಮತ್ತು ಫ್ರಾನ್ಸಿಸ್ ಕ್ರಿಕ್ ಅವರು ಜೀವದ ಮೂಲಭೂತ ಅಂಶವಾದ ಡಿಎನ್‌ಎ(DNA)ಯನ್ನು ಕಂಡುಹಿಡಿದಾಗಿನಿಂದ, ಅದರ ಜೈವಿಕ ಉಪಯೋಗಗಳಲ್ಲದೆ ತಂತ್ರಜ್ಞಾನದ ಕ್ಷೇತ್ರಗಳಲ್ಲಿಯೂ ಅದನ್ನು ಹೇಗೆ ಬಳಸಬಹುದು ಎಂಬುದ ಬಗ್ಗೆ ವಿಜ್ಞಾನಿಗಳಲ್ಲಿ ಕುತೂಹಲ ಇದ್ದೇ ಇದೆ.

ವಿದ್ಯುತ್ ವಾಹನಗಳು ಹೊಗೆಯುಗುಳುವುದಿಲ್ಲ, ನಿಜ! ಆದರೆ ಅವುಗಳ ತಯಾರಿಗೆ ಬೇಕಿರುವ ಅರೆವಾಹಕಗಳು ಮತ್ತು ಅವುಗಳ ಬ್ಯಾಟರಿಗೆ ಬೇಕಿರುವ ಲಿಥಿಯಮ್, ಸೋಡಿಯಂನಂತಹ ಲೋಹಗಳು ಎಲ್ಲಿಂದ ಬರುತ್ತವೆ ಗೊತ್ತೇ? ಲಡಾಖ್‌ನಂತಹ ಅತ್ಯಂತ ಸುಂದರ ಹಾಗೂ ಸೂಕ್ಷ್ಮ ಪರಿಸರತಾಣಗಳು ಇಂದು ಈ ಕಾರಣದಿಂದ ಗಣಿಗಾರಿಕೆಗೆ ಒಡ್ಡಿಕೊಳ್ಳಬೇಕಾದ ಪರಿಸ್ಥಿತಿಗೆ ಸಿಲುಕಿವೆ; ಇದು ಭಾರತ ಮಾತ್ರವಲ್ಲ, ಜಗತ್ತಿನಾದ್ಯಂತ ಇದೇ ಕಥೆ! ಪರಿಸರ ಮತ್ತು ಸ್ವಸ್ಥ ಸಮರ್ಥನೀಯ ಅಭಿವೃದ್ಧಿ ಎಂಬುದು ಕಾಗದದ ಮೇಲಿನ ಅಕ್ಷರಗಳಷ್ಟೇ ಆಗಿ ಉಳಿದಿವೆ ಎಂಬಂತೆ ನೀತಿ-ನಿಯಮಗಳನ್ನು ತಿರುಚಲಾಗುತ್ತಿದೆ ಅಥವಾ ಗಾಳಿಗೆ ತೂರಲಾಗುತ್ತಿದೆ; ಇಂತಹ ಪರಿಸ್ಥಿತಿಯಲ್ಲಿ ಅಂತರಾಷ್ಟ್ರೀಯ ಸಂಶೋಧಕರ ತಂಡವು ಹೊಸದೊಂದು ಸಂಶೋಧನೆ ನಡೆಸಿ, ಈ ಸಮಸ್ಯೆಗೆ ಪರಿಹಾರ ಒದಗಿಸುವ ಮುನ್ಸೂಚನೆ ನೀಡಿದ್ದಾರೆ. ವಿದ್ಯುನ್ಮಾನ ಯಂತ್ರಗಳ ಜೀವನಾಡಿಯಾದ ಅರೆವಾಹಕಗಳಿಗೆ, ಜೀವಕೋಶದ ಜೀವನಾಡಿಯನ್ನು ಜೋಡಿಸುವ ಪ್ರಯತ್ನದಲ್ಲಿದ್ದಾರೆ! ಅರೆವಾಹಕಕ್ಕೂ, ಜೀವಕೋಶಕ್ಕೂ ಎತ್ತಲಿಂದೆತ್ತ ಸಂಬಂಧವಯ್ಯ ಎನಿಸಿತೇ? ಇಲ್ಲಿ ನಾವು ಹೇಳುತ್ತಿರುವುದು ಡಿ.ಎನ್.ಎ ಬಗ್ಗೆ! ಕೊಲ್ಕತಾದಲ್ಲಿರುವ ಭಾರತೀಯ ಸಂಖ್ಯಾಶಾಸ್ತ್ರೀಯ ಸಂಸ್ಥೆಯ ವಿಜ್ಞಾನಿಗಳು, ಇಟಲಿಯ ಮೆಡಿಟೇರಿಯನ್ ಇನ್ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ಫಿಸಿಕ್ಸ್, ಚಿಲೆ ಮತ್ತು ಕೊಲಂಬಿಯಾದ ತಂತ್ರಜ್ಞಾನ ಸಂಸ್ಥೆಗಳ ವಿಜ್ಞಾನಿಗಳ ಜೊತೆ ಸೇರಿ ಡಿ.ಎನ್.ಎ. ಒಳಗಿನ ಎಲೆಕ್ಟ್ರಾನ್ ಪಯಣದ ಬಗ್ಗೆ ಸಂಶೋಧನೆ ನಡೆಸಿದ್ದಾರೆ.

ಈ ಅಧ್ಯಯನಕ್ಕಾಗಿ ಸಂಶೋಧಕರು ಡಿ.ಎನ್.ಎ. ಯನ್ನು ಪ್ರತಿನಿಧಿಸಲು 'ಫಿಶ್‌ಬೋನ್' ಮಾದರಿ ಮತ್ತು 'ಲ್ಯಾಡರ್' ಮಾದರಿ ಎಂಬ ಎರಡು ವಿಭಿನ್ನ ಮಾದರಿಗಳನ್ನು ಬಳಸಿಕೊಂಡಿದ್ದಾರೆ. ಇವು ಡಿ.ಎನ್.ಎ. ಯ ಸಂಕೀರ್ಣ ರಚನೆಯ ಸರಳೀಕೃತ ಮಾದರಿಗಳಾಗಿವೆ. ಇದರಿಂದ ವಿಜ್ಞಾನಿಗಳು ಡಿ.ಎನ್.ಎ. ಮೂಲಕ ಎಲೆಕ್ಟ್ರಾನ್‌ಗಳ ಚಲನೆಯನ್ನು ಕಂಪ್ಯೂಟರ್‌ನಲ್ಲಿ ಅನುಕರಿಸಲು ಸಾಧ್ಯವಾಯಿತು. ಸಂಶೋಧಕರು 'ಡಿಕೋಹೆರೆನ್ಸ್' ಎಂಬ ಪರಿಕಲ್ಪನೆಯನ್ನು ಸಹ ಪರಿಶೀಲಿಸಿದ್ದಾರೆ.

ಡಿ.ಎನ್.ಎ. ಒಂದು ಜೀವರಾಸಾಯನಿಕ ಸಂಯುಕ್ತ ಪದಾರ್ಥ; ಇದರೊಳಗೆ ಇಂಗಾಲ, ಜಲಜನಕ, ಆಮ್ಲಜನಕ, ಸಾರಜನಕದಂತಹ ಮೂಲಧಾತುಗಳಿದ್ದು, ಅವುಗಳು ಒಂದಕ್ಕೊಂದು ರಾಸಾಯನಿಕವಾಗಿ ಹೆಣೆದುಕೊಂಡಿರುತ್ತವೆ. ಡಿ.ಎನ್.ಎ.ಯಲ್ಲಿ ಎರಡು ಎಳೆಗಳಿದ್ದು, ಅವು ಒಂದಕ್ಕೊಂದು ಸುರುಳಿಯಾಕಾರದ ಏಣಿಯಂತೆ ಬೆಸೆದುಕೊಂಡಿರುತ್ತೆ. ಇವುಗಳ ಮೂಲಕ ವಿದ್ಯುತ್ ಹಾಯಿಸಿದಾಗ ಏನಾಯಿತು ಗೊತ್ತೇ? ತಾಮ್ರದ ತಂತಿಯೋ, ಅಲ್ಯುಮಿನಿಯಮ್ ತಂತಿಯೋ ಎಂಬಂತೆ ಡಿ.ಎನ್.ಎ. ಕೂಡ ವಿದ್ಯುತ್ ಅನ್ನು ತನ್ನೊಳಗೆ ಪ್ರವಹಿಸಲು ಅನುವು ಮಾಡಿಕೊಡ್ತು; ಆದರೆ, ಈ ಲೋಹದ ತಂತಿಗಳಿಗೂ, ಡಿ.ಎನ್.ಎ ಗೂ ವಿದ್ಯುತ್ ವಾಹಕತೆಯ ಮೂಲಭೂತ ಕಾರ್ಯವಿಧಾನದಲ್ಲಿ ವ್ಯತ್ಯಾಸವಿತ್ತು ಎಂಬುದನ್ನು ವಿಜ್ಞಾನಿಗಳು ಕಂಡುಕೊಂಡರು. ಡಿ.ಎನ್.ಎ.ಯ ವಿದ್ಯುತ್ ವಾಹಕತೆಗೂ, ಸಿಲಿಕಾನ್‌ನಂತಹ ಅರೆವಾಹಕಗಳಿಗೂ ಅಪಾರ ಸಾಮ್ಯತೆಯಿದ್ದು, ಆ ಕಾರಣದಿಂದಲೇ ವಿದ್ಯುನ್ಮಾನಗಳ ಹೊಸ ಭವಿಷ್ಯದ ಭರವಸೆ ಮೂಡಿಸಿತು, ಡಿ.ಎನ್.ಎ. ಬರಿಗಣ್ಣಿಗೆ ಕಾಣದ ಜೀವಕೋಶದ ಒಳಗೆ ಎರಡು ಮೀಟರ್ ಉದ್ದದ ಈ ಪಾಲಿಮರ್ ಅಡಗಿರುವುದು ಮಾತ್ರವಲ್ಲ, ತನ್ನೊಳಗೆ ಅಡಗಿಸಿಕೊಂಡಿರುವ ಸಾವಿರಾರು ಜೀನ್‌ಗಳು, ಅಪಾರ ಪ್ರಮಾಣದ ಜೈವಿಕ ಮಾಹಿತಿಯ ಕೋಡ್‌ಗಳು - ಹೀಗೆ ಅನೇಕ ಕಾರಣಗಳಿಗೆ ಅಚ್ಚರಿಯೆನಿಸಿದ್ದ ಡಿ.ಎನ್.ಎ.ಯ ಅರೆವಾಹಕತೆಯಿಂದ ಹೊಸ ಅಚ್ಚರಿಗಳು ಮತ್ತು ಸಾಧ್ಯತೆಗಳಿಗೆ ವಿಜ್ಞಾನಲೋಕ ಕಣ್ಣರಳಿಸುತ್ತಿದೆ. ತನ್ನೊಳಗಿನ 'ಎ, ಟಿ, ಜಿ, ಸಿ' ಎಂಬ ಅಂಶಗಳ ಬಗೆಬಗೆಯ ಸಂಯೋಜನೆ, ಎಲೆಕ್ಟ್ರಾನ್ ಮತ್ತು ಫೋನಾನ್‌ಗಳ ಜೊತೆಯಾಟ, ವಿದ್ಯುತ್ ಪ್ರವಹಿಸಿದಾಗ ಡಿ.ಎನ್.ಎ. ಒಳಗೆ ಆಣ್ವಿಕ ನೆಲೆಗಟ್ಟಿನಲ್ಲಿ ಆಗುವ ಕಂಪನಗಳೆಲ್ಲವನ್ನೂ ಅಧ್ಯಯನ ಮಾಡುತ್ತಿದ್ದರೆ, ವಿದ್ಯುನ್ಮಾನ ಕ್ಷೇತ್ರಕ್ಕೆ ಹೊಸ ನೈಸರ್ಗಿಕ ಅರೆವಾಹಕ ಸಿಕ್ಕಿದೆ ಎನ್ನುತ್ತಾರೆ, ವಿಜ್ಞಾನಿಗಳು.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ದಿಕ್ಸೂಚಿ ನಿಮಗಿಷ್ಟ ಆಗಿದೆಯೇ?
ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ಎಸ್ಎಸ್ಎಲ್‌ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಆಮ್ಲಗಳು, ಪ್ರತ್ಯಾಮ್ಲಗಳು ಮತ್ತು ಲವಣಗಳು

47). ಈ ಕೆಳಗಿನ ಸಂದರ್ಭಗಳಲ್ಲಿ ಉಂಟಾಗುವ ರಾಸಾಯನಿಕ ಕ್ರಿಯೆಗಳ ಪದ ಸಮೀಕರಣ ಮತ್ತು ನಂತರ ಸರಿದೂಗಿಸಿದ ಸಮೀಕರಣ ಬರೆಯಿರಿ.

(a) ಸಾರರಿಕ್ತ ಸಲ್ಫ್ಯೂರಿಕ್ ಆಮ್ಲ ಸತುವಿನ ಚೂರುಗಳೊಂದಿಗೆ ವರ್ತಿಸಿದಾಗ.

(b) ಸಾರರಿಕ್ತ ಹೈಡ್ರೋಕ್ಲೋರಿಕ್ ಆಮ್ಲ ಮೆಗ್ನೀಸಿಯಂ ಪಟ್ಟಿಯೊಂದಿಗೆ ವರ್ತಿಸಿದಾಗ.

(c) ಸಾರರಿಕ್ತ ಸಲ್ಫ್ಯೂರಿಕ್ ಆಮ್ಲ ಅಲ್ಯುಮಿನಿಯಂ ಪುಡಿಯೊಂದಿಗೆ ವರ್ತಿಸಿದಾಗ.

(d) ಸಾರರಿಕ್ತ ಹೈಡ್ರೋಕ್ಲೋರಿಕ್ ಆಮ್ಲ ಕಬ್ಬಿಣದ ರಜಗಳೊಂದಿಗೆ ವರ್ತಿಸಿದಾಗ.

ಉತ್ತರ:– (ಎ) ಸತು+ ಸಲ್ಫೂರಿಕ್ ಆಮ್ಲ → ಸತುವಿನ ಸಲ್ಫೇಟ್ + ಹೈಡ್ರೋಜನ್

$$Zn(s) + H_2SO_4(aq) \rightarrow ZnSO_4(aq) + H_2(g)$$

(ಬಿ) ಹೈಡ್ರೋಕ್ಲೋರಿಕ್ ಆಮ್ಲ+ಮೆಗ್ನೇಷಿಯಾಂ ⟶ ಮೆಗ್ನೇಷಿಯಂ ಕ್ಲೋರೈಡ್+ ಹೈಡ್ರೋಜನ್

$$2HCl(aq) + Mg(s) \rightarrow MgCl_2(aq) + H_2(g)$$

(ಸಿ) ಅಲ್ಯೂಮಿನಿಯಂ + ಸಲ್ಫೂರಿಕ್ ಆಮ್ಲ ⟶ ಅಲ್ಯುಮಿನಿಯಂ ಸಲ್ಫೇಟ್ + ಹೈಡ್ರೋಜನ್

$$2Al(s) + 3H_2,SO_4(aq) \rightarrow Al_2(SO_4),(aq) + 3H_2(g)$$

(ಡಿ) ಕಬ್ಬಿಣ + ಹೈಡ್ರೋರಿಕ್ ಆಮ್ಲ ⟶ ಫೆರಸ್ ಕ್ಲೋರೈಡ್ + ಹೈಡ್ರೋಜನ್

$$Fe(s) + 2HCl(aq) \rightarrow FeCl_2(aq) + H_2(g)$$

48). ಆಲ್ಕೋಹಾಲ್ ಮತ್ತು ಗ್ಲುಕೋಸ್‌ನಂತಹ ಸಂಯುಕ್ತಗಳೂ ಸಹ ಹೈಡ್ರೋಜನ್ ಹೊಂದಿವೆಯಾದರೂ ಅವುಗಳನ್ನು ಆಮ್ಲಗಳೆಂದು ವರ್ಗೀಕರಿಸಲಾಗಿಲ್ಲ. ಇದನ್ನು ಸಾಧಿಸಲು ಒಂದು ಚಟುವಟಿಕೆಯನ್ನು ವಿವರಿಸಿ.

ಉತ್ತರ:– ಆಲ್ಕೋಹಾಲ್ ಮತ್ತು ಗ್ಲುಕೋಸ್ ದ್ರಾವಣಗಳ ಮೂಲಕ ವಿದ್ಯುತ್‌ನ್ನು ಹರಿಸಿದರೆ ಅದು ಈ ದ್ರಾವಣಗಳ ಮೂಲಕ ಪ್ರವಹಿಸುವುದಿಲ್ಲ ಏಕೆಂದರೆ ಈ ದ್ರಾವಣಗಳಲ್ಲಿ ಅಯಾನುಗಳಿರುವುದಿಲ್ಲ.

****

ಜೀವ ಕ್ರಿಯೆಗಳು

ಬಹು ಆಯ್ಕೆ ಪ್ರಶ್ನೆಗಳು

1) ಬಹುತೇಕ ಆಹಾರದ ಆಕರಗಳಿಗೂ ಕಾರ್ಬನ್ ಆಧಾರಿತವಾಗಿವೆ.. ಈ ಕಾರ್ಬನ್ ಆಕರಗಳ ಸಂಕೀರ್ಣತೆಯ ಆಧಾರದ ಮೇಲೆ ವಿಭಿನ್ನ ಜೀವಿಗಳು, ವಿಭಿನ್ನ ರೀತಿಯ .... ಬಳಸುತ್ತವೆ.

ಎ) ಆಹಾರ ಪ್ರಮಾಣ ಬಿ) ಪೋಷಣಾ ವಿಧಾನ
ಸಿ) ಮರಿ ಪರಿಪಾಲನಾ ವಿಧಾನ
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– ಬಿ

2) ದೇಹದ ಹೊರಭಾಗದಿಂದ ಆಕ್ಸಿಜನ್ ಅನ್ನು ಪಡೆದುಕೊಂಡು ಕೋಶೀಯ ಅಗತ್ಯಗಳಿಗಾಗಿ ಆಹಾರ ಪದಾರ್ಥಗಳನ್ನು ವಿಭಜಿಸಿ ಬಳಸಿಕೊಳ್ಳುವ ಪ್ರಕ್ರಿಯೆಗೆ ನಾವು .... ಎಂದು ಕರೆಯುತ್ತೇವೆ.

ಎ) ಉಸಿರಾಟ ಬಿ) ಪೋಷಣಾ ವಿಧಾನ
ಸಿ) ಲೈಂಗಿಕ ಜೀವನ ಡಿ) ಯಾವುದೂ ಅಲ್ಲ

ಉತ್ತರ:– ಎ

3) ಸಸ್ಯಗಳು ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರಿನ್ನು ತೆಗೆದುಕೊಂಡು ಸೌರ ಬೆಳಕು ಮತ್ತು ಕ್ಲೋರೋಫಿಲ್ ಉಪಸ್ಥಿತಿಯಲ್ಲಿ .... ಗಳಾಗಿ ಪರಿವರ್ತಿಸಲಾಗುತ್ತದೆ.

ಎ) ಕಾರ್ಬೋಹೈಡ್ರೇಟ್ ಬಿ) ಹೈಡ್ರೋಕ್ಲೋರಿಕ್ ಆಮ್ಲ
ಸಿ) ಗಂಧಕಾಮ್ಲ ಡಿ) ಆಕ್ಸಿಜನ್

ಉತ್ತರ:– ಎ

4) ಮಾನವನಲ್ಲಿ ಪಚನ ಕ್ರಿಯೆಗಳು ಜಠರ ಗೋಡೆಯಲ್ಲಿ ಕಂಡುಬರುವ ಜಠರ ಗ್ರಂಥಿಗಳಿಂದ ನಿರ್ವಹಿಸಲ್ಪಡುತ್ತವೆ. ಇವು ಏನನ್ನ ಸ್ರವಿಸುತ್ತವೆ?

ಎ) ಹೈಡ್ರೋಕ್ಲೋರಿಕ್ ಆಮ್ಲ, ಆಕ್ಸಿಜನ್, ಕ್ಲೋರಿನ್ ಮತ್ತು ಪೆಪ್ಸಿನ್
ಬಿ) ಹೈಡ್ರೋಕ್ಲೋರಿಕ್ ಆಮ್ಲ , ಪೆಪ್ಸಿನ್, ಲೋಳೆ
ಸಿ) ಕ್ಲೋರೊಫ್ಲೋರೊ ಕಾರ್ಬನ್, ರೆನಿನ್ ಮತ್ತು ಪೆಪ್ಸಿನ್
ಡಿ) ಹೈಡ್ರೋ ಕ್ಲೋರಿಕ್ ಆಮ್ಲ, ಕಾರ್ಬನ್ ಮತ್ತು ರೆನಿನ್

ಉತ್ತರ:– ಬಿ

5) ಮಾನವನ ಜೀರ್ಣಾಂಗವ್ಯೂಹದಲ್ಲಿ ಕಾರ್ಬೋಹೈಡ್ರೇಟ್, ಪ್ರೋಟೀನ್, ಮತ್ತು ಕೊಬ್ಬುಗಳು ಸಂಪೂರ್ಣವಾಗಿ ಪಚನವಾಗುವ ಸ್ಥಳ ಯಾವುದು?

ಎ) ದೊಡ್ಡ ಕರಳು ಬಿ) ಸಣ್ಣ ಕರಳು
ಸಿ) ಪಿತ್ತರಸ ನಾಳ ಡಿ) ಮೇದೋಜೀರಕಾಂಗ

ಉತ್ತರ:– ಬಿ

6) ಸಸ್ಯಗಳು ಯಾವುದರ ಮೂಲಕ ಅನಿಲಗಳ ವಿನಿಮಯ ನಡೆಸುತ್ತವೆ?

ಎ) ಪತ್ರ ರಂಧ್ರಗಳು ಬಿ) ಜೀವಕೋಶಗಳು
ಸಿ) ಹೂವುಗಳು ಡಿ) ಹಣ್ಣುಗಳು

ಉತ್ತರ:– ಎ

7) ಜಲಚರಗಳಲ್ಲಿ ಉಸಿರಾಟದ ದರವು ನೆಲದಲ್ಲಿ ವಾಸಿಸುವ ಜೀವಿಗಳಿಗಿಂತ ಹೆಚ್ಚು ಇರುತ್ತದೆ. ಕಾರಣವೇನು?

ಎ) ಗಾಳಿಯಲ್ಲಿರುವ ಆಕ್ಸಿಜನ್ ಪ್ರಮಾಣಕ್ಕೆ ಹೋಲಿಸಿದರೆ ನೀರಿನಲ್ಲಿ ಕರಗಿರುವ ಆಕ್ಸಿಜನ್ ಪ್ರಮಾಣ ಹೆಚ್ಚು ಇರುತ್ತದೆ.
ಬಿ) ಗಾಳಿಯಲ್ಲಿರುವ ಆಕ್ಸಿಜನ್ ಪ್ರಮಾಣಕ್ಕೆ ಹೋಲಿಸಿದರೆ ನೀರಿನಲ್ಲಿ ಕರಗಿರುವ ಆಕ್ಸಿಜನ್ ಪ್ರಮಾಣ ಸಮನಾಗಿರುತ್ತದೆ.
ಸಿ) ಗಾಳಿಯಲ್ಲಿರುವ ಆಕ್ಸಿಜನ್ ಪ್ರಮಾಣಕ್ಕೆ ಹೋಲಿಸಿದರೆ ನೀರಿನಲ್ಲಿ ಕರಗಿರುವ ಆಕ್ಸಿಜನ್ ಪ್ರಮಾಣ ಕಡಿಮೆ ಇರುತ್ತದೆ.
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– ಸಿ

8) ಧೂಳು ಮತ್ತು ಇತರೇ ಹಾನಿಕಾರಕ ಕಣಗಳನ್ನು ತೆಗೆದು ಹಾಕುವ ಶ್ವಾಸನಾಳದ ಮೇಲ್ಭಾಗದಲ್ಲಿರುವ ಸಿಲಿಯಾ ಎಂಬ ಸಣ್ಣ ಕೂದಲಿನಂತಹ ರಚನೆಯನ್ನು ಯಾವುದು ನಾಶ ಮಾಡುತ್ತದೆ?

ಎ) ಅತಿಯಾದ ಚಲನಚಿತ್ರ ನೋಡುವುದು
ಬಿ) ಅತಿಯಾದ ಕಠಿಣ ಕೆಲಸ ಮಾಡುವುದು
ಸಿ) ಧೂಮ್ರಪಾನ ಮಾಡುವುದು
ಡಿ) ಅತಿಯಾದ ಮದ್ಯಪಾನ ಮಾಡುವುದು

ಉತ್ತರ:– ಸಿ

9) ನಮ್ಮ ದೇಹದಲ್ಲಿ ಯಾವುದನ್ನು ಸಾಗಾಣಿಕೆ ಮಾಡುತ್ತದೆ?

ಎ) ಆಕ್ಸಿಜನ್, ಆಹಾರ, ತ್ಯಾಜ್ಯವಸ್ತು
ಬಿ) ಘನಪದಾರ್ಥ, ಕಾರ್ಬನ್, ಮತ್ತು ನೀರು
ಸಿ) ತ್ಯಾಜ್ಯ ವಸ್ತು, ಕ್ಲೋರೋಫಿಲ್, ಹೈಡ್ರೋಕ್ಲೋರಿಕ್ ಆಮ್ಲ
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– ಎ

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

Chemistry

ELECTROCHEMISTRY

68. The resistance of a conductivity cell containing 0.001M KCl solution at K is 1500 Ω. What is the cell constant if the conductivity of 0.001 M KCl solution at 298 K is 0.146×10^{-3} S cm^{-2}?

Ans:- Resistance (R) = 1500 Ω

$$\text{Conductance}(C) = \frac{1}{R} = \frac{1}{1500\,\text{ohm}} = \frac{1}{1500}\,S$$

$$\text{Conductivity}(\kappa) = 0.146 \times 10^{-3}\,S\,cm^{-1}$$

$$\text{Cell constant}(l/a) = \frac{\text{Conductivity}}{\text{Conductance}} = \frac{(0.146 \times 10^{-3}\,S\,cm^{-1})}{(1/1500\,S)} = 0.219\,cm^{-1}$$

69. How much electricity in terms of Faraday is required to produce:
(i) 20.0 g of Ca from molten $CaCl_2$
(ii) 40.0 g of Al from molten Al_2O_3?

Ans:- (i) $Ca^{2+}(aq) + 2e^- \rightarrow Ca(s)$
2F 40g

To produce 40g of $CaCl_2$, charge needed = 2F
To produce 20g of $CaCl_2$, charge needed = 1F

(ii) $Al_2O_3 + 6e^- \rightarrow 2Al + 3O^{2-}$
6F (2 x 27) g

To produce 54 g of Al, charge needed = 6F
To produce 40g of Al, charge needed

$$= \frac{(40\,g)}{(54\,g)} \times (6F) = 4.44F.$$

70. How much electricity is required in coulomb for the oxidation of -
(i) 1 mol of H_2O to O_2
(ii) 1 mol of FeO Fe_2O_3

Ans:- (i) $H_2O \rightarrow 2H^+ + 1/2\,O_2 + 2e^-$
1 mol 2F

Electricity (charge) required = 2F
= 2 x 96500 C
= 1.93×10^5 C

(ii) $2FeO + 1/2\,O_2 \rightarrow Fe_2O_3$

$$2Fe^{2+} \rightarrow Fe_2^{3+} + 2e^-$$

2 mol 2F

For the oxidation of two moles of FeO, charge required = 2 F
For the oxidation of one mole of FeO, charge required = 1 F = 96500 C.

CHEMICAL KINETICS

1. What is chemical kinetics?

Ans:- Chemical kinetics is the branch of chemistry that deals with the study of the rate of a chemical reaction and factors affecting the rate of a chemical reaction.

2. What is meant by the rate of a reaction?

Ans:- The rate of the reaction is defined as the change in the molar concentration of one of the reactants or products in unit time. It is given by the expression $\frac{dx}{dt}$, where dx is the change in the molar concentration of one of the reactants or products in time dt.

3. Define rate constant of the reaction.

Ans:- The rate constant or the velocity constant 'k' of the reaction is equal to the velocity of the reaction when the molar concentrations of the reactant are unity.

4. What is mechanism of the reaction?

Ans:- The step by step sequence in which a chemical reaction takes place is called the mechanism of the reaction.

5. What is molecularity of the reaction?

Ans:- The molecularity is the total number of the molecules or atoms of various reactants that take part in a chemical reaction as represented by a balanced chemical equation for a single step reaction or an elementary reaction.

6. Mention the factors influencing the rates of Chemical reactions.

Ans:- The factors influencing the rates of Chemical reactions are –

(a) Concentration of reactants
(b) Temperature
(c) Presence of Catalyst
(d) Nature of reactants
(e) Surface area
(f) Exposure to radiations.

7. State the law of mass action?

Ans:- The law of mass action states that –

"The rate of the reaction is directly proportional to the product of the active masses of the reactants, at constant temperature."

For a reaction A + B → C + D, velocity of the reaction is

$$v \propto [A][B] \quad (or) \quad v = k[A][B]$$

8. What is rate equation?

Ans:- The rate equation (rate law) is an expression that relates velocity of the reaction to the molar concentrations of the reactants.

Eg:- For a reaction A + B → C + D, the rate equation is $v = k[A][B]$

9. How does the presence of a catalyst influence the rate of a reaction?

Ans:- The catalyst is a substance which influences the rate of the reaction without undergoing any chemical change by itself.

Eg:- A mixture of H_2 and O_2 does not react at the room temperature. However, in the presence of the catalyst such as finely divided platinum, the reaction becomes quite vigorous.

10. What is unimolecular reaction?

Ans:- A reaction in which only one molecule takes part is called the unimolecular reaction.

Eg:- $PCl_5 \rightarrow PCl_3 + Cl_2$

11. What is bimolecular reaction?

Ans:- A reaction is said to be bimolecular if two molecules take part in the reaction.

Eg:- Formation of hydrogen iodide

$$H_2 + I_2 \rightarrow 2HI$$

‘ಹೃದಯಾಘಾತದ ಸಾವು ಹೆಚ್ಚಾಗಿಲ್ಲ’

ಜನರು ಹೆದರಬೇಕಿಲ್ಲ: ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಯಾವುದೇ ಜಿಲ್ಲೆ ಅಥವಾ ಭಾಗದಲ್ಲಿ ಹೃದಯಾಘಾತ ದಿಂದ ಜನರು ಮೃತಪಡುವ ಪ್ರಕರಣಗಳ ಸಂಖ್ಯೆ ಹೆಚ್ಚಾಗಿಲ್ಲ. ಹೀಗಾಗಿ ಜನರು ಆತಂಕಪಡುವ ಅಗತ್ಯ ಇಲ್ಲ’ ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಹಾಸನದಲ್ಲಿ ದಿಢೀರ್ ಹೃದಯಾಘಾತದಿಂದ 24 ಮಂದಿ ಮೃತಪಟ್ಟಿದ್ದಾರೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಆದರೆ, ಈ ಪೈಕಿ ನಾಲ್ಕು ಪ್ರಕರಣ ಗಳಲ್ಲಿ ತಲಾ ಒಂದು ರಸ್ತೆ ಅಪಘಾತ, ವಿದ್ಯುತ್ ಆಘಾತ, ಹೊಟ್ಟೆಯುಬ್ಬರ, ಕಿಡ್ನಿ ಸಮಸ್ಯೆಯಿಂದ ಸಂಭವಿಸಿದ ಸಾವು’ ಎಂದರು.

‘ಉಳಿದ 20ರಲ್ಲಿ 10 ಮಂದಿಗೆ ಈ ಮೊದಲೇ ಹೃದಯ ಸಂಬಂಧಿ ಕಾಯಿಲೆಗಳು ಇದ್ದವು. ಇನ್ನುಳಿದ 10 ಮಂದಿಗೆ ಅದೇ ಮೊದಲ ಬಾರಿಗೆ ಹೃದಯ ಸಮಸ್ಯೆ ಕಂಡುಬಂದಿತ್ತು. ಆ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ’ ಎಂದರು.

‘2024 ಮತ್ತು 2025ರ ಮೇ–ಜೂನ್ ಅವಧಿಯಲ್ಲಿ ಬೆಂಗಳೂರು, ಮೈಸೂರು, ಕಲಬುರಗಿ ಜಯದೇವ ಆಸ್ಪತ್ರೆಗಳಲ್ಲಿ ದಾಖಲಾದ ಹೃದ್ರೋಗ ಸಂಬಂಧಿ ರೋಗಿಗಳು ಮತ್ತು ಅವರಲ್ಲಿ ಮೃತಪಟ್ಟವರ ದತ್ತಾಂಶಗಳನ್ನು ಪರಿಶೀಲಿಸಲಾಗಿದೆ. ಹೃದ್ರೋಗ ರೋಗಿಗಳ ಮತ್ತು ಹೃದಯಾಘಾತದ ಸಾವುಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿಲ್ಲ’ ಎಂದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ‘ಹೃದ್ರೋಗ ಸಂಬಂಧಿ ತಪಾಸಣೆಗಳಿಗಾಗಿ ಎಲ್ಲ ಆಸ್ಪತ್ರೆಗಳಲ್ಲಿ ಅಗತ್ಯ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಎಲ್ಲ ಎದೆ ನೋವುಗಳೂ, ಹೃದಯಕ್ಕೆ ಸಂಬಂಧಿಸಿದ್ದೇ ಆಗಿರುವುದಿಲ್ಲ. ಮನೆ ಸಮೀಪದ ವೈದ್ಯರ ಬಳಿ ತಪಾಸಣೆ ನಡೆಸಿ, ಅವರ ಸೂಚನೆಯಂತೆ ಹೆಚ್ಚಿನ ತಪಾಸಣೆಗೆ ಒಳಪಟ್ಟರೆ ಸಾಕು. ಅನಗತ್ಯವಾಗಿ ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ’ ಎಂದರು.


> **ವರ್ಷಕ್ಕೊಮ್ಮೆ ಹೃದಯ ಸಂಬಂಧಿ ತಪಾಸಣೆಗಳನ್ನು ಮಾಡಿಸಿದರೆ ಸಾಕು. ವೈದ್ಯರು ಸೂಚಿಸದ ಹೊರತು ಪದೇ–ಪದೇ ತಪಾಸಣೆಗೆಂದು ಆಸ್ಪತ್ರೆಗೆ ಬರುವುದು ಬೇಡ**
> **ಶರಣ ಪ್ರಕಾಶ ಪಾಟೀಲ**
> ವೈದ್ಯಕೀಯ ಶಿಕ್ಷಣ ಸಚಿವ

> **ಶಾಲಾ ಮಕ್ಕಳಿಗೆ ಹೃದಯ ಸಂಬಂಧಿ ತಪಾಸಣೆಯ ಅಗತ್ಯವಿಲ್ಲ. ಆದರೆ ಇತರೆ ತಪಾಸಣೆಗಳ ಜತೆಗೆ ಅದನ್ನೂ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ**
> **ದಿನೇಶ್ ಗುಂಡೂರಾವ್**
> ಆರೋಗ್ಯ ಸಚಿವ

ಹೃದಯಾಘಾತದ ಅಂಕಿ ಅಂಶ

315 ರಾಜ್ಯದ ಮೂರು ಜಯದೇವ ಆಸ್ಪತ್ರೆಗಳಲ್ಲಿ 2024ರ ಮೇ–ಜೂನ್‌ನಲ್ಲಿ ದಾಖಲಾದ ಹೃದ್ರೋಗಿಗಳ ಸಂಖ್ಯೆ

19 315 ರೋಗಿಗಳಲ್ಲಿ ಮೃತಪಟ್ಟವರು



357 ರಾಜ್ಯದ ಮೂರು ಜಯದೇವ ಆಸ್ಪತ್ರೆಗಳಲ್ಲಿ 2025ರ ಮೇ–ಜೂನ್‌ನಲ್ಲಿ ದಾಖಲಾದ ಹೃದ್ರೋಗಿಗಳ ಸಂಖ್ಯೆ

20 357 ರೋಗಿಗಳಲ್ಲಿ ಮೃತಪಟ್ಟವರು

‘ಮಾಧ್ಯಮ ವರದಿಗಳಿಂದ ಜನರ ಆತಂಕ’

‘ಜನರು ಆರೋಗ್ಯದ ಯಾವ ಸಮಸ್ಯೆಯಿಂದ ಮೃತಪಟ್ಟಿದ್ದಾರೆ ಎಂದು ಪರಿಶೀಲಿಸದೆಯೇ, ಹೃದಯಾಘಾತದಿಂದ ಸಾವು ಎಂದು ಸುದ್ದಿವಾಹಿನಿಗಳು ವರದಿ ಮಾಡಿವೆ. ಈ ಕಾರಣದಿಂದ ಜನರು ಹೆಚ್ಚು ಆತಂಕಗೊಂಡಿದ್ದಾರೆ’ ಎಂದು ಶರಣ ಪ್ರಕಾಶ ಪಾಟೀಲ ಅವರು ಅಸಮಾಧಾನ ವ್ಯಕ್ತಪಡಿಸಿದರು.

‘ಭಯಗೊಂಡಿರುವ ಜನರು ಹೃದಯ ತಪಾಸಣೆಗೆಂದು ಆಸ್ಪತ್ರೆಗಳಿಗೆ ಬರುತ್ತಿದ್ದಾರೆ. ಬೆಂಗಳೂರು, ಮೈಸೂರು ಮತ್ತು ಕಲಬುರಗಿಯ ಜಯದೇವ ಹೃದ್ರೋಗ ವಿಜ್ಞಾನಗಳ ಸಂಸ್ಥೆಗಳಲ್ಲಿ ಹೀಗೆ ತಪಾಸಣೆಗೆ ಬರುವವರ ಪ್ರಮಾಣ ಶೇ 30–ಶೇ40ಷ್ಟು ಏರಿಕೆಯಾಗಿದೆ’ ಎಂದರು.

‘ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಮಾಧ್ಯಮಗಳೇ ಮಾಡಬೇಕು’ ಎಂದರು.

‘ಇತರ ಹಿಂದುಳಿದ ವರ್ಗಗಳ ಸಲಹಾ ಸಮಿತಿ’ ಸಭೆ

ಆತ್ಮಸಾಕ್ಷಿಯ ಧ್ವನಿ ‘ಅಹಿಂದ’

ಪ್ರಜಾವಾಣಿ ವಾರ್ತೆ



ಎಐಸಿಸಿ ಹಿಂದುಳಿದ ವರ್ಗಗಳ ವಿಭಾಗದ ಇತರ ಹಿಂದುಳಿದ ವರ್ಗಗಳ ಸಲಹಾ ಸಮಿತಿಯ ಸಭೆ ಮಂಗಳವಾರ ನಡೆಯಿತು –ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಅಹಿಂದ ಒಂದು ಮತ ಬ್ಯಾಂಕ್ ಅಲ್ಲ. ಇದು ಭಾರತದ ಆತ್ಮಸಾಕ್ಷಿಯ ಧ್ವನಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಕೆಪಿಸಿಸಿ ಕಚೇರಿಯ ಭಾರತ್ ಜೋಡೊ ಭವನದಲ್ಲಿ ಮಂಗಳವಾರ ನಡೆದ ಎಐಸಿಸಿ ಹಿಂದುಳಿದ ವರ್ಗಗಳ ವಿಭಾಗದ ಇತರ ಹಿಂದುಳಿದ ವರ್ಗಗಳ ಸಲಹಾ ಸಮಿತಿಯ ಮೊದಲ ಸಭೆಯಲ್ಲಿ ಮಾತನಾಡಿದ ಅವರು, ‘ಭಾರತದ ಭವಿಷ್ಯವನ್ನು ಬಹಿಷ್ಕಾರದ ಮೇಲೆ ಕಟ್ಟಲಾಗದು. ಅವಕಾಶ, ಘನತೆ ಮತ್ತು ಅಧಿಕಾರದೊಂದಿಗೆ ಎಲ್ಲರೂ ಒಟ್ಟಿಗೆ ಉನ್ನತ ಸ್ಥಾನ ಗಳಿಸಬೇಕು’ ಎಂದು ಆಶಿಸಿದರು.

‘ರಾಹುಲ್ ಗಾಂಧಿ ಅವರು ಹೇಳಿದಂತೆ, ‘ಜಿತ್ನಿ ಆಬಾದಿ, ಉತ್ನಿ ಹಖ್’ (ಎಷ್ಟು ಜನಸಂಖ್ಯೆಯೊ ಅಷ್ಟು ಹಕ್ಕು) ಸಿಗಬೇಕು. ಇದು ಪ್ರಜಾಪ್ರಭುತ್ವದ ಹೃದಯ. ಈ ಸಲಹಾ ಸಮಿತಿಯು ಕಾಂಗ್ರೆಸ್ ಪಕ್ಷವನ್ನು ಮಾತ್ರವಲ್ಲ, ಭಾರತ ಗಣರಾಜ್ಯವನ್ನು ಹೊಸ ನ್ಯಾಯದ ಕಡೆಗೆ ಕೊಂಡೊಯ್ಯಲಿ. ಸರ್ವರಿಗೂ ಸಮಬಾಳು-ಸರ್ವರಿಗೂ ಸಮಪಾಲು ಮತ್ತು ಸರ್ವೋದಯ ತತ್ವದಲ್ಲಿ ಭಾರತವನ್ನು ಕಟ್ಟೋಣ’ ಎಂದರು.

‘ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಜಾತಿ ಜನಗಣತಿಯನ್ನು ರಾಜಕೀಯ ಚರ್ಚೆಯಿಂದ ಸಂವಿಧಾನದ ಅಗತ್ಯವನ್ನಾಗಿ ಮಾಡಬೇಕು. ನೀತಿಗಳನ್ನು ಹಿಂದುಳಿದ ವರ್ಗಗಳ ಧ್ವನಿ ರೂಪಿಸುವಂತೆ ಆಗಬೇಕು. ಬಿಜೆಪಿ ಜಾತಿಗಳ ನಡುವೆ ಒಡಕು ಉಂಟು ಮಾಡಿದರೆ, ನಾವು ಸಾಮಾಜಿಕ ಒಗ್ಗಟ್ಟು ಮತ್ತು ಸಾಂವಿಧಾನಿಕ ನ್ಯಾಯದಿಂದ ಗೆಲ್ಲಬೇಕಿದೆ’ ಎಂದರು.

‘ರಾಷ್ಟ್ರವ್ಯಾಪಿ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಜಾತಿ ಜನಗಣತಿಯನ್ನು ಪೂರ್ಣಗೊಳಿಸಲು ನಾವು ನಿರಂತರವಾಗಿ ಪ್ರಯತ್ನಿಸಬೇಕು. ಜಾತಿ ಜನಗಣತಿಯ ಆಧಾರದಲ್ಲಿ ಶೇ 75ರಷ್ಟು ಮೀಸಲಾತಿ ಅಥವಾ ಪ್ರಮಾಣಕ್ಕೆ ಅನುಗುಣವಾದ ಪ್ರಾತಿನಿಧ್ಯಕ್ಕಾಗಿ ಹೋರಾಟ ಮಾಡಬೇಕು. ಖಾಸಗಿ ವಲಯದ ಉದ್ಯೋಗಗಳು, ಸರ್ಕಾರಿ ಗುತ್ತಿಗೆಗಳು ಮತ್ತು ಆರ್ಥಿಕ ನೆರವಿನ ಮೂಲಕ ಆರ್ಥಿಕ ಅವಕಾಶಗಳನ್ನು ವಿಸ್ತರಿಸಬೇಕು. ತಾರತಮ್ಯದ ವಿರುದ್ಧ ಜಾಗೃತಿ ಕಾರ್ಯಕ್ರಮಗಳ ಮೂಲಕ ಸಾಮಾಜಿಕ ಏಕೀಕರಣ ಸಾಧಿಸಬೇಕು’ ಎಂದೂ ಹೇಳಿದರು.

ಸಭೆಯ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಸಿದ್ದರಾಮಯ್ಯ, ‘ಇತರ ಹಿಂದುಳಿದ ವರ್ಗಗಳ ನಾಯಕರ ಮೊದಲ ಸಭೆ ಅರ್ಥಪೂರ್ಣವಾಗಿ ನಡೆಯಿತು. ನನ್ನ ಅಧ್ಯಕ್ಷತೆಯಲ್ಲಿ ಈ ಸಭೆ ನಡೆಸುವಂತೆ ಸಲಹಾ ಸಮಿತಿ ಅಧ್ಯಕ್ಷರು ಸೂಚಿಸಿದ್ದರಿಂದ ನನ್ನ ಅಧ್ಯಕ್ಷತೆಯಲ್ಲೇ ಸಭೆ ನಡೆದಿದೆ. ಬುಧವಾರವೂ ಸಭೆ ಮುಂದುವರಿಯಲಿದೆ’ ಎಂದರು.

ಸಮಿತಿ ಸಂಚಾಲಕ ಅನಿಲ್ ಜೈ ಹಿಂದ್, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಎಂ. ವೀರಪ್ಪ ಮೊಯಿಲಿ, ಅಶೋಕ್ ಗೆಹಲೋತ್, ಬಿ.ಕೆ. ಹರಿಪ್ರಸಾದ್, ವಿ. ಹನುಮಂತ ರಾವ್, ಮಾಜಿ ಮುಖ್ಯಮಂತ್ರಿ ವಿ. ನಾರಾಯಣ ಸ್ವಾಮಿ, ಸಂಸದರಾದ ಅಡೂರು ಪ್ರಕಾಶ್, ಜ್ಯೋತಿ ಮಣಿ ಮತ್ತಿತರರು ಇದ್ದರು. ಸಭೆಯಲ್ಲಿ ಭಾಗವಹಿಸಿದವರಿಗೆ ಡಿ.ಕೆ. ಶಿವಕುಮಾರ್ ಅವರು ನೆನಪಿನ ಕಾಣಿಕೆ ನೀಡಿ ಅಭಿನಂದಿಸಿದರು.

> **ಬಿಜೆಪಿ ಸಾಮಾಜಿಕ ನ್ಯಾಯ ಹಾಗೂ ಮೀಸಲಾತಿ ಪರ ಇಲ್ಲ. ಬಿಜೆಪಿ ನಿರಂತರವಾಗಿ ಸಾಮಾಜಿಕ ನ್ಯಾಯ ಮತ್ತು ಮೀಸಲಾತಿಯನ್ನು ವಿರೋಧಿಸುತ್ತಾ ಬಂದಿರುವುಕ್ಕೆ ಇಡೀ ದೇಶ ಸಾಕ್ಷಿ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ನಬಾರ್ಡ್ 44ನೇ ಸಂಸ್ಥಾಪನಾ ದಿನಾಚರಣೆ: ಸಿಜಿಎಂ ಸುರೇಂದ್ರ ಬಾಬು

3 ಕೈಗಾರಿಕಾ ಪಾರ್ಕ್‌ಗೆ ₹4,500 ಕೋಟಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಮೌಲ್ಯವರ್ಧನೆಯಿಂದ ವರ್ಷಪೂರ್ತಿ ಆದಾಯ
- ಗ್ರಾಮೀಣ ಆರ್ಥಿಕತೆ: ನಬಾರ್ಡ್‌ಗೆ ಸರ್ಕಾರ ಬೆಂಬಲ
- ಮಹಿಳಾ ಉದ್ಯಮಿಗಳಿಗೆ ಪ್ರೋತ್ಸಾಹ ನೀಡಿ

ಬೆಂಗಳೂರು: ದೇವನಹಳ್ಳಿ, ಗೌರಿಬಿದನೂರು ಮತ್ತು ವೇಮಗಲ್‌ಗಳಲ್ಲಿ ಕೈಗಾರಿಕಾ ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಲು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (ನಬಾರ್ಡ್) ಸಾಲದ ರೂಪದಲ್ಲಿ ₹4,500 ಕೋಟಿಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ (ಕೆಐಎಡಿಬಿ) ಮಂಜೂರು ಮಾಡಿದೆ ಎಂದು ನಬಾರ್ಡ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಸುರೇಂದ್ರ ಬಾಬು ತಿಳಿಸಿದರು.

ನಗರದಲ್ಲಿ ನಡೆದ ನಬಾರ್ಡ್‌ನ 44ನೇ ಸಂಸ್ಥಾಪನಾ ದಿನಾಚಾರಣೆಯಲ್ಲಿ ಮಾತನಾಡಿದ ಅವರು, ‘ಇದು ಈ ವರ್ಷದಲ್ಲಿ ಮಂಜೂರಾಗಿರುವ ಅತಿ ದೊಡ್ಡ ಯೋಜನೆಯಾಗಿದೆ. ಯೋಜನೆ ಪೂರ್ಣಗೊಂಡ ನಂತರ 60 ಸಾವಿರ ಗ್ರಾಮೀಣ ಯುವಕ ಮತ್ತು ಯುವತಿಯರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುವ ನಿರೀಕ್ಷೆ ಇದೆ’ ಎಂದರು.

‘ಕಳೆದ ಹಣಕಾಸು ವರ್ಷದಲ್ಲಿ ನಬಾರ್ಡ್ ರಾಜ್ಯದಲ್ಲಿ ₹27,846 ಕೋಟಿಯಷ್ಟು ವಹಿವಾಟು ನಡೆಸಿದೆ. ಇದರಲ್ಲಿ ಬ್ಯಾಂಕ್‌ಗಳು ಮತ್ತು ಸಹಕಾರಿ ಸಂಸ್ಥೆಗಳಿಗೆ ₹21,442 ಕೋಟಿ, ರಾಜ್ಯ ಸರ್ಕಾರಕ್ಕೆ ₹4,974 ಕೋಟಿ, ಮೂಲಸೌಕರ್ಯ ಹಣಕಾಸು ಮತ್ತು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳಿಗೆ 1,431 ಕೋಟಿ ನೆರವು ಸೇರಿದೆ’ ಎಂದು ಅವರು ಮಾಹಿತಿ ನೀಡಿದರು.

‘ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಧಿಯಡಿ (ಆರ್‌ಡಿಐಎಫ್) ಈವರೆಗೆ 41,489 ಯೋಜನೆಗಳು ಪೂರ್ಣಗೊಂಡಿದ್ದು, 4.40 ಲಕ್ಷ ಹೆಕ್ಟೇರ್‌ನಷ್ಟು ನೀರಾವರಿ ಸೌಲಭ್ಯ ದೊರೆತಿದೆ. 44,405 ಕಿ.ಮೀನಷ್ಟು ಗ್ರಾಮೀಣ ರಸ್ತೆಗಳು, 55,502 ಮೀಟರ್ ಉದ್ದದ ಸೇತುವೆಗಳು ನಿರ್ಮಾಣಗೊಂಡಿವೆ. 13,480 ಗ್ರಾಮೀಣ ಶಿಕ್ಷಣ ಸಂಸ್ಥೆಗಳಿಗೆ ಬೆಂಬಲ ನೀಡಲಾಗಿದೆ. 338 ಆರೋಗ್ಯ ಸೌಲಭ್ಯಗಳು ಮತ್ತು 800ಕ್ಕೂ ಹೆಚ್ಚು ಗ್ರಾಮೀಣ ಮಾರುಕಟ್ಟೆಗಳು ಮತ್ತಿತರ ಮಹತ್ವದ ಮೂಲಸೌಕರ್ಯ ನಿರ್ಮಾಣವಾಗಿವೆ’ ಎಂದು ವಿವರಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ‘ಮಳೆ ಬಂದಾಗ ಬಿತ್ತನೆ ಮಾಡಿ, ಮಳೆ ಬರದಿದ್ದಾಗ ವಲಸೆ ಹೋಗುವಂತೆ ಆಗಬಾರದು. ವರ್ಷವಿಡೀ ಕೆಲಸವೂ ಇರಬೇಕು. ಆದಾಯವೂ ಇರಬೇಕು. ಇದಕ್ಕಾಗಿ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಮೌಲ್ಯವರ್ಧಿಸಿ, ಉತ್ಪನ್ನಗಳನ್ನಾಗಿ ಮಾರಾಟ ಮಾಡುವಂತಾಗಬೇಕು. ನಬಾರ್ಡ್ ಅಧಿಕಾರಿಗಳು ಈ ಕುರಿತು ಅಭಿಯಾನ ನಡೆಸಬೇಕು’ ಎಂದು ತಿಳಿಸಿದರು.

‘ಇತ್ತೀಚೆಗೆ ತೋತಾಪುರಿ ಮಾವಿನ ಬೆಲೆ ಕುಸಿಯಿತು. ಇಂಥ ಸಂದರ್ಭಗಳನ್ನು ಎದುರಿಸಲು ಮಾವು ಬೆಳೆದವರು ತಮ್ಮ ಹಳ್ಳಿಯಲ್ಲೇ ‘ಮೌಲ್ಯವರ್ಧಿತ ಉತ್ಪಾದನಾ ಘಟಕ’ ಮಾಡಿಕೊಂಡರೆ, ವಿವಿಧ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡಿ ಆದಾಯ ಗಳಿಸಬಹುದು’ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ‘ಕರ್ನಾಟಕದಲ್ಲಿ ಎಫ್‌ಪಿಓಗಳ ಯಶಸ್ವಿ ಕಥೆಗಳು’ ಎಂಬ ಕಿರುಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಆರ್‌ಬಿಐ ಪ್ರಾದೇಶಿಕ ನಿರ್ದೇಶಕಿ ಸೋನಾಲಿ ಸೇನ್ ಗುಪ್ತಾ ಮಾತನಾಡಿದರು.



ನಬಾರ್ಡ್‌ನ 44ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಸ್ವಸಹಾಯ ಸಂಘಗಳ ಮೌಲ್ಯವರ್ಧಿತ ಉತ್ಪನ್ನಗಳನ್ನು ಸವಿದ ರಾಜ್ಯ ಸರ್ಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್. ನಬಾರ್ಡ್ ಪ್ರಾದೇಶಿಕ ನಿರ್ದೇಶಕಿ ಸೊನಾಲಿ ಸೇನ್ ಗುಪ್ತಾ, ನಬಾರ್ಡ್ ಸಿಜಿಎಂ ಸುರೇಂದ್ರ ಬಾಬು, ಕೆನರಾ ಬ್ಯಾಂಕ್‌ನ ಭವೇಂದ್ರ ಕುಮಾರ್ ಹಾಜರಿದ್ದರು ಪ್ರಜಾವಾಣಿ ಚಿತ್ರ

ಚಿರತೆ ಸಾವು: ವರದಿ ಕೇಳಿದ ಎನ್‌ಟಿಎ

ಪ್ರಜಾವಾಣಿ ವಾರ್ತೆ

ನವದೆಹಲಿ: ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಕತ್ತರಿಘಟ್ಟ ಗ್ರಾಮದ ಬಳಿ ಎರಡು ಚಿರತೆಗಳ ಕಳೇಬರ ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ವಾಸ್ತವಾಂಶದ ವರದಿ ಸಲ್ಲಿಸುವಂತೆ ಅರಣ್ಯ ಇಲಾಖೆಗೆ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್‌ಟಿಎ) ನಿರ್ದೇಶನ ನೀಡಿದೆ.

ಗ್ರಾಮದಿಂದ ಸ್ವಲ್ಪ ದೂರದಲ್ಲಿ ಹಾದು ಹೋಗಿರುವ ರೈಲು ಹಳಿಯಿಂದ ಒಂದು ಮೀಟರ್ ದೂರದಲ್ಲಿ ಅಂದಾಜು ಮೂರರಿಂದ ಮೂರೂವರೆ ವರ್ಷದ ಹೆಣ್ಣು ಚಿರತೆಯ ಕಳೇಬರ ಪತ್ತೆಯಾಗಿತ್ತು. ಅಲ್ಲಿಂದ 30 ಮೀಟರ್ ದೂರದಲ್ಲಿ ಒಂದೂವರೆ ವರ್ಷದ ಗಂಡು ಚಿರತೆಯ ಶವ ಪತ್ತೆಯಾಗಿತ್ತು.

ಈ ಸಂಬಂಧ ಮುಖ್ಯ ವನ್ಯಜೀವಿ ವಾರ್ಡನ್ ಅವರಿಗೆ ಮಂಗಳವಾರ ಪತ್ರ ಬರೆದಿರುವ ಎನ್‌ಟಿಸಿಎ ಸಹಾಯಕ ಮಹಾನಿರ್ದೇಶಕಿ (ಅರಣ್ಯ) ಹರಿಣಿ ವೇಣುಗೋಪಾಲ್, ‘ಈ ಘಟನೆ ಬಗ್ಗೆ ಕ್ರಮ ಕೈಗೊಂಡ ವರದಿಯನ್ನು ಪ್ರಾಧಿಕಾರಕ್ಕೆ ಶೀಘ್ರದಲ್ಲಿ ಸಲ್ಲಿಸಬೇಕು’ ಎಂದು ಸೂಚಿಸಿದ್ದಾರೆ. ಚಿರತೆಗಳ ಅನುಮಾನಾಸ್ಪದ ಸಾವಿನ ಕುರಿತು ವನ್ಯಜೀವಿ ಸಂರಕ್ಷಣಾವಾದಿ ಗಿರಿಧರ್ ಕುಲಕರ್ಣಿ ದೂರು ನೀಡಿದ್ದರು.

‘ಪಾಲಿಕೆ ನೌಕರರ ಬೇಡಿಕೆ ಈಡೇರಿಕೆ’

ಬೆಂಗಳೂರು: ರಾಜ್ಯದ 10 ನಗರ ಪಾಲಿಕೆಗಳ ನೌಕರರ ಬೇಡಿಕೆ ಈಡೇರಿಸುವುದಾಗಿ ನಗರಾಭಿವೃದ್ಧಿ ಸಚಿವ ಬಿ.ಎಸ್. ಸುರೇಶ್ ಅವರು ಹೇಳಿದರು.

ರಾಜ್ಯ ಮಹಾನಗರ ಪಾಲಿಕೆಗಳ ಸಂಘದ ಪದಾಧಿಕಾರಿಗಳೊಂದಿಗೆ ಸಚಿವರು ಮಂಗಳವಾರ ನಡೆಸಿದ ಸಂಧಾನ ಸಭೆ ಯಶಸ್ವಿಯಾಗಿದ್ದು, ನೌಕರರು ಜುಲೈ 8ರಿಂದ ನಡೆಸುತ್ತಿದ್ದ ಅನಿರ್ದಿಷ್ಟಾವಧಿ ಮುಷ್ಕರವನ್ನು ವಾಪಸ್ ಪಡೆದರು.

ಮಹಾನಗರ ಪಾಲಿಕೆಗಳ ಸಾಮಾನ್ಯ ನೇಮಕಾತಿ ನಿಯಮಗಳಿಗೆ ತಿದ್ದುಪಡಿ, ನೌಕರರನ್ನು ಪೂರ್ಣ ಪ್ರಮಾಣದಲ್ಲಿ ಸರ್ಕಾರಿ ನೌಕರರೆಂದು ಪರಿಗಣಿಸುವುದು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ (ಕೆಜಿಐಡಿ), ಸಮೂಹ ವಿಮೆ ಯೋಜನೆ (ಜಿಐಎಸ್) ಮತ್ತು ಸಮೂಹ ಭವಿಷ್ಯ ನಿಧಿ (ಜಿಪಿಎಫ್) ಸೌಲಭ್ಯಗಳನ್ನು ನೀಡಬೇಕು ಎಂಬ ಬೇಡಿಕೆಗಳಿಗೆ ಸ್ಪಂದಿಸಿದ ಸಚಿವರು, ಎಲ್ಲವನ್ನೂ ಈಡೇರಿಸುವುದಾಗಿ ಭರವಸೆ ನೀಡಿದರು.

ಪಾಲಿಕೆ ನೌಕರರಿಗೆ ಸಕಾಲಕ್ಕೆ ವೇತನ ನೀಡುವುದು, ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರುವ ಕುರಿತು ಆರ್ಥಿಕ ಇಲಾಖೆ ಅನುಮೋದನೆ ಪಡೆಯುವಂತೆ ನಗರಾಭಿವೃದ್ಧಿ ಇಲಾಖೆ ಅಧಿಕಾರಿಗಳಿಗೆ ಸಚಿವರು ಸೂಚನೆ ನೀಡಿದರು.

‘ಪೌರಾಡಳಿತ ಆಯುಕ್ತರ ಹುದ್ದೆ ಸೃಜಿಸಲು ಆರ್ಥಿಕ ಇಲಾಖೆ ಅಭಿಪ್ರಾಯ ಪಡೆದು ಕ್ರಮ ಕೈಗೊಳ್ಳಲಾಗುತ್ತದೆ. ಪಾಲಿಕೆಗಳಲ್ಲಿ ಪರಿಸರ ಎಂಜಿನಿಯರ್‌ಗಳ ಹುದ್ದೆ ಭರ್ತಿಗೆ ಅನುಮೋದನೆ ಪಡೆಯಲಾಗುತ್ತದೆ. ಸರ್ಕಾರಿ ನೌಕರರ ಮಾದರಿಯಲ್ಲಿ ಪಾಲಿಕೆ ನೌಕರರಿಗೂ ಜಿಐಎಸ್ ಜಾರಿಗೆ ತರಲಾಗುತ್ತದೆ’ ಎಂದು ಸುರೇಶ್ ತಿಳಿಸಿದರು.

‘ಜ್ಯೋತಿ ಸಂಜೀವಿನಿ’ ಆರೋಗ್ಯ ವಿಮೆಯನ್ನು ಪಾಲಿಕೆ ನೌಕರರಿಗೂ ವಿಸ್ತರಣೆ ಮಾಡಲಾಗುತ್ತದೆ. ನೌಕರರ ಚಿಕಿತ್ಸಾ ವೆಚ್ಚವನ್ನು ಮಂಜೂರು ಮಾಡುವ ಅಧಿಕಾರವನ್ನು ಆಯಾ ಪಾಲಿಕೆ ಆಯುಕ್ತರಿಗೆ ನೀಡಲು ನಿರ್ಧರಿಸಲಾಗಿದೆ’ ಎಂದರು.

ಸಚಿವರು ಭರವಸೆ ನೀಡಿದ ನಂತರ, ರಾಜ್ಯ ಮಹಾನಗರ ಪಾಲಿಕೆಗಳ ನೌಕರರ ಸಂಘದ ಅಧ್ಯಕ್ಷ ಎ. ಅಮೃತರಾಜ್ ಮತ್ತು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಷಡಾಕ್ಷರಿ ನೇತೃತ್ವದಲ್ಲಿ ಪಾಲಿಕೆ ಸಂಘಗಳ ಪದಾಧಿಕಾರಿಗಳು ‘ಮುಷ್ಕರ ವಾಪಸ್ ಪಡೆದಿದ್ದೇವೆ’ ಎಂದು ಘೋಷಿಸಿ, ಸುರೇಶ್ ಅವರನ್ನು ಸನ್ಮಾನಿಸಿದರು.

ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ: ರಣದೀಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲವು ಶಾಸಕರು ವ್ಯಕ್ತಪಡಿಸಿದ್ದ ಅಸಮಾಧಾನ, ಆರೋಪಗಳನ್ನು 11 ಸಚಿವರ ಜೊತೆ ಮಂಗಳವಾರ ಹಂಚಿಕೊಂಡ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಪಕ್ಷದ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡುವಂತೆ ಸಲಹೆ ನೀಡಿದ್ದಾರೆ.

ಸಚಿವರಾದ ಸತೀಶ ಜಾರಕಿಹೊಳಿ, ಎಸ್.ಎಸ್. ಮಲ್ಲಿಕಾರ್ಜುನ್, ಮಧು ಬಂಗಾರಪ್ಪ, ದಿನೇಶ್ ಗುಂಡೂರಾವ್, ಪ್ರಿಯಾಂಕ್ ಖರ್ಗೆ, ಲಕ್ಷ್ಮೀ ಹೆಬ್ಬಾಳಕರ, ಶರಣಪ್ರಕಾಶ್ ಪಾಟೀಲ, ಎನ್.ಎಸ್. ಬೋಸರಾಜು, ಸಂತೋಷ್ ಲಾಡ್, ಕೆ. ವೆಂಕಟೇಶ್, ಡಿ. ಸುಧಾಕರ್ ಜೊತೆ ಸುರ್ಜೇವಾಲಾ ಚರ್ಚೆ ನಡೆಸಿದರು. ಇಲಾಖೆಗಳ ಕಾರ್ಯವೈಖರಿ, ಹೊಸ ಯೋಜನೆಗಳು, ಶಾಸಕರ ಆರೋಪಗಳ ಕುರಿತು ಸಚಿವರ ಜೊತೆ ವಿಚಾರ ವಿನಿಮಯ ನಡೆಸಿದರು.

ಶಾಸಕರಾದ ಶರತ್ ಬಚ್ಚೇಗೌಡ, ಖನೀಜ್ ಫಾತಿಮಾ ಮತ್ತು ಪಿ.ಎಂ. ನರೇಂದ್ರಸ್ವಾಮಿ ಕೂಡಾ ಸುರ್ಜೇವಾಲಾ ಅವರನ್ನು ಭೇಟಿ ಮಾಡಿದರು.

ಸುರ್ಜೇವಾಲಾ ಅವರನ್ನು ಭೇಟಿ ಮಾಡಿದ ಬಳಿಕ ಮಾತನಾಡಿದ ಸತೀಶ ಜಾರಕಿಹೊಳಿ, ‘ಶಾಸಕರು ಆರೋಪ ಮಾಡಿದ ಕಾರಣಕ್ಕೆ ಸಚಿವರ ಜೊತೆ ಅವರು ಸಭೆ ನಡೆಸಿದ್ದಾರೆ. ನಮ್ಮ ಇಲಾಖೆಯ ಚಟುವಟಿಕೆ ಬಗ್ಗೆ ಮಾಹಿತಿ ನೀಡಿದ್ದೇವೆ. ಯಾವ್ಯಾವ ಕ್ಷೇತ್ರಕ್ಕೆ ಎಷ್ಟೆಷ್ಟು ಕೊಟ್ಟಿದ್ದೇವೆ ಎಂದೂ ತಿಳಿಸಿದ್ದೇವೆ. ಶಾಸಕರ ಒಂದೆರಡು ಬೇಡಿಕೆಗಳನ್ನು ಈಡೇರಿಸಿಲ್ಲ ಅಷ್ಟೆ. ನಮ್ಮನ್ನು ಅವರು ಮೌಲ್ಯಮಾಪನ ಮಾಡಿಲ್ಲ’ ಎಂದರು.

‘ನಮ್ಮ ತಪ್ಪುಗಳನ್ನು ಹೇಳಿದರೆ ಅಲ್ಲವೇ ಗೊತ್ತಾಗುವುದು. ಕೆಲವು ಶಾಸಕರು ಬಹಿರಂಗವಾಗಿ ಅಸಮಾಧಾನ ತೋಡಿಕೊಂಡಿದ್ದಾರೆ. ಅದನ್ನು ತಡೆಯಬೇಕಲ್ಲವೇ. ಕ್ಯಾನ್ಸರ್ ಬರುವ ಮೊದಲೇ ಎಚ್ಚೆತ್ತುಕೊಳ್ಳಬೇಕಲ್ಲವೇ’ ಎಂದೂ ಹೇಳಿದರು.

‘ಎರಡು ವರ್ಷದ ಸಾಧನೆ ಬಗ್ಗೆ ಸುರ್ಜೇವಾಲಾ ಅವರಿಗೆ ವಿವರಿಸಿದ್ದೇನೆ. ಹೊಸ ಯೋಜನೆ ಬಗ್ಗೆಯೂ ಅವರಿಗೆ ಮಾಹಿತಿ ನೀಡಿದ್ದೇನೆ. ಕೆಲವು ಶಾಸಕರ ಬೇಡಿಕೆಗಳ ಬಗ್ಗೆ ಚರ್ಚೆ ನಡೆಯಿತು’ ಎಂದು ಸಂತೋಷ್ ಲಾಡ್ ತಿಳಿಸಿದರು.

ಇಲಾಖೆ ಬಗ್ಗೆ ಖುಷಿ: ಮಧು ಬಂಗಾರಪ್ಪ

‘ನನ್ನ ಇಲಾಖೆ ಬಗ್ಗೆ ಸುರ್ಜೇವಾಲಾ ಅವರು ಬಹಳ ಖುಷಿಪಟ್ಟಿದ್ದಾರೆ. ಕೊಟ್ಟಿದ್ದ ಗುರಿಗಿಂತ ಹೆಚ್ಚು ಕೆಲಸ ಮಾಡುತ್ತಿದ್ದೇನೆ’ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಸುರ್ಜೇವಾಲಾ ಭೇಟಿ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ನಮ್ಮ ಇಲಾಖೆಯಲ್ಲಿ ಸಂವಿಧಾನ ಪೀಠಿಕೆ ಕಾರ್ಯಕ್ರಮ, ಅಕ್ಷರ ಆವಿಷ್ಕಾರಕ್ಕೆಂದು ₹5 ಕೋಟಿ ವಿಶೇಷ ಅನುದಾನ ಲಭ್ಯವಿದೆ. ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ 3 ಹಂತದ ಪರೀಕ್ಷಾ ಪದ್ಧತಿ ಜಾರಿಗೆ ತಂದಿದ್ದು, ಈ ವಿಧಾನವನ್ನು ಸುರ್ಜೇವಾಲಾ ತುಂಬಾ ಇಷ್ಟಪಟ್ಟರು’ ಎಂದು ಅವರು ಹೇಳಿದರು.

ಕಾಮೆಡ್‌–ಕೆ: 18ರಿಂದ ಸೀಟು ಹಂಚಿಕೆ

ಬೆಂಗಳೂರು: ಕರ್ನಾಟಕದ ವೈದ್ಯಕೀಯ ಎಂಜಿನಿಯರಿಂಗ್ ಮತ್ತು ದಂತ ಕಾಲೇಜುಗಳ ಒಕ್ಕೂಟ (ಕಾಮೆಡ್‌–ಕೆ) ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿನ ವಿವಿಧ ಕೋರ್ಸ್‌ಗಳ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಜುಲೈ 18ರಿಂದ ಆರಂಭಿಸುತ್ತಿದೆ.

ಕಾಮೆಡ್‌–ಕೆ ಪ್ರವೇಶಕ್ಕೆ ಅರ್ಹತೆ ಪಡೆದಿರುವ ವಿದ್ಯಾರ್ಥಿಗಳು ಕಾಲೇಜು ಮತ್ತು ಕೋರ್ಸ್‌ಗಳನ್ನು ನಮೂದಿಸಲು (ಚಾಯ್ಸ್) ಜುಲೈ 20ರವರೆಗೆ ಅವಕಾಶ ನೀಡಲಾಗಿದೆ. 22ರಂದು ಅಣಕು ಸೀಟು ಹಂಚಿಕೆ ಪಟ್ಟಿ ಪ್ರಕಟಿಸಲಾಗುತ್ತದೆ. 24ರವರೆಗೆ ತಿದ್ದುಪಡಿ ಮಾಡಿಕೊಳ್ಳಬಹುದು. 28ರಂದು ಅಂತಿಮ ಪಟ್ಟಿ ಪ್ರಕಟಿಸಲಾಗುತ್ತದೆ. ಆಗಸ್ಟ್ 4 ಒಳಗೆ ಆಯ್ಕೆ ಮಾಡಿಕೊಂಡ ಕಾಲೇಜುಗಳಿಗೆ ಪ್ರವೇಶ ಪಡೆಯಬೇಕು ಎಂದು ಹೇಳಿದೆ.

ಕರ್ನಾಟಕದ 150 ಎಂಜಿನಿಯರಿಂಗ್ ಕಾಲೇಜುಗಳು ಹಾಗೂ ವಿವಿಧ ರಾಜ್ಯಗಳ 50ಕ್ಕೂ ಹೆಚ್ಚು ಖಾಸಗಿ ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿ ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕೆ ಮೇ 12ರಂದು ಪರೀಕ್ಷೆ ನಡೆಸಲಾಗಿತ್ತು. ಕರ್ನಾಟಕದ 35,124 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 1,03,799 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು.

ಉದ್ಯೋಗ ವಾಣಿ

65 ಸಾವಿರ ವರ್ತಕರಿಂದ ಯುಪಿಐ ಬಳಕೆ

ವಾಣಿಜ್ಯ ತೆರಿಗೆ ಇಲಾಖೆ ಕಾರ್ಯಾಚರಣೆ
ಒಂದೇ ಅಂಗಡಿಯಲ್ಲಿ 9 ಯುಪಿಐ ಐಡಿ ಬಳಕೆ

• ಜಯಸಿಂಹ ಆರ್.

ಪ್ರಜಾವಾಣಿ ವಿಶೇಷ

ಬೆಂಗಳೂರು: ಒಂದೇ ಅಂಗಡಿಯಲ್ಲಿ ಹಲವು ಯುಪಿಐ ಐಡಿಗಳನ್ನು ಬಳಸಿ ಕೊಂಡು ಹಣ ಪಡೆಯುತ್ತಿರುವವರ ಮಾಹಿತಿಯನ್ನು ವಾಣಿಜ್ಯ ತೆರಿಗೆ ಇಲಾಖೆ ಕಲೆ ಹಾಕಿದೆ. ಜಿಎಸ್‌ಟಿ ಪಾವತಿಸುವಂತೆ ಅವರಿಗೆ ನೋಟಿಸ್ ನೀಡುವ ಸಂಬಂಧ ಕಾನೂನು ಸಲಹೆ ಕೇಳಿದೆ.

ಯುಪಿಐ ಮೂಲಕ ವರ್ಷವೊಂದರಲ್ಲಿ ₹40 ಲಕ್ಷಕ್ಕಿಂತ ಹೆಚ್ಚು ಆದಾಯ ಗಳಿಸಿದ ಬೇಕರಿ, ಹೋಟೆಲ್, ಬೀಡಾ ಅಂಗಡಿ, ಟೀ–ಅಂಗಡಿ ಮಾಲೀಕರಿಗೆ ವಾಣಿಜ್ಯ ತೆರಿಗೆ ಇಲಾಖೆಯು ಈಚೆಗೆ ನೋಟಿಸ್ ನೀಡಿದ್ದು, ಜಿಎಸ್‌ಟಿಗೆ ನೋಂದಾಯಿಸಿ ಎಂದು ಸೂಚಿಸಿದೆ. ಜಿಎಸ್‌ಟಿ ಕಟ್ಟಿ ಎಂದೂ ಹಲವರಿಗೆ ಸೂಚಿಸಿದೆ.

ರಾಜ್ಯದಲ್ಲಿ ಯುಪಿಐ ಮೂಲಕ ಹಣ ಪಡೆಯುತ್ತಿರುವ ಸುಮಾರು 65,000 ವರ್ತಕರ ಮಾಹಿತಿಯನ್ನು ಯುಪಿಐ ಪ್ಲಾಟ್‌ಫಾರ್ಮ್‌ಗಳಿಂದ ವಾಣಿಜ್ಯ ತೆರಿಗೆ ಇಲಾಖೆ ಪಡೆದುಕೊಂಡಿದೆ.

‘ಒಂದೇ ವಿಳಾಸದಲ್ಲಿ ನೋಂದಣಿಯಾಗಿರುವ ಹಲವು ಪ್ಯಾನ್ ಸಂಖ್ಯೆಗಳು ದೊರೆತಿದ್ದು, ಆ ಪ್ಯಾನ್ ಇರುವ ಬ್ಯಾಂಕ್ ಖಾತೆಗಳಿಗೆ ಯುಪಿಐ ಮೂಲಕ ನಿರಂತರವಾಗಿ ಹಣ ವರ್ಗಾವಣೆಯಾಗಿವೆ’ ಎಂದು ಇಲಾಖೆಯ ಜಂಟಿ ಆಯುಕ್ತರೊಬ್ಬರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

‘ತೆರಿಗೆ ಅಧಿಕಾರಿಗಳ ಕಣ್ಣುತಪ್ಪಿಸುವ ಉದ್ದೇಶದಿಂದ ಹಲವರು ತಮ್ಮ ಕುಟುಂಬದವರ ಹೆಸರಿನಲ್ಲಿರುವ ಹಲವು ಯುಪಿಐ ಐಡಿಗಳನ್ನು ಬಳಸಿಕೊಂಡು, ಹಣ ಪಡೆದುಕೊಂಡಿದ್ದಾರೆ. ಬೆಂಗಳೂರಿನ ಬಳೇಪೇಟೆಯ ವಿಳಾಸದಲ್ಲಿ ಇರುವ ಒಂದು ಅಂಗಡಿಯಲ್ಲಿ 9 ಯುಪಿಐ ಐಡಿಗಳನ್ನು ಬಳಸಿಕೊಂಡಿದ್ದು, ಪ್ರತಿಯೊಂದರಲ್ಲೂ ₹20 ಲಕ್ಷಕ್ಕಿಂತ ಹೆಚ್ಚು ಪಡೆಯಲಾಗಿದೆ’ ಎಂದು ಮಾಹಿತಿ ನೀಡಿದರು.

‘ಈ ರೀತಿ ಭಿನ್ನ ಯುಪಿಐ ಐಡಿಗಳಲ್ಲಿ ಹಣ ಪಡೆದವರಿಗೆ ಈವರೆಗೆ ನೋಟಿಸ್ ನೀಡಿಲ್ಲ. ಆದರೆ ಅವರನ್ನೂ ಜಿಎಸ್‌ಟಿ ವ್ಯಾಪ್ತಿಗೆ ತಂದು, ತೆರಿಗೆ ವಿಧಿಸುವ ವಿಧಾನ ಹೇಗೆ ಎಂಬುದರ ಬಗ್ಗೆ ಕಾನೂನು ಸಲಹೆ ಪಡೆಯಲಾಗುತ್ತಿದೆ. ಆನಂತರ ಅಗತ್ಯ ಕ್ರಮ ತೆಗೆದುಕೊಳ್ಳುತ್ತೇವೆ’ ಎಂದು ತಿಳಿಸಿದರು.

‘ಗುಜರಾತ್‌ನಿಂದ ಆರಂಭ’

‘ಯುಪಿಐ ಮೂಲಕ ಹಣ ಪಡೆಯುತ್ತಿರುವ ಸಣ್ಣ ವರ್ತಕರ ಮಾಹಿತಿಯನ್ನು ಕಲೆಹಾಕಿ, ಅವರಿಗೆ ನೋಟಿಸ್ ನೀಡುವ ಕಾರ್ಯಾಚರಣೆಯನ್ನು 2024ರ ಆಗಸ್ಟ್‌ನಲ್ಲಿ ಗುಜರಾತ್‌ನಲ್ಲಿ ಆರಂಭಿಸಲಾಗಿತ್ತು. ಆನಂತರ ಆ ರಾಜ್ಯದಲ್ಲಿ ಜಿಎಸ್‌ಟಿ ಸಂಗ್ರಹ ಪ್ರಮಾಣ ಏರಿಕೆಯಾಯಿತು. ಅದರ ಬೆನ್ನಲ್ಲೇ ಬೇರೆ ರಾಜ್ಯಗಳಲ್ಲೂ ಇದೇ ಮಾದರಿ ಅನುಸರಿಸಲಾಗುತ್ತಿದೆ’ ಎಂದು ವಾಣಿಜ್ಯ ತೆರಿಗೆ ಇಲಾಖೆಯ ಮೂಲಗಳು ತಿಳಿಸಿವೆ.

‘ಉತ್ತರ ಪ್ರದೇಶ, ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶದಲ್ಲಿ ಈಗಾಗಲೇ ಸಾವಿರಾರು ಮಂದಿಗೆ ಈ ರೀತಿಯ ನೋಟಿಸ್ ನೀಡಲಾಗಿದೆ. ರಾಜ್ಯದಲ್ಲೂ ಹೆಚ್ಚಿನ ಜನರನ್ನು ತೆರಿಗೆ ವ್ಯಾಪ್ತಿಗೆ ತರಲು ಈ ಮಾದರಿ ಅನುಸರಿಸಲಾಗುತ್ತಿದೆ. ಅತಿಹೆಚ್ಚು ವಹಿವಾಟು ನಡೆಸಿಯೂ ತೆರಿಗೆ ಪಾವತಿಸದವರನ್ನು ಪತ್ತೆ ಮಾಡಿ, ತೆರಿಗೆ ವಂಚನೆಯನ್ನು ತಪ್ಪಿಸುವುದು ಈ ಕಾರ್ಯಾಚರಣೆಯ ಉದ್ದೇಶ’ ಎಂದು ವಿವರಿಸಿವೆ.

5,684 ಮಂದಿಗೆ ನೋಟಿಸ್

‘ಆರ್ಥಿಕ ವರ್ಷವೊಂದರಲ್ಲಿ ಯುಪಿಐ ಮೂಲಕ ₹40 ಲಕ್ಷಕ್ಕಿಂತ ಹೆಚ್ಚು ಹಣ ಪಡೆದ ಸುಮಾರು 15,000 ಮಂದಿಯ ವಿವರ ದೊರೆತಿದೆ. ಮಂಗಳವಾರ ದವರೆಗೆ ಅವರಲ್ಲಿ 5,864 ಮಂದಿಗೆ ನೋಟಿಸ್ ಜಾರಿ ಮಾಡಲಾಗಿದೆ. ಹಲವರಿಗೆ ಜಿಎಸ್‌ಟಿ ಕಟ್ಟಿ ಎಂದು ಸೂಚಿಸಿದ್ದರೆ, ಕೆಲವರಿಗೆ ವಿವರಣೆ ನೀಡಿ ಎಂದು ಸೂಚಿಸಲಾಗಿದೆ’ ಎಂದು ವಾಣಿಜ್ಯ ತೆರಿಗೆ ಇಲಾಖೆಯ ಮೂಲಗಳು ಖಚಿತಪಡಿಸಿವೆ.

‘ಈ ಮಾಹಿತಿಯನ್ನು ಯುಪಿಐ ಪ್ಲಾಟ್‌ಫಾರ್ಮ್‌ಗಳ ಮೂಲಕ ಪಡೆದುಕೊಂಡಿದ್ದು, ಕೆಲವರ ಹಣ ವರ್ಗಾವಣೆ ವಿವರ ನೀಡುವಂತೆ ಬ್ಯಾಂಕ್‌ಗಳನ್ನು ಕೋರಲಾಗಿದೆ. ಆ ಮಾಹಿತಿ ದೊರೆತ ನಂತರ, ಎರಡನೇ ಹಂತದಲ್ಲಿ ಉಳಿದವರಿಗೂ ನೋಟಿಸ್ ಜಾರಿ ಮಾಡಲಾಗುತ್ತದೆ’ ಎಂದು ತಿಳಿಸಿವೆ.

ಮುಳ್ಳಯ್ಯನಗಿರಿ 600 ವಾಹನಕ್ಕೆ ಮಾತ್ರ ಅವಕಾಶ

ಚಿಕ್ಕಮಗಳೂರು: ಮುಳ್ಳಯ್ಯನಗಿರಿ ಸೇರಿ ಚಂದ್ರದ್ರೋಣ ಪರ್ವತ ಶ್ರೇಣಿಯಲ್ಲಿ ಪ್ರವಾಸಿಗರ ದಟ್ಟಣೆ ನಿವಾರಿಸಲು ಏಕಕಾಲಕ್ಕೆ 600 ವಾಹನಗಳಿಗೆ, ದಿನಕ್ಕೆ 1200 ವಾಹನಗಳಿಗಷ್ಟೇ ಅವಕಾಶ ನೀಡಲು ಜಿಲ್ಲಾಡಳಿತ ನಿರ್ಧರಿಸಿದೆ.

ವಾರಾಂತ್ಯದಲ್ಲಿ 3 ಸಾವಿರಕ್ಕೂ ಹೆಚ್ಚು ವಾಹನಗಳು ತೆರಳುತ್ತಿದ್ದು, ದಟ್ಟಣೆ ಹೆಚ್ಚಿತ್ತು.ಈ ಕಾರಣದಿಂದ ಜಿಲ್ಲಾಧಿಕಾರಿ ಮೀನಾ ನಾಗರಾಜ್ ಅಧ್ಯಕ್ಷತೆಯಲ್ಲಿ ನಡೆದ ಸಭೆ ಈ ನಿರ್ಧಾರ ಕೈಗೊಂಡಿದೆ.


‘ತಲಾ 100 ಬೈಕ್, ಟ್ಯಾಕ್ಸಿ, 50 ಟೆಂಪೊ ಟ್ರಾವೆಲರ್‌ಗಳಿಗೆ ಅವಕಾಶ ಸಿಗಲಿದೆ. ವೆಬ್‌ಸೈಟ್ ರೂಪಿಸಲಿದ್ದು, ವಾರದಲ್ಲಿ ವ್ಯವಸ್ಥೆ ಜಾರಿಗೆ ಬರಲಿದೆ. ಮೊದಲು ನೋಂದಣಿ ಆದ ವಾಹನಗಳಿಗೆ ಅವಕಾಶ’ ಎಂದು ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಎಂ.ಆರ್. ಲೋಹಿತ್ ತಿಳಿಸಿದರು.

ಸುದ್ದಿ 2 ನಿಮಿಷ

‘ಶರಾವತಿ ಪಂಪ್ಡ್ ಸ್ಟೋರೇಜ್ 34 ಹೆಕ್ಟೇರ್ ಅರಣ್ಯ ಬಳಕೆ’

ಶಿವಮೊಗ್ಗ: ‘ಸ್ವಾಧೀನವಾಗುವ ಅರಣ್ಯಕ್ಕೆ ಬದಲಿ ಜಮೀನು ಒದಗಿಸಲು ಕರ್ನಾಟಕ ವಿದ್ಯುತ್ ನಿಗಮಕ್ಕೆ (ಕೆಪಿಸಿ) ಷರತ್ತು ವಿಧಿಸಿ ₹ 8,644 ಕೋಟಿ ವೆಚ್ಚದಲ್ಲಿ ಶರಾವತಿ ಪಂಪ್ಡ್ ಸ್ಟೋರೇಜ್ ನಿರ್ಮಿಸಲು ರಾಜ್ಯ ಸರ್ಕಾರ ಅನುಮತಿ ನೀಡಿದೆ’ ಎಂದು ಸಾಗರ ಶಾಸಕ ಬೇಳೂರು ಗೋಪಾಲಕೃಷ್ಣ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು, ‘ಪಂಪ್ಡ್ ಸ್ಟೋರೇಜ್ ಯೋಜನೆಗೆ 7 ಕಿ.ಮೀ ಅಂತರದ 10 ಮೀಟರ್ ವ್ಯಾಸದ ಕಾಂಕ್ರೀಟ್ ಸುರಂಗ ಮಾರ್ಗ ನಿರ್ಮಾಣ ಆಗಲಿದ್ದು, ಶೀಘ್ರ ಕಾಮಗಾರಿ ಆರಂಭ ಆಗಲಿದೆ. 34 ಹೆಕ್ಟೇರ್ ಅರಣ್ಯ ಭೂಮಿ 140 ಎಕರೆ ಕಂದಾಯ ಭೂಮಿ ಬಳಕೆಯಾಗುತ್ತಿದೆ’ ಎಂದರು.



‘ಸಾಗರ ತಾಲ್ಲೂಕಿನ ಹೆನ್ನೆ ಭಾಗದಲ್ಲಿ ರೈತರ 8.32 ಎಕರೆ ಮಾತ್ರ ಸ್ವಾಧೀನ ಆಗಲಿದೆ. ಈಗಾಗಲೇ ಅವರೊಂದಿಗೆ ಮಾತುಕತೆ ನಡೆಸಿ ಪರಿಹಾರ ಪಡೆಯಲು ಒಪ್ಪಿಸಿದ್ದೇವೆ. ಸಂತ್ರಸ್ತರ ಕುಟುಂಬದವರಿಗೆ ಕೆಪಿಸಿಯಲ್ಲಿ ಉದ್ಯೋಗ ನೀಡಲಾಗುತ್ತದೆ. ಈ ಯೋಜನೆಯಿಂದ ಪರಿಸರ ನಾಶವಾಗಲಿದೆ ಎಂಬ ವೃಥಾ ಆರೋಪ ಸಲ್ಲ. ಕೇಂದ್ರ ಸರ್ಕಾರದ ಹೆದ್ದಾರಿ ಯೋಜನೆಗಳಲ್ಲಿ ಸಾವಿರಾರು ಮರಗಳು ಬಲಿ ಆಗಿವೆ. ಅದನ್ನು ಕಂಡೂ ಪರಿಸರವಾದಿಗಳು ಏಕೆ ಕಣ್ಣು ಮುಚ್ಚಿ ಕುಳಿತಿದ್ದಾರೆ’ ಎಂದು ಅವರು ಪ್ರಶ್ನಿಸಿದರು.

‘ವಸತಿಗೃಹಗಳ ಜಾಗದ ವಿವಾದ ಇತ್ಯರ್ಥ: ಆಂಧ್ರ ಸಿ.ಎಂ.ಗೆ ಮನವಿ’

ಮಂತ್ರಾಲಯ (ರಾಯಚೂರು): ‘ಧಾರ್ಮಿಕ ದತ್ತಿ ಇಲಾಖೆಯು ಮಂತ್ರಾಲಯ, ಶ್ರೀಶೈಲ, ತಿರುಪತಿಯಲ್ಲಿ ನಿರ್ಮಿಸಿರುವ ವಸತಿಗೃಹಗಳ ಜಾಗದ ವಿವಾದ ಇತ್ಯರ್ಥಪಡಿಸಲು ಆಂಧ್ರಪ್ರದೇಶದ ಮುಖ್ಯಮಂತ್ರಿಗೆ ಮನವಿ ಮಾಡಲಾಗಿದೆ’ ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಮಂತ್ರಾಲಯಕ್ಕೆ ಭೇಟಿ ನೀಡಿ ರಾಘವೇಂದ್ರ ಸ್ವಾಮಿಗಳ ದರ್ಶನ ಪಡೆದು, ಮಂತ್ರಾಲಯದ ಕರ್ನಾಟಕ ಛತ್ರದಲ್ಲಿ ಇಲಾಖೆಯಿಂದ ನಿರ್ಮಿಸಿರುವ ನೂತನ ಹಾಗೂ ಹಳೆ ಕಟ್ಟಡಗಳ ಪರಿಶೀಲನೆ ನಡೆಸಿದ ನಂತರ ಅವರು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು.

‘ಹಿಂದೆ ಸರಿಯಾಗಿ ಪತ್ರವ್ಯವಹಾರ ಮಾಡದೇ ಮೌಖಿಕ ಒಪ್ಪಿಗೆ ಆಧಾರದಲ್ಲಿ ಕಲ್ಯಾಣ ಮಂಟಪ, ಛತ್ರ, ವಸತಿ ಗೃಹಗಳನ್ನು ನಿರ್ಮಿಸಲಾಗಿದೆ. ಕೆಲವರು ಕೋರ್ಟ್ ಮೊರೆ ಹೋಗಿದ್ದಾರೆ. ಇದರಿಂದ ಕಟ್ಟಡದ ದುರಸ್ತಿಗೆ ತೊಡಕಾಗಿದೆ’ ಎಂದು ತಿಳಿಸಿದರು.

‘ಮಂತ್ರಾಲಯ, ಶ್ರೀಶೈಲಂ ಹಾಗೂ ತಿರುಪತಿ ಸೇರಿದಂತೆ ವಿವಿಧೆಡೆ ವಿವಾದದಿಂದ ಕೂಡಿರುವ ಜಾಗದ ಸಮಸ್ಯೆಯನ್ನು ಬೇಗನೆ ಇತ್ಯರ್ಥ ಪಡಿಸಬೇಕು ಎಂದು ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರೂ ಆಯಾ ದತ್ತಿ ಸಂಸ್ಥೆಗಳಿಗೆ ಪತ್ರ ಬರೆದಿದ್ದಾರೆ’ ಎಂದು ತಿಳಿಸಿದರು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)


ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	122.62	15,062	13,314
ಹಾರಂಗಿ	2,859	2,854.91	4,971	1,500
ಕಬಿನಿ	2,284.00	2,281.31	10,158	12,000
ಹೇಮಾವತಿ	2,922	2,922	12,539	11,690
ಲಿಂಗನಮಕ್ಕಿ	1,819	1,801.10	31,484	5,645
ಸೂಪಾ (ಮೀ)	564	544.94	17,018.10	5,572.61
ಮಾಣಿ	595	587.08	3,856	-
ತುಂಗಭದ್ರಾ	1,633	1,625.80	37,327	25,025
ಮಲಪ್ರಭಾ	2,079.5	2,071.05	2,111	194
ಘಟಪ್ರಭಾ	2175	2,168.13	9,229	788
ಭದ್ರಾ *	186	176.4	8,022	3,589
ಆಲಮಟ್ಟಿ (ಮೀ)	519.6	517.96	42,577	23,318
ನಾರಾಯಣಪುರ (ಮೀ)	492.25	491.52	25,000	12,000

* ನೆಲಮಟ್ಟದಿಂದ

ಚಿಟಿಕೆ ಸುದ್ದಿ

ಬಸವಜಯ ಮೃತ್ಯುಂಜಯ ಶ್ರೀ ಪೀಠ ಪ್ರವೇಶ

ಕೂಡಲಸಂಗಮ (ಬಾಗಲಕೋಟೆ): ಇಲ್ಲಿನ ಪಂಚಮಸಾಲಿ ಪೀಠಕ್ಕೆ ಮಂಗಳವಾರ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಭೇಟಿ ನೀಡಿ, ಭಕ್ತರೊಂದಿಗೆ ಸಭೆ ನಡೆಸಿದರು. ಅವರ ಬರುವಿಕೆಗೂ ಮೊದಲೇ ಪೀಠದ ಕಟ್ಟಡದ ಗೇಟ್ ಬೀಗ ತೆರೆಯಲಾಗಿತ್ತು.



ಬಸವಜಯ ಮೃತ್ಯುಂಜಯ ಸ್ವಾಮೀಜಿ

ಇದಕ್ಕೆ ಮುನ್ನ ಹುನಗುಂದದಲ್ಲಿ ಮಾತನಾಡಿದ ಅವರು, ‘ಪೀಠದ ಬಗ್ಗೆ ಅಪಪ್ರಚಾರ ನಿಲ್ಲಲಿ. ಮಠಕ್ಕೆ ಬೀಗ ಪರಿಹಾರವಲ್ಲ. ಭಕ್ತರ ಮನೆಗಳೇ ನನ್ನ ಪೀಠ. ನಾಲ್ಕು ಗೋಡೆಗಳ ಮಠ ಕಟ್ಟಿರುವೆ. ಅಲ್ಲೇ ನನ್ನ ಉಳಿವು, ಅಳಿವು. ಅಂತ್ಯವೂ ಅಲ್ಲಿಯೇ ಆಗಲಿ’ ಎಂದು ಹೇಳಿದರು.

‘ಸಮಾಜದ ಯಾವುದೇ ವ್ಯಕ್ತಿಗೆ ಅನ್ಯಾಯ ಆದರೂ ಹೋರಾಟ ಮಾಡಿದ್ದೇನೆ. ಮಾಜಿ ಮುಖ್ಯಮಂತ್ರಿಗಳಾದ ಯಡಿಯೂರಪ್ಪ ₹1 ಕೋಟಿ, ಸದಾನಂದಗೌಡ ₹50 ಲಕ್ಷ ನೀಡಿದ್ದಾರೆ. ಸಂಘಟನೆ ಫಲ ಅಜ್ಞಾನಿಗಳ ಪಾಲಾಗಬಾರದು. ದುಡಿಯುವ ಕಟ್ಟಕಡೆಯ ವ್ಯಕ್ತಿಗೆ ಸೇರಬೇಕು’ ಎಂದು ಹೇಳಿದರು.

ಬಿಸಿಯೂಟ ಸೇವಿಸಿ 70 ಮಕ್ಕಳು ಅಸ್ವಸ್ಥ

ಜೇವರ್ಗಿ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಮಾರಡಗಿ ಎಸ್.ಎ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಮಂಗಳವಾರ ಬಿಸಿಯೂಟ ಸೇವಿಸಿ 70ಕ್ಕೂ ಅಧಿಕ ಮಕ್ಕಳು ಅಸ್ವಸ್ಥಗೊಂಡರು.

ಮಕ್ಕಳಿಗೆ ವಾಂತಿ, ಜ್ವರ ಕಾಣಿಸಿಕೊಂಡಿದೆ. ಸಮೀಪದ ಗಂವ್ಹಾರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ನೀಡಿ, ಬಳಿಕ ಜೇವರ್ಗಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

‘70 ಮಕ್ಕಳು ಬಿಸಿಯೂಟ ಮಾಡಿದ್ದಾರೆ. ಊಟದಲ್ಲಿ ಖಾರದ ಪುಡಿಯಿಂದ ಸಮಸ್ಯೆ ಆಗಿರಬಹುದು’ ಎಂದು ಮುಖ್ಯಶಿಕ್ಷಕಿ ತ್ರಿವೇಣಿ ತಿಳಿಸಿದರು.

‘ಚಿಕಿತ್ಸೆ ನೀಡಲಾಗುತ್ತಿದ್ದು, ಮಕ್ಕಳು ಚೇತರಿಸಿಕೊಳ್ಳುತ್ತಿದ್ದಾರೆ’ ಎಂದು ತಾಲ್ಲೂಕು ಆರೋಗ್ಯ ಅಧಿಕಾರಿ ಡಾ.ಉಮೇಶ್ ಶರ್ಮಾ ‘ಪ್ರಜಾವಾಣಿ’ಗೆ ತಿಳಿಸಿದರು.

ಮೇರುನಟಿಗೆ ಹುಟ್ಟೂರಿನಲ್ಲಿ ಕಂಬನಿಯ ವಿದಾಯ • ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ

ದಶಾವರದಲ್ಲಿ ಚಿರನಿದ್ರೆಗೆ ಬಿ.ಸರೋಜಾದೇವಿ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ಚತುರ್ಭಾಷಾ ತಾರೆ ಬಿ.ಸರೋಜಾದೇವಿ ಅವರು ತಮ್ಮ ಇಚ್ಛೆಯಂತೆ ಹುಟ್ಟೂರಾದ ತಾಲ್ಲೂಕಿನ ದಶಾವರದಲ್ಲಿ ತಾಯಿ ರುದ್ರಮ್ಮ ಅವರ ಸಮಾಧಿ ಪಕ್ಕವೇ ಮಂಗಳವಾರ ಚಿರನಿದ್ರೆಗೆ ಜಾರಿದರು.

ಬೆಳ್ಳಿತೆರೆಯಲ್ಲಿ ಬೆಳಗಿ ಮರೆಯಾದ ನಾಡಿನ ಹೆಮ್ಮೆಯ ಅಭಿನೇತ್ರಿಗೆ ಸಾವಿರಾರು ಅಭಿಮಾನಿಗಳು ಮತ್ತು ಗ್ರಾಮಸ್ಥರು ಕಂಬನಿಯ ವಿದಾಯ ಹೇಳಿದರು. ಬೆಂಗಳೂರಿನಿಂದ ಸರೋಜಾದೇವಿ ಅವರ ಪಾರ್ಥಿವ ಶರೀರವನ್ನು ಮಂಗಳವಾರ ಮಧ್ಯಾಹ್ನ 2.30ಕ್ಕೆ ದಶಾವರ ಗ್ರಾಮಕ್ಕೆ ತರಲಾಯಿತು.

ಪೂರ್ವಜರ ಮನೆಯ ಆವರಣದಲ್ಲಿ ಪೂಜೆ ಸಲ್ಲಿಸಿದ ಬಳಿಕ ಆಂಜನೇಯ ದೇಗುಲಕ್ಕೆ ಮೆರವಣಿಗೆಯಲ್ಲಿ ಕೊಂಡೊಯ್ದು ಪ್ರದಕ್ಷಿಣೆ ಹಾಕಲಾಯಿತು. ಬಳಿಕ ಗ್ರಾಮಸ್ಥರೇ ಸಿದ್ಧಪಡಿಸಿದ್ದ ಹೂವಿನ ಪಲ್ಲಕ್ಕಿಯಲ್ಲಿ ಮಲಗಿಸಿ ಅಂತ್ಯಕ್ರಿಯೆ ಸ್ಥಳದವರೆಗೆ ಕುಟುಂಬ ಸದಸ್ಯರು ಹಾಗೂ ಗ್ರಾಮಸ್ಥರು ಹೊತ್ತು ಸಾಗಿದರು.

ಪಾರ್ಥಿವ ಶರೀರಕ್ಕೆ ತ್ರಿವರ್ಣ ಧ್ವಜ ಹೊದಿಸಿ ಸಕಲ ಸರ್ಕಾರಿ ಗೌರವಗಳೊಂದಿಗೆ ಮಧ್ಯಾಹ್ನ 3.30ರ ಸುಮಾರಿಗೆ ಒಕ್ಕಲಿಗ ಸಮುದಾಯದ ಸಂಪ್ರದಾಯದಂತೆ ಅಂತ್ಯಕ್ರಿಯೆ ನಡೆಸಲಾಯಿತು. ಪುತ್ರ ಗೌತಮ್ ಅಂತಿಮ ವಿಧಿ ವಿಧಾನ ನೆರವೇರಿಸಿದರು.

ಪೊಲೀಸರು ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸಿ ಗೌರವ ಸಲ್ಲಿಸಿದರು. ಪೊಲೀಸ್ ವಾದ್ಯ ತಂಡ ರಾಷ್ಟ್ರಗೀತೆ ನುಡಿಸಿತು. ಸರೋಜಾದೇವಿ ಅವರಿಗೆ ಹೊದಿಸಿದ್ದ ತ್ರಿವರ್ಣ ಧ್ವಜವನ್ನು ಅವರ ಪುತ್ರಿ ಇಂದೂ ಅವರಿಗೆ ಹಸ್ತಾಂತರಿಸಲಾಯಿತು.

ಆದಿಚುಂಚನಗಿರಿ ರಾಮನಗರ ಶಾಖಾ ಮಠದ ಅನ್ನದಾನೇಶ್ವರನಾಥ ಸ್ವಾಮೀಜಿ, ಸರ್ಕಾರದ ಪರವಾಗಿ ಡಿಸಿಎಂ ಡಿ.ಕೆ. ಶಿವಕುಮಾರ್, ಶಾಸಕ ಸಿ.ಪಿ. ಯೋಗೇಶ್ವರ್, ಅಧಿಕಾರಿಗಳು ನಮನ ಸಲ್ಲಿಸಿದರು. ಚಿತ್ರರಂಗದ ಪ್ರಮುಖರಾದ ಜಯಮಾಲಾ, ಸುಂದರ್ ರಾಜ್, ಪ್ರಮೀಳಾ ಜೋಷಾಯ್, ರಾಕ್‌ಲೈನ್ ವೆಂಕಟೇಶ್, ನಿರ್ಮಾಪಕರಾದ ಬಸಂತ ಕುಮಾರ ಪಾಟೀಲ, ಸಾ.ರಾ. ಗೋವಿಂದು ಸೇರಿದಂತೆ ನಿರ್ದೇಶಕರು, ಕಲಾವಿದರು ಸೇರಿ ಹಲವರು ದಶಾವರಕ್ಕೆ ಬಂದು ಅಂತಿಮದರ್ಶನ ಪಡೆದರು.

ಮೇರುನಟಿಯ ಅಂತಿಮ ದರ್ಶನಕ್ಕಾಗಿ ತಾಲ್ಲೂಕಿನ ವಿವಿಧೆಡೆಯಿಂದ ಜನರು ಬಂದಿದ್ದರು. ಜಿಲ್ಲಾಡಳಿತ ಮುಂಜಾಗ್ರತೆಯಾಗಿ ಭದ್ರತೆಗೆ 250ಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಿತ್ತು.



ದಶಾವರ ಗ್ರಾಮದಲ್ಲಿ ಬಿ. ಸರೋಜಾದೇವಿ ಅವರ ಪಾರ್ಥಿವ ಶರೀರದ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಜನ –ಪ್ರಜಾವಾಣಿ ಚಿತ್ರ

‘ಹೆಸರು ಶಾಶ್ವತವಾಗಿ ಉಳಿಸಲು ಕ್ರಮ’

‘ಸರೋಜಾದೇವಿ ಅವರು ಹಿಂದಿನಿಂದಲೂ ಪರಿಚಿತರು. ನಾನು ಮೊದಲು ಸಚಿವನಾದಾಗ ಕರೆದು, ನೀನು ಸಿನಿಮಾಗಳಲ್ಲಿ ನಟಿಸು ಎಂದು ಸಲಹೆ ನೀಡಿದ್ದರು. ಅವರ ಕಲಾ ಸೇವೆ ಅಪ್ರತಿಮ. ವಿವಾದಕ್ಕೆ ಸಿಲುಕದೆ ಎಲ್ಲರನ್ನೂ ಪ್ರೀತಿ, ಗೌರವದಿಂದ ಕಂಡಿದ್ದಾರೆ. ರಾಜ್ಯಕ್ಕೆ ಸಮಸ್ಯೆಯಾದಾಗ ಹಿತರಕ್ಷಣೆಗೆ ನಮ್ಮ ಜೊತೆ ನಿಂತಿದ್ದಾರೆ. ಅವರ ಹೆಸರು ಶಾಶ್ವತವಾಗಿ ಉಳಿಸಲು ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಕ್ರಮ ವಹಿಸುತ್ತೇವೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ಸಿ.ಎಂ ಸಿದ್ದರಾಮಯ್ಯ, ಸರ್ಜಾ, ಕಾರ್ತಿಯಿಂದ ಅಂತಿಮ ದರ್ಶನ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಚಿತ್ರರಂಗದ ಕಲಾವಿದರು ಮಂಗಳವಾರ (ಜುಲೈ 15) ನಟಿ ಬಿ.ಸರೋಜಾದೇವಿ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು ಪುಷ್ಪನಮನ ಅರ್ಪಿಸಿದರು.

‘ಕನ್ನಡ ಚಿತ್ರರಂಗ ಬೆಳೆಯಲು ಅಪಾರ ಕೊಡುಗೆಯನ್ನು ಸರೋಜಾದೇವಿಯವರು ನೀಡಿದ್ದಾರೆ. ಮಲ್ಲೇಶ್ವರದಲ್ಲಿ ಅವರು ವಾಸವಿದ್ದ ಮನೆಯ ರಸ್ತೆಗೆ ಬಿ.ಸರೋಜಾದೇವಿಯವರ ಹೆಸರು ಇಡುವ ಬಗ್ಗೆ ಪಾಲಿಕೆ ಜೊತೆ ಮಾತನಾಡುತ್ತೇನೆ’ ಎಂದು ಸಿದ್ದರಾಮಯ್ಯ ಹೇಳಿದರು.

ನಟರಾದ ಅರ್ಜುನ್ ಸರ್ಜಾ, ಕಾರ್ತಿ ಹಾಗೂ ವಿಶಾಲ್ ಅವರೂ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು. ‘ಸರೋಜಾದೇವಿ ಅಮ್ಮ ಇಲ್ಲದೇ ಇರುವುದನ್ನು ನೆನಪಿಸಿಕೊಂಡಾಗ ಕಷ್ಟವಾಗುತ್ತಿದೆ. ಅಮ್ಮ ಅಂದರೆ ಬಹಳ ಪ್ರೀತಿ ನನಗೆ. ಈ ಮನೆಯಲ್ಲಿ ಬಹಳಷ್ಟು ನೆನಪುಗಳು ಇವೆ. ಚಿತ್ರರಂಗದಲ್ಲಿ ಈಗಿರುವ ಯುವಜನತೆಗೆ ಮಾದರಿ ಅವರು’ ಎಂದು ಭಾವುಕರಾದರು ವಿಶಾಲ್. ‘ನಾನು ಚಿಕ್ಕವನಾಗಿದ್ದಾಗಲಿಂದಲೂ ಅವರನ್ನು ನೋಡಿದ್ದೇನೆ. ನಾವು ಇವತ್ತು ಪ್ಯಾನ್ ಇಂಡಿಯಾ ಎನ್ನುತ್ತೇವೆ. ಸರೋಜಾದೇವಿಯಮ್ಮ ಆವತ್ತೇ ನಾಲ್ಕು ಭಾಷೆಗಳಲ್ಲಿ ಹಲವು ದಶಕಗಳ ಕಾಲ ನಾಯಕಿಯಾಗಿ ಇದ್ದವರು. ಅಭಿನಯ ಸರಸ್ವತಿ, ಕನ್ನಡದ ಪೈಂಗಿಳಿ ಎಂದು ಅವರನ್ನು ನಮ್ಮ ಜನ ಮುದ್ದಾಗಿ ಕರೆಯುತ್ತಿದ್ದರು. ಎಲ್ಲಾ ಸೂಪರ್ ಸ್ಟಾರ್‌ಗಳ ಜೊತೆಗೆ ನಾಯಕಿಯಾಗಿ ನಟಿಸಿದ್ದಾರೆ. ಎಲ್ಲರ ಮನಸ್ಸಿನಲ್ಲಿ ಅವರು ಶಾಶ್ವತವಾಗಿ ಇರಲಿದ್ದಾರೆ’ ಎಂದರು ಕಾರ್ತಿ.

ಅವರ ವ್ಯಕ್ತಿತ್ವವೇ ನಮ್ಮನ್ನು ಅಲ್ಲಿಂದ ಇಲ್ಲಿಗೆ ಕರೆತಂದಿದೆ. ನನಗೆ ಅವರು ತಾಯಿ ಸ್ವರೂಪ. ಮಗನೇ ಎಂದು ಅಕ್ಕರೆಯಿಂದ ಕರೆಯುತ್ತಿದ್ದರು. ಅವರು ಚೆನ್ನೈಗೆ ಬಂದರೆ ನಮಗೆ ಹಬ್ಬ

ಅರ್ಜುನ್ ಸರ್ಜಾ, ನಟ

ಪರಶುರಾಮ ಮೂರ್ತಿ ಪ್ರಕರಣ: ಕಾಂಗ್ರೆಸ್‌ನವರಿಗೆ ಸೋಲು –ಶಾಸಕ

ಪ್ರಜಾವಾಣಿ ವಾರ್ತೆ

ಉಡುಪಿ: ‘ಕಾರ್ಕಳದ ಪರಶುರಾಮ ಥೀಮ್ ಪಾರ್ಕ್ ಬಗ್ಗೆ ಕಾಂಗ್ರೆಸ್‌ನವರ ಆರೋಪಗಳು ಸುಳ್ಳು ಎಂಬುದು ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿರುವ ದೋಷಾರೋಪ ಪಟ್ಟಿಯಿಂದ ಸಾಬೀತಾಗಿದೆ’ ಎಂದು ಶಾಸಕ ವಿ. ಸುನಿಲ್ ಕುಮಾರ್ ಮಂಗಳವಾರ ಹೇಳಿದರು.

ಮಾಧ್ಯಮದವರ ಜೊತೆ ಮಾತನಾಡಿದ ಅವರು, ‘ರಾಜ್ಯ ಕಾಂಗ್ರೆಸ್ ನಾಯಕರು ವಸ್ತುಸ್ಥಿತಿ ಪರಿಶೀಲಿಸದೆ, ಸುಳ್ಳು ಕಥೆಗಳನ್ನು ಸೃಷ್ಟಿಸಲು ಯತ್ನಿಸಿದರು. ಅವರಿಗೆ ಸೋಲಾಗಿದೆ’ ಎಂದರು.

‘ಮೂರ್ತಿ ಫೈಬರ್‌ನದ್ದು ಅಲ್ಲ ಹಿತ್ತಾಳೆಯದ್ದು ಎಂದು ಆರೋಪ ಪಟ್ಟಿಯಲ್ಲಿ ಹೇಳಲಾಗಿದೆ. ಈ ಕುರಿತು ವಿಚಾರಣೆ ನಡೆಯಲಿ. ಥೀಮ್ ಪಾರ್ಕ್ ಕಾಮಗಾರಿ ಶೀಘ್ರ ಪೂರ್ಣಗೊಳಿಸಲಿ’ ಎಂದು ಒತ್ತಾಯಿಸಿದರು.

‘ಕಂಚಿನ ಪ್ರತಿಮೆ ಎಲ್ಲಿದೆ?’: ‘ಪರಶುರಾಮನ ಮೂರ್ತಿ ಕುರಿತು ಪೊಲೀಸರು ದೋಷಾರೋಪ ಪಟ್ಟಿ ಸಲ್ಲಿಸಿದ ತಕ್ಷಣ ಕಾರ್ಕಳ ಶಾಸಕರು ಮತ್ತು ಅವರ ಬೆಂಬಲಿಗರು ವಿಚಲಿತರಾದಂತೆ ಕಾಣುತ್ತದೆ’ ಎಂದು ಕಾರ್ಕಳ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶುಭದರಾವ್ ಹೇಳಿಕೆಯಲ್ಲಿ ಪ್ರತಿಕ್ರಿಯಿಸಿದ್ದಾರೆ.

ಕಾಂಗ್ರೆಸ್‌ನವರಿಗೆ ಸೋಲಾಗಿದೆ ಎಂದು ಶಾಸಕರು ಹೇಳಿದ್ದಾರೆ. ಆದರೆ ಅವರು ನಿರ್ಮಿಸಿದ್ದ ಕಂಚಿನ ಪ್ರತಿಮೆ ಎಲ್ಲಿದೆ’ ಎಂದು ಪ್ರಶ್ನಿಸಿದ್ದಾರೆ.

ಕರಾವಳಿ, ಕೊಡಗು: ಮುಂದುವರಿದ ಮಳೆ

ಮಂಗಳೂರು: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಂಗಳವಾರವೂ ಧಾರಾಕಾರ ಮಳೆ ಸುರಿಯಿತು.

ಮಂಗಳೂರು ನಗರದಲ್ಲಿ ಇಡೀ ದಿನ ಮಳೆ ಮುಂದುವರಿದಿತ್ತು. ಭಾರಿ ಮಳೆಯ ಕಾರಣ ಉಳ್ಳಾಲ, ಬೆಳ್ತಂಗಡಿ ತಾಲ್ಲೂಕುಗಳಲ್ಲಿ ಶಾಲೆಗಳಿಗೆ ರಜೆ ಘೋಷಿಸಲಾಗಿತ್ತು.

ಉಡುಪಿ ಜಿಲ್ಲೆಯ ಕುಂದಾಪುರ, ಬೈಂದೂರು, ಕಾರ್ಕಳ, ಹೆಬ್ರಿ, ಬ್ರಹ್ಮಾವರ, ಕಾಪು ವ್ಯಾಪ್ತಿಲ್ಲಿ ಬಿರುಸಿನ ಮಳೆಯಾಗಿದ್ದು, ತಗ್ಗು ಪ್ರದೇಶಗಳು ಜಲಾವೃತವಾಗಿವೆ. ಭಾರಿ ಮಳೆಗೆ ಕಾರ್ಕಳದ ಅತ್ತೂರಿನ ಸೇಂಟ್ ಲಾರೆನ್ಸ್ ಚರ್ಚ್‌ನ ಆವರಣಗೋಡೆಯು ಭಾಗಶಃ ಕುಸಿದು ಬಿದ್ದಿದೆ.

ಮಂಗಳವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ 24 ಗಂಟೆಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 5, ಉಡುಪಿ ಜಿಲ್ಲೆಯಲ್ಲಿ 7 ಸೆಂಟಿ ಮೀಟರ್ ಸರಾಸರಿ ಮಳೆಯಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕೊಡಗಿನಲ್ಲಿ ಮಳೆ: ಜಿಲ್ಲೆಯಲ್ಲಿ ಬಿರುಸಿನ ಮಳೆ ಮುಂದುವರಿದಿದೆ. ಮಡಿಕೇರಿ ನಗರ, ನಾಪೋಕ್ಲು ವ್ಯಾಪ್ತಿಯಲ್ಲಿ ಮಂಗಳವಾರ ಎರಡೂವರೆ ಗಂಟೆಗೂ ಹೆಚ್ಚು ಕಾಲ ಭಾರಿ ಮಳೆಯಾಯಿತು.

ಭಾಗಮಂಡಲ, ಸಂಪಾಜೆಯಲ್ಲಿ ತಲಾ 5 ಸೆಂ.ಮೀ, ಮಡಿಕೇರಿ, ಶಾಂತಳ್ಳಿ, ಹುದಿಕೇರಿಯಲ್ಲಿ ತಲಾ 3 ಸೆಂ.ಮೀ. ಮಳೆ ಸುರಿದಿರುವುದು ದಾಖಲಾಗಿದೆ.

ಮನೆಯ ಗೋಡೆ ಕುಸಿದು ಬಾಲಕಿ ಸಾವು

ಜೇವರ್ಗಿ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಮುತ್ತಕೋಡದಲ್ಲಿ ಮಳೆಯಿಂದ ಶಿಥಿಲಗೊಂಡಿದ್ದ ಮನೆಯ ಗೋಡೆ ಸೋಮವಾರ ರಾತ್ರಿ ಕುಸಿದಿದ್ದು, ಬಾಲಕಿ ಆಹಾಧ್ಯ ಮಲ್ಲಪ್ಪ ಪಸ್ಪೂರ (5) ಮೃತಪಟ್ಟಿದ್ದಾಳೆ. ಘಟನೆಯಲ್ಲಿ ಬಾಲಕಿಯ ಇಬ್ಬರು ಸಹೋದರಿಯರು ಅಪಾಯದಿಂದ ಪಾರಾಗಿದ್ದಾರೆ.

ರಾತ್ರಿ ಮೂವರೂ ಊಟ ಮಾಡುವ ವೇಳೆ ಗೋಡೆ ಕುಸಿದಿದೆ. ಕಲ್ಲು, ಕಟ್ಟಿಗೆ ತುಂಡುಗಳು ಬಿದ್ದು ಆಹಾಧ್ಯ ಮೃತಪಟ್ಟಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ.

ಗಾಂಧಿ ಭವನದಲ್ಲಿ ಭೂಸ್ವಾಧೀನ ವಿರುದ್ಧದ ಹೋರಾಟಗಾರರ ಸಂಭ್ರಮ

‘ಎಂದೆಂದಿಗೂ ಗೆಲುವು ನಮ್ಮದೇ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇವನಹಳ್ಳಿ ತಾಲ್ಲೂಕು ಚನ್ನರಾಯಪಟ್ಟಣ ಹಾಗೂ ಇತರ ಗ್ರಾಮಗಳಲ್ಲಿನ ಭೂಸ್ವಾಧೀನ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದೇವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸುತ್ತಿದ್ದಂತೆ, ಇತ್ತ ಭೂಸ್ವಾಧೀನ ವಿರೋಧಿ ಹೋರಾಟಗಾರರು ಕುಣಿದು, ಕುಪ್ಪಳಿಸಿದರು.

ಮುಖ್ಯಮಂತ್ರಿಯೊಂದಿಗಿನ ಸಭೆಯ ನಂತರ ಗಾಂಧಿ ಭವನದಲ್ಲಿ ಜಮಾಯಿಸಿದ ಹೋರಾಟಗಾರರು, ಗೆಲುವು ನಮ್ಮದೇ.. ಗೆಲುವು ನಮ್ಮದೇ ಎಂದಿಗೂ ಎಂದೆಂದಿಗೂ ಗೆಲುವು ನಮ್ಮದೇ.. ಎಂದು ಹಾಡುತ್ತಾ ಕುಣಿಯುತ್ತಾ, ಹಸಿರು ಟವಲ್ ಬೀಸುತ್ತಾ ಸಂಭ್ರಮಿಸಿದರು.

ನಂತರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಟ ಪ್ರಕಾಶ್ ರಾಜ್, ‘13 ಹಳ್ಳಿಗಳಲ್ಲಿನ ಭೂ ಸ್ವಾಧೀನ ಕೈಬಿಡಲು ಸರ್ಕಾರ ಒಪ್ಪಿದ್ದು, ಜನರ ಹೋರಾಟದ ಶಕ್ತಿಯಿಂದ. ಅದನ್ನು ನಾವು ಉಳಿಸಿಕೊಳ್ಳಬೇಕಿದೆ. ರೈತರ ಈ ಗೆಲುವು ಮುಂದಿನ ಚಳವಳಿಗಳಿಗೆ ದಾರಿಯಾಗಬೇಕು. ಹೋರಾಟ ಶಕ್ತಿಯುತವಾಗಿ ನಿಂತಿದ್ದು ಯಾವುದೇ ಆಮಿಷಗಳಿಗೆ ಮಾರುಹೋಗದ ಅಲ್ಲಿನ ರೈತರ ಹಟದಿಂದ’ ಎಂದು ವಿಶ್ಲೇಷಿಸಿದರು.

‘ಹೋರಾಟಗಾರರೊಂದಿಗೆ ಜನ ಧ್ವನಿಗೂಡಿಸಿದರೆ ಯಾವ ಸರ್ಕಾರವಾದರೂ ಮಾತು ಕೇಳಬೇಕು ಎಂದು ಈ ಹೋರಾಟ ಸಾಬೀತುಪಡಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜನಪರ ನಾಯಕ ಎಂಬುದನ್ನು ಸಾಬೀತು ಮಾಡಿದ್ದಾರೆ. ಆದರೆ. ರೈತರ ಕೂಗು ಕೇಳಿಸಿಕೊಳ್ಳಲು ಮೂರು ವರ್ಷ ತೆಗೆದುಕೊಂಡರು’ ಎಂದರು.

ಸಂಯುಕ್ತ ಹೋರಾಟ–ಕರ್ನಾಟಕದ ಮುಖಂಡ ಬಡಗಲಪುರ ನಾಗೇಂದ್ರ ಮಾತನಾಡಿ, ‘ಇದೊಂದು ಐತಿಹಾಸಿಕ, ದಾಖಲೆಯ ಹೋರಾಟ. ಸರ್ಕಾರ ಭೂಸ್ವಾಧೀನ ಕೈಬಿಟ್ಟಿರುವುದು ಜನಚಳವಳಿಗೆ ಸಂದ ಜಯ’ ಎಂದರು.

‘ರಾಜ್ಯದ ಎಲ್ಲ ಜನ ಚಳವಳಿಗಳು, ಹೋರಾಟಗಾರರು, ಕಾರ್ಮಿಕರು, ಬುದ್ಧಿಜೀವಿಗಳು ಸಂಘಟಿತ ಹೋರಾಟ ಮಾಡಿದರು. ಸಾಹಿತಿಗಳು, ಕಲಾವಿದರೂ ಸೇರಿದಂತೆ ಹಲವರು ಪ್ರತ್ಯಕ್ಷ, ಪರೋಕ್ಷವಾಗಿ ದೇವನಹಳ್ಳಿಯ ರೈತರ ಹೋರಾಟದ ಪರವಾಗಿ ಕೆಲಸ ಮಾಡಿದ್ದರಿಂದ ಗೆಲುವು ಸಿಕ್ಕಿತು. ಮುಂದೆ ರಾಜ್ಯದ ಅಭಿವೃದ್ಧಿ ಮಾದರಿಗೆ ಶಿಬಿರವನ್ನು ಮಾಡಬೇಕು. ಈ ಮೂಲಕ ರಾಜ್ಯದ ನೆಲ-ಜಲವನ್ನು ಉಳಿಸುವ ಕೆಲಸವಾಗಬೇಕು’ ಎಂದರು.

ಸುದ್ದಿಗೋಷ್ಠಿಯಲ್ಲಿ ಹೋರಾಟಗಾರರಾದ ಚುಕ್ಕಿ ನಂಜುಂಡಸ್ವಾಮಿ, ನೂರ್ ಶ್ರೀಧರ್, ಕಾರಳ್ಳಿ ಶ್ರೀನಿವಾಸ್, ಎಸ್.ವರಲಕ್ಷ್ಮಿ, ವಿಜಯಮ್ಮ, ಚಿಮಾಚನಹಳ್ಳಿ ರಮೇಶ್, ಅಪ್ಪಣ್ಣ, ಡಿ.ಎಚ್.ಪೂಜಾರ್, ಟಿ.ಯಶವಂತ, ಜೆ.ಎಂ. ವೀರಸಂಗಯ್ಯ, ಕೆ.ಎಸ್. ವಿಮಲ ಹಾಗೂ ದೇವನಹಳ್ಳಿಯ ರೈತರು ಉಪಸ್ಥಿತರಿದ್ದರು.



ದೇವನಹಳ್ಳಿ ಪಟ್ಟಣ ಪ್ರವಾಸಿ ಮಂದಿರದ ಆವರಣದಲ್ಲಿ ಚನ್ನರಾಯಪಟ್ಟಣ ಹೋಬಳಿಯ ರೈತ ಹೋರಾಟಗಾರರು, ವಿವಿಧ ಸಂಘಟನೆಯ ಮುಖಂಡರು ಕುಣಿದು ಕುಪ್ಪಳಿಸಿ ಸಂಭ್ರಮಾಚರಣೆ ಮಾಡಿದರು –ಪ್ರಜಾವಾಣಿ ಚಿತ್ರ

‘ನೀಲಿ, ಹಸಿರು, ಕೆಂಪು ಸೇರಿತು’

‘ನಾನು ದಲಿತರ ಹುಡುಗ. ದಲಿತ ಸಂಘರ್ಷ ಸಮಿತಿ ನನ್ನ ಸಂಘಟನೆ. ಚನ್ನರಾಯಪಟ್ಟಣ ಭೂಸ್ವಾಧೀನ ವಿರೋಧಿ ಹೋರಾಟದಲ್ಲಿ ಎಲ್ಲ ಸಮುದಾಯದ ಜನರು ನನ್ನ ನಾಯಕತ್ವವನ್ನು ಒಪ್ಪಿಕೊಂಡರು. ನನ್ನೊಳಗೆ ನೀಲಿ ಮಾತ್ರ ಇತ್ತು, ಈಗ ಕೆಂಪು ನನ್ನ ರಕ್ತವಾಗಿದೆ, ಹಸಿರು ಉಸಿರಾಗಿದೆ. ಈ ಗೆಲುವು ಜನ ಚಳವಳಿಗಳಿಗೆ ಶಕ್ತಿ ತುಂಬಲಿ.

ಕಾರಳ್ಳಿ ಶ್ರೀನಿವಾಸ್, ಸಂಚಾಲಕ, ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿ

ಮಾತು ಉಳಿಸಿಕೊಂಡ ಸಿ.ಎಂ

‘ಸಿದ್ದರಾಮಯ್ಯ ಅವರು ಕೊಟ್ಟ ಮಾತು ಉಳಿಸಿ ಕೊಂಡಿದ್ದಾರೆ. ನಾವು ಕೃಷಿಯನ್ನು ಬಿಡುವುದಿಲ್ಲ. ಈಗ ನಮ್ಮ ಭೂಮಿ ನಮ್ಮ ಕೈಲಿದೆ, ಅದರಲ್ಲಿ ಬೆಳೆಯನ್ನು ಬೆಳೆದು ಜೀವನ ನಡೆಸುತ್ತೇವೆ. ಇಡೀ ರಾಜ್ಯದ ಜನ ಸಂಘಟನೆಗಳು, ಜನರು ನಮ್ಮ ಜೊತೆಗೆ ನಿಂತರು. ಅವರಿಗೆ ಧನ್ಯವಾದ ಹೇಳುತ್ತೇವೆ.

ನಾರಾಯಣಮ್ಮ, ರೈತ ಮಹಿಳೆ, ಚನ್ನರಾಯಪಟ್ಟಣ

ಭೂಸ್ವಾಧೀನ: ಹಿಂದೆ ಸರಿದ ಸರ್ಕಾರ

ಒಂದನೇ ಪುಟದಿಂದ...

ಆದರೂ, ರೈತರ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು, ಕೊಟ್ಟ ಮಾತಿನಂತೆ ಸರ್ಕಾರ ನಡೆದುಕೊಂಡಿದೆ. ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಲಾಗಿದ್ದ ಪ್ರದೇಶ ಕೃಷಿಗೆ ಯೋಗ್ಯವಾದ ಭೂಮಿ. ರಾಜ್ಯದಲ್ಲಿ ಭೂಸ್ವಾಧೀನದ ವಿರುದ್ಧ ಈ ಮಟ್ಟದ ಪ್ರತಿಭಟನೆ ನಡೆದಿರಲಿಲ್ಲ. ಅಲ್ಲಿನ ರೈತರು ಬದುಕಿಗೆ ಜಮೀನಿನ ಮೇಲೆ ಅವಲಂಬಿತರಾಗಿರುವುದು ಸರ್ಕಾರಕ್ಕೆ ಮನವರಿಕೆಯಾಗಿದೆ. ರೈತರು ಇನ್ನುಮುಂದೆ ನೆಮ್ಮದಿಯಾಗಿ ಕೃಷಿ ಚಟುವಟಿಕೆ ಮುಂದುವರಿಸಿಕೊಂಡು ಹೋಗಬಹುದು’ ಎಂದರು.

ಅತ್ಯಾಧುನಿಕ ರಕ್ಷಣಾ ಮತ್ತು ವೈಮಾಂತರಿಕ್ಷ ಪಾರ್ಕ್ ಸ್ಥಾಪನೆಗಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ 13 ಗ್ರಾಮಗಳ ವ್ಯಾಪ್ತಿಯ 1,777 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು 2021ರಲ್ಲಿ ಪ್ರಾಥಮಿಕ ಅಧಿಸೂಚನೆ, 2022ರಲ್ಲಿ ಅಂತಿಮ ಆದೇಶ ಹೊರಡಿಸಿತ್ತು. ಭೂಸ್ವಾಧೀನ ವಿರೋಧಿಸಿ ಅಂದಿನಿಂದಲೂ ರೈತರು ಹೋರಾಟ ಮಾಡುತ್ತಾ ಬಂದಿದ್ದರು.

ಚನ್ನರಾಯಪಟ್ಟಣ, ಮಟ್ಟಿಬಾರ್ಲು ಮತ್ತು ಶ್ರೋತ್ರೀಯ ತೆಲ್ಲೋಹಳ್ಳಿಗಳಲ್ಲಿನ ನೀರಾವರಿ, ಕೃಷಿ ಮತ್ತು ಜನ ವಸತಿಗಳನ್ನು ಪರಿಗಣಿಸಿ, 231.23 ಎಕರೆ, 185.18 ಎಕರೆ ಮತ್ತು 78.21 ಎಕರೆ ಸೇರಿ 495 ಎಕರೆ ಜಮೀನನ್ನು ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡುವುದಾಗಿ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ಜೂನ್ 24ರಂದು ಘೋಷಿಸಿದ್ದರು. ಆದರೆ, ರೈತರು ಸರ್ಕಾರದ ನಿರ್ಧಾರವನ್ನು ಒಪ್ಪದೇ ಎಲ್ಲ ಜಮೀನನ್ನು ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡುವಂತೆ ಆಗ್ರಹಿಸಿ ಸಂಯುಕ್ತ ಹೋರಾಟ–ಕರ್ನಾಟಕದ ನೇತೃತ್ವದಲ್ಲಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಹೋರಾಟ ಮುಂದುವರಿಸಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಜುಲೈ 5ರಂದು ರೈತ ಸಂಘದ ಮುಖಂಡರು, ಹೋರಾಟಗಾರರು, ಸ್ಥಳೀಯ ರೈತರ ಸಭೆ ಕರೆದಿದ್ದರು. ಕಾನೂನು ತೊಡಕುಗಳಿದ್ದು, ತಜ್ಞರ ಅಭಿಪ್ರಾಯ ಪಡೆದು ತೀರ್ಮಾನ ಕೈಗೊಳ್ಳಲು 10 ದಿನಗಳ ಸಮಯ ಕೇಳಿದ್ದರು. ನಿಗದಿಯಂತೆ ಮಂಗಳವಾರ ಸಭೆ ನಡೆಸಿ, ಸರ್ಕಾರ ತೆಗೆದುಕೊಂಡ ನಿರ್ಧಾರದ ಮಾಹಿತಿ ನೀಡಿದರು.

ಸಚಿವರಾದ ಎಚ್.ಕೆ. ಪಾಟೀಲ, ಕೃಷ್ಣ ಬೈರೇಗೌಡ, ಪ್ರಿಯಾಂಕ್ ಖರ್ಗೆ, ಬೈರತಿ ಸುರೇಶ್, ಮುಖ್ಯಮಂತ್ರಿ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ, ಅಡ್ವೊಕೇಟ್ ಜನರಲ್ ಶಶಿಕಿರಣ ಶೆಟ್ಟಿ, ಹೋರಾಟಗಾರರಾದ ಎಸ್.ಆರ್. ಹಿರೇಮಠ, ಎಚ್.ಆರ್. ಬಸವರಾಜಪ್ಪ, ನೂರ್ ಶ್ರೀಧರ್, ವರಲಕ್ಷ್ಮಿ ಇದ್ದರು.

ಹೋರಾಟ ಸ್ಥಳದಲ್ಲಿ ಸ್ಮಾರಕ: ಚಿಂತನೆ

ದೇವನಹಳ್ಳಿ: ಭೂಸ್ವಾಧೀನ ವಿರೋಧಿಸಿ 1,198 ದಿನಗಳಿಂದ ಚನ್ನರಾಯಪಟ್ಟಣ ಹೋಬಳಿ ಕೇಂದ್ರದಲ್ಲಿ ರೈತರು ನಡೆಸುತ್ತಿದ್ದ ಧರಣಿ ಸ್ಥಳದಲ್ಲಿ 'ರೈತ ಹೋರಾಟ ಸ್ಮಾರಕ' ನಿರ್ಮಿಸಲು ಚಿಂತನೆ ನಡೆದಿದೆ.

ಐತಿಹಾಸಿಕ ಹೋರಾಟದ ನೆನಪಿಗಾಗಿ ಧರಣಿ ಜಾಗದಲ್ಲಿ ಸ್ಮಾರಕ ನಿರ್ಮಿಸುವ ಜೊತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಹ್ವಾನಿಸಿ ಅವರಿಂದಲೇ ಲೋಕಾರ್ಪಣೆ ಮಾಡಿಸಲೂ ಚರ್ಚೆ ನಡೆದಿದೆ.

ರೈತರ ಪರವಾಗಿ ನಿರ್ಣಯ ಕೈಗೊಂಡ ಮುಖ್ಯಮಂತ್ರಿ ಅವರಿಗೆ ಕೃತಜ್ಞತೆ ಸಲ್ಲಿಸಲು ಅಭಿನಂದನಾ ಸಮಾರಂಭ ಆಯೋಜಿಸಲು ರೈತರು ಮತ್ತು ಹೋರಾಟಗಾರರು ಚಿಂತನೆ ನಡೆಸಿದ್ದಾರೆ ಎನ್ನಲಾಗಿದೆ.

ಈ ಆಲೋಚನೆ ಇನ್ನೂ ಮೊಳಕೆಯ ಹಂತದಲ್ಲಿದೆ. ಶೀಘ್ರ ಎಲ್ಲರ ಅಭಿಪ್ರಾಯ ಪಡೆದು ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಮೂಲಗಳು ತಿಳಿಸಿವೆ.

ಸಂಘಟಿತ ಹೋರಾಟಕ್ಕೆ ಐತಿಹಾಸಿಕ ಜಯ ಸಿಕ್ಕಿದೆ. ರಾಜ್ಯದ ಹಲವು ಸಂಘಟನೆಗಳು, ಪ್ರಗತಿಪರರು ಒಂದಾಗಿ ಸ್ಥಳೀಯ ರೈತರ ಜತೆ ನಡೆಸಿದ ಸುದೀರ್ಘ ಹೋರಾಟ ಫಲಕೊಟ್ಟಿದೆ

ಬಡಗಲಪುರ ನಾಗೇಂದ್ರ, ಮುಖಂಡ, ಸಂಯುಕ್ತ ಹೋರಾಟ–ಕರ್ನಾಟಕ

ಐದೂವರೆ ಎಕರೆ ಜಮೀನೇ ನಮ್ಮ ಕುಟುಂಬಕ್ಕೆ ಆಧಾರ. ಭೂಸ್ವಾಧೀನ ಅಧಿಸೂಚನೆಯ ನಂತರ ಬೀದಿಗೆ ಬೀಳುವ ಭಯ ಆವರಿಸಿತ್ತು. ಮೂರು ವರ್ಷ ಸರಿಯಾಗಿ ನಿದ್ದೆಯನ್ನೇ ಮಾಡಿರಲಿಲ್ಲ. ಮನೆ ಸೇರಿರಲಿಲ್ಲ

ಮುನಿವೆಂಕಟಮ್ಮ, ಸ್ಥಳೀಯ ರೈತ ಮಹಿಳೆ

ರೈತರನ್ನು ಒಳಗೊಂಡ ಸುಸ್ಥಿರ ಅಭಿವೃದ್ಧಿಗೆ ಯಾವುದೇ ಸರ್ಕಾರ ಆದ್ಯತೆ ನೀಡಬೇಕು. ಒತ್ತಾಯದ ಭೂಸ್ವಾಧೀನಕ್ಕೆ ಎಂದಿಗೂ ಅವಕಾಶ ಇರಬಾರದು

ಚುಕ್ಕಿ ನಂಜುಂಡಸ್ವಾಮಿ, ರೈತನಾಯಕಿ

ಶುಭಾಂಶು ಶುಭಾಗಮನ

ಒಂದನೇ ಪುಟದಿಂದ...

ಒಂದು ಗಂಟೆ ನಂತರ, ಶುಕ್ಲಾ ಹಾಗೂ ಇತರ ಗಗನಯಾನಿಗಳಾದ ಕಮಾಂಡರ್ ಪೆಗ್ಗಿ ವಿಟ್ಸನ್, ಹಂಗರಿಯ ಟಿಬೋರ್ ಕಾಪು ಹಾಗೂ ಪೋಲೆಂಡ್‌ನ ಸ್ಲಾವೋಸ್ ವಿಸ್ನಿವ್ಸ್ಕಿ ಅವರು ಬಾಹ್ಯಾಕಾಶ ನೌಕೆಯಿಂದ ಹೊರಗೆ ಬರುತ್ತಿದ್ದಂತೆಯೇ, ಕ್ಯಾಬಿನ್‌ನಿಂದಲೇ, ಮುಗುಳ್ನಗುತ್ತಾ ಕ್ಯಾಮರಾಗಳಿಗೆ ಪೋಸು ನೀಡಿದರು.

'ಆ್ಯಕ್ಸಿಯಂ–4' ಬಾಹ್ಯಾಕಾಶ ಕಾರ್ಯಕ್ರಮದ ಭಾಗವಾಗಿ ಒಟ್ಟು 20 ದಿನಗಳ ಅಂತರಿಕ್ಷ ಯಾನವನ್ನು ಯಶಸ್ವಿಗೊಳಿಸಿದ ಧನ್ಯತಾಭಾವ ಅವರ ಮೊಗದಲ್ಲಿತ್ತು. ಈ ಪೈಕಿ, 18 ದಿನ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಇದ್ದ ಶುಕ್ಲಾ, ವೈಜ್ಞಾನಿಕವಾಗಿ ಹಲವು ಪ್ರಯೋಗಗಳನ್ನು ಕೈಗೊಂಡಿದ್ದಾರೆ.

ಬಾಹ್ಯಾಕಾಶ ನೌಕೆಯಿಂದ ಗಗನಯಾನಿಗಳನ್ನು ಹೊರಗೆ ಕರೆದುಕೊಂಡು ಬರುವುದಕ್ಕಾಗಿ 'ಶನೋನ್' ನೌಕೆಯನ್ನು ಸನ್ನದ್ಧ ಸ್ಥಿತಿಯಲ್ಲಿ ಇಡಲಾಗಿತ್ತು. 'ಡ್ರ್ಯಾಗನ್ ಗ್ರೇಸ್' ಬಳಿ, ಶನೋನ್ ನೌಕೆ ಹೋಗುತ್ತಿದ್ದಂತೆಯೇ ನಾಲ್ವರು ಜನ ಗಗನಯಾನಿಗಳು, ಕೋಶದ ಸಣ್ಣ ದ್ವಾರದ ಮೂಲಕ ಹೊರಗೆ ಬಂದರು.

ಗುರುತ್ವಾಕರ್ಷಣ ಶಕ್ತಿ ಇಲ್ಲದ ಪರಿಸರದಲ್ಲಿ ಮೂರು ವಾರಗಳನ್ನು ಕಳೆದಿದ್ದ ಗಗನಯಾನಿಗಳಿಗೆ, ಬಾಹ್ಯಾಕಾಶ ಕೋಶದಿಂದ ಹೊರಗೆ ಬಂದ ಕೂಡಲೇ ಹೆಜ್ಜೆ ಇಡಲು ಕಷ್ಟವಾಯಿತು. ಆಗ, ತಮ್ಮ ಕಾಲ ಮೇಲೆ ನಿಲ್ಲುವುದಕ್ಕೆ ಈ ನಾಲ್ವರಿಗೆ ಶನೋನ್ ನೌಕೆಯ ಸಿಬ್ಬಂದಿ ನೆರವಾದರು.

ವೈದ್ಯಕೀಯ ಪರೀಕ್ಷೆ: ನಾಲ್ವರು ಗಗನಯಾನಿಗಳನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ ನಂತರ, ಹೆಲಿಕಾಪ್ಟರ್ ಮೂಲಕ ನಿಗದಿತ ಸ್ಥಳಕ್ಕೆ ಕರೆದೊಯ್ಯಲಾಯಿತು.

ನಾಲ್ಕು ಜನ ಗಗನಯಾನಿಗಳು ಭೂ ಕಕ್ಷೆಯಲ್ಲಿ ಗುರುತ್ವಾಕರ್ಷಣ ಶಕ್ತಿರಹಿತ ಪರಿಸರದಲ್ಲಿ 20 ದಿನಗಳನ್ನು ಕಳೆದಿದ್ದಾರೆ. ಹೀಗಾಗಿ, ಭೂಮಿಯ ಗುರುತ್ವಾಕರ್ಷಣ ಶಕ್ತಿ ಪ್ರಭಾವದ ಪರಿಸರಕ್ಕೆ ಹೊಂದಿಕೊಳ್ಳುವುದಕ್ಕಾಗಿ ಅವರಿಗಾಗಿ ಏಳು ದಿನ ಪ್ರತ್ಯೇಕವಾಸಕ್ಕೆ ವ್ಯವಸ್ಥೆ ಮಾಡಲಾಗಿದೆ.

ವಿಕ್ಷಣೆ: ಶುಭಾಂಶು ಶುಕ್ಲಾ ಅವರ ತವರು, ಲಖನೌದಲ್ಲಿ ಅವರ ಪಾಲಕರು ತಮ್ಮ ಮಗ ಐಎಸ್‌ಎಸ್‌ನಿಂದ ವಾಪಸಾಗುವ ಪ್ರಕ್ರಿಯೆಯನ್ನು ಕಣ್ತುಂಬಿಕೊಂಡರು.

ಕ್ಯಾಲಿಫೋರ್ನಿಯಾ ಕರಾವಳಿಯಲ್ಲಿ ಬಾಹ್ಯಾಕಾಶ ಕೋಶ ಇಳಿಯುವ ದೃಶ್ಯಗಳ ನೇರಪ್ರಸಾರವನ್ನು ಶುಭಾಂಶು ಅವರ ತಂದೆ ಶಂಭು ದಯಾಲ್ ಶುಕ್ಲಾ, ತಾಯಿ ಆಶಾ ದೇವಿ, ಸಹೋದರಿ ಸುಚಿ ಮಿಶ್ರಾ ವೀಕ್ಷಿಸಿದರು. ಶುಭಾಂಶು ಅವರು ಬಾಹ್ಯಾಕಾಶ ಕೋಶದಿಂದ ಹೊರಬರುತ್ತಿರುವ ದೃಶ್ಯಗಳನ್ನು ನೋಡಿದ ಅವರ ಕಣ್ಣಾಲಿಗಳು ತುಂಬಿದವು. ಕೈಗಳನ್ನು ಜೋಡಿಸಿ, ಭಾವುಕರಾಗಿದ್ದ ಅವರಲ್ಲಿ ಸಾರ್ಥಕತೆಯ ಭಾವ ಮೂಡಿತ್ತು.

'ಕೋಟ್ಯಂತರ ಜನರಿಗೆ ಶುಕ್ಲಾ ಪ್ರೇರಣೆ'


ನರೇಂದ್ರ ಮೋದಿ

'ಗಗನಯಾತ್ರಿ ಶುಭಾಂಶು ಶುಕ್ಲಾ ಅವರು ಸಮರ್ಪಣಾಭಾವ, ಧೈರ್ಯ ಹಾಗೂ ಅದಮ್ಯ ಉತ್ಸಾಹದ ಮೂಲಕ ದೇಶದ ಕೋಟ್ಯಂತರ ಜನರಿಗೆ ಹಾಗೂ ಅವರ ಕನಸುಗಳಿಗೆ ಸ್ಫೂರ್ತಿಯಾಗಿದ್ದಾರೆ' ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಎಕ್ಸ್‌ನಲ್ಲಿ ಹೇಳಿದ್ದಾರೆ. 'ಭಾರತದ ಮಹತ್ವಾಕಾಂಕ್ಷೆಯ ಮಾನವಸಹಿತ ಗಗನಯಾನ ಕಾರ್ಯಕ್ರಮಕ್ಕೆ ಶುಕ್ಲಾ ಅವರ ಈ ಪ್ರಯಾಣವು ಮತ್ತೊಂದು ಮೈಲುಗಲ್ಲಾಗಲಿದೆ' ಎಂದೂ ಹೇಳಿದ್ದಾರೆ.

ಹೃತ್ಪೂರ್ವಕ ಸ್ವಾಗತ

ಶುಕ್ಲಾ ಸೇರಿ 'ಆ್ಯಕ್ಸಿಯಂ–4' ಕಾರ್ಯಕ್ರಮದ ಭಾಗವಾಗಿದ್ದ ಪ್ರತಿಯೊಬ್ಬರಿಗೂ ಅಭಿನಂದನೆಗಳು. ಶುಕ್ಲಾ ಅವರ ಈ ಸಾಧನೆಯು ಭಾರತದ ಬಾಹ್ಯಾಕಾಶ ಅನ್ವೇಷಣೆ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಅಂತರರಾಷ್ಟ್ರೀಯ ಸಹಯೋಗದಲ್ಲಿ ಹೊಸ ಮೈಲುಗಲ್ಲು ಸ್ಥಾಪಿಸಿದೆ

ದ್ರೌಪದಿ ಮುರ್ಮು, ರಾಷ್ಟ್ರಪತಿ

ನಾಲ್ವರು ಗಗನಯಾನಿಗಳಿಗೆಮರಳಿ ಭೂಮಿಗೆ ಸ್ವಾಗತ. ಇಂದು 'ಡ್ರ್ಯಾಗನ್ ಗ್ರೇಸ್' ಸುರಕ್ಷಿತವಾಗಿ ಇಳಿಯುವ ಮೂಲಕ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಕೈಗೊಂಡಿದ್ದ ಅಂತರಿಕ್ಷಯಾನವು ಯಶಸ್ವಿಯಾಗಿ ಕೊನೆಗೊಂಡಿದೆ ಎಂಬುದನ್ನು ಸಾರಿದೆ

ಆ್ಯಕ್ಸಿಯಂ ಸ್ಪೇಸ್, ಬಾಹ್ಯಾಕಾಶ ಸಂಸ್ಥೆ

ನ್ಯಾಯ ಸಿಗದೇ, ಹೋರಾಡಿ ಮೃತಪಟ್ಟ ವಿದ್ಯಾರ್ಥಿನಿ

ಲೈಂಗಿಕ ದೌರ್ಜನ್ಯ: ಮನನೊಂದು ಕಾಲೇಜು ಆವರಣದಲ್ಲೇ ಬೆಂಕಿ ಹಚ್ಚಿಕೊಂಡ ಯುವತಿ • ದೇಶದಾದ್ಯಂತ ಆಕ್ರೋಶ

ಭುವನೇಶ್ವರ (ಪಿಟಿಐ): ಇಂಗ್ಲಿಷ್ ಪ್ರಾಧ್ಯಾಪಕ ಸಮೀರ ಕುಮಾರ್ ಸಾಹು ಅವರು ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಿದ್ದ ಬಾಲೇಶ್ವರದ ಫಕೀರ್ ಮೋಹನ್ (ಸ್ವಾಯತ್ತ) ಕಾಲೇಜಿನ ವಿದ್ಯಾರ್ಥಿನಿಯು ಸೋಮವಾರ ರಾತ್ರಿ ಮೃತಪಟ್ಟಿದ್ದಾರೆ. ನ್ಯಾಯ ಸಿಗದ ಕಾರಣ ಕಾಲೇಜು ಆವರಣದಲ್ಲಿಯೇ ಅವರು ಬೆಂಕಿ ಹಚ್ಚಿಕೊಂಡು ಶನಿವಾರ ಆತ್ಮಹತ್ಯೆಗೆ ಯತ್ನಿಸಿದ್ದರು.

ವಿದ್ಯಾರ್ಥಿನಿಯ ಸಾವಿಗೆ ದೇಶದಾದ್ಯಂತ ಆಕ್ರೋಶ ವ್ಯಕ್ತವಾಗಿದೆ. ಶೇಕಡ 95ರಷ್ಟು ಸುಟ್ಟ ಗಾಯಗಳಾಗಿದ್ದ ವಿದ್ಯಾರ್ಥಿನಿಯು ಮೂರು ದಿನ ಸಾವು–ಬದುಕಿನ ನಡುವೆ ಹೋರಾಡಿದ್ದರು. ಇಲ್ಲಿನ ಏಮ್ಸ್‌ನಲ್ಲಿ ಅವರು ಚಿಕಿತ್ಸೆ ಪಡೆಯುತ್ತಿದ್ದರು.

ಎರಡು ದಿನಗಳ ಒಡಿಶಾ ಭೇಟಿಯಲ್ಲಿದ್ದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೋಮವಾರ ಸಂಜೆ ಏಮ್ಸ್‌ಗೆ ದಿಢೀರ್ ಭೇಟಿ ನೀಡಿ, ವಿದ್ಯಾರ್ಥಿನಿಯ ಆರೋಗ್ಯ ವಿಚಾರಿಸಿದರು. 'ವಿದ್ಯಾರ್ಥಿನಿಗೆ ನ್ಯಾಯ ಸಿಗಬೇಕು' ಎಂದು ವಿದ್ಯಾರ್ಥಿನಿಯ ಹುಟ್ಟೂರಿನವರು ಆಗ್ರಹಿಸಿದರು.

ಆತ್ಮಹತ್ಯೆಗೆ ಪ್ರಚೋದನೆ ಸೇರಿದಂತೆ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಾಂಶುಪಾಲ ದಿಲೀಪ್ ಕುಮಾರ್ ಘೋಶ್ ಹಾಗೂ ಪ್ರಾಧ್ಯಾಪಕ ಸಾಹು ಅವರನ್ನು ಪೊಲೀಸರು ಸೋಮವಾರ ಬಂಧಿಸಿದ್ದಾರೆ.


ವಿದ್ಯಾರ್ಥಿನಿಯ ಹುಟ್ಟೂರು ಬಾಲೇಶ್ವರದಲ್ಲಿ ಆಕೆಯ ಅಂತ್ಯಕ್ರಿಯೆಯನ್ನು ಮಂಗಳವಾರ ನಡೆಸಲಾಯಿತು – ಪಿಟಿಐ ಚಿತ್ರ

'ಉತ್ತರ ಬೇಕು'

ಇದು ಆತ್ಮಹತ್ಯೆಯಲ್ಲ, ಬಿಜೆಪಿ ವ್ಯವಸ್ಥೆಯು ನಡೆಸಿರುವ ಯೋಜಿತ ಹತ್ಯೆ. ಮೋದಿ ಅವರೇ, ಒಡಿಶಾ ಅಥವಾ ಮಣಿಪುರ ಇರಬಹುದು– ಈ ದೇಶದ ಹೆಣ್ಣುಮಕ್ಕಳು ಸುಟ್ಟು ಹೋಗುತ್ತಿದ್ದಾರೆ, ಕುಸಿದು ಹೋಗುತ್ತಿದ್ದಾರೆ. ಮತ್ತೆ ನೀವು? ಸುಮ್ಮನೆ ಕೂತಿದ್ದೀರಿ. ಈ ದೇಶಕ್ಕೆ ನಿಮ್ಮ ಮೌನ ಬೇಡ. ನಿಮ್ಮ ಉತ್ತರ ಬೇಕು

ರಾಹುಲ್ ಗಾಂಧಿ
ಲೋಕಸಭೆ ವಿರೋಧ ಪಕ್ಷದ ನಾಯಕ

'ಲೈಂಗಿಕ ಬೇಡಿಕೆ ಈಡೇರಿಸುವಂತೆ ಒತ್ತಡ'

ಫಕೀರ್ ಮೋಹನ್ ಕಾಲೇಜಿನಲ್ಲಿ ವಿದ್ಯಾರ್ಥಿನಿಯು ಎರಡನೇ ವರ್ಷದ ಬಿ.ಇಡಿ ಪದವಿ ವ್ಯಾಸಂಗ ಮಾಡುತ್ತಿದ್ದರು. 'ತನ್ನ ಲೈಂಗಿಕ ಬೇಡಿಕೆಗಳನ್ನು ಈಡೇರಿಸದಿದ್ದರೆ ನಿನ್ನ ಶೈಕ್ಷಣಿಕ ಭವಿಷ್ಯವನ್ನು ಹಾಳು ಮಾಡುವುದಾಗಿ ನನ್ನ ಮಗಳಿಗೆ ಆ ಪ್ರಾಧ್ಯಾಪಕ ಬೆದರಿಕೆ ಹಾಕಿದ್ದ. ನನ್ನ ಮಗಳು ಆತನ ಬೇಡಿಕೆಯನ್ನು ಒಪ್ಪಿಕೊಳ್ಳಲಿಲ್ಲ' ಎಂದು ವಿದ್ಯಾರ್ಥಿನಿಯ ತಂದೆ ಹೇಳಿದರು.

'ಹಿಂಸೆ ತಾಳಲಾರದೆ, ಆಕೆ ಕಾಲೇಜಿನ ಆಂತರಿಕ ದೂರು ಸಮಿತಿಗೆ ಜೂನ್ 30ರಂದು ದೂರು ನೀಡಿದಳು. ಆದರೆ, ಈ ಸಮಿತಿಯವರು ಸರಿಯಾಗಿ ತನಿಖೆ ಮಾಡಲಿಲ್ಲ. ಆ ಪ್ರಾಧ್ಯಾಪಕನನ್ನು ರಕ್ಷಣೆ ಮಾಡಿದರು. ನನ್ನ ಮಗಳ ದೂರಿಗೆ ಸಂಬಂಧಿಸಿ ಯಾವುದೇ ಸಾಕ್ಷ್ಯ ಇಲ್ಲ ಎಂದರು. ಇದು ನನ್ನ ಮಗಳನ್ನು ಕುಗ್ಗಿಸಿತ್ತು' ಎಂದರು.

'ತನ್ನ ದೂರಿನ ಕುರಿತ ಬೆಳವಣಿಗೆಯನ್ನು ವಿಚಾರಿಸಲು ಜುಲೈ 12ರಂದು (ಶನಿವಾರ) ಪ್ರಾಂಶುಪಾಲರನ್ನು ಭೇಟಿಯಾಗಲು ಆಕೆ ತೆರಳಿದ್ದಳು. ಅಲ್ಲಿ ಪ್ರಾಂಶುಪಾಲರು ನನ್ನ ಮಗಳಿಗೆ ಬೆದರಿಕೆ ಹಾಕಿದ್ದಾರೆ. ನೀನು ನೀಡಿದ ದೂರಿಗೆ ಸಂಬಂಧಿಸಿ ಸಾಕ್ಷ್ಯಗಳಿಲ್ಲ, ಸುಳ್ಳು ದೂರು ನೀಡಿದ್ದಕ್ಕಾಗಿ ನಿನ್ನ ಮೇಲೆಯೇ ಕ್ರಮ ಕೈಗೊಳ್ಳಬಹುದು ಎಂದು ಹೇಳಿದ್ದಾರೆ' ಎಂದು ಆರೋಪಿಸಿದರು.

'ಪ್ರಾಂಶುಪಾಲರ ಕೊಠಡಿಯಿಂದ ಹೊರಬರುತ್ತಿದ್ದಂತೆಯೇ ನನ್ನ ಮಗಳು ಬೆಂಕಿ ಹಚ್ಚಿಕೊಂಡಿದ್ದಾಳೆ. ಆಂತರಿಕ ದೂರು ಸಮಿತಿಯವರೇ ನನ್ನ ಮಗಳ ಸಾವಿಗೆ ಕಾರಣ' ಎಂದೂ ಆರೋಪ ವ್ಯಕ್ತಪಡಿಸಿದರು.

'ಸಮಿತಿಗೆ ದೂರು ನೀಡಿದ ಬಳಿಕ ಆಕೆ ತೀವ್ರ ಮಾನಸಿಕ ಒತ್ತಡದಲ್ಲಿ ಇದ್ದಳು. ಪ್ರಾಧ್ಯಾಪಕರ ಮೇಲೆ ಯಾವುದೇ ಕ್ರಮ ಕೈಗೊಳ್ಳದ ಬಗ್ಗೆಯೂ ತೀವ್ರ ಅಸಮಾಧಾನದಿಂದ ಇದ್ದಳು' ಎಂದು ವಿದ್ಯಾರ್ಥಿನಿಯ ಸ್ನೇಹಿತರು ಹೇಳಿದರು. ನ್ಯಾಯಕ್ಕಾಗಿ ಸುಮಾರು ಒಂದು ವಾರ ವಿದ್ಯಾರ್ಥಿನಿ ಕಾಲೇಜು ಆವರಣ ದಲ್ಲಿ ಪ್ರತಿಭಟನೆ ನಡೆಸಿದ್ದರು.

ತನಗಾದ ದೌರ್ಜನ್ಯದ ಕುರಿತು ನ್ಯಾಯ ಕೊಡಿಸುವಂತೆ ವಿದ್ಯಾರ್ಥಿನಿಯು 'ಎಕ್ಸ್'ನಲ್ಲಿ ಪೋಸ್ಟ್ ಹಂಚಿಕೊಂಡಿದ್ದರು. ಸ್ಥಳೀಯ ಶಾಸಕ, ಒಡಿಶಾ ಮುಖ್ಯಮಂತ್ರಿ ಹಾಗೂ ಸಂಸದರಿಗೆ ಪೋಸ್ಟ್ ಅನ್ನು ಟ್ಯಾಗ್ ಮಾಡಿದ್ದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in



ಸುಭಾಷಿತ

ನೀತಿ ನಿಯಮಗಳ ಬೇಲಿ ಇಲ್ಲದೆ ಸಮಾಜ ಜೀವನವೇ ಅಸಾಧ್ಯ.

ಎಂ. ಗೋಪಾಲಕೃಷ್ಣ ಅಡಿಗ

ಸಂಪಾದಕೀಯ

ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಮುಕ್ತ ಮನಸ್ಸಿನ ಚರ್ಚೆ ಅಗತ್ಯ

ಸಾಮಾಜಿಕ ಮಾಧ್ಯಮಗಳಲ್ಲಿ ಕಂಡುಬರುತ್ತಿರುವ ವಿಭಜಕ ಪ್ರವೃತ್ತಿಗಳನ್ನು ಹತ್ತಿಕ್ಕುವ ಅಗತ್ಯವನ್ನು ಸುಪ್ರೀಂ ಕೋರ್ಟ್ ಪ್ರತಿಪಾದಿಸಿದೆ; ಸಾಮಾಜಿಕ ಮಾಧ್ಯಮದಲ್ಲಿ ಆಕ್ಷೇಪಾರ್ಹ ಹಾಗೂ ಪ್ರಚೋದನಕಾರಿ ಪೋಸ್ಟ್‌ಗಳನ್ನು ನಿಯಂತ್ರಿಸಲು ಮಾರ್ಗಸೂಚಿ ರೂಪಿಸುವುದನ್ನು ಪರಿಗಣಿಸುವುದಾಗಿಯೂ ಹೇಳಿದೆ. ಸಮುದಾಯಗಳ ನಡುವೆ ದ್ವೇಷ ಹಾಗೂ ವಿಭಜಕ ಭಾವನೆಯನ್ನು ಉತ್ತೇಜಿಸುವುದಕ್ಕೆ ಸಾಮಾಜಿಕ ಜಾಲತಾಣಗಳು ವ್ಯಾಪಕವಾಗಿ ಬಳಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ಅಭಿಪ್ರಾಯಕ್ಕೆ ವಿಶೇಷ ಮಹತ್ವವಿದೆ. ಹಿಂದೂ ದೇವತೆಗೆ ಸಂಬಂಧಿಸಿದಂತೆ 'ಎಕ್ಸ್'ನಲ್ಲಿ ಆಕ್ಷೇಪಾರ್ಹ ಪೋಸ್ಟ್ ಹಂಚಿಕೊಂಡಿದ್ದಕ್ಕಾಗಿ ಹಲವು ರಾಜ್ಯಗಳಲ್ಲಿ ಪ್ರಕರಣ ಎದುರಿಸುತ್ತಿರುವ ವಜಾಹತ್ ಖಾನ್ ಸಲ್ಲಿಸಿರುವ ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ವಿಭಾಗೀಯ ನ್ಯಾಯಪೀಠ, ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಸೂಕ್ಷ್ಮ ಸಂಗತಿಗಳನ್ನು ಪ್ರಸ್ತಾಪಿಸಿದೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಆರ್‌ಎಸ್‌ಎಸ್ ಬಗ್ಗೆ ರಚಿಸಿದ್ದ ವ್ಯಂಗ್ಯಚಿತ್ರ ಹಂಚಿಕೊಂಡಿದ್ದಕ್ಕಾಗಿ ಕಾನೂನು ಕ್ರಮ ಎದುರಿಸುತ್ತಿರುವ ಇಂದೋರ್‌ನ ವ್ಯಂಗ್ಯಚಿತ್ರಕಾರ ಹೇಮಂತ್ ಮಾಳವೀಯ ಅವರ ಜಾಮೀನು ಅರ್ಜಿ ವಿಚಾರಣೆಯ ಪ್ರಕರಣದಲ್ಲಿ, ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ದುರುಪಯೋಗ ಆಗಿದೆ ಎಂದೂ ಸುಪ್ರೀಂ ಕೋರ್ಟ್ ಗುರ್ತಿಸಿದೆ. ಈ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್ ವ್ಯಕ್ತಪಡಿಸಿರುವ ಅಭಿಪ್ರಾಯಗಳು ವಾಕ್ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಜೊತೆಗೆ ನಿರ್ವಹಿಸಬೇಕಾದ ಹೊಣೆಗಾರಿಕೆಯನ್ನು ನಾಗರಿಕರಿಗೆ ನೆನಪು ಮಾಡುವಂತಿವೆ. ಸಂವಿಧಾನದ 19 (2)ನೇ ವಿಧಿಯ ಅಡಿಯಲ್ಲಿ ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಇರುವ ನಿರ್ಬಂಧಗಳನ್ನು ನೆನಪಿಸಿರುವ ಸುಪ್ರೀಂ ಕೋರ್ಟ್, ಆ ನಿರ್ಬಂಧಗಳು ಸರಿಯಾಗಿಯೇ ಇವೆ ಎಂದೂ ಹೇಳಿದೆ.



ಅಭಿವ್ಯಕ್ತಿ ಸ್ವಾತಂತ್ರ್ಯದ ಎಲ್ಲೆಯನ್ನು ಗೆರೆ ಎಳೆದಂತೆ ಗುರ್ತಿಸುವುದು ಸಾಧ್ಯವಿಲ್ಲ. ಹಾಗಾಗಿ, ಅಭಿವ್ಯಕ್ತಿ ಸ್ವಾತಂತ್ರ್ಯದ ಸಲಹೆ, ವ್ಯಾಖ್ಯಾನಗಳನ್ನು ವ್ಯಾಪಕ ಚರ್ಚೆಗೆ ಒಳಪಡಿಸಬೇಕಾಗಿದೆ.

ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೌಲ್ಯಗಳನ್ನು ನಾಗರಿಕರು ಅರಿತುಕೊಳ್ಳಬೇಕು ಹಾಗೂ ಸ್ವಯಂ ನಿಯಂತ್ರಣ ಪಾಲಿಸಬೇಕು ಎಂದು ನ್ಯಾಯಪೀಠ ಹೇಳಿರುವುದು ಸರಿಯಾಗಿದೆ. ಅಭಿಪ್ರಾಯ ವ್ಯಕ್ತಪಡಿಸಲು ಎಲ್ಲರೂ ಸ್ವತಂತ್ರರು ಎನ್ನುವುದು ನಿಜವಾದರೂ, ನಮ್ಮ ಮಾತು ಉಂಟು ಮಾಡಬಹುದಾದ ಸಾಮಾಜಿಕ ಪರಿಣಾಮದ ಬಗ್ಗೆ ಯೋಚಿಸಲು ನ್ಯಾಯಪೀಠದ ಅಭಿಪ್ರಾಯಗಳು ನಮ್ಮನ್ನು ಒತ್ತಾಯಿಸುವಂತಿವೆ. ಸಾಮಾಜಿಕ ಜಾಲತಾಣಗಳ ಪೋಸ್ಟ್‌ಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿ ರಚಿಸುವ ಚಿಂತನೆಯ ಜೊತೆಗೆ, 'ಸೆನ್ಸಾರ್‌ಶಿಪ್' ಬಗ್ಗೆ ತಾನು ಮಾತನಾಡುತ್ತಿಲ್ಲ ಎಂದು ಸ್ಪಷ್ಟಪಡಿಸಿರುವ ನ್ಯಾಯಪೀಠ, ವ್ಯಕ್ತಿತ್ವದ ಘನತೆ, ಭ್ರಾತೃತ್ವ ಭಾವನೆ ಹಾಗೂ ಜಾತ್ಯತೀತ ಮನೋಭಾವದ ಅಗತ್ಯವನ್ನು ಒತ್ತಿಹೇಳಿದೆ. ಸುಪ್ರೀಂ ಕೋರ್ಟ್‌ನ ಸಲಹೆ ರೂಪದ ಅಭಿಪ್ರಾಯ, ಎಲ್ಲರ ಒಳಿತನ್ನು ಬಯಸುವ ಭಾರತೀಯ ಸಮಾಜದ ವಿವೇಕದ ಮೇಲೆ ಕವಿದಿರುವ ದೂಳನ್ನು ಸ್ವಚ್ಛಗೊಳಿಸಲು ನೀಡಿರುವ ಎಚ್ಚರಿಕೆಯ ಸೂಚನೆಯಂತಿದೆ.

ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮೌಲ್ಯದ ರೂಪದಲ್ಲಿ ನೋಡಬೇಕೆನ್ನುವ ಸುಪ್ರೀಂ ಕೋರ್ಟ್ ಅಭಿಪ್ರಾಯ ಸರಿಯಾದುದಾದರೂ, ಸಮಕಾಲೀನ ರಾಜಕಾರಣದಲ್ಲಿ ಅನುಕೂಲಕ್ಕೆ ತಕ್ಕಂತೆ ಮೌಲ್ಯಗಳು ಬದಲಾಗುತ್ತಿರುವುದನ್ನು ಮರೆಯುವಂತಿಲ್ಲ. ಅಭಿವ್ಯಕ್ತಿ ಸ್ವಾತಂತ್ರ್ಯದ ಎಲ್ಲೆಯನ್ನು ಗೆರೆ ಎಳೆದಂತೆ ಗುರ್ತಿಸುವುದು ಸಾಧ್ಯವಿಲ್ಲ. ಈ ಬಿಕ್ಕಟ್ಟು, ಸೃಜನಶೀಲ ಕಲೆಗಳ ಅಭಿವ್ಯಕ್ತಿಯ ಸಂದರ್ಭದಲ್ಲಿ ಮತ್ತಷ್ಟು ಸೂಕ್ಷ್ಮವಾಗುತ್ತದೆ ಹಾಗೂ ಸೃಜನಶೀಲ ಸಾಧ್ಯತೆಗಳನ್ನು ಮೊಟಕುಗೊಳಿಸುವ ಅಪಾಯ ಕಲ್ಪಿಸಲಾಗದು. ಸೃಜನಶೀಲ ಅಭಿವ್ಯಕ್ತಿಯನ್ನು ಕೂಡ ನೀತಿಯ ನೋಟದಿಂದ ನೋಡಲು ಒತ್ತಾಯಿಸುವುದು, ಚಿಕ್ಕ ಟಿಪ್ಪಣಿಗಳನ್ನೂ ಸಹಿಸದ ರಾಜಕಾರಣಿಗಳು ಹಾಗೂ ರಾಜಕೀಯ ಪಕ್ಷಗಳ ಕೆಲವು ಬಗೆಯ ಅಸಹನೆಗೆ ಕಾರಣವಾಗುತ್ತಿದೆ. ಹಾಗೆ ನೋಡಿದರೆ, ಬಹಳಷ್ಟು ಸಂದರ್ಭಗಳಲ್ಲಿ ಜನ ಪ್ರತಿನಿಧಿಗಳೇ ನಾಲಿಗೆ ಸಡಿಲಬಿಟ್ಟು ಮಾತನಾಡುವುದಿದೆ ಹಾಗೂ ಆ ಮಾತುಗಳನ್ನು ಹಣ, ಅಧಿಕಾರ ಹಾಗೂ ಜಾತಿ ಬಲದ ಜೊತೆಗೆ, ಸಂವಿಧಾನದತ್ತವಾದ ವಿಶೇಷ ರಕ್ಷಣಾ ಕವಚವನ್ನು ಬಳಸಿ ಅರಗಿಸಿಕೊಳ್ಳುತ್ತಾರೆ. ಈ ಯಾವ ರಕ್ಷಣಾ ಕವಚಗಳೂ ಇಲ್ಲದ ಜನಸಾಮಾನ್ಯರು, ಕಲಾವಿದರು ಹಾಗೂ ಪತ್ರಕರ್ತರು ಅಭಿವ್ಯಕ್ತಿ ಸ್ವಾತಂತ್ರ್ಯದ ಮೌಲ್ಯವನ್ನು ರಕ್ಷಿಸುವ ಹೊಣೆಗಾರಿಕೆ ನಿರ್ವಹಿಸಬೇಕಾಗುತ್ತದೆ. ಸಮಾಜದಲ್ಲಿ ಕಾಣಿಸುತ್ತಿರುವ ಒಡಕು ಹಾಗೂ ದ್ವೇಷ ಮನೋಭಾವದ ಪ್ರವೃತ್ತಿಗೆ ಸಾಮಾಜಿಕ ಮಾಧ್ಯಮ ಕನ್ನಡಿಯಂತಿದೆ. ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನ ಹಾಗೂ ಪ್ರಚೋದನಕಾರಿ ಪೋಸ್ಟ್‌ಗಳನ್ನು ಹಾಕುವ ಪಡೆಯೊಂದು ಸಕ್ರಿಯವಾಗಿದ್ದು, ಆ ಪಡೆಯನ್ನು ರಾಜಕಾರಣಿಗಳೇ ಪೋಷಿಸುತ್ತಿದ್ದಾರೆ. ಈ ವಿರೋಧಾಭಾಸದ ಕಾರಣದಿಂದಲೇ, ಅಭಿವ್ಯಕ್ತಿ ಸ್ವಾತಂತ್ರ್ಯದ ಸಲಹೆ, ವ್ಯಾಖ್ಯಾನಗಳನ್ನು ಸಹಾನುಭೂತಿಯಿಂದ ನೋಡಬೇಕಾಗಿದೆ ಹಾಗೂ ವ್ಯಾಪಕ ಚರ್ಚೆಗೆ ಒಳಪಡಿಸಬೇಕಾಗಿದೆ.

ಚಾಟಿ

ಒಣ ತರ್ಕ ಬೇಡ



ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು, ವಿಡಿಯೊ ಕಾನ್ಫರೆನ್ಸ್ ಮೂಲಕ ಸೇತುವೆ ಉದ್ಘಾಟನೆಯ ಬಗ್ಗೆ ಚರ್ಚಿಸಬಹುದಿತ್ತು. ಅದನ್ನು ಮಾಡದೆ ಹೋದುದು, ಮುಖ್ಯಮಂತ್ರಿಗೆ ತೋರಿದ ಅಗೌರವವಷ್ಟೇ ಅಲ್ಲ; ಕರ್ನಾಟಕದ ಜನತೆಗೆ ತೋರಿದ ಅಗೌರವ. ರಾಜ್ಯ ಸರ್ಕಾರವು ಚಕ್ರವರ್ತಿಗಳ ಅಧೀನದ ಸಾಮಂತ ಸರ್ಕಾರ ಅಲ್ಲ.

ಕೆ. ವೆಂಕಟರಾಜು, ಹಿರಿಯ ರಂಗಕರ್ಮಿ, ಫೇಸ್‌ಬುಕ್‌ನಿಂದ

ಕಿಡಿನುಡಿ



ದಶಕದ ಹಿಂದೆ ಅನ್ನದಾತರ ಆದಾಯವನ್ನು ದ್ವಿಗುಣಗೊಳಿಸುವ ಮತ್ತು 'ಆತ್ಮನಿರ್ಭರ ಭಾರತ' ನಿರ್ಮಿಸುವ ಭರವಸೆಯೊಂದಿಗೆ ಬಿಜೆಪಿಯು ಕೇಂದ್ರದಲ್ಲಿ ಗದ್ದುಗೆ ಏರಿತು. ಪ್ರಸ್ತುತ ಕೃಷಿ ಆರ್ಥಿಕತೆಯು ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಈ ನಡುವೆಯೇ ಕರ್ನಾಟಕದ ಬಿಜೆಪಿಯ ಕೇಂದ್ರ ಸಚಿವರು ತಾವು ಪ್ರತಿನಿಧಿಸುವ ರಾಜ್ಯದ ಹಿತಾಸಕ್ತಿಯ ಪರವಾಗಿ ನಿಲ್ಲುವ ಬದಲು ದ್ವೇಷ ಹರಡುವುದರಲ್ಲಿ ಮಗ್ನರಾಗಿದ್ದಾರೆ.

ಪ್ರಿಯಾಂಕ್ ಖರ್ಗೆ, ಐ.ಟಿ.–ಬಿ.ಟಿ. ಸಚಿವ

25 ವರ್ಷಗಳ ಹಿಂದೆ

ಭಾನುವಾರ, 16-7-2000

● ಸಂಚು ಭೇದಿಸಿದ ಸಿಓಡಿ

ಹುಬ್ಬಳ್ಳಿ, ಜುಲೈ 15– ಕಳೆದ ಶನಿವಾರ ಇಲ್ಲಿನ ಲೂಥೆರಾನ್ ಚರ್ಚ್‌ನಲ್ಲಿ ನಡೆದ ಬಾಂಬ್ ಸ್ಫೋಟದ ಘಟನೆಗೆ ಸಂಬಂಧಿಸಿದಂತೆ ಹುಬ್ಬಳ್ಳಿಯ ಇಬ್ಬರು ವ್ಯಕ್ತಿಗಳನ್ನು ಇಂದು ಇಲ್ಲಿ ಬಂಧಿಸುವ ಮೂಲಕ ಸಿಓಡಿ ಪೊಲೀಸರು, ಈ ಪ್ರಕರಣದ ಸಂಚನ್ನು ಭೇದಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಆರೋಪಿಗಳ ಬಂಧನದ ವಿಷಯವನ್ನು ಈ ಪ್ರಕರಣದ ತನಿಖೆ ನಡೆಸುತ್ತಿರುವ ಸಿಓಡಿ ಎಸ್.ಪಿ ಎಂ.ಆರ್. ಪೂಜಾರ ಅವರು, ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಬಂಧಿತ ಆರೋಪಿಗಳನ್ನು ರಿಷಿ ಬಸವರಾಜು ಹಿರೇಮಠ (31) ಮತ್ತು ಸೈಯದ್ ಮುನೀರುದ್ದೀನ್ ಮುಲ್ಲಾ (38) ಎಂದು ಗುರುತಿಸಲಾಗಿದೆ. ಇವರಿಬ್ಬರು ಹಳೇ ಹುಬ್ಬಳ್ಳಿಯ ನಿವಾಸಿಗಳು ಮತ್ತು ಹೈದರಾಬಾದ್‌ನ ದೀನದಾರ್ ಚೆನ್ನಬಸವೇಶ್ವರ ಸಿದ್ದಿಖಿ ಸಂಘಟನೆಯ ಹುಬ್ಬಳ್ಳಿ ಶಾಖೆಯ ಜಂಟಿ ಕಾರ್ಯದರ್ಶಿ ಮತ್ತು ಕಾರ್ಯದರ್ಶಿಗಳು.

75 ವರ್ಷಗಳ ಹಿಂದೆ

ಭಾನುವಾರ, 16-7-1950

● ಸರ್ಕಾರಿ ರಹಸ್ಯ ಪರಿಪತ್ರದ ಅರಿವಿಲ್ಲದ ಪ್ರಕಟಣೆ ಅಪರಾಧವಲ್ಲ

ಬೊಂಬಾಯಿ, ಜುಲೈ 15– 'ರ್‍ಯಾಡಿಕಲ್ ಹ್ಯೂಮನಿಸ್ಟ್' ಪತ್ರಿಕೆಯ ವ್ಯವಸ್ಥಾಪಕ ಸಂಪಾದಕರಾದ ವಿ.ಬಿ. ಕರ್ಣಿಕ್ ಹಾಗೂ ಪ್ರಕಾಶಕರಾದ ಮಿಸ್. ಮಣಿಬೆನ್ ಕಾರಾರವರು ರಹಸ್ಯ ಸರ್ಕಾರಿ ಪರಿಪತ್ರ (ಸರ್ಕ್ಯುಲರ್) ಒಂದನ್ನು ಪ್ರಕಟಿಸಿದರೆಂಬ ಆರೋಪದ ಮೇಲೆ ಹೂಡಲಾಗಿದ್ದ ಮೊಕದ್ದಮೆಯಲ್ಲಿ ಮುಂಬೈನ ಪ್ರಮುಖ ಪ್ರೆಸಿಡೆನ್ಸಿ ನ್ಯಾಯಧೀಶರು ವಿಚಾರಣೆ ನಡೆಸಿ, ಅವರು ತಪ್ಪಿತಸ್ಥರಲ್ಲವೆಂದು ತೀರ್ಪಿತ್ತರು.

'ರ್‍ಯಾಡಿಕಲ್ ಹ್ಯೂಮನಿಸ್ಟ್' ಪತ್ರಿಕೆಯ ಸಂಪಾದಕರಾದ ಎಂ.ಎನ್. ರಾಯ್ ಅವರ ಮೇಲೂ ಇದೇ ಆರೋಪ ಹೊರಿಸಿ ಮೊಕದ್ದಮೆ ಹೂಡಲಾಗಿದೆ.

ಗದ್ದುಗೆ ಗುದ್ದಾಟ: ಗೆಲುವು ಯಾರಿಗೆ?



ಗತಿಬಿಂಬ

ವೈ.ಗ. ಜಗದೀಶ್

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ಎರಡು ವರ್ಷ ತುಂಬುತ್ತಿದ್ದಂತೆಯೇ ಗದ್ದುಗೆ ಗುದ್ದಾಟ ಜೋರಾಗಿದೆ. ಎರಡೂವರೆ ವರ್ಷದ ಬಳಿಕ ನಾಯಕತ್ವ ಬದಲಾವಣೆಯ ಒಪ್ಪಂದ ಆಗಿದೆಯೋ ಇಲ್ಲವೋ ಎಂಬುದರ ಬಗ್ಗೆ ಆ ಪಕ್ಷದ ಹೈಕಮಾಂಡ್ ತುಟಿಬಿಚ್ಚಿಲ್ಲ. ಆದರೆ, ಕಾಂಗ್ರೆಸ್‌ನ ರಾಜ್ಯ ಘಟಕದಲ್ಲಿ 'ಅಧಿಕಾರ ಹಸ್ತಾಂತರ'ದ ಚಡಪಡಿಕೆಯಂತೂ ಶುರುವಾಗಿದೆ.

ಎಸ್.ಎಂ. ಕೃಷ್ಣ ಅವರು ನಿಧನರಾದಾಗ ವಿಧಾನಸಭೆಯಲ್ಲಿ ಸಂತಾಪ ಸೂಚಿಸಿ ಮಾತನಾಡಿದ್ದ ಡಿ.ಕೆ. ಶಿವಕುಮಾರ್ ಅವರು, 'ಅಧಿಕಾರ ತಂತಾನೇ ಸಿಗುವುದಿಲ್ಲ; ಒದ್ದು ಕಿತ್ತುಕೊಳ್ಳಬೇಕಾಗುತ್ತದೆ' ಎಂದು ಪ್ರಾಸಂಗಿಕವಾಗಿ ಹೇಳಿದ್ದರು. ಸಿದ್ದರಾಮಯ್ಯ ಅವರ ಆಪ್ತ ಬಣದಲ್ಲಿ ಗುರುತಿಸಿಕೊಂಡಿದ್ದ ಸಚಿವರು ತಿರುಗಿಬಿದ್ದಿದ್ದರು. ಶಿವಕುಮಾರ್ ನಿಭಾಯಿಸುತ್ತಿರುವ ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಸ್ಥಾನವನ್ನು ಕಿತ್ತುಕೊಳ್ಳುವ ಹೊಸ ಪಟ್ಟು ಹಾಕಿದ್ದರು. ಇದರಿಂದ ಕಾಂಗ್ರೆಸ್‌ನಲ್ಲಿ ಬಣ ರಾಜಕೀಯ ಬಿಗಡಾಯಿಸಿತ್ತು. 'ನಾಯಕತ್ವ ಬದಲಾವಣೆಯ ಬಗ್ಗೆ ಯಾರೊಬ್ಬರೂ ಬಹಿರಂಗವಾಗಿ ಮಾತನಾಡಕೂಡದು' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಕಟ್ಟಾಜ್ಞೆ ವಿಧಿಸಿದ್ದರು. ಕೆಲ ದಿನಗಳಲ್ಲೇ ಇದನ್ನು ಧಿಕ್ಕರಿಸಿದ ಸಿದ್ದರಾಮಯ್ಯ ಮತ್ತು ಶಿವಕುಮಾರ್ ಆಪ್ತರು ಹಾದಿಯಲ್ಲಿ ಮಾತನಾಡತೊಡಗಿದರು. ಅಲ್ಲಿಗೆ, ಕಾಂಗ್ರೆಸ್ ಹೈಕಮಾಂಡ್‌ಗೆ ಕರ್ನಾಟಕದ ಮೇಲೆ ಹಿಡಿತ ಇಲ್ಲ ಎಂಬುದು ಸ್ಪಷ್ಟವಾಯಿತು.

ಏತನ್ಮಧ್ಯೆಯೇ ಎರಡು ಬಣಗಳ ಪೈಪೋಟಿ ಮುಂದುವರಿದೇ ಇತ್ತು. ಎಚ್.ಡಿ. ದೇವೇಗೌಡರ ತವರು ಜಿಲ್ಲೆ ಹಾಸನದಲ್ಲಿ ಸಮಾವೇಶ ನಡೆಸುವ ಮೂಲಕ ಸಿದ್ದರಾಮಯ್ಯ ಶಕ್ತಿ ಪ್ರದರ್ಶನಕ್ಕೆ ಅವರ ಆಪ್ತರು ಸಜ್ಜಾಗಿದ್ದರು. ಅದಕ್ಕೆ ಹೈಕಮಾಂಡ್ ಮುಖೇನ ತಡೆ ಹಾಕಿಸಿದ ಶಿವಕುಮಾರ್, ಅದನ್ನು 'ಕಾಂಗ್ರೆಸ್ ಸಮಾವೇಶ' ಎಂದು ಬದಲಾಯಿಸಿದರು.

ಸಿದ್ದರಾಮಯ್ಯನವರ ಬಲ ಕ್ರೋಡೀಕರಿಸಲು ದಲಿತ ಸಮಾವೇಶ ನಡೆಸಲು ಅವರ ಆಪ್ತ ಸಚಿವರು ಮುಂದಾದರು. ಸಮಾವೇಶ ಮಾತ್ರವಲ್ಲ; ದಲಿತ ನಾಯಕರ ಭೋಜನಕೂಟಕ್ಕೂ ಹೈಕಮಾಂಡ್ ಕಡಿವಾಣ ಹಾಕಿತು. ಕಲಬುರಗಿಯಲ್ಲಿ ನಡೆದ ಸಮಾವೇಶದಲ್ಲಿ ಮಾತನಾಡಿದ್ದ ಮಲ್ಲಿಕಾರ್ಜುನ ಖರ್ಗೆಯವರು, 'ಇಬ್ಬರೂ ಒಟ್ಟಾಗಿ ಹೋದರಷ್ಟೇ ಅಭಿವೃದ್ಧಿ ಸಾಧ್ಯ' ಎಂದು ಹೇಳುವ ಮೂಲಕ, 'ಕಚ್ಚಾಟ ನಿಲ್ಲಿಸಿ' ಎಂದು ಸೂಚನೆ ಕೊಟ್ಟಿದ್ದರು.

ಈ ನಡುವೆ, 'ನಾವಿಬ್ಬರೂ ಒಂದು ಸಹಮತಕ್ಕೆ ಬಂದಿದ್ದೇವೆ' ಎಂದು ಸಂದರ್ಶನದಲ್ಲಿ ಶಿವಕುಮಾರ್ ನೀಡಿದ ಹೇಳಿಕೆ ಮತ್ತೆ ನಾಯಕತ್ವ ಬದಲಾವಣೆಯ ಚರ್ಚೆಗೆ ಇಂಬು ಕೊಟ್ಟಿತು. ಸಿದ್ದರಾಮಯ್ಯ ಆಪ್ತರು ಮತ್ತೆ ಪ್ರತ್ಯೇಕ ಸಭೆಗಳನ್ನು ನಡೆಸಲು ಶುರುವಿಟ್ಟರು. 'ಅಧಿಕಾರ ಹಂಚಿಕೆಯ ಒಪ್ಪಂದವಾಗಿಲ್ಲ. ಸಿದ್ದರಾಮಯ್ಯ ಐದು ವರ್ಷ ಪೂರ್ಣಗೊಳಿಸುತ್ತಾರೆ' ಎಂದು ಅವರ ಮಗ ಯತೀಂದ್ರ ನೀಡಿದ ಹೇಳಿಕೆ, ಈ ಬಣ ಜಗಳಕ್ಕೆ ತಿರುವು ನೀಡಿತು.

ಈ ಬೆನ್ನಲ್ಲೇ, 'ಮುಖ್ಯಮಂತ್ರಿ ಬದಲಾವಣೆ ಹೈಕಮಾಂಡ್ ಕೈಯಲ್ಲಿದೆ. ಹೈಕಮಾಂಡ್ ಎಲ್ಲವನ್ನೂ ಗಮನಿಸುತ್ತಿದ್ದು, ಸೂಕ್ತ ಕಾಲದಲ್ಲಿ ತೀರ್ಮಾನ ತೆಗೆದುಕೊಳ್ಳಲಿದೆ' ಎಂದು ಖರ್ಗೆಯವರು ನೀಡಿದ ಹೇಳಿಕೆ, ಕಾಂಗ್ರೆಸ್‌ನಲ್ಲಿ ಸ್ಫೋಟಕ ವಾತಾವರಣಕ್ಕೆ ದಾರಿ ಮಾಡಿಕೊಟ್ಟಿತು.

ಇದರ ಜತೆಗೆ, ಹೈಕಮಾಂಡ್ ತನ್ನ ಪಟ್ಟು ಬಿಗಿಗೊಳಿಸಲು ಆರಂಭಿಸಿತು. ವಿಧಾನಪರಿಷತ್ತಿನ ನಾಲ್ಕು ಸ್ಥಾನಗಳಿಗೆ ನಾಮನಿರ್ದೇಶನ ಮಾಡಲು ಸಿದ್ದರಾಮಯ್ಯನವರು ಶಿಫಾರಸು ಮಾಡಿದ್ದ ಹೆಸರುಗಳನ್ನು ಹೈಕಮಾಂಡ್ ಅಖೈರುಗೊಳಿಸಿತ್ತು. ಪಟ್ಟಿಯನ್ನು ರಾಜಭವನಕ್ಕೆ ಕಳುಹಿಸುವ ತಯಾರಿಯಲ್ಲಿದ್ದಾಗಲೇ, ಹೈಕಮಾಂಡ್ ಅದಕ್ಕೆ ತಡೆ ಹಾಕಿತು. 2015ರ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯ ವರದಿಗೆ ಅಂಗೀಕಾರ ನೀಡಿಯೇ ಬಿಡುವ ಸಿದ್ಧತೆಯನ್ನು ಸಿದ್ದರಾಮಯ್ಯ ಮಾಡಿಕೊಂಡಿದ್ದರು. ವರದಿ ಸ್ವೀಕರಿಸದಂತೆ ನಿರ್ಬಂಧ ಹೇರಿದ ಹೈಕಮಾಂಡ್, ಹೊಸದಾಗಿ ಸಮೀಕ್ಷೆ ನಡೆಸುವಂತೆ ಸೂಚಿಸಿತು. ಸಿದ್ದರಾಮಯ್ಯನವರ ವೇಗ ಹಾಗೂ ತೀರ್ಮಾನಗಳಿಗೆ ಕಡಿವಾಣ ಹಾಕುವ ಕೆಲಸವನ್ನು ಹೈಕಮಾಂಡ್ ನಿಧಾನಕ್ಕೆ ಆರಂಭಿಸಿದೆ ಎಂಬುದರ ಸೂಚನೆಗಳಿವು.

ಈ ಬೆಳವಣಿಗೆಯ ನಡುವೆಯೇ, ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ರಾಜ್ಯಕ್ಕೆ ಕಳುಹಿಸಿ ಶಾಸಕರ ಅಭಿಪ್ರಾಯ ಸಂಗ್ರಹಿಸುವ ಕೆಲಸವನ್ನು ಹೈಕಮಾಂಡ್ ಮಾಡಿತು. ಎರಡೂವರೆ ವರ್ಷಗಳ ಬಳಿಕ ಅಧಿಕಾರ ಹಂಚಿಕೆ ಸೂತ್ರದ ಅಳವಡಿಕೆ ಹಾಗೂ ಸಚಿವ ಸಂಪುಟ ಪುನರ್‌ರಚನೆಗಾಗಿ ಪಕ್ಷ ಆರಂಭಿಸಿದ ಚಟುವಟಿಕೆ ಎಂದೇ ಇದನ್ನು ಬಿಂಬಿಸಲಾಗುತ್ತಿದೆ.

ತನ್ನ ಕೈ ಕಟ್ಟಿಹಾಕುವ ಯತ್ನದ ವಿರುದ್ಧ ಸೆಟೆದು ನಿಂತ ಸಿದ್ದರಾಮಯ್ಯ, ಹೈಕಮಾಂಡ್‌ಗೆ ಸಡ್ಡು ಹೊಡೆಯಲು ಮುಂದಾಗಿರುವ ಲಕ್ಷಣಗಳು ಕಾಣಿಸಿವೆ. 'ಮುಖ್ಯಮಂತ್ರಿಯಾಗಿ ನಾನೇ ಐದು ವರ್ಷ ಪೂರೈಸುತ್ತೇನೆ' ಎಂದು ಏರುಧ್ವನಿಯಲ್ಲಿ ಪ್ರತಿಪಾದಿಸಿದ ಸಿದ್ದರಾಮಯ್ಯ, ಬಳಿಕ ದೆಹಲಿಗೆ ಹೋದರು. ಅಲ್ಲಿ ರಾಹುಲ್ ಗಾಂಧಿ ಭೇಟಿಗೆ ಯತ್ನಿಸಿದರೂ ಅವರು ಕೈಗೆ ಸಿಗಲಿಲ್ಲ. ಅದೇ ವೇಳೆ ದೆಹಲಿಯಲ್ಲಿದ್ದ ಶಿವಕುಮಾರ್, ಪ್ರಿಯಾಂಕಾ ಗಾಂಧಿ ಭೇಟಿಗೆ ಯತ್ನಿಸಿದರೂ ಸಾಧ್ಯವಾಗಲಿಲ್ಲ. ಅಧಿಕಾರ ಹಂಚಿಕೆ ವಿಷಯದಲ್ಲಿ ಹೈಕಮಾಂಡ್‌ನ ಖಚಿತ ನಿಲುವು ತಿಳಿಯಲು ಇಬ್ಬರೂ ಬಯಸಿದ್ದರು. ಆದರೆ, ತಮ್ಮ ಕೈ ಹಿಡಿಯುವ ನಾಯಕರು ಇಬ್ಬರಿಗೂ ಸಿಗಲಿಲ್ಲ. ಶಿವಕುಮಾರ್ ಬರಿಗೈಲಿ ವಾಪಸ್ ಆದರು. ಆಂಗ್ಲ ಮಾಧ್ಯಮವೊಂದಕ್ಕೆ ಸಂದರ್ಶನ ನೀಡಿದ ಸಿದ್ದರಾಮಯ್ಯ, 'ಶಿವಕುಮಾರ್‌ಗೆ ಹೆಚ್ಚಿನ ಶಾಸಕರ ಬೆಂಬಲ ಇಲ್ಲ; ನಾನೇ ಐದು ವರ್ಷ ಮುಖ್ಯಮಂತ್ರಿ' ಎನ್ನುವ ಮೂಲಕ ಹೈಕಮಾಂಡ್‌ಗೆ ಸಂದೇಶವನ್ನೂ ರವಾನಿಸಿದರು. ಕಾಂಗ್ರೆಸ್ ಹೈಕಮಾಂಡ್ ಮಾತ್ರ ಈ ವಿಷಯದಲ್ಲಿ ಮೌನವನ್ನೇ ಹೊದ್ದುಕೊಂಡಿದೆ. ಅದಕ್ಕೆ ಕಾರಣಗಳನ್ನು ಹುಡುಕಿದರೆ, ಹಲವು ಆಯಾಮಗಳು ತೆರೆದುಕೊಳ್ಳುತ್ತವೆ.

> ಬಿಹಾರ ಚುನಾವಣೆಯ ಫಲಿತಾಂಶ ಕರ್ನಾಟಕದ ವಿಷಯದಲ್ಲಿ ನಿರ್ಣಾಯಕ ಆಗುವ ಲೆಕ್ಕಾಚಾರ ರಾಜಕೀಯ ಪಡಸಾಲೆಯಲ್ಲಿದೆ. ಅಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ವಿಜಯ ಸಾಧಿಸಿದರೆ, ಇಲ್ಲಿನ ಸರ್ಕಾರದ ಪತನಕ್ಕೆ ಕಮಲ ಪಡೆ ಕೈ ಹಾಕುವ ಸಂಭವ ಹೆಚ್ಚಾಗಿದೆ. ಆರ್‌ಜೆಡಿ– ಕಾಂಗ್ರೆಸ್ ಅಧಿಕಾರ ಹಿಡಿದರೆ ಇಲ್ಲಿನ ಕಾಂಗ್ರೆಸ್ ಸರ್ಕಾರದ ಮೇಲೆ ಹಸ್ತಕ್ಷೇಪ ಮಾಡಲು ಹೈಕಮಾಂಡ್ ಮುಂದಾದರೂ ಅಚ್ಚರಿಯಿಲ್ಲ.

ಅಧಿಕಾರ ಹಂಚಿಕೆಯ ಒಪ್ಪಂದ ಆಗಿದೆ ಎಂದು ಶಿವಕುಮಾರ್ ಆಪ್ತರು ಹೇಳುತ್ತಿದ್ದರೆ, ಸಿದ್ದರಾಮಯ್ಯ ಸ್ಪಷ್ಟವಾಗಿ ನಿರಾಕರಿಸಿದ್ದಾರೆ. ಒಂದು ವೇಳೆ ಒಪ್ಪಂದ ಆಗಿದ್ದರೂ ಆ ಅವಧಿ ಪೂರ್ಣಗೊಳ್ಳಲು ಇನ್ನೂ ಆರು ತಿಂಗಳಿದೆ. ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯ ದಾಖಲೆಯನ್ನು ಮುರಿಯುವ ತವಕದಲ್ಲಿ ಸಿದ್ದರಾಮಯ್ಯ ಇದ್ದಾರೆ. 2026ರ ಫೆಬ್ರುವರಿವರೆಗೆ ಅಧಿಕಾರದಲ್ಲಿದ್ದರೆ ಆ ದಾಖಲೆ ಸರಿಗಟ್ಟಬಹುದು. ಅಷ್ಟರಲ್ಲೇ, ಬಜೆಟ್ ಮಂಡನೆ ಸಮೀಪಿಸಲಿದೆ. ಉತ್ತಮ ಬಜೆಟ್ ಕೊಟ್ಟು ಹೋಗುವೆ ಎಂದು ಸಿದ್ದರಾಮಯ್ಯ ಹೇಳಿದರೆ ಇಲ್ಲವೆನ್ನಲಾಗದು. ಹೀಗಾಗಿ, ಅಲ್ಲಿಯವರೆಗೆ ಕಾದು ನೋಡುವ ಲೆಕ್ಕಾಚಾರ ಹೈಕಮಾಂಡ್‌ನದ್ದಾಗಿದೆ ಎಂದು ಹೇಳಲಾಗುತ್ತಿದೆ.

ಇದೇ ನವೆಂಬರ್‌ಲ್ಲಿ ಬಿಹಾರ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಅಲ್ಲಿ ಕಾರ್ಯಪ್ರವೃತ್ತರಾಗಿರುವ ರಾಹುಲ್ ಗಾಂಧಿ ಅಹಿಂದ ಮತಗಳ ಮೇಲೆ ಕಣ್ಣಿಟ್ಟು ಕಾರ್ಯತಂತ್ರ ಹೆಣೆಯುತ್ತಿದ್ದಾರೆ. ಕಾಂಗ್ರೆಸ್ ಅಧಿಕಾರದಲ್ಲಿರುವ ಮೂರು ರಾಜ್ಯಗಳ ಪೈಕಿ ಕರ್ನಾಟಕದಲ್ಲಿ ಮಾತ್ರ ಹಿಂದುಳಿದ ಸಮುದಾಯದ ವ್ಯಕ್ತಿ ಮುಖ್ಯಮಂತ್ರಿಯಾಗಿದ್ದಾರೆ. ಬಿಹಾರ ಚುನಾವಣೆಗೆ ಮೊದಲೇ ಸಿದ್ದರಾಮಯ್ಯ ಅವರನ್ನು ಇಳಿಸುವ ಯತ್ನಕ್ಕೆ ಕೈ ಹಾಕಿದರೆ, ಅದು ವಿರೋಧ ಪಕ್ಷಗಳಿಗೂ ಅಸ್ತ್ರವಾಗಬಹುದು ಎಂಬ ಆತಂಕವೂ ಹೈಕಮಾಂಡ್ ಅನ್ನು ಕಾಡುತ್ತಿರಬಹುದು.

ಕಾಂಗ್ರೆಸ್‌ನಲ್ಲಿ ಅಹಿಂದ ಸಮುದಾಯದ ಪ್ರಬಲ ನಾಯಕರಾಗಿರುವ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಿದರೆ, ಪಕ್ಷದ ಪ್ರಬಲ ಮತಬ್ಯಾಂಕ್ ಆಗಿರುವ ಅಹಿಂದ ಮತಗಳು ಛಿದ್ರವಾಗಬಹುದು ಎಂಬ ಭಯವೂ ಹೈಕಮಾಂಡ್‌ಗೆ ಇದ್ದಂತಿದೆ. ಹೀಗಾಗಿ ಬಿಹಾರ ಚುನಾವಣೆವರೆಗೂ ಕಾಯ್ದುನೋಡುವ ತಂತ್ರಕ್ಕೆ ಹೈಕಮಾಂಡ್ ಮೊರೆ ಹೋದಂತಿದೆ.

ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಹಗ್ಗ ಜಗ್ಗಾಟದ ಬಲಾಬಲ ಎಷ್ಟೆಂದು ಅರಿಯಬೇಕಾದರೆ, 10 ವರ್ಷಗಳ ಹಿಂದಿನ ವಿದ್ಯಮಾನ ನೋಡಬೇಕು.

2013ರಲ್ಲಿ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಸರ್ಕಾರ ರಚನೆಯಾದಾಗ ಶಿವಕುಮಾರ್ ಅವರಿಗೆ ಸಚಿವರಾಗಲೂ ಸಾಧ್ಯವಾಗಿರಲಿಲ್ಲ. 2013ರ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿ ಬೆಂಗಳೂರು ಗ್ರಾಮಾಂತರದಿಂದ ಗೆದ್ದಿದ್ದ ಎಚ್.ಡಿ. ಕುಮಾರಸ್ವಾಮಿ, ಮಂಡ್ಯದಿಂದ ಜೆಡಿಎಸ್‌ನಿಂದ ಗೆದ್ದಿದ್ದ ಎನ್. ಚಲುವರಾಯಸ್ವಾಮಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಎರಡೂ ಕ್ಷೇತ್ರಗಳಿಗೆ ಉಪ ಚುನಾವಣೆ ನಡೆಯಬೇಕಿತ್ತು. ಆ ವೇಳೆಗೊಮ್ಮೆ, ದೆಹಲಿಯಲ್ಲಿದ್ದ ಸಿದ್ದರಾಮಯ್ಯನವರು ಕರ್ನಾಟಕ ಭವನದಲ್ಲಿ ಕಾರು ಹತ್ತಿ ಕುಳಿತಿದ್ದರು. ಆಗ ಅವರ ಬಳಿ ಹೋಗಿದ್ದ ಶಿವಕುಮಾರ್, ಸಂಪುಟಕ್ಕೆ ಸೇರಿಸಿಕೊಳ್ಳಿ ಎಂದು ಮನವಿ ಮಾಡಿದ್ದರು. 'ಎರಡು ಉಪಚುನಾವಣೆ ಗೆಲ್ಲಿಸಿಕೊಂಡು ಬಾ; ಆಮೇಲೆ ನೋಡೋಣ' ಎಂದು ಸಾಗ ಹಾಕಿದ್ದರು. ಗೆಲ್ಲಿಸಿಕೊಂಡು ಬಂದ ಶಿವಕುಮಾರ್ ಸಚಿವರೂ ಆದರು.

2018ರಲ್ಲಿ ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರ ರಾಜ್ಯದಲ್ಲಿ ಅಧಿಕಾರದಲ್ಲಿತ್ತು. ಆ ವೇಳೆ, ಸೋನಿಯಾ ಗಾಂಧಿಯವರ ಆಪ್ತ ಅಹಮದ್ ಪಟೇಲ್ ಅವರು ಗುಜರಾತ್ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆದ ಚುನಾವಣೆಯ ಅಭ್ಯರ್ಥಿಯಾಗಿದ್ದರು. 'ಆಪರೇಷನ್ ಕಮಲ'ದಿಂದ ಗುಜರಾತಿನ ಕಾಂಗ್ರೆಸ್ ಶಾಸಕರನ್ನು ರಕ್ಷಿಸಲು ಬೆಂಗಳೂರಿಗೆ ಕರೆ ತರಲಾಗಿತ್ತು. ಅವರಿಗೆ ರಕ್ಷಣೆ ಕೊಟ್ಟಿದ್ದ ಶಿವಕುಮಾರ್, ಹೈಕಮಾಂಡ್‌ನ ಒಲವು ಗಳಿಸಿದ್ದರು. ಆದಾಯ ತೆರಿಗೆ ಹಾಗೂ ಜಾರಿ ನಿರ್ದೇಶನಾಲಯದ ದಾಳಿಗೆ ಸಿಲುಕಿ, ಜೈಲುವಾಸವನ್ನೂ ಕಂಡರು. ಕೆಪಿಸಿಸಿ ಅಧ್ಯಕ್ಷರಾದ ತರುವಾಯ ಪಕ್ಷವನ್ನು ತಳಮಟ್ಟದಿಂದ ಸಂಘಟಿಸಿದರು. ಹೀಗಾಗಿ, 2023ರ ಚುನಾವಣೆ ಹೊತ್ತಿಗೆ ರಾಜಕೀಯ ಚಿತ್ರಣವೇ ಬದಲಾಗಿತ್ತು. ಸಿದ್ದರಾಮಯ್ಯನವರ ಜನಪ್ರಿಯತೆ, ವರ್ಚಸ್ಸು ಹಾಗೂ ಶಿವಕುಮಾರ್ ಸಂಘಟನಾ ಶಕ್ತಿ, ಇಬ್ಬರೂ ಹೂಡಿದ ಸಂಪನ್ಮೂಲಗಳ ಫಲವಾಗಿ ಕಾಂಗ್ರೆಸ್ ಭರ್ಜರಿ ಗೆಲುವು ಸಾಧಿಸಿತು. 10 ವರ್ಷಗಳ ಹಿಂದೆ, ಸಚಿವ ಸ್ಥಾನಕ್ಕೆ ಅಂಗಲಾಚುವ ಸ್ಥಿತಿಯಲ್ಲಿದ್ದ ಶಿವಕುಮಾರ್, ಈ ಚುನಾವಣೆ ಬಳಿಕ ಮುಖ್ಯಮಂತ್ರಿ ಪಟ್ಟಕ್ಕೆ ಪಟ್ಟು ಹಾಕುವ ಮಟ್ಟಕ್ಕೆ ಬಂದು ನಿಂತಿದ್ದರು.

'ನಾನೇ ಐದು ವರ್ಷ ಮುಖ್ಯಮಂತ್ರಿ' ಎಂದು ಸಿದ್ದರಾಮಯ್ಯ ಅಬ್ಬರಿಸುತ್ತಿದ್ದರೂ ಶಿವಕುಮಾರ್ ಮಾತ್ರ ಮೌನ ವಹಿಸಿದ್ದಾರೆ. 'ಖರ್ಗೆಯವರು ದೀಕ್ಷೆ ಕೊಟ್ಟಿದ್ದಾರೆ. ಪಕ್ಷ ಹೇಳಿದಂತೆ ಕೇಳುವುದಷ್ಟೇ ತಮ್ಮ ಕೆಲಸ' ಎಂದು ಶಿವಕುಮಾರ್ ಹೇಳುತ್ತಿದ್ದಾರೆ. ಕಿತ್ತುಕೊಳ್ಳಲು ಹೋದರೆ ಸಿದ್ದರಾಮಯ್ಯನವರು ಬಿಟ್ಟುಕೊಡುವವರಲ್ಲ ಎಂಬುದು ಅವರಿಗೂ ಗೊತ್ತಾದಂತಿದೆ. ಹಾಗಂತ ಸುಮ್ಮನೆ ಕೂರುವ ಜಾಯಮಾನವೂ ಅವರದಲ್ಲ. 10 ವರ್ಷಗಳ ಹಿಂದಿನ ದಿನಗಳಿಗೆ ಹೋಲಿಸಿದರೆ ಅವರೀಗ ಮಾಗಿದ್ದಾರೆ. ಕಾಯಿ ಹಣ್ಣಾಗುವವರೆಗೆ ಕಾಯುವ ತಾಳ್ಮೆಯೂ ಬಂದಂತಿದೆ. ಜಟ್ಟಿ ಕೈ ಕಟ್ಟಿದ್ದಾನೆಂದರೆ ಸೋತ ಎಂದಲ್ಲ; ಎದುರಾಳಿಯನ್ನು ಮಣಿಸಲು ಮತ್ತೊಂದು ಬಲಿಷ್ಠ ಪಟ್ಟು ಹಾಕುವ ಕಾಲಕ್ಕೆ ಕಾಯುತ್ತಿದ್ದಾನೆ ಎಂದೇ ಭಾವಿಸಬೇಕು. ಅಬ್ಬರ–ಮೌನದ ಗುದ್ದಾಟದಲ್ಲಿ ಗೆಲ್ಲುವವರು ಯಾರು? ಯಾರಿಗೆ ನಷ್ಟ ಎಂಬುದನ್ನು ಕಾಲವೇ ಹೇಳಬೇಕು.

ವಾಚಕರ ವಾಣಿ

ರಸ್ತೆ–ಸೇತುವೆ: ಮಾಹಿತಿ ಅಗತ್ಯ

ಪ್ಯಾಕಿಂಗ್ ಮಾಡಲಾದ ದಿನಸಿ ವಸ್ತುಗಳಿಂದ ಹಿಡಿದು ಎಲೆಕ್ಟ್ರಾನಿಕ್ ಸಾಧನಗಳ ತನಕ, ಪ್ರತಿಯೊಂದು ವಸ್ತುವಿನ ಮೇಲೂ ಅದರ ತಯಾರಕರ ಹೆಸರು, ಬೆಲೆ, ತಯಾರಿಸಿದ ದಿನಾಂಕ, ಬಳಕೆಯ ಅವಧಿ ಮುಂತಾದ ಅಂಶಗಳು ನಮೂದಾಗಿರುತ್ತವೆ. ಆ ಮಾಹಿತಿ ಗ್ರಾಹಕರಿಗೆ ಉಪಯುಕ್ತ ಹಾಗೂ ವಸ್ತುವಿನ ಗುಣಮಟ್ಟದಲ್ಲಿ ಲೋಪವಿದ್ದಾಗ ಕಾನೂನು ಕ್ರಮಕೈಗೊಳ್ಳಲು ಸಹಕಾರಿ. ಇಂತಹ ಮಾಹಿತಿ ನಾವು ಬಳಸುವ ರಸ್ತೆ, ಸೇತುವೆ, ಚರಂಡಿ, ಸರ್ಕಾರಿ ಕಟ್ಟಡಗಳು ಮುಂತಾದ ಸಾರ್ವಜನಿಕ ಮೂಲಸೌಕರ್ಯಗಳಿಗೂ ಅಗತ್ಯ.

ರಸ್ತೆ ಅಥವಾ ಸೇತುವೆ ನಿರ್ಮಾಣ ಮಾಡಿದ ಸಂಸ್ಥೆಯ ಹೆಸರು, ಕಾಮಗಾರಿ ವೆಚ್ಚ, ನಿರ್ಮಾಣದ ದಿನಾಂಕ, ಕಾಲಾವಧಿ, ಒಪ್ಪಂದದ ಅವಧಿ, ನಿರ್ವಹಣೆಗೆ ಯಾರು ಹೊಣೆ ಮುಂತಾದ ಮಾಹಿತಿಗಳು ಸಾರ್ವಜನಿಕವಾಗಿ ಲಭ್ಯವಿರಬೇಕು. ಇವೆಲ್ಲ ಮಾಹಿತಿಯನ್ನು ದೊಡ್ಡ ಫಲಕಗಳಲ್ಲಿ ಪ್ರದರ್ಶಿಸುವುದು ಕಷ್ಟ. ಆದರೆ, ಕ್ಯೂಆರ್ ಕೋಡ್ ತಂತ್ರಜ್ಞಾನ ಬಳಸಿಕೊಂಡು ಮಾಹಿತಿ ನೀಡುವುದು ಕಷ್ಟವೇನಲ್ಲ. ಇದರಿಂದ ಸಾರ್ವಜನಿಕ ಸೇವೆಯಲ್ಲಿ ಲೋಪ ಕಂಡುಬಂದಾಗ ಪ್ರಶ್ನಿಸಲೂ ನೆರವಾಗಲಿದೆ.

ಜಿ. ನಾಗೇಂದ್ರ ಕಾವೂರು, ಸಂಡೂರು

ಬಾಲಂಗೋಚಿ ಪದ ಪ್ರಯೋಗ ಸರಿಯಲ್ಲ

ಇಂಗ್ಲೆಂಡ್ ವಿರುದ್ಧ ಭಾರತ ಮೂರನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಸೋಲುಂಡ ಸುದ್ದಿಗೆ 'ಫಲ ನೀಡದ ಬಾಲಂಗೋಚಿಗಳ ಹೋರಾಟ' ಎನ್ನುವ ಶೀರ್ಷಿಕೆ ಸಮಂಜಸವೆನ್ನಿಸಲಿಲ್ಲ. 'ಬಾಲಂಗೋಚಿ' ವಿಶೇಷಣ, ಬೌಲರ್‌ಗಳಿಗೆ ಮರ್ಯಾದೆ ತರುವಂತಹದ್ದಲ್ಲ. ಹಾಗೆ ನೋಡಿದರೆ, ಲಾರ್ಡ್ಸ್ ಟೆಸ್ಟ್‌ನಲ್ಲಿ ನಮ್ಮ ಸೂಪರ್ ಬ್ಯಾಟರ್‌ಗಳಿಗಿಂತ ಬೌಲರ್‌ಗಳೇ ಎರಡೂ ವಿಭಾಗದಲ್ಲಿ ಕೆಚ್ಚೆದೆಯ ಹೋರಾಟ ನೀಡಿದ್ದಾರೆ. ಅಂಥವರನ್ನು 'ಬಾಲಂಗೋಚಿಗಳು' ಎಂದು ಕರೆದರೆ ಹೇಗೆ?

'ಬಾಲಂಗೋಚಿ' ಪದಕುಟುಂಬದಲ್ಲಿ, 'ಬಾಲಕತ್ತರಿಸು' (ಅವಮಾನ ಮಾಡು), 'ಬಾಲಬಡಿ' (ಚಮಚಾಗಿರಿ ಮಾಡು), 'ಬಾಲಬಡುಕ' (ಹಿಂಬಾಲಕ), 'ಬಾಲಬಿಚ್ಚು' (ಉದ್ಧಟತನದಿಂದ ವರ್ತಿಸು) ಮುಂತಾದ ಪದಗಳನ್ನು ಗುರ್ತಿಸಬಹುದು. ಈ ಪದಗಳ ಹಿನ್ನೆಲೆಯಲ್ಲಿ ವ್ಯಂಗ್ಯದ ಧ್ವನಿ, ಹೀಗಳೆಯುವಿಕೆ ಸ್ಪಷ್ಟವಾಗಿದೆ. ಹಾಗಾಗಿ, ಕೆಳ ಕ್ರಮಾಂಕದಲ್ಲಿ ಬ್ಯಾಟ್ ಮಾಡುವವರನ್ನು 'ಬಾಲಂಗೋಚಿಗಳು' ಎಂದು ಸಂಬೋಧಿಸುವುದು ಸರಿಯಲ್ಲ.

ಸಿ. ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ದೂರದಿಂದ ಕಂಡಿದ್ದೆಲ್ಲ ನಿಜವಲ್ಲ...

'ಅಂತರಿಕ್ಷದಿಂದ ಕಣ್ಣು ಹಾಯಿಸಿದಾಗ ಭಾರತವು ಮಹತ್ವಾಕಾಂಕ್ಷೆಯೇ ಮೈದಳೆದಂತಿರುವ ಹಾಗೂ ಯಾವುದೇ ಅಂಜಿಕೆಯಿಲ್ಲದ ದೇಶವಾಗಿ ಕಾಣಿಸುತ್ತದೆ' ಎಂದು ಗಗನಯಾನಿ ಶುಭಾಂಶು ಶುಕ್ಲ ಹೇಳಿದ್ದಾರೆ. ಆದರೆ, 'ಜಾಗತಿಕ ಚಿತ್ರಹಿಂಸೆ ಸೂಚ್ಯಂಕ'ದಲ್ಲಿ ಭಾರತ 'ಹೆಚ್ಚು ಅಪಾಯಕಾರಿ' ಪಟ್ಟಿಯಲ್ಲಿದೆ (ಪ್ರ.ವಾ., ಜುಲೈ 14). 'ದೂರದ ಬೆಟ್ಟ ನುಣ್ಣಗೆ' ಗಾದೆ ಇಂದಿನ ತಂತ್ರಜ್ಞಾನ ಯುಗದಲ್ಲಿ ಸಾಬೀತಾದಂತಾಯಿತು.

ಪ್ರಶಾಂತ್ ಕೆ.ಸಿ., ಚಾಮರಾಜನಗರ

ಪೌರತ್ವ ನಿರಾಕರಿಸುವ ಅನುಮಾನ

ಬಿಹಾರದಲ್ಲಿ ನಡೆಸುತ್ತಿರುವ ಮತದಾರರ ಪಟ್ಟಿಯ 'ವಿಶೇಷ ಸಮಗ್ರ ಪರಿಷ್ಕರಣೆ' ಮಾದರಿಯನ್ನು ಇಡೀ ದೇಶಕ್ಕೆ ವಿಸ್ತರಿಸುವ ಕೇಂದ್ರ ಚುನಾವಣಾ ಆಯೋಗದ ನಿರ್ಧಾರ ಪ್ರಶ್ನಾರ್ಹ (ಪ್ರ.ವಾ., ಜುಲೈ 14). ಈ ಪರಿಷ್ಕರಣೆಯು ಗೊಂದಲದ ಗೂಡಾಗಿದೆ. ಮತದಾರರ ಪಟ್ಟಿ ಶುದ್ಧೀಕರಿಸುವ ನೆಪದಲ್ಲಿ ಪ್ರಜೆಗಳ ಪೌರತ್ವ ನಿರಾಕರಿಸುವ ಅನುಮಾನ ದಟ್ಟವಾಗಿದೆ. ವಿಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪರಿಷ್ಕರಣೆ ವಿಧಾನವನ್ನು ಜನರಿಗೆ ಮನದಟ್ಟು ಮಾಡಿದ ನಂತರವೇ ಈ ಪ್ರಕ್ರಿಯೆ ಜಾರಿಗೊಳಿಸುವುದು ಸೂಕ್ತ.

ಚಂದ್ರಪ್ರಭ ಕಠಾರಿ, ಬೆಂಗಳೂರು

ತೇಜೋವಧೆಯಿಂದ ಅಶಾಂತಿ ಸೃಷ್ಟಿ

ನಾಗರಿಕರು ತಮಗೆ ಸಂವಿಧಾನದತ್ತವಾಗಿ ಬಂದಿರುವ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೌಲ್ಯ ಅರಿತುಕೊಳ್ಳುವಂತೆ ಸುಪ್ರೀಂ ಕೋರ್ಟ್ ನೀಡಿರುವ ಸಲಹೆಯು ಸ್ವಾಗತಾರ್ಹ (ಪ್ರ.ವಾ., ಜುಲೈ 15). ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ನಡೆಯುತ್ತಿರುವ ತೇಜೋವಧೆಗಳು ಸಮಾಜದಲ್ಲಿ ಅಶಾಂತಿ ಸೃಷ್ಟಿಸಿರುವ ನಿದರ್ಶನಗಳು ಸಾಕ್ಷಿಯಾಗಿವೆ. ಸಭ್ಯತೆಯ ಗಡಿ ದಾಟಿದ ಶಾಸಕರು ಮತ್ತು ಸಚಿವರು ಸಾರ್ವಜನಿಕವಾಗಿ ಮತ್ತು ಕೋರ್ಟ್‌ಗಳಿಂದ ಛೀಮಾರಿಗೆ ಒಳಗಾಗುವುದು ವರದಿಯಾಗುತ್ತಲೇ ಇದೆ. ಇತ್ತೀಚೆಗೆ, ಸರ್ಕಾರಗಳಾಗಲೀ ಸಮಾಜವಾಗಲೀ ವ್ಯಂಗ್ಯ, ವಿಡಂಬನೆಯನ್ನು ಸೈರಿಸಿಕೊಳ್ಳುವ ಶಕ್ತಿ ಕಳೆದುಕೊಳ್ಳುತ್ತಾ ಬಂದಿವೆ.

ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಸ್ವೇಚ್ಛೆಯಿಂದ ಬಳಸುವುದರ ಬಗ್ಗೆ ನ್ಯಾಯಾಲಯ ವ್ಯಕ್ತಪಡಿಸಿರುವ ಅಭಿಪ್ರಾಯ ಮನನೀಯವಾದುದು. ಈ ಅಭಿಪ್ರಾಯ, ಎಲ್ಲಾ ನಾಗರಿಕರು, ಕಲಾವಿದರು, ಮಾಧ್ಯಮಕ್ಕೂ ಅನ್ವಯಿಸುತ್ತದೆ.

ಮೋದೂರು ಮಹೇಶಾರಾಧ್ಯ, ಹುಣಸೂರು

ಖರ್ಗೆ ಪತ್ರಕ್ಕೆ ಸಿ.ಎಂ ಸ್ಪಂದಿಸುವರೇ?

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಧಿಕಾರಿ, ನೌಕರರಿಗೆ ಮುಂಬಡ್ತಿ ನೀಡುವ ವಿಷಯಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿಗೆ ಪತ್ರ ಬರೆದಿರುವುದು ಸಮಂಜಸ. ವಿವಿಧ ಇಲಾಖೆಗಳಲ್ಲಿ 2 ಲಕ್ಷಕ್ಕೂ ಹೆಚ್ಚು ಹುದ್ದೆಗಳು ಖಾಲಿಯಿವೆ. ಕೆಲವು ನೇಮಕಾತಿ ಪರೀಕ್ಷೆಗಳ ಮೌಲ್ಯಮಾಪನ ಕಾರ್ಯ ಪೂರ್ಣಗೊಂಡರೂ ಅಂತಿಮ ಆಯ್ಕೆಪಟ್ಟಿ ಪ್ರಕಟಿಸಿಲ್ಲ. ಈ ಬಗ್ಗೆಯೂ ಖರ್ಗೆ ಅವರು ಪತ್ರ ಬರೆಯಲಿ. ಗ್ಯಾರಂಟಿ ಅಲೆಯಲ್ಲೇ ತೇಲುತ್ತಿರುವ ಸರ್ಕಾರವು, ಈ ಪತ್ರಕ್ಕಾದರೂ ಗೌರವ ಕೊಟ್ಟು ಸ್ಪಂದಿಸಲಿ.

ಎಸ್.ಎನ್. ರಮೇಶ್, ಮಂಡ್ಯ

ಚುರುಮುರಿ



ಶಕ್ತಿ ಸಂಭ್ರಮ

● ಮಣ್ಣೆ ರಾಜು

'ರೀ, ಈ ಸೀರೆ ಹೇಗಿದೆ?' ಗಂಡನಿಗೆ ಸೀರೆ ತೋರಿಸಿದಳು ಸುಮಿ.

'ಹೊಸ ಸೀರೆ ಕೊಂಡುಕೊಂಡ್ಯಾ?' ಶಂಕ್ರಿ ಕೇಳಿದ.

'ಇಲ್ಲಾರೀ, ಸರ್ಕಾರಿ ಸೀರೆ, ಸಿ.ಎಂ ಕೊಟ್ಟಿದ್ದು. ಶಕ್ತಿ ಯೋಜನೆಯ 500 ಕೋಟಿಯ ಉಚಿತ ಪ್ರಯಾಣದ ಸಂಭ್ರಮಾಚರಣೆಯಲ್ಲಿ ಮಹಿಳೆಯರಿಗೆ ಸಿ.ಎಂ ಉಚಿತವಾಗಿ ಬಸ್ ಟಿಕೆಟ್ಟೂ ಕೊಟ್ಟು– ಇಳಕಲ್ ಸೀರೆ, ಗುಲಾಬಿಯನ್ನೂ ಕೊಟ್ಟರು. ಸೀರೆಯ ಕಲರ್, ಡಿಸೈನ್, ಬಾರ್ಡರ್ ಚೆನ್ನಾಗಿದೆಯಲ್ವಾ?'

'ದುಡ್ಡು ಕೊಟ್ಟು ಬಸ್ ಟಿಕೆಟ್ ಕೊಳ್ಳುವ ಪುರುಷರಿಗೆ ಸರ್ಕಾರ ಒಂದು ಶೇವಿಂಗ್ ಬ್ಲೇಡೂ ಕೊಟ್ಟಿಲ್ಲ'.

'ಮುಂದಿನ ದಿನಗಳಲ್ಲಿ ನಿಮಗೂ ಪಂಚೆಗಿಂಚೆ ಕೊಡುತ್ತೆ ಬಿಡಿ. ವರಮಹಾಲಕ್ಷ್ಮಿ ಹಬ್ಬದ ವೇಳೆಗೆ ಗೃಹಲಕ್ಷ್ಮಿ ಬಾಕಿ ಹಣವನ್ನು ಕೊಡ್ತಾರಂತೆ. ಮಹಾಲಕ್ಷ್ಮಿಗೆ ಈ ಸರ್ಕಾರಿ ಸೀರೆ ಉಡಿಸಿ, ಗೃಹಲಕ್ಷ್ಮಿ ದುಡ್ಡಿನಲ್ಲಿ ಹಬ್ಬ ಆಚರಿಸೋಣ' ಎಂದು ಸಂಭ್ರಮಿಸಿದಳು.

'ಗೌರಿ ಹಬ್ಬಕ್ಕೆ ಮೈಸೂರು ಸಿಲ್ಕ್ ಕೊಡ್ತಾರಂತಾ?'

'ಹಬ್ಬ ಹಬ್ಬಕ್ಕೂ ಸೀರೆ ಬೇಕು ಅಂತ ಸರ್ಕಾರವನ್ನು ಕೇಳಲಾಗುತ್ತೇನ್ರೀ?'

'ಸ್ಟೇಟ್ ಬಿಟ್ಟು ಸೆಂಟ್ರಲ್‌ಗೆ ಹೋಗ್ತೀರಾ ಅಂತ ಸಿ.ಎಂ ಸಿದ್ದರಾಮಯ್ಯರನ್ನು ಕೇಳಬೇಕಿತ್ತು'.

'ಕೇಳಲಿಲ್ಲಾರೀ, ಸೆಂಟ್ರಲ್ ಸಿಲಬಸ್ ತುಂಬಾ ಕಷ್ಟವಂತೆ'.

'ಸಿದ್ದರಾಮಯ್ಯ ಅವರನ್ನು ಫೇಲ್ ಮಾಡಬೇಕೂಂತಲೇ ಸೆಂಟ್ರಲ್ ಸಿಲಬಸ್‌ಗೆ ಅಡ್ಮಿಷನ್ ಮಾಡಿಕೊಳ್ಳೋ ಪ್ರಯತ್ನ ನಡೆದಿದೆ ಎಂದು ವಿಪಕ್ಷದವರು ಅಪಪ್ರಚಾರ ಮಾಡ್ತಿದ್ದಾರಂತೆ'.

'ಕನ್ನಡ ಮೀಡಿಯಂನ ಸ್ಟೇಟ್ ಸಿಲಬಸ್‌ಗಿಂಥಾ ಹಿಂದಿ, ಇಂಗ್ಲಿಷ್ ಮೀಡಿಯಂನ ಸೆಂಟ್ರಲ್ ಸಿಲಬಸ್ ಕಷ್ಟವೇ'.

'ಲಾಂಗ್ವೇಜ್, ಲಾಂಗ್ ಜರ್ನಿ ಪ್ರಾಬ್ಲಂಗೆ ಹಿಂಜರಿಯಬಾರದು. ಸೆಂಟ್ರಲ್ ಸಿಲಬಸ್‌ನಲ್ಲಿ ಹಾರ್ಡ್ ಸ್ಟಡಿ ಮಾಡಿದ್ರೆ ಸಿ.ಎಂ ಸಿದ್ದರಾಮಯ್ಯ ಪಿ.ಎಂ ಪದವೀಧರರಾಗುವ ಅವಕಾಶ ಸಿಗಬಹುದು'.

'ಸ್ಟೇಟ್‌ನಲ್ಲೇ ಐದು ವರ್ಷದ ಕೋರ್ಸ್ ಕಂಪ್ಲೀಟ್ ಮಾಡ್ತಾರಂತೆ. ಮುಂದಿನ ಅಕಡೆಮಿಕ್ ಇಯರ್‌ನಲ್ಲಿ ಸೆಂಟ್ರಲ್ ಸಿಲಬಸ್ ಬಗ್ಗೆ ಚಿಂತನೆ ಮಾಡ್ತಾರೇನೋ ಕಣ್ರೀ...' ಎಂದು ಸುಮಿ ಸೀರೆ ತಗೊಂಡು ರೂಮಿಗೆ ಹೋದಳು.

ಸಂಗತ


ಸರೋಜಾದೇವಿ: ನಟಿಯಷ್ಟೇ ಅಲ್ಲ...

ದಕ್ಷಿಣ ಭಾರತದ ಜನಪ್ರಿಯ ಅಭಿನೇತ್ರಿಯರಲ್ಲಿ ಒಬ್ಬರಾಗಿದ್ದ ಬಿ. ಸರೋಜಾದೇವಿ ಅವರ ಸಾರ್ವಜನಿಕ ವ್ಯಕ್ತಿತ್ವವೂ ಔನ್ನತ್ಯದಿಂದ ಕೂಡಿದುದಾಗಿತ್ತು.

● ಬರಗೂರು ರಾಮಚಂದ್ರಪ್ಪ

ಬಾಲ್ಯದಲ್ಲಿ, ಟೂರಿಂಗ್ ಟಾಕೀಸ್‌ಗಳಲ್ಲಿ ನೆಲದ ಮೇಲೆ ಕೂತು ನೋಡ ನೋಡುತ್ತಲೇ ನನ್ನಂಥವರಿಗೆ ಸಿನಿಮಾಗಳು ನೆಲದ ನಂಟಿನ ಕಲೆಗಳಾದವು. ಆಗ, ನನ್ನಂಥ ಹಳ್ಳಿ ಹುಡುಗರಿಗೆ ರಾಜ್‌ಕುಮಾರ್ ಅವರಂಥ ನಾಯಕ ನಟರಲ್ಲದೆ ನಟಿಯರ ಬಗ್ಗೆಯೂ ವಿಶೇಷ ಆಸಕ್ತಿ. ಯಾವ ನಟಿ ಚೆಂದ ಕಾಣ್ತಾರೆ, ಯಾವ ನಟಿ ಚೆನ್ನಾಗಿ ಅಭಿನಯಿಸುತ್ತಾರೆ ಎಂದು ಗೆಳೆಯರು ಕೂತು ಮಾತನಾಡುವಾಗ ಬಿ. ಸರೋಜಾದೇವಿಯವರ ಹೆಸರು ಮುನ್ನೆಲೆಯಲ್ಲಿ ಪ್ರಸ್ತಾಪವಾಗುತ್ತಿತ್ತು.

ನಟಿಯರೆಂದರೆ ಕೇಳಬೇಕೆ? ಅವರ ಉಡುಪು, ಒಯ್ಯಾರಗಳ ಕುರಿತೂ ಮಾತುಕತೆಯಾಗುತ್ತಿತ್ತು. ಸರೋಜಾದೇವಿಯವರು ನಮ್ಮ ನಡುವಿನ ಗೃಹಸ್ಥೆಯಂತೆಯೇ ಕಾಣುತ್ತಿದ್ದರು. ರಾಜ್‌ಕುಮಾರ್ ಮತ್ತು ಇವರು ಅಭಿನಯಿಸಿದ 'ಅಣ್ಣ ತಂಗಿ' ಸಿನಿಮಾ ನಮ್ಮೊಳಗೆ ಇಳಿದು ಒಂದಾಗಿತ್ತು. ಕನ್ನಡದ ಮೊಟ್ಟ ಮೊದಲ ಪೂರ್ಣ ಪ್ರಮಾಣದ ವರ್ಣಚಿತ್ರವಾದ 'ಅಮರಶಿಲ್ಪಿ ಜಕಣಾಚಾರಿ'ಯ ನಾಯಕಿಯಾಗಿ ಸರೋಜಾದೇವಿ ಅವರು ಕಾಣಿಸಿಕೊಂಡಿದ್ದು ಕಣ್ಣುಗಳಿಗೆ ಹಬ್ಬವಾಗಿತ್ತು. 'ಕಿತ್ತೂರು ಚೆನ್ನಮ್ಮ'ನ ಪಾತ್ರ ಕಣ್ಣಷ್ಟೇ ಅಲ್ಲ, ಮನಸ್ಸನ್ನೂ ತುಂಬಿಕೊಂಡಿತ್ತು. ನಾನು ಪ್ರೌಢಶಾಲೆ ವಿದ್ಯಾರ್ಥಿಯಾಗಿದ್ದಾಗ ಸರೋಜಾದೇವಿಯವರು ಚೆನ್ನಮ್ಮನ ಪಾತ್ರದಲ್ಲಿ ತೋರಿದ ಅಪೂರ್ವ ಅಭಿನಯಕ್ಕೆ ಮಾರುಹೋಗಿದ್ದೆ. ಆಗ ಇಂತಹ ಅಭಿನೇತ್ರಿಯ ಪರಿಚಯವಾಗುತ್ತದೆಯೆಂಬ ಕನಸು ಕಾಣುವುದಕ್ಕೂ ಸಾಧ್ಯವಿರಲಿಲ್ಲ. ಅನೇಕ ವರ್ಷಗಳ ನಂತರ ಅವರ ಪರಿಚಯವಾಗಿ, ವಿಶ್ವಾಸದ ರೂಪ ಪಡೆಯಿತು. ಅವರು ನಿಧನರಾದಾಗ ನನ್ನಲ್ಲಿ ಮೂರು ಮುಖ್ಯ ನೆನಪುಗಳು ಕಾಡತೊಡಗಿದವು. ಅವರ ವ್ಯಕ್ತಿತ್ವದ ದೊಡ್ಡತನಕ್ಕೆ ಈ ನೆನಪುಗಳು ಸಾಕ್ಷಿಯಾಗಿವೆ:



ಒಂದು: ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯವರು ಕೆಲವೇ ವರ್ಷಗಳ ಹಿಂದೆ ತಮ್ಮ ಕಚೇರಿಯಲ್ಲೇ ಏರ್ಪಡಿಸಿದ ಒಂದು ಸಮಾರಂಭದಲ್ಲಿ ನಾನು ಮತ್ತು ಸರೋಜಾದೇವಿಯವರು ಅತಿಥಿಗಳಾಗಿ ಭಾಗವಹಿಸಿದ್ದೆವು. ಸರೋಜಾದೇವಿಯವರು ಭಾಷಣ ಮಾಡುತ್ತ, 'ನನಗೆ ಬರಗೂರು ರಾಮಚಂದ್ರಪ್ಪನವರ ನಿರ್ದೇಶನದ ಸಿನಿಮಾದಲ್ಲಿ ಒಂದು ಪಾತ್ರ ಮಾಡಬೇಕು ಅಂತ ಆಸೆ ಇದೆ. ಅವಕಾಶಕ್ಕಾಗಿ ಕಾಯ್ತಿದ್ದೇನೆ' ಎಂದರು. ನನಗೆ ಆಶ್ಚರ್ಯ! ಅದು ಔಪಚಾರಿಕ ಮಾತಲ್ಲ ಎಂದು ಅವರೇ ಹೇಳಿದರು. ನಾನು ನನ್ನ ಭಾಷಣದಲ್ಲಿ ಸರೋಜಾದೇವಿಯವರ ಮಾತು ನನಗೆ ಸಿಕ್ಕಿದ ದೊಡ್ಡ ಪ್ರಶಸ್ತಿ ಮತ್ತು ಗೌರವ ಎಂದು ಹೇಳಿದೆ. ಆದರೆ, ಅವರ ಎತ್ತರದ ವ್ಯಕ್ತಿತ್ವಕ್ಕೆ ತಕ್ಕ ಪಾತ್ರವಿಲ್ಲದೆ ನನ್ನ ಸಿನಿಮಾಕ್ಕೆ ಆಹ್ವಾನಿಸಲು ಆಗಲಿಲ್ಲ ಎಂಬ ಕೊರಗು ನನ್ನಲ್ಲಿದೆ.

ಎರಡು: ಪ್ರಾಥಮಿಕ ಶಾಲೆಯಿಂದಲೇ ಇಂಗ್ಲಿಷ್ ಕಲಿಸುವ ಕುರಿತು ಚರ್ಚೆ ನಡೆಯುತ್ತಿದ್ದ ದಿನಗಳವು. ಸರೋಜಾದೇವಿಯವರು ನನಗೆ ಫೋನ್ ಮಾಡಿ, 'ನೋಡಿ, ನಾನು ರಾಷ್ಟ್ರ ಮಟ್ಟದ ಅನೇಕ ಸಮಿತಿಗಳಲ್ಲಿ ಭಾಗವಹಿಸಿದಾಗ ಸರಿಯಾಗಿ ಇಂಗ್ಲಿಷ್ ಬಾರದೆ ತುಂಬಾ ತೊಂದರೆ ಆಗುತ್ತೆ. ನಮ್ಮ ಮಕ್ಕಳಿಗೆ ಇಂಗ್ಲಿಷ್ ಕಲಿಸಬೇಕಲ್ಲವೆ?' ಎಂದು ಕೇಳಿದರು. 'ಪ್ರಾಥಮಿಕ ಶಾಲೆಯಲ್ಲಿ ಮಾತೃಭಾಷೆ ಕನ್ನಡ ಮಾಧ್ಯಮವನ್ನು ಬಿಟ್ಟುಕೊಡದೆ ಒಂದನೇ ತರಗತಿಯಿಂದ ಒಂದು ಭಾಷೆಯಾಗಿ ಇಂಗ್ಲಿಷ್ ಕಲಿಸಬೇಕು ಎಂಬ ಅಭಿಪ್ರಾಯದವನು ನಾನು' ಎಂದಾಗ, ಅದನ್ನು ಅವರು ಸಂತೋಷದಿಂದ ಒಪ್ಪಿದ್ದಲ್ಲದೆ, ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸುವುದಕ್ಕೆ ಏನಾದರೂ ಮಾಡಬೇಕಲ್ಲ ಎಂದರು. ಆಗ ನಾನು 'ಪ್ರಜಾವಾಣಿ' ಪತ್ರಿಕೆಯ ಸಂಪಾದಕರ ಜೊತೆ ಮಾತಾಡಿ, ಸರೋಜಾದೇವಿಯವರ ಅನಿಸಿಕೆಗಳನ್ನು ಪ್ರಕಟಿಸಲು ಕೋರಿದೆ. 'ಪ್ರಜಾವಾಣಿ'ಯಲ್ಲಿ ಅವರ ಅಭಿಪ್ರಾಯ ಪ್ರಕಟವಾಯಿತು.

ಮೂರು: ನನ್ನ ಸ್ನೇಹಿತರು ನನ್ನ ಹೆಸರಲ್ಲಿ ಒಂದು ಪ್ರತಿಷ್ಠಾನವನ್ನು ಸ್ಥಾಪಿಸಿದ್ದಾರೆ. ಪ್ರತಿ ವರ್ಷವೂ ನನ್ನ ಆಸಕ್ತಿಯ ಕ್ಷೇತ್ರಗಳಾದ ಸಾಹಿತ್ಯ ಮತ್ತು ಸಿನಿಮಾದ ತಲಾ ಒಬ್ಬರು ಸಾಧಕರಿಗೆ ಪ್ರಶಸ್ತಿ ನೀಡುತ್ತಾ ಬಂದಿದ್ದಾರೆ. ನನ್ನ ಪತ್ನಿ ರಾಜಲಕ್ಷ್ಮಿ ಹೆಸರಲ್ಲಿ ಪ್ರತಿವರ್ಷ ಇಬ್ಬರು ಸಾಧಕಿಯರಿಗೆ ಪ್ರಶಸ್ತಿ ನೀಡುತ್ತಾರೆ. ಇಂತಹ ಒಂದು ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಸರೋಜಾದೇವಿಯವರನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸಬೇಕೆಂದು ತೀರ್ಮಾನಿಸಿದ ಪ್ರತಿಷ್ಠಾನದವರು, ಅವರ ಪರಿಚಿತರೊಬ್ಬರನ್ನು ಕಳಿಸಿಕೊಟ್ಟರು. ಸರೋಜಾದೇವಿಯವರು ಅಧಿಕೃತ ಆಹ್ವಾನದ ಪತ್ರವೊಂದನ್ನು ಕೊಡಲು ಕೇಳಿದರಂತೆ! ಪ್ರತಿಷ್ಠಾನದಿಂದ ಪತ್ರವನ್ನೂ ಕೊಟ್ಟು ಬಂದರು. ಆದರೆ, ಅವರಿಂದ ಒಪ್ಪಿಗೆ ಬರಲಿಲ್ಲವೆಂದು ಬೇರೆ ಅತಿಥಿಗಳನ್ನು ಒಪ್ಪಿಸಿ ಆಹ್ವಾನ ಪತ್ರಿಕೆಯನ್ನು ಅಚ್ಚು ಹಾಕಿಸಿದರು. ಒಂದು ದಿನ ಇದ್ದಕ್ಕಿದ್ದಂತೆ ಸರೋಜಾದೇವಿಯವರಿಂದ ಫೋನ್ ಬಂತು. 'ಬರಗೂರು ಅವರೇ, ನಿಮ್ಮ ಕಡೆಯವರು ಮತ್ತೆ ಬರಲೇ ಇಲ್ಲ. ಕಾರ್ಯಕ್ರಮ ಇಲ್ಲವೇ?' ಎಂದರು. ನಾನು ಆಹ್ವಾನ ಪತ್ರಿಕೆ ಅಚ್ಚಾಗಿರುವ ವಿಷಯ ಹೇಳಿದೆ.

'ನಿಮ್ಮ ಹೆಸರಲ್ಲಿ ನಡೀತಿರೋ ಸಮಾರಂಭ. ನನ್ನ ಹೆಸರು ಇಲ್ಲದೇ ಇದ್ದರೂ ನಾನು ಬರ್ತೀನಿ. ಸಭಿಕಳಾಗಿ ಕೂತುಕೊಳ್ತೇನೆ' ಎಂದರು. ಆಗ ನಾನು, 'ನೀವು ಅತಿಥಿಯಾಗೇ ಬನ್ನಿ. ಬೇರೆ ಆಹ್ವಾನ ಪತ್ರಿಕೆ ಅಚ್ಚು ಮಾಡ್ತೇವೆ' ಎಂದು ಹೇಳಿ ಅದರಂತೆ ಸ್ನೇಹಿತರಿಗೆ ತಿಳಿಸಿದೆ. ಸರೋಜಾದೇವಿಯವರು ಸಕಾಲಕ್ಕೆ ಸಮಾರಂಭಕ್ಕೆ ಬಂದು ಸಂತೋಷ ತಂದರು.

ಈ ಮೂರು ಘಟನೆಗಳು ಅವರು ನನ್ನ ಬಗ್ಗೆ ತೋರಿದ ವಿಶ್ವಾಸದ, ದೊಡ್ಡತನದ ಸಂಕೇತಗಳಾಗಿವೆ. ಎಂದೂ ಮಾಸದ ನೆನಪುಗಳಲ್ಲಿ ಸರೋಜಾದೇವಿಯವರು ಸದಾ ಇರುತ್ತಾರೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಘನ ಇಂಧನ, ಮಣ್ಣಿನ ಒಲೆ, ಕಳಪೆ ಅಡುಗೆ ಎಣ್ಣೆ ಬಳಕೆ

ಮನೆ ಮಾಲಿನ್ಯ ಮಹಿಳೆಗೆ ಆಪತ್ತು

ಅಡುಗೆ ಮಾಡಲು ಮಾಲಿನ್ಯಕಾರಕ ಇಂಧನಗಳನ್ನು (ಸೌದೆ, ಸೆಗಣಿ, ಇದ್ದಿಲು ಇತ್ಯಾದಿ) ಬಳಸುವುದರಿಂದ ಮನೆಗಳಲ್ಲಿ ವಾಯು ಮಾಲಿನ್ಯ (ಎಚ್‌ಎಪಿ) ಹೆಚ್ಚಾಗುತ್ತಿದ್ದು, ಇದು ಮಹಿಳೆಯರ ಗ್ರಹಿಕೆ ಸಾಮರ್ಥ್ಯವೂ ಸೇರಿದಂತೆ ಅವರ ಕಾರ್ಯಕ್ಷಮತೆಯ ಮೇಲೆ ನಕಾರಾತ್ಮಕ ಪರಿಣಾಮಗಳನ್ನು ಬೀರುತ್ತಿದೆ ಎಂದು ಲ್ಯಾನ್ಸೆಟ್‌ನಲ್ಲಿ ಪ್ರಕಟವಾಗಿರುವ ಅಧ್ಯಯನ ವರದಿ ತಿಳಿಸಿದೆ. ಕೋಲಾರ ಜಿಲ್ಲೆಯ ಶ್ರೀನಿವಾಸಪುರದಲ್ಲಿ 45 ವರ್ಷಕ್ಕಿಂತ ಹೆಚ್ಚು ವಯಸ್ಸಿನವರನ್ನು ಕೇಂದ್ರೀಕರಿಸಿ ಅಧ್ಯಯನ ನಡೆಸಲಾಗಿದೆ. ಘನ ಇಂಧನಗಳಲ್ಲದೆ ಮಣ್ಣಿನ ಒಲೆಗಳು, ಕಳಪೆ ಅಡುಗೆ ಎಣ್ಣೆ ಬಳಕೆಯಿಂದಲೂ ಮಾಲಿನ್ಯ ಹೆಚ್ಚಾಗುತ್ತಿದೆ ಎಂದು ವರದಿ ಹೇಳಿದೆ



230 ಕೋಟಿ ಜಗತ್ತಿನಾದ್ಯಂತ 2022ರಲ್ಲಿ ವಾಯುಮಾಲಿನ್ಯ ಉಂಟು ಮಾಡುವ ಅಡುಗೆ ಮಾಡುವ ವಿಧಾನ ಅನುಸರಿಸುತ್ತಿದ್ದವರ ಸಂಖ್ಯೆ

32 ಲಕ್ಷ ಮನೆಯೊಳಗಿನ ವಾಯುಮಾಲಿನ್ಯದಿಂದಾಗಿ (ಎಚ್‌ಎಪಿ) 2020ರಲ್ಲಿ ಜಗತ್ತಿನಲ್ಲಿ ಮೃತಪಟ್ಟವರ ಸಂಖ್ಯೆ

2.37 ಲಕ್ಷ 2020ರಲ್ಲಿ ಮರಣ ಹೊಂದಿದ 5 ವರ್ಷದೊಳಗಿನ ಮಕ್ಕಳ ಸಂಖ್ಯೆ

67 ಲಕ್ಷ ಹೊರಗಿನ ವಾಯುಮಾಲಿನ್ಯ ಮತ್ತು ಮನೆಯೊಳಗಿನ ವಾಯು ಮಾಲಿನ್ಯದಿಂದಾಗಿ ವಾರ್ಷಿಕವಾಗಿ ಸಂಭವಿಸುತ್ತಿರುವ ಅಕಾಲಿಕ ಸಾವುಗಳು



66 ಕೋಟಿ 2021ರಲ್ಲಿ ಭಾರತದಲ್ಲಿ ಸೌದೆ, ಇತರ ಘನ ಇಂಧನ ಬಳಸುತ್ತಿದ್ದ ಭಾರತೀಯರ ಸಂಖ್ಯೆ (ಅಂತರರಾಷ್ಟ್ರೀಯ ಎನರ್ಜಿ ಏಜೆನ್ಸಿ ವರದಿ)

8.10 ಲಕ್ಷ 2019ರಲ್ಲಿ ಭಾರತದಲ್ಲಿ ಮನೆಯೊಳಗಿನ ವಾಯು ಮಾಲಿನ್ಯದಿಂದಾಗಿ ಮೃತಪಟ್ಟವರು

41.4% ಪರಿಸರ ಸ್ನೇಹಿ ಅಡುಗೆ ಇಂಧನದ ಕೊರತೆ ಎದುರಿಸಿದ್ದ ಭಾರತದ ಕುಟುಂಬಗಳ ಪ್ರಮಾಣ (2019–21 ರಾಷ್ಟ್ರೀಯ ಆರೋಗ್ಯ ಕುಟುಂಬ ಸಮೀಕ್ಷೆ ಪ್ರಕಾರ)

56.8% ಶುದ್ಧ ಅಡುಗೆ ಇಂಧನದ ಕೊರತೆ ಎದುರಿಸಿದ್ದ ಗ್ರಾಮೀಣ ಭಾಗಗಳ ಕುಟುಂಬಗಳ ಪ್ರಮಾಣ

30.7% ಕರ್ನಾಟಕದಲ್ಲಿ ಮಾಲಿನ್ಯಕಾರಕ ಇಂಧನವನ್ನು ಅವಲಂಬಿಸಿದ್ದ ಗ್ರಾಮೀಣ ಕುಟುಂಬಗಳ ಪ್ರಮಾಣ (2019–20ರಲ್ಲಿ)

95 2018ರ ವರದಿಯ ಪ್ರಕಾರ, ಕರ್ನಾಟಕದಲ್ಲಿ ವಾಯು ಮಾಲಿನ್ಯದಿಂದ ಪ್ರತಿ ಒಂದು ಲಕ್ಷ ಜನರಲ್ಲಿ ಮೃತಪಡುತ್ತಿದ್ದವರ ಸಂಖ್ಯೆ



ಪ್ರಜಾವಾಣಿ ವಾರ್ತೆ

ಅಡುಗೆ ಉದ್ದೇಶಕ್ಕೆ ಮನೆಗಳಲ್ಲಿ ಘನ ರೂಪದ ಇಂಧನಗಳು, ಕಳಪೆ ಅಡುಗೆ ಎಣ್ಣೆಯ ಬಳಕೆ ಹಾಗೂ ಪರಿಸರ ಸ್ನೇಹಿ ಅಲ್ಲದ ಅಡುಗೆ ವಿಧಾನಗಳನ್ನು ಅನುಸರಿಸುವುದರಿಂದ ಉಂಟಾಗುವ ವಾಯು ಮಾಲಿನ್ಯದಿಂದ ಜನರ ಗ್ರಹಿಕೆ ಸಾಮರ್ಥ್ಯದಲ್ಲಿ ಕುಸಿತ ಉಂಟಾಗುತ್ತಿದೆ ಎಂದು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಮಿದುಳು ಸಂಶೋಧನಾ ಕೇಂದ್ರ ಮತ್ತು ಷಿಕಾಗೊ ವಿಶ್ವವಿದ್ಯಾಲಯದ ಅಧ್ಯಯನಕಾರರ ತಂಡ ಇತ್ತೀಚೆಗೆ ನಡೆಸಿದ ಅಧ್ಯಯನ ಹೇಳಿದೆ. 'ಲ್ಯಾನ್ಸೆಟ್'ನ ಪ್ರಾದೇಶಿಕ ಆರೋಗ್ಯ–ಆಗ್ನೇಯ ಏಷ್ಯಾ ಜರ್ನಲ್‌ನಲ್ಲಿ ಈ ಅಧ್ಯಯನದ ವರದಿ ಪ್ರಕಟವಾಗಿದ್ದು, ಗ್ರಾಮೀಣ ಭಾಗದ ಮಹಿಳೆಯರು ಈ ಸಮಸ್ಯೆಗೆ ಹೆಚ್ಚು ಒಳಗಾಗುತ್ತಿದ್ದಾರೆ ಎಂದು ಉಲ್ಲೇಖಿಸಲಾಗಿದೆ.

2018ರ ಜನವರಿಯಿಂದ 2023ರ ಡಿಸೆಂಬರ್‌ವರೆಗೆ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಹಳ್ಳಿಗಳಲ್ಲಿ ಸಂಗ್ರಹಿಸಿದ ದತ್ತಾಂಶ ಆಧರಿಸಿ ಅಧ್ಯಯನ ನಡೆಸಲಾಗಿದೆ. ಐಐಎಸ್‌ಸಿಯ ಮಿದುಳು ಸಂಶೋಧನಾ ಕೇಂದ್ರವು ಇಲ್ಲಿ ನಡೆಸುತ್ತಿರುವ ಸಿಬಿಆರ್–ಎಸ್‌ಎಎನ್‌ಎಸ್‌ಸಿಒಜಿ (CBR-SANSCOG) ಅಧ್ಯಯನದ ಭಾಗವಾಗಿ ಸಂಗ್ರಹಿಸಿರುವ ದತ್ತಾಂಶವನ್ನು ಅಧ್ಯಯನಕಾರರು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. 45 ವರ್ಷಕ್ಕಿಂತ ಹೆಚ್ಚು ವಯಸ್ಸಿನ 4,145 ಮಂದಿಯನ್ನು ಅಧ್ಯಯನ ಮಾಡಲಾಗಿತ್ತು. ಅವರ ಪೈಕಿ ವಯಸ್ಸು ಮತ್ತು ಲಿಂಗವನ್ನು ಆಧರಿಸಿ 994 ಮಂದಿಯನ್ನು ಮಿದುಳು ಎಂಆರ್‌ಐ ಸ್ಕ್ಯಾನ್‌ಗೆ ಒಳಪಡಿಸಲಾಗಿತ್ತು.

'ಎಚ್‌ಎಪಿ' ಎನ್ನುವುದು ಮನೆಯೊಳಗಿನ ವಾಯು ಮಾಲಿನ್ಯವಾಗಿದ್ದು, ಅಡುಗೆ ಮಾಡಲು ಬಳಸುವ ಇಂಧನ, ವಿಧಾನಗಳಿಂದ ಉಂಟಾಗುತ್ತದೆ. ಅಡುಗೆ ಮಾಡಲು ಬಳಸುವ ಸೌದೆ, ಬೆಳೆಗಳ ಕಳೆ, ಇದ್ದಿಲು, ಕಲ್ಲಿದ್ದಲು, ಸೆಗಣಿ ಬೆರಣಿಯಂತಹ ಘನ ಇಂಧನಗಳು, ಸೀಮೆಎಣ್ಣೆ, ಮಣ್ಣಿನ ಒಲೆ, ಕಳಪೆ ಅಡುಗೆ ಎಣ್ಣೆಗಳನ್ನು ಬಳಸುವುದರಿಂದ ಹೊರ ಬರುವ ಹೊಗೆ, ಮಾಲಿನ್ಯಕಾರಕ ಕಣಗಳು ಮನೆಯ ಒಳಗೆ ಮಾಲಿನ್ಯವನ್ನು ಉಂಟು ಮಾಡುತ್ತಿವೆ. ಇದು, ಅಡುಗೆ ಮಾಡುವ ಮಹಿಳೆಯರ ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿದೆ ಎಂದು ವರದಿ ಹೇಳಿದೆ.



ಪರಿಹಾರ ಏನು?

- ಆರೋಗ್ಯ ಅಸಮಾನತೆ ಸಮಸ್ಯೆ ಎದುರಿಸಲು ಮತ್ತು 2030ರ ಸುಸ್ಥಿರ ಅಭಿವೃದ್ಧಿ ಕಾರ್ಯಸೂಚಿಯನ್ನು ಸಾಧಿಸುವುದಕ್ಕಾಗಿ ಎಲ್‌ಪಿಜಿ, ಜೈವಿಕ ಅನಿಲ, ಸೌರ, ವಿದ್ಯುತ್ ಸೇರಿದಂತೆ ಪರಿಸರ ಸ್ನೇಹಿ ಇಂಧನಗಳು ಜನರಿಗೆ ಸಿಗುವಂತೆ ಮಾಡಬೇಕು
- ಬಡ ಮತ್ತು ಮಧ್ಯಮ ಆದಾಯ ಹೊಂದಿರುವ ರಾಷ್ಟ್ರಗಳು ಈ ದಿಸೆಯಲ್ಲಿ ತಮ್ಮ ನೀತಿಗಳಲ್ಲಿ ಮಹತ್ವದ ಬದಲಾವಣೆ ತರಬೇಕು

ಕುಗ್ಗುವ ಕಾರ್ಯಕ್ಷಮತೆ

ಇಂಧನಗಳನ್ನು ಮನೆಯ ಒಳಗೆ ಉರಿಸಿದಾಗ ಇಂಗಾಲ, ಸಾರಜನಕ, ನೈಟ್ರೋಜನ್, ಗಂಧಕದಂತಹ ಹೆಚ್ಚು ಸಾಂದ್ರತೆ ಹೊಂದಿರುವ ಲೋಹಗಳ ಆಕ್ಸೈಡ್‌ಗಳು, ಸೂಕ್ಷ್ಮ ಕಣಗಳು ಬಿಡುಗಡೆಯಾಗುತ್ತವೆ. ಅವು ಮಹಿಳೆಯರ ಮಿದುಳಿನ ಮೇಲೆ ಹಲವು ರೀತಿಯ ಪರಿಣಾಮಗಳನ್ನು ಬೀರುತ್ತಿದ್ದು, ಮಿದುಳಿನ ಉರಿಯೂತ ಮತ್ತು ಒತ್ತಡಕ್ಕೆ (ಆಕ್ಸಿಡೇಟಿವ್ ಸ್ಟ್ರೆಸ್) ಕಾರಣವಾಗುತ್ತಿದೆ. ಇದು ಅವರ ಗ್ರಹಿಕೆಯ ಸಾಮರ್ಥ್ಯ, ಕಣ್ಣಿನ ದೃಷ್ಟಿಯ ಸಾಮರ್ಥ್ಯ ಮತ್ತು ಒಟ್ಟಾರೆ ಕಾರ್ಯಕ್ಷಮತೆಯನ್ನು ಕುಗ್ಗಿಸುತ್ತಿದೆ.

ಶುದ್ಧ ಇಂಧನ ಮೂಲಗಳನ್ನು/ಅಡುಗೆ ವಿಧಾನಗಳನ್ನು ಬಳಸುವವರಿಗೆ ಹೋಲಿಸಿದರೆ, ಈ ದೋಷಗಳು ಎಚ್‌ಎಪಿ ಹೆಚ್ಚಿರುವ ಮನೆಗಳಲ್ಲಿ ಹೆಚ್ಚು ಕಂಡುಬರುತ್ತಿವೆ. ನಗರ ಪ್ರದೇಶಕ್ಕಿಂತಲೂ ಗ್ರಾಮೀಣ ಪ್ರದೇಶದಲ್ಲಿ ಮನೆಯೊಳಗಿನ ವಾಯು ಮಾಲಿನ್ಯ ಹೆಚ್ಚಾಗಿದ್ದು, ಸಹಜವಾಗಿಯೇ ಅಲ್ಲಿನ ಮಹಿಳೆಯರು ಹೆಚ್ಚು ಸಮಸ್ಯೆಗೆ ಗುರಿಯಾಗುತ್ತಿದ್ದಾರೆ ಎಂದು ವರದಿ ವಿಶ್ಲೇಷಿಸಿದೆ.

ಗ್ರಹಿಕೆ ಸಾಮರ್ಥ್ಯದಲ್ಲಿ ಕುಸಿತ ಎಂದರೆ, ನೆನಪು, ತರ್ಕಶಕ್ತಿ ಮತ್ತು ಮಾತಿನ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗಿ, ಅವುಗಳ ಸಾಮರ್ಥ್ಯ ಕ್ಷೀಣಿಸುವುದು. ಅದರಿಂದ ಅವರ ದೈನಂದಿನ ಚಟುವಟಿಕೆಗಳಿಗೆ ತೊಂದರೆಯಾಗುತ್ತದೆ. ಅದು ಮುಂದುವರಿದು ಬುದ್ಧಿಶಕ್ತಿ ಕುಂದುವಿಕೆ (ಡಿಮೆನ್ಶಿಯಾ) ಮತ್ತು ಮರೆವಿನ ಕಾಯಿಲೆಗೆ ಕಾರಣವಾಗುವ ಸಂಭವವೂ ಇರುತ್ತದೆ.

ಭಾರತದಲ್ಲಿ ಈ ಎರಡೂ ಕಾಯಿಲೆಗಳು ಹೆಚ್ಚುತ್ತಿದ್ದು, ಅಂತಿಮವಾಗಿ ಅದು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಮೇಲೆ ಒತ್ತಡ ಹೆಚ್ಚುವಂತೆ ಮಾಡುತ್ತಿದೆ. ಈ ದಿಸೆಯಲ್ಲಿ ಮನೆಯೊಳಗಿನ ವಾಯು ಮಾಲಿನ್ಯದ ಪರಿಣಾಮಗಳ ಕುರಿತ ಈ ಅಧ್ಯಯನವು ಮಹತ್ವ ಪಡೆದುಕೊಂಡಿದೆ.

ಮೊದಲ ಅಧ್ಯಯನ

ವಾಯು ಮಾಲಿನ್ಯವು ಭಾರತದ ಗ್ರಾಮೀಣ ಮಹಿಳೆಯರ ಮಿದುಳಿನ ಆರೋಗ್ಯದ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತದೆ ಎನ್ನುವ ಬಗ್ಗೆ ನಡೆದ ಮೊದಲ ಅಧ್ಯಯನ ಇದಾಗಿದೆ. ಚೀನಾ ಮತ್ತು ಮೆಕ್ಸಿಕೊದಲ್ಲೂ ಮಾಲಿನ್ಯಕಾರಕ ಅಡುಗೆ ಎಣ್ಣೆ/ಅಡುಗೆ ಮಾಡುವ ತಂತ್ರಜ್ಞಾನ ಬಳಸುವುದರಿಂದ ಜನರ ಗ್ರಹಿಕೆ ಸಾಮರ್ಥ್ಯ ಕುಗ್ಗಿದೆ ಎಂದು ಅಧ್ಯಯನಗಳಿಂದ ಈಗಾಗಲೇ ತಿಳಿದುಬಂದಿದೆ.

ಮನೆಯಲ್ಲಿನ ವಾಯು ಮಾಲಿನ್ಯವು ಜನರ ಶ್ವಾಸಕೋಶ ಮತ್ತು ಹೃದಯದ ಆರೋಗ್ಯದ ಮೇಲೆ ಬೀರುವ ಪರಿಣಾಮಗಳ ಬಗ್ಗೆಯೇ ಇದುವರೆಗೆ ಹೆಚ್ಚಿನ ಅಧ್ಯಯನಗಳು ಗಮನ ಕೇಂದ್ರೀಕರಿಸಿದ್ದವು. ಅದರಿಂದ ಜನರ ಮಿದುಳು ಮತ್ತು ಇತರ ಆರೋಗ್ಯದ ಮೇಲೆ ಯಾವ ರೀತಿಯ ಪರಿಣಾಮಗಳು ಉಂಟಾಗುತ್ತಿವೆ ಎನ್ನುವುದರ ಬಗ್ಗೆ ಇತ್ತೀಚೆಗೆ ಅಧ್ಯಯನಕಾರರು ಹೆಚ್ಚು ಗಮನ ಹರಿಸತೊಡಗಿದ್ದಾರೆ.

ಆಧಾರ: 'ಲ್ಯಾನ್ಸೆಟ್ ಪ್ರಾದೇಶಿಕ ಆರೋಗ್ಯ–ಆಗ್ನೇಯ ಏಷ್ಯಾ'ದಲ್ಲಿ ಪ್ರಕಟಿತ ಅಧ್ಯಯನ ವರದಿ, ಪಿಟಿಐ, ವಿಶ್ವ ಆರೋಗ್ಯ ಸಂಸ್ಥೆ,

ವಿಶ್ವ ಆರೋಗ್ಯ ಸಂಸ್ಥೆ ಹೇಳುವುದೇನು?



ಮನೆಯೊಳಗಿನ ವಾಯು ಮಾಲಿನ್ಯ (ಎಚ್‌ಎಪಿ) ಭಾರತಕ್ಕಷ್ಟೆ ಸೀಮಿತವಾಗಿಲ್ಲ; ಅದು ಜಾಗತಿಕ ಸಮಸ್ಯೆ. ಬಡ ಮತ್ತು ಮಧ್ಯಮ ಆದಾಯದ ದೇಶಗಳಲ್ಲಿ ಇದು ಗಂಭೀರ ಸ್ವರೂಪದ ಸಮಸ್ಯೆಯನ್ನು ತಂದೊಡ್ಡುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆ ಎಚ್‌ಎಪಿಯನ್ನು ಗಂಭೀರವಾಗಿ ಪರಿಗಣಿಸಿದೆ. 2014ರಲ್ಲೇ ಅದು ಪರಿಸರಸ್ನೇಹಿ ಇಂಧನ ಬಳಕೆಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಹೊರಡಿಸಿತ್ತು. ಸೀಮೆಎಣ್ಣೆ, ಕಲ್ಲಿದ್ದಲಿನಂತಹ ಪರಿಸರ ಮಾಲಿನ್ಯಕಾರಿ, ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವಂತಹ ಇಂಧನಗಳನ್ನು ಬಳಸುವುದು ಬೇಡ ಎಂದು ಅದು ಶಿಫಾರಸು ಮಾಡಿತ್ತು.

ಇದರ ವಿರುದ್ಧ ಪ್ರಬಲವಾದ ನೀತಿ ರೂಪಿಸದೇ ಹೋದರೆ, 2030ರಲ್ಲೂ 180 ಕೋಟಿ ಜನರಿಗೆ ಪರಿಸರಸ್ನೇಹಿ ಇಂಧನದ ಕೊರತೆ ಕಾಡಲಿದೆ ಎಂದು ಡಬ್ಲ್ಯುಎಚ್‌ಒ ಹೇಳಿದೆ. ಹಲವು ರಾಷ್ಟ್ರಗಳಲ್ಲಿ ಮನೆಯೊಳಗಿನ ವಾಯು ಮಾಲಿನ್ಯ ಹಾಗೂ ಅದರ ಪರಿಣಾಮಗಳ ಬಗ್ಗೆ ಅಧ್ಯಯನಗಳೂ ನಡೆದಿವೆ. ಈ ಮಾಲಿನ್ಯವು ಮನುಷ್ಯನ ಆರೋಗ್ಯದ ಮೇಲೆ ಪರಿಣಾಮ ಬೀರುತ್ತವೆ ಎಂಬುದನ್ನು ಎಲ್ಲ ಅಧ್ಯಯನಗಳೂ ದೃಢಪಡಿಸಿವೆ.

ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ, ಎಚ್‌ಎಪಿಯಿಂದಾಗಿ ಸಾಂಕ್ರಾಮಿಕವಲ್ಲದ ಹಲವು ರೋಗಗಳು ಮನುಷ್ಯನನ್ನು ಬಾಧಿಸುತ್ತವೆ.

- ಪಾರ್ಶ್ವವಾಯು, ರಕ್ತದ ಪೂರೈಕೆ ಕೊರತೆಯಿಂದ ಬರುವ ಹೃದಯ ಕಾಯಿಲೆ, ಶ್ವಾಸಕೋಶ ಸೋಂಕು, ಸಿಒಪಿಡಿ (ಗಾಳಿಯ ಸಂಚಾರಕ್ಕೆ ತಡೆ ಒಡ್ಡುವುದರಿಂದ ಮತ್ತು ಶ್ವಾಸಕೋಶಕ್ಕೆ ಆಗುವ ಹಾನಿಯಿಂದಾಗಿ ಉಂಟಾಗುವ ಗಂಭೀರ ಕಾಯಿಲೆ) ಮತ್ತು ಶ್ವಾಸಕೋಶದ ಕ್ಯಾನ್ಸರ್ ಎಚ್‌ಎಪಿಯಿಂದ ಬರುವ ಪ್ರಮುಖ ಕಾಯಿಲೆಗಳು
- ಮಹಿಳೆಯರು ಮತ್ತು ಮಕ್ಕಳ ಮೇಲೆ ಇದರ ಪರಿಣಾಮ ಹೆಚ್ಚು
- ಜನನ ಸಂದರ್ಭದಲ್ಲಿ ಕಡಿಮೆ ತೂಕ, ಕ್ಷಯ ರೋಗ, ಕಣ್ಣಿನ ಪೊರೆ ಸಮಸ್ಯೆ, ಗಂಟಲಕುಳಿ ಮತ್ತು ಧ್ವನಿಪೆಟ್ಟಿಗೆಯ ಕ್ಯಾನ್ಸರ್‌ಗೂ ಇದು ಕಾರಣವಾಗಬಹುದು ಎಂಬುದಕ್ಕೆ ಸಾಕ್ಷ್ಯ ಸಿಕ್ಕಿದೆ



ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಸಾಮಾಜಿಕ ಜಾಲತಾಣಗಳಲ್ಲಿ ಎರಡು ವಿಡಿಯೊಗಳು ಹರಿದಾಡುತ್ತಿದ್ದು, ಒಂದು ವಿಡಿಯೊದಲ್ಲಿ ಕೆಲವು ವ್ಯಕ್ತಿಗಳು ಹಲ್ಲೆಗೊಳಗಾದವರಂತೆ ಕೈಗಳಿಗೆ ಬ್ಯಾಂಡೇಜ್ ಕಟ್ಟಿಕೊಂಡು, ಕುಂಟುತ್ತಾ ನಡೆಯುವುದು ಕಂಡರೆ, ಮತ್ತೊಂದರಲ್ಲಿ ಕೆಲವರ ತಲೆ ಬೋಳಿಸಿರುವುದು ಕಾಣುತ್ತದೆ. ಅವರು ಉತ್ತರ ಪ್ರದೇಶದ ಆಜಾದ್ ಸಮಾಜವಾದಿ ಪಕ್ಷದ ಮುಖ್ಯಸ್ಥ ಚಂದ್ರಶೇಖರ ಆಜಾದ್ ಅವರ ಬೆಂಬಲಿಗರಾಗಿದ್ದು, ಆಜಾದ್ ಅವರನ್ನು ಇತ್ತೀಚೆಗೆ ಪ್ರಕರಣವೊಂದರ ಸಂಬಂಧ ಪೊಲೀಸರು ಬಂಧಿಸಿದ್ದನ್ನು ವಿರೋಧಿಸಿ ಹಿಂಸಾಚಾರ ನಡೆಸಿದ್ದರು; ಅವರಿಗೆ ಪೊಲೀಸರು ತಕ್ಕ ಶಾಸ್ತಿ ಮಾಡಿದ್ದಾರೆ ಎಂದು ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದನೆ ಮಾಡುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ವಿಡಿಯೊದ ಕೀಫ್ರೇಮ್ ಅನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಅದು ಖಬರ್ ಪದಂಪುರ್ ಮತ್ತು ಗ್ರಾಮೀಣ್ ಎನ್ನುವ ಫೇಸ್‌ಬುಕ್ ಪುಟಗಳಿಗೆ ಸಂಪರ್ಕ ಕಲ್ಪಿಸಿತು. ರಾಜಸ್ಥಾನದ ಶ್ರೀಗಂಗಾನಗರದಲ್ಲಿ ಉದ್ಯಮಿಯಿಂದ ಹಣ ವಸೂಲಿ ಮಾಡುತ್ತಿದ್ದ ಗುಂಪನ್ನು ಬಂಧಿಸಲಾಗಿದೆ ಎಂದು ಅದರಲ್ಲಿ 2025ರ ಜೂನ್ 5ರಂದು ಉಲ್ಲೇಖಿಸಲಾಗಿತ್ತು. ಗೂಗಲ್‌ನಲ್ಲಿ ಹುಡುಕಾಡಿದಾಗ ಇದಕ್ಕೆ ಸಂಬಂಧಿಸಿದ ಮಾಧ್ಯಮ ವರದಿಯೂ ಸಿಕ್ಕಿತು. ವಸೂಲಿಕೋರರನ್ನು ಪೊಲೀಸರು ಕರೆದೊಯ್ಯುತ್ತಿರುವ ವಿಡಿಯೊ ಅನ್ನು ಸುಳ್ಳು ಪ್ರತಿಪಾದನೆಯೊಂದಿಗೆ ಹಂಚಿಕೊಳ್ಳಲಾಗುತ್ತಿದೆ ಎಂದು ಆಲ್ಟ್ ನ್ಯೂಸ್ ಫ್ಯಾಕ್ಟ್ ಚೆಕ್ ವರದಿ ಪ್ರಕಟಿಸಿದೆ.

ನುಡಿ ಬೆಳಗು



ವಾಸುದೇವ ನಾಡಿಗ್

ತಿರುವುಗಳು

ಊರಿನ ಜನರೆಲ್ಲರೂ ಹಿಡಿ ಶಾಪ ಹಾಕುತ್ತಲೇ ಆ ರಸ್ತೆಯಲ್ಲಿ ಓಡಾಡುತ್ತಿದ್ದರು. ಇಕ್ಕಟ್ಟಾದ ರಸ್ತೆಗೆ ಡಿವೈಡರ್ ಹಾಕಲಾಗಿತ್ತು ಮತ್ತು ಆ ಬದಿಯ ಅಂಗಡಿಗಳಿಗೆ ಹೋಗಲು ಯು- ಟರ್ನ್ ಕೂಡಾ ಅರ್ಧ ಕಿ.ಮೀ ಕ್ರಮಿಸಬೇಕಿತ್ತು. ಈ ಕಡೆಯವರು ಈ ಕಡೆ ಆ ಕಡೆಯವರು ಆ ಕಡೆಗೇ ಉಳಿವ ಹಾಗಿತ್ತು. ಈ ಕಡೆ ದಿನಸಿ ಕೊಳ್ಳುವವರು ಆ ಕಡೆಗೆ ಹಾರ್ಡ್‌ವೇರ್ ಅಂಗಡಿಗೆ ಹೋಗಲು ಯೋಚಿಸುತ್ತಿರಲಿಲ್ಲ.

ಈ ಹಿಂದೆ ಡಿವೈಡರ್ ಇರದೇ ಇದ್ದಾಗ, ರಸ್ತೆ ದಾಟುವ ಸಮಯ ರಯ್ಯನೆ ಬರುವ ವಾಹನಗಳು ಅನೇಕರ ನೋವು ಮತ್ತು ಸಾವಿಗೂ ಕಾರಣವಾಗಿದ್ದನ್ನೂ ಜನ ಮರೆತಿರಲಿಲ್ಲ. ಸಿಕ್ಕ ಸಿಕ್ಕಲ್ಲಿ ಯಾವುದೇ ಸೂಚನೆ ಇರದೆ ತಿರುವು ತೆಗೆದುಕೊಳ್ಳುವ ವಾಹನ ಚಾಲಕರು ರಸ್ತೆಯನ್ನು ಬಂದ್ ಮಾಡುತ್ತಿದ್ದರು. ಬರಿ ಗೊಂದಲ ಮತ್ತು ಕೈ ಕೈ ಮಿಲಾಯಿಸುವ ಸನ್ನಿವೇಶಗಳೇ ಹೆಚ್ಚು.

ಈಗ ಡಿವೈಡರ್ ನಿರ್ಮಾಣದ ನಂತರ ಜನರ ಚಲನೆಯಲ್ಲಿ ಒಂದಿಷ್ಟು ವ್ಯವಧಾನವೂ ಕಂಡು ಬಂದಿತ್ತು. ಸಹಿಸದ ಜನ ಡಿವೈಡರ್ ತೆರವಿಗೆ ತಹಶೀಲ್ದಾರ್ ಮತ್ತು ಜಿಲ್ಲಾಧಿಕಾರಿಗಳಿಗೂ ಅಹವಾಲನ್ನು ನೀಡಿದ್ದರು. ಡಿವೈಡರ್ ನಿರ್ಮಿಸಿದ ಆರಂಭಿಕ ದಿನಗಳಲ್ಲಿ ಪ್ರತಿಭಟನೆಗಳನ್ನೂ ಮಾಡಲಾಗಿದ್ದರೂ ಎಲ್ಲಿಂದಲೂ ವಿರೋಧಿಗಳ ಪರವಾದ ನಿರ್ಣಯ ಬಂದಿರಲಿಲ್ಲ. ಬದಲಿಗೆ ಅಪಘಾತಗಳು, ವಾಹನ ನಿಬಿಡತೆ ಕಡಿಮೆ ಆದುದರ ಕುರಿತು ಬುದ್ಧಿ ಹೇಳಿ ಕಳಿಸಿದರು.

ಜೀವನವೂ ಹೀಗೇ ಅಲ್ಲವೆ? ಹಳೆಯ ಉಸಿರು ಗಟ್ಟಿಸುವ ಕೆಲವು ನಿಯಮಗಳಿಗೆ ಒಗ್ಗಿ ಹೋಗಿ, ಹೊಸದು ಸರಿ ಇದ್ದರೂ ಅದನ್ನು ಸ್ವೀಕರಿಸಲಾಗದ ಇಕ್ಕಟ್ಟು. ಅದು ಒಳ್ಳೆಯದೇ ಇರುತ್ತದೆ. ಆದರೆ ಗೊಣಗಾಟ ಬಿಡಲ್ಲ. ಏನೇ ಎಂದರೂ ಸಣ್ಣ ಕೊಂಕು ಕಿರಿಕಿರಿ ಪ್ರತಿರೋಧ. ಈಗ ಆ ಊರು ಆ ಬೀದಿಯಲ್ಲಿ ಓಡಾಡುವ ಜನರು ಮೊದಲಿನ ಹಾಗೆ ಇಲ್ಲ. ಸಂಯಮದ ಚಲನೆ ನಡೆ ಮತ್ತು ಎಚ್ಚರದ ತಿರುವು. ಕೆಲಸಗಳು ಆಗುತ್ತಿವೆ ಮತ್ತು ಮೊದಲಿನ ತರಹದ ಎಡವಟ್ಟುಗಳೂ ಇಲ್ಲ. ಅಗತ್ಯ ಮತ್ತು ಆರೋಗ್ಯಕರ ಹೊಂದಾಣಿಕೆಗಳಿಗೆ ಮಣಿಯುವುದೂ ಒಂದು ಜವಾಬ್ದಾರಿಯೇ ಸರಿ. ❖

ರಾಷ್ಟ್ರೀಯ

ನಿರೀಕ್ಷೆ ಹೆಚ್ಚಿಸಿದ ಶುಕ್ಲಾ ಸಾಹಸ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ (ಐಎಸ್‌ಎಸ್) 18 ದಿನ ಇದ್ದು, ಭೂಮಿಗೆ ಮಂಗಳವಾರ ಮರಳಿರುವ ವ್ಯೋಮಯಾನಿ, ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರ ಈ ಸಾಹಸ ಯಾನವು ಭಾರತದ ಮಹತ್ವಾಕಾಂಕ್ಷೆಯ ಮಾನವಸಹಿತ ಗಗನಯಾನ ಕುರಿತು ನಿರೀಕ್ಷೆ ಹೆಚ್ಚಿಸಿದೆ.

ಐಎಸ್‌ಎಸ್‌ಗೆ ತೆರಳಿ, ಅಲ್ಲಿ ಹಲವು ವೈಜ್ಞಾನಿಕ ಪ್ರಯೋಗಗಳನ್ನು ನಡೆಸಿದ ಬಳಿಕ ಶುಕ್ಲಾ ಯಶಸ್ವಿಯಾಗಿ ಭೂಮಿಗೆ ಮರಳಿದ್ದಾರೆ. ಒಟ್ಟು 20 ದಿನಗಳ ಬಾಹ್ಯಾಕಾಶ ಯಾನದ ಅವರ ಅನುಭವವನ್ನು ಗಗನಯಾನ ಕಾರ್ಯಕ್ರಮಕ್ಕೆ ಬಳಸಿಕೊಳ್ಳಲು ಭಾರತ ಮುಂದಾಗಿದೆ.

ಭಾರತದ ಮೊದಲ ಮಾನವಸಹಿತ ಗಗನಯಾನವನ್ನು 2027ರ ಮೊದಲ ತ್ರೈಮಾಸಿಕದಲ್ಲಿ ಕಾರ್ಯಗತಗೊಳಿಸುವ ನಿರೀಕ್ಷೆ ಇದೆ. ಗಗನಯಾನಕ್ಕೆ ಆಯ್ಕೆಯಾಗಿರುವ ಭಾರತದ ವಾಯುಪಡೆಯ ನಾಲ್ವರು ಪೈಲಟ್‌ಗಳ ಪೈಕಿ ಶುಕ್ಲಾ ಕೂಡ ಒಬ್ಬರು.

ಐಎಸ್‌ಎಸ್ ಯಾನಕ್ಕಾಗಿ ಶುಕ್ಲಾ ಅವರಿಗೆ ನಾಸಾ, ಆಕ್ಸಿಯಂ ಸ್ಪೇಸ್ ಹಾಗೂ ಸ್ಪೇಸ್‌ಎಕ್ಸ್ ಜಂಟಿಯಾಗಿ 10 ತಿಂಗಳು ತರಬೇತಿ ನೀಡಿದ್ದವು. ಗಗನಯಾನಿಗಳನ್ನು ಹೊತ್ತ 'ಡ್ರ್ಯಾಗನ್ ಗ್ರೇಸ್' ಬಾಹ್ಯಾಕಾಶ ಕೋಶವನ್ನು ಶುಭಾಂಶು ಶುಕ್ಲಾ ಮುನ್ನಡೆಸಿದ್ದರು.

'ಆಗಸ್ಟ್ 17ರ ಹೊತ್ತಿಗೆ ಶುಕ್ಲಾ ಭಾರತಕ್ಕೆ'



ಜಿತೇಂದ್ರ ಸಿಂಗ್

'ಆಕ್ಸಿಯಂ–4' ಬಾಹ್ಯಾಕಾಶ ಕಾರ್ಯಕ್ರಮ ಕುರಿತಂತೆ ವರದಿಗಳನ್ನು ಒಪ್ಪಿಸುವ ಪ್ರಕ್ರಿಯೆ ಪೂರ್ಣಗೊಂಡ ಬಳಿಕ, ಗಗನಯಾನಿ ಶುಭಾಂಶು ಶುಕ್ಲಾ ಅವರು ಆಗಸ್ಟ್ 17ರ ಹೊತ್ತಿಗೆ ಭಾರತಕ್ಕೆ ಮರಳುವರು ಎಂದು ಕೇಂದ್ರ ವಿಜ್ಞಾನ ಸಚಿವ ಜಿತೇಂದ್ರ ಸಿಂಗ್ ಮಂಗಳವಾರ ತಿಳಿಸಿದ್ದಾರೆ.

ಶುಕ್ಲಾ ಸೇರಿ ನಾಲ್ವರು ಗಗನಯಾತ್ರಿಗಳು ಭೂಮಿಗೆ ಮರಳುವುದರ ನೇರಪ್ರಸಾರವನ್ನು ಇಲ್ಲಿನ ಸಿಎಸ್‌ಐಆರ್ ಕೇಂದ್ರ ಕಚೇರಿಯಲ್ಲಿ ವೀಕ್ಷಿಸಿ, ಅವರು ಮಾತನಾಡಿದರು.

'ಗುರುತ್ವಾಕರ್ಷಣ ಶಕ್ತಿಗೆ ಒಗ್ಗಿಕೊಳ್ಳುವುದಕ್ಕಾಗಿ ಅವರನ್ನು ಜುಲೈ 23ರವರೆಗೆ ಪ್ರತ್ಯೇಕವಾಗಿ ಇರಿಸಲಾಗುತ್ತದೆ. ಜುಲೈ 24ರಿಂದ ನಾಲ್ಕು ದಿನ ಇಸ್ರೊ ತಂಡದೊಂದಿಗೆ ಚರ್ಚೆ ನಡೆಯಲಿದೆ. ನಂತರ ಆಗಸ್ಟ್ 13ರವರೆಗೆ ಆಕ್ಸಿಯಂ ಸ್ಪೇಸ್, ಸ್ಪೇಸ್‌ಎಕ್ಸ್ ಹಾಗೂ ನಾಸಾ ಪ್ರತಿನಿಧಿಗಳೊಂದಿಗೆ ಮಾಹಿತಿ ಹಂಚಿಕೊಳ್ಳುವರು. ಹೀಗಾಗಿ ಆಗಸ್ಟ್ 17ರ ವೇಳೆಗೆ ಶುಕ್ಲಾ ಅವರು ಭಾರತಕ್ಕೆ ಮರಳುವ ನಿರೀಕ್ಷೆ ಹೊಂದಿದ್ದೇವೆ' ಎಂದು ಸಿಂಗ್ ಹೇಳಿದರು.

ಪೋಶೆ ಅಪಘಾತ: ಪೊಲೀಸರ ಮನವಿ ತಿರಸ್ಕರಿಸಿದ ಜೆಜೆಬಿ

ಪುಣೆ (ಪಿಟಿಐ): ಪೋಶೆ ಕಾರು ಅಪಘಾತ ಪ್ರಕರಣದಲ್ಲಿ ಕಾನೂನಿನ ಎದುರು ಸಂಘರ್ಷಕ್ಕೆ ಒಳಪಟ್ಟ 17 ವರ್ಷದ ಬಾಲಕನನ್ನು ವಯಸ್ಕನೆಂದು ಪರಿಗಣಿಸಲು ಕೋರಿದ್ದ ಪುಣೆ ನಗರ ಪೊಲೀಸರ ಮನವಿಯನ್ನು ಬಾಲ ನ್ಯಾಯ ಮಂಡಳಿಯು (ಜೆಜೆಬಿ) ಮಂಗಳವಾರ ತಿರಸ್ಕರಿಸಿದೆ.

ಕಳೆದ ವರ್ಷ ಮೇ ನಲ್ಲಿ ಪುಣೆಯ ಕಲ್ಯಾಣಿ ನಗರದ ಸಮೀಪ ಪಾನಮತ್ತ ಸ್ಥಿತಿಯಲ್ಲಿದ್ದ ಬಾಲಕ ಚಲಾಯಿಸುತ್ತಿದ್ದ ಪೋಶೆ ಕಾರು ಡಿಕ್ಕಿ ಹೊಡೆದು ಇಬ್ಬರು ಟೆಕಿಗಳು ಮೃತಪಟ್ಟಿದ್ದರು.

ಬಾಲ ನ್ಯಾಯ (ಮಕ್ಕಳ ಕಾಳಜಿ ಮತ್ತು ರಕ್ಷಣೆ) ಕಾಯ್ದೆ–2015ರ ವಿವಿಧ ಸೆಕ್ಷನ್ ಉಲ್ಲೇಖಿಸಿ ಪುಣೆ ಪೊಲೀಸರು ಮಂಡಳಿಯಲ್ಲಿ ಈ ಅರ್ಜಿ ಸಲ್ಲಿಸಿದ್ದರು. ಇಬ್ಬರನ್ನು ಹತ್ಯೆ ಮಾಡಿ ಹೀನ ಕೃತ್ಯ ಎಸಗಿರುವುದು ಮಾತ್ರವಲ್ಲದೆ, ಸಾಕ್ಷ್ಯನಾಶಕ್ಕೂ ಯತ್ನಿಸಿದ್ದಾನೆ ಎಂದು ಪೊಲೀಸರು ದೂರಿದ್ದರು.

'ಕೇಸರಿ ಒಳಸಂಚು ಯಶಸ್ವಿಯಾಗದು'

ಪ್ರಜಾವಾಣಿ ವಾರ್ತೆ


ಚೆನ್ನೈ: ತಮಿಳುನಾಡನ್ನು ವಿಭಜಿಸುವ 'ದೆಹಲಿಯ ಕೇಸರಿ ಒಳಸಂಚು' ಯಶಸ್ವಿಯಾಗಲು ಸಾಧ್ಯವಿಲ್ಲ ಎಂದು ಡಿಎಂಕೆ ಅಧ್ಯಕ್ಷ, ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಮಂಗಳವಾರ ಕಾರ್ಯಕ್ರಮವೊಂದರಲ್ಲಿ ಹೇಳಿದರು.

ಮುಂಬರುವ ಚುನಾವಣೆಯಲ್ಲಿ ತಮ್ಮನ್ನು ಎದುರಿಸಲು ತಯಾರಿ ನಡೆಸುತ್ತಿರುವ ಎಐಎಡಿಎಂಕೆ–ಬಿಜೆಪಿ ಮೈತ್ರಿಯನ್ನು ಉಲ್ಲೇಖಿಸಿ ಅವರು ಈ ಹೇಳಿಕೆ ನೀಡಿದರು.

ಸ್ಟಾಲಿನ್ ಅವರಿಗೂ ಮೊದಲು ಮಾತನಾಡಿದ ಆಡಳಿತಾರೂಢ ಮೈತ್ರಿಕೂಟದ ಭಾಗವಾಗಿರುವ ವಿಸಿಕೆ ಮುಖ್ಯಸ್ಥ ತೋಳ್ ತಿರುಮಾವಲನ್, 'ಈ ವೇದಿಕೆಯಲ್ಲಿ ಪೆರಿಯಾರ್ ದಾರಿಯನ್ನು ಅನುಸರಿಸುವ ದ್ರಾವಿಡ ಚಳವಳಿಯ ನಾಯಕರು, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ನಾಯಕರು, ಗಾಂಧಿವಾದಿ ನಾಯಕರು ಮತ್ತು ಅಂಬೇಡ್ಕರ್‌ವಾದಿ ನಾಯಕರಿದ್ದಾರೆ. ಇದುವೇ ತಮಿಳುನಾಡು, ಇವರೆಲ್ಲರೂ ಒಂದಾಗಿದ್ದಾರೆ' ಎಂದು ಹೇಳಿದರು.

ಪದಬಂಧ 6105

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಮಾದಕ ವಸ್ತು ಸೇವನೆಯಿಂದಾಗುವ ಜೊಂಪು(2)
3.ಧಾನ್ಯಗಳನ್ನು ಕುಟ್ಟುವ ಸಾಧನ(3)
5.ಕುದುರೆಯನ್ನೇರುವ ಬಳೆ(3)
7.ಆಸ್ಪತ್ರೆಯನ್ನು ಹೀಗೂ ಹೇಳುವರು(4)
9.ಅಗ್ರಗಣ್ಯರೆಲ್ಲಾ ಪ್ರವೇಶಿಸಿದ ಕಾಡು (3)
10.ಹೆಚ್ಚಳವಾದುದನ್ನು ಹೀಗೆನ್ನಿ(3)
11.ನರಕಾಧಿಪತಿಯ ಕಿಂಕರ(4)
13.ಪಟ ತೋರಿಸಿ ಮಾಡಿರುವ ಮೋಸ (3)
15.ಈತ ವಿಷಯಾಸಕ್ತ(3)
16.ಜರೂರಾಗಿ ಹಾಕಿಸಿಕೊಂಡಿರುವ ಸಹಿ (2)

ಮೇಲಿಂದ ಕೆಳಕ್ಕೆ

2.ಹಳೆ ಸಾಮಾನುಗಳನ್ನು ಮಾರುವ ಅಂಗಡಿ(3)
3.ನೆನಪು ಮಾಡಿಕೊಂಡು ತೋರುವ ವಯ್ಯಾರ(3)
4.ಮಣ್ಣು ಮಿಶ್ರಿತ ನೀರು(3)
6.ಕಾರು ಅರಣ್ಯದಲ್ಲಿ ಇದ್ದರಷ್ಟೇ ಈ ದಯೆ! (3)
8.ಯಮನ ಬಳಿಯಿರುವ ಜೋಡಿ(3)
9.ದಶಮ ಗ್ರಹ ಎನಿಸಿಕೊಂಡವನು(3)
10.ಸ್ಲೇಟಿನ ಮೇಲೆ ಬರೆಯುವ ಸಾಧನ(3)
12.ಭಾಸ್ಕರ ಹುಟ್ಟಿರುವಾಗ ಕಳ್ಳ ಕಾಣಿಸಿದನಲ್ಲಾ! (3)
13.ಕಲೆಸಿದ ಗೋಧಿ ಹಿಟ್ಟು(3)
14.ಗುರುಗುಟ್ಟುತ್ತಿರುವ ಗಂಡು ಕುರಿ (3)

6104ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅನುಪಮ 3.ಅಧರ
4.ರಮಡೋಲು 6.ವಜಾ
8.ಪಾನು 9.ಪಗಾರ
10.ಪ್ರತಾಪ 11.ಕರ್ಣ
13.ತಿಕುಂ 15.ಕ್ಷಮಾದಾನ
17.ಬಾಗಿಲು 18.ಗುಣಾಕಾರ

ಮೇಲಿಂದ ಕೆಳಕ್ಕೆ:
1.ಅರವ 2.ಮರ
3.ಅಲ್ಪಜ್ಞ 5.ಲುಕ್ಸಾನು
7.ಜಾಗರ 8.ಪಾಪ
9.ಪರ್ಣ 10.ಪ್ರಕೃತಿ
11.ಕಟಾಕ್ಷ 12.ತೊಗಲು
14.ಕುಂಬಾರ 16.ನಗು

ಸುಡೊಕು 6489

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

9	2			5		8	4	
			3		9			1
	4			1			5	7
	3	2		9		7		6
			1		2		9	
7	9			3		2	1	
3	1		9		5		7	
				8		1	6	9
	6	9			1		3	8

0000 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

16 ಜುಲೈ 2025 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ಷಷ್ಠಿ ಗಂ.21-02 ನಕ್ಷತ್ರ: ಪೂರ್ವಾಭಾದ್ರ ಗಂ. 5-47 ನಂತರ ಉತ್ತರಾಭಾದ್ರ ಗಂ 28-51 ಯೋಗ: ಶೋಭನ ಗಂ. 11-57, ಮಿಥುನ ಮಾಸದ 32 ನೇ ದಿನ. ಮಳೆ ನಕ್ಷತ್ರ: ಪುನರ್ವಸು 3ನೇ ಪಾದ. ರಾಹುಕಾಲ: ಮಧ್ಯಾಹ್ನ 12-00– 01-30, ಸೂರ್ಯೋದಯ: 06-15 ಸೂರ್ಯಾಸ್ತ: 06-58, ಮುಸ್ಲಿಂ ದಿನಾಂಕ: 20 ಮೊಹರಮ್, ದಿನ ವಿಶೇಷ: ಕರ್ಕಾಟಕ ಸಂಕ್ರಾಂತಿ, ಅದೃಷ್ಟ ಸಂಖ್ಯೆ: 5, 7

ಮೇಷ: ಏಜೆನ್ಸಿಯಂತಹ ಸ್ವಉದ್ಯೋಗ ತೆರೆಯಲು ಸೂಕ್ತ ಸ್ಥಳದ ಹುಡುಕಾಟದಲ್ಲಿರುವ ನಿಮಗೆ ಅನುಕೂಲಕರವಾದ ಸ್ಥಳ ದೊರಕುವುದು. ಎಷ್ಟೇ ಪರಿಶ್ರಮವಿದ್ದರೂ ರಾಜಕೀಯ ಭವಿಷ್ಯಕ್ಕೆ ಮೋಡ ಕವಿದಂತೆ ಆಗುತ್ತದೆ.

ವೃಷಭ: ಇಂದು ನಿಮ್ಮ ಎಣಿಕೆಯಂತೆ ಕಾರ್ಯಗಳು ಸಿದ್ಧಿಸುವುದು. ನಿಮ್ಮ ಆರೋಗ್ಯವು ದಿನದಿಂದ ದಿನಕ್ಕೆ ಸುಧಾರಿಸುತ್ತದೆ. ವೃತ್ತಿ ಜೀವನದಲ್ಲಿರುವ ಮಾನಸಿಕ ಒತ್ತಡ ಸ್ವಲ್ಪ ಕಡಿಮೆಯಾಗಲಿದೆ.

ಮಿಥುನ: ವಿದೇಶ ಅಥವಾ ದೂರ ಸಂಚಾರದ ಯೋಗವಿದೆ. ಬಂಧುಗಳ ಸಹಾಯದಿಂದ ಪುತ್ರನಿಗೆ ಕಾರ್ಯಾನುಕೂಲವಾಗುವುದು. ಖರ್ಚು-ವೆಚ್ಚಗಳಿಗೆ ಕಡಿವಾಣ ಹಾಕುವುದರಿಂದ ಆರ್ಥಿಕ ಸಂಕಷ್ಟ ಅರ್ಧದಷ್ಟು ಕಳೆಯುವುದು.

ಕರ್ಕಾಟಕ: ಕೌಟುಂಬಿಕ ಶಾಂತಿಗೋಸ್ಕರವಾಗಿ ಸದಾ ತಾಳ್ಮೆಯಿಂದ ವ್ಯವಹರಿಸಿ. ಅಕ್ಕ-ಪಕ್ಕದವರನ್ನು ತಾತ್ಸಾರವಾಗಿ ಭಾವಿಸಬೇಡಿ. ರಸಗೊಬ್ಬರ ವ್ಯಾಪಾರ ಮಾಡುವವರಿಗೆ ಲಾಭದ ಜೊತೆ ಆಯಾಸವೂ ಕಾಡಲಿದೆ.

ಸಿಂಹ: ಮಕ್ಕಳ ವಿದ್ಯಾಭ್ಯಾಸ ನಿರಾತಂಕವಾಗಿ ಸಾಗುವುದು. ನಿಮ್ಮೆದುರು ಹಲವಾರು ಅವಕಾಶಗಳು ಎದುರಾಗುವುದರಿಂದ ಗೊಂದಲಕ್ಕೆ ಈಡಾಗುವಿರಿ. ಆಂಜನೇಯನ ಸೇವೆ ಮಾಡುವುದರಿಂದ ಗೊಂದಲ ನಿವಾರಣೆಯಾಗುತ್ತದೆ.

ಕನ್ಯಾ: ಆರ್ಥಿಕವಾಗಿ ಲಾಭಕ್ಕಾಗಿ ಹೋರಾಟ ನಡೆಸಬೇಕಿದೆ. ಕಾರ್ಯವನ್ನು ಜಯಿಸುವ ಹಂಬಲದಲ್ಲಿ ಆರೋಗ್ಯವನ್ನು ಕಳೆದುಕೊಳ್ಳಬೇಡಿ. ಎತ್ತರದಲ್ಲಿ ಹತ್ತಿ ಕೆಲಸ ಮಾಡುವವರು, ಸಾಹಸ ಪ್ರವೃತ್ತಿಯವರು ಜಾಗೃತರಾಗಿರಿ.

ತುಲಾ: ಸಮಸ್ಯೆಗಳು ಮತ್ತು ದುಃಖಗಳೆರಡೂ ತನ್ನ ಇರುವಿಕೆಯನ್ನು ತಿಳಿಸಲಿವೆ. ನಿಜ ಮಾರ್ಗದಿಂದ ಕಾರ್ಯಪ್ರವೃತ್ತರಾದಲ್ಲಿ ಹೆಚ್ಚಿನ ಅಭಿವೃದ್ಧಿ ಅನುಭವಕ್ಕೆ ಬರಲಿದೆ. ಉನ್ನತ ವ್ಯಾಸಂಗದವರಿಗೆ ನೇರ ಆಯ್ಕೆಗೊಳ್ಳುವ ಸಂಭವವಿದೆ.

ವೃಶ್ಚಿಕ: ಬಹುದಿನಗಳ ನಿರೀಕ್ಷೆಯ ವಿಚಾರಗಳು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಿದಲ್ಲಿ ಲಾಭ ಕಾಣುವಿರಿ. ನವದಂಪತಿಗಳಿಗೆ ಸಂತಾನ ಭಾಗ್ಯದ ಫಲ ದೊರೆಯಲಿದೆ. ಕ್ರೀಡಾಪಟುಗಳಿಗೆ ಹೆಚ್ಚಿನ ಪ್ರೋತ್ಸಾಹ ಲಭಿಸುವುದು.

ಧನು: ಜೀವನದಲ್ಲಿ ಕೆಲವು ವಿಚಾರಗಳಲ್ಲಿ ಆತಂಕ ಮೂಡಿ ಮನೋಧೈರ್ಯವನ್ನು ಕಟ್ಟಿಹಾಕಿಕೊಳ್ಳುತ್ತದೆ. ಅಭಿವೃದ್ಧಿಯಲ್ಲಿ ಹಿನ್ನಡೆ ಕಾಣಲಿದ್ದೀರಿ. ಚಿನ್ನ–ಬೆಳ್ಳಿ ವ್ಯಾಪಾರಸ್ಥರಿಗೆ ವ್ಯವಹಾರದಲ್ಲಿ ಅಪಕೀರ್ತಿ ಉಂಟಾಗುವ ಸಾಧ್ಯತೆ ಇದೆ.

ಮಕರ: ನಿಮ್ಮ ಯೋಜನೆಗಳು ಕಾರ್ಯಗತಗೊಳ್ಳಲು ಹೆಚ್ಚಿನ ಪ್ರಯತ್ನ ನಡೆಸಬೇಕಾಗುವುದು. ಮಹಾ ಗಣಪತಿಯ ಮೊರೆ ಹೋಗುವುದರಿಂದ ಕಾರ್ಯ ಸಿದ್ಧಿಯಾಗಲಿದೆ. ದಿನಾಂತ್ಯದಲ್ಲಿ ಶಿರೋವೇದನೆ ಎದುರಾಗಬಹುದು.


ಕುಂಭ: ಆಗು-ಹೋಗುಗಳನ್ನು ಅರಿತು ವ್ಯವಹಾರದಲ್ಲಿ ಮುಂದುವರೆಯಿರಿ. ಮಹತ್ವದ ನಿರ್ಧಾರ ಕೈಗೊಳ್ಳಲು ಕಾದು ನೋಡುವ ತಂತ್ರ ಅನುಸರಿಸುವುದು ಸೂಕ್ತ. ಸದ್ಯಕ್ಕೆ ವೃತ್ತಿಯ ಬದಲಾವಣೆಯ ಯೋಚನೆ ಸರಿಯಲ್ಲ.

ಮೀನ: ಪ್ರಮುಖ ವಿಚಾರಗಳಲ್ಲಿ ಮುಂದಿನ ಹೆಜ್ಜೆಯಿಡಲು ಸೂಕ್ತ ಸಮಯವಲ್ಲ. ಸಂಬಂಧಗಳನ್ನು ಉಳಿಸಿ ಕಾಪಾಡುವುದರಲ್ಲಿ ಜಯವಿರುತ್ತದೆ. ಹನುಮ ಸಮೇತನಾದ ಶ್ರೀರಾಮನ ಪರಿವಾರವನ್ನು ಆರಾಧಿಸಿ ಶ್ರೇಯೋವಂತರಾಗಿರಿ.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,082
ಇಂದಿನ ಅಂತ್ಯ:	25,195
ದಿನದ ಕನಿಷ್ಠ:	25,088
	113

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹580
	12 ಕ್ಕೆ	₹80
ಮೈಸೂರು:	100 ಕ್ಕೆ	₹590

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹305-548
ದ್ವಿತಳಿ (ಬಿ.ವಿ)	₹222-668

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹204
ಆರ್‌ಎಸ್‌ಎಸ್-5	₹198
ಗುಡ್ ಲಾಟ್	₹184

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1450 (1440)
ಸೋಯಾ (ರಿಫೈನ್ಡ್)	₹1215(1210)
ಸೂರ್ಯಕಾಂತಿ (ರಿಫೈನ್ಡ್)	₹1355(1350)
ಪಾಮೋಲಿನ್	₹1190(1190)

ಸಿರಿಯಾ: ಸಂಘರ್ಷ ಅಂತ್ಯ

ಬುಶ್ರಾ ಅಲ್ ಹರೀರ್ (ಸಿರಿಯಾ) (ಎಪಿ): 'ದುರೂಸ್ ಪಂಗಡದ ಪಡೆ ಹಾಗೂ ಸುನ್ನಿ ಬದಾವಿ ಬುಡಕಟ್ಟು ಪಂಗಡದ ಮಧ್ಯೆ ನಡೆಯುತ್ತಿದ್ದ ಸಂಘರ್ಷ ಅಂತ್ಯಗೊಂಡಿದೆ' ಎಂದು ಸಿರಿಯಾ ಸರ್ಕಾರ ಹೇಳಿದೆ. ಸಂಘರ್ಷದಲ್ಲಿ ಸುಮಾರು 100 ಮಂದಿ ಮೃತಪಟ್ಟಿದ್ದರು.



ಭಾರತ ಪ್ರವೇಶಿಸಿದ ಟೆಸ್ಲಾ

ಆಮದು ಮಾಡಿಕೊಂಡ 'ಮಾಡೆಲ್ ವೈ' ಕಾರು ಮಾರಾಟಕ್ಕೆ ಮುಂದಾದ ಕಂಪನಿ

ಮುಂಬೈ (ಪಿಟಿಐ): ಇ.ವಿ ಕಾರುಗಳ ತಯಾರಿಕೆಯಲ್ಲಿ ಜಾಗತಿಕ ಮಟ್ಟದಲ್ಲಿ ಖ್ಯಾತಿ ಸಂಪಾದಿಸಿರುವ ಟೆಸ್ಲಾ ಕಂಪನಿಯು ಭಾರತ ಪ್ರವೇಶಿಸಿದೆ. ₹59.89 ಲಕ್ಷ ಆರಂಭಿಕ ಬೆಲೆಯ 'ಮಾಡೆಲ್ ವೈ' ಕಾರನ್ನು ಕಂಪನಿಯು ಮುಂಬೈನಲ್ಲಿ ಆರಂಭವಾದ ತನ್ನ ಮೊದಲ ಮಳಿಗೆಯಲ್ಲಿ ಮಂಗಳವಾರ ಅನಾವರಣ ಮಾಡಿದೆ.

ಅಮೆರಿಕದ ಉದ್ಯಮಿ ಇಲಾನ್‌ಮಸ್ಕ್ ಒಡೆತನದ ಟೆಸ್ಲಾ ಕಂಪನಿಯು ಚೀನಾದ ಶಾಂಘೈನ ಘಟಕದಲ್ಲಿ ಪೂರ್ತಿಯಾಗಿ ಸಿದ್ಧಗೊಂಡ 'ಮಾಡೆಲ್ ವೈ' ಕಾರುಗಳನ್ನು ಭಾರತಕ್ಕೆ ಆಮದು ಮಾಡಿಕೊಳ್ಳಲಿದೆ.

ಮಧ್ಯಮ ಗಾತ್ರದ ವಿದ್ಯುತ್ ಚಾಲಿತ ಎಸ್‌ಯುವಿ ಆಗಿರುವ ಈ ಕಾರಿನ ಎರಡು ಅವತರಣಿಕೆಗಳನ್ನು ಭಾರತದಲ್ಲಿ ಮಾರಾಟ ಮಾಡಲಾಗುತ್ತದೆ. ಕಾರಿನ ಗರಿಷ್ಠ ಬೆಲೆಯು ₹67.89 ಲಕ್ಷ ಆಗಿರಲಿದೆ.

ಈ ವರ್ಷದ ಮೂರನೆಯ ತ್ರೈಮಾಸಿಕದಿಂದ ಕಾರುಗಳು ಗ್ರಾಹಕರಿಗೆ ಸಿಗಲಿವೆ. ಕಾರುಗಳಿಗೆ ನೋಂದಣಿ ಮತ್ತು ಕಾರುಗಳ ವಿತರಣೆಯು ಆರಂಭದಲ್ಲಿ ಮುಂಬೈ, ದೆಹಲಿ ಮತ್ತು ಗುರುಗ್ರಾಮದಲ್ಲಿ ಶುರುವಾಗಲಿದೆ ಎಂದು ಕಂಪನಿ ತಿಳಿಸಿದೆ.

ಕಾರಿನ ಒಂದು ಅವತರಣಿಕೆಯು ಒಂದು ಬಾರಿ ಚಾರ್ಜ್ ಮಾಡಿದರೆ 500 ಕಿ.ಮೀ ಸಾಗುತ್ತದೆ, ಇನ್ನೊಂದು ಅವತರಣಿಕೆಯು 622 ಕಿ.ಮೀ. ಸಾಗುತ್ತದೆ. 'ಮಾಡೆಲ್ ವೈ' ಕಾರು ಮರ್ಸಿಡಿಸ್ ಬೆಂಜ್, ಬಿಎಂಡಬ್ಲ್ಯು, ಔಡಿ ಕಂಪನಿಯ ಕಾರುಗಳಿಗೆ ಪೈಪೋಟಿ ನೀಡಲಿದೆ.

ಭಾರತೀಯ ಕಾರು ತಯಾರಿಕಾ ಕಂಪನಿಗಳಾದ ಟಾಟಾ ಮೋಟರ್ಸ್ ಮತ್ತು ಮಹೀಂದ್ರ ಆ್ಯಂಡ್ ಮಹೀಂದ್ರ ತಮ್ಮ ಇ.ವಿ. ಕಾರುಗಳ ಬೆಲೆಯನ್ನು ₹30 ಲಕ್ಷಕ್ಕಿಂತ ಕಡಿಮೆ ಇರಿಸಿವೆ.



ಟೆಸ್ಲಾ ಕಂಪನಿಯ ಮುಂಬೈ ಮಳಿಗೆಯಲ್ಲಿ 'ಮಾಡೆಲ್ ವೈ' ಕಾರಿನ ಪಕ್ಕದಲ್ಲಿ ನಿಂತು ಕಂಪನಿಯ ಪ್ರಾದೇಶಿಕ ನಿರ್ದೇಶಕಿ ಇಸಾಬೆಲ್ ಫ್ಯಾನ್ ಅವರು ಕ್ಯಾಮೆರಾ ಕಣ್ಣಿನಲ್ಲಿ ಹೀಗೆ ಸೆರೆಯಾದರು –ಪಿಟಿಐ ಚಿತ್ರ

ಫಡಣವೀಸ್ ಉದ್ಘಾಟನೆ: ಟೆಸ್ಲಾ ಕಂಪನಿಯು ಭಾರತದಲ್ಲಿ ತೆರೆದ ಮೊದಲ ಮಳಿಗೆಯನ್ನು ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಉದ್ಘಾಟಿಸಿದರು. ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್‌ನಲ್ಲಿ ಈ ಮಳಿಗೆ ಇದೆ.

ಮುಂಬೈ, ದೆಹಲಿಯಲ್ಲಿ ತಲಾ ನಾಲ್ಕು ಚಾರ್ಜಿಂಗ್ ಕೇಂದ್ರ ಸ್ಥಾಪಿಸುವ ಆಲೋಚನೆ ಕಂಪನಿಗೆ ಇದೆ.

ಟೆಸ್ಲಾ ಕಂಪನಿಯು ತನ್ನ ತಯಾರಿಕಾ ಘಟಕವನ್ನು, ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರವನ್ನು ಭಾರತದಲ್ಲಿ ಆರಂಭಿಸಬೇಕು ಎಂದು ತಾವು ಬಯಸುವುದಾಗಿ ಫಡಣವೀಸ್ ಹೇಳಿದರು. ಟೆಸ್ಲಾ ಕಂಪನಿಯು ಭಾರತದಲ್ಲಿ ಕಾರು ತಯಾರು ಮಾಡಲು ಆಸಕ್ತಿ ತೋರಿಸುತ್ತಿಲ್ಲ. ಆದರೆ ಭಾರತದಲ್ಲಿ ಮಳಿಗೆಗಳನ್ನು ತೆರೆಯಲು ಅದು ಆಸಕ್ತಿ ಹೊಂದಿದೆ ಎಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಕಳೆದ ತಿಂಗಳು ಹೇಳಿದ್ದರು.

ಕ್ರೆಡಿಟ್ ಕಾರ್ಡ್ ಬಳಕೆ ಹೆಚ್ಚಳ

ಮುಂಬೈ (ಪಿಟಿಐ): ₹50 ಸಾವಿರಕ್ಕಿಂತ ಕಡಿಮೆ ವೇತನ ಹೊಂದಿರುವವರಲ್ಲಿ ಶೇಕಡ 93ರಷ್ಟು ಮಂದಿ ಕ್ರೆಡಿಟ್ ಕಾರ್ಡ್‌ಗಳನ್ನು ಹೆಚ್ಚಾಗಿ ಅವಲಂಬಿಸಿದ್ದಾರೆ ಎಂದು ಅಧ್ಯಯನ ವರದಿಯೊಂದು ಹೇಳಿದೆ. ಕಡಿಮೆ ಆದಾಯ ಹೊಂದಿರುವ ವರ್ಗದ ಜನರು ಕ್ರೆಡಿಟ್ ಕಾರ್ಡ್ ನೆಚ್ಚಿಕೊಳ್ಳುವುದು ಹೆಚ್ಚಾಗುತ್ತಿದೆ ಎಂಬುದನ್ನು ಇದು ಹೇಳುತ್ತಿದೆ.

ವೇತನ ಪಡೆಯುವ ಹಾಗೂ ಸ್ವಂತ ಉದ್ಯೋಗದಲ್ಲಿ ಇರುವ 20 ಸಾವಿರಕ್ಕೂ ಹೆಚ್ಚು ಜನರ ಒಂದು ವರ್ಷದ ಹಣಕಾಸಿನ ವಹಿವಾಟುಗಳನ್ನು ಅಧ್ಯಯನಕ್ಕೆ ಒಳಪಡಿಸಿ ಈ ವರದಿ ಸಿದ್ಧಪಡಿಸಲಾಗಿದೆ. ಸ್ವಂತ ಉದ್ಯೋಗ ನಡೆಸುವವರ ಪೈಕಿ ಶೇ 85ರಷ್ಟು ಮಂದಿ ಕ್ರೆಡಿಟ್ ಕಾರ್ಡ್ ನೆಚ್ಚಿಕೊಂಡಿದ್ದಾರೆ.

'ಈಗ ಖರೀದಿಸಿ, ನಂತರ ಪಾವತಿಸಿ' (ಬಿಎನ್‌ಪಿಎಲ್) ಹಣಕಾಸು ಸೇವೆಗಳ ಬಳಕೆ ಕೂಡ ದೊಡ್ಡ ಮಟ್ಟದಲ್ಲಿಯೇ ಇದೆ ಎಂಬುದನ್ನು 'ಥಿಂಕ್360.ಎಐ' ಹೆಸರಿನ ಫಿನ್‌ಟೆಕ್ ಸಂಸ್ಥೆಯ ವರದಿಯು ಹೇಳಿದೆ.

ಅಡಿಕೆ ಧಾರಣೆ

ಸಾಗರ					
ಬಿಳಿಗೋಟು	18099-24899	ಸರಕು	47000-90540	ಬಿಳಿಗೋಟು	17199-32999
ಚಾಲಿ	33609-36499	ಯಲ್ಲಾಪುರ		ಚಾಲಿ	36598-42599
ಕೋಕ	13,129-13,129	ಬಿಳಿಗೋಟು	16900-31000	ಕೆಂಪುಗೋಟು	16599-23189
ಕೆಂಪುಗೋಟು	12109-27599	ಆಪಿ	57,235-57235	ರಾಶಿ	43309-48689
ರಾಶಿ	40299-54699	ಚಾಲಿ	32979-41900	ಸಿದ್ದಾಪುರ	
ಸಿಪ್ಪೆಗೋಟು	16889-19099	ಕೋಕ	8899-18112	ಬಿಳಿಗೋಟು	24899-31899
ಶಿವಮೊಗ್ಗ		ಕೆಂಪುಗೋಟು	21599-24899	ಚಾಲಿ	34249-40599
ಬೆಟ್ಟೆ	47599-60619	ರಾಶಿ	43500-54111	ಕೋಕ	17099-26669
ಗೊರಬಲು	20009-30333	ತಟ್ಟಿಬೆಟ್ಟೆ	27099-38609	ಕೆಂಪುಗೋಟು	22419-23099
ರಾಶಿ	44838-57099	ಶಿರಸಿ		ರಾಶಿ	42899-47699
		ಬೆಟ್ಟೆ	29699-39609	ತಟ್ಟಿಬೆಟ್ಟೆ	30599-31899

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ವೀರೇಶ್, ಯಲಹಂಕ, ಬೆಂಗಳೂರು

• **ಪ್ರಶ್ನೆ: ನಾನು ಬೆಂಗಳೂರಿನಲ್ಲಿ ಉದ್ಯೋಗಿ, ನನ್ನ ಪತ್ನಿ ಗೃಹಿಣಿ. ನನ್ನ ಸಂಪಾದನೆಯಿಂದ ಮನೆಯೊಂದನ್ನು ನಿರ್ಮಿಸಿದ್ದು, ಅದನ್ನು ಆಕೆಯ ಹೆಸರಲ್ಲಿ ನೋಂದಾಯಿಸಿದ್ದೇನೆ. ಮನೆ ನಿರ್ಮಾಣಕ್ಕೆ ಸಂಬಂಧಿಸಿದ ಎಲ್ಲ ಖರ್ಚು ಆಕೆಯ ಬ್ಯಾಂಕ್ ಖಾತೆಯಿಂದ ಆಗಿದೆ. ನನ್ನ ಉಳಿತಾಯದ ಬಹುಪಾಲು ಮೊತ್ತವನ್ನು ಆಕೆಯ ಖಾತೆಗೆ ವರ್ಗಾಯಿಸಿ ಈ ಪಾವತಿ ಮಾಡಿದ್ದೇವೆ. ಈ ಮನೆಯನ್ನು ನಾವು ನಿವೃತ್ತಿಯ ಸಮಯದಲ್ಲಿ ಬಳಸಿಕೊಳ್ಳುವ ಯೋಜನೆ ಇದೆ. ಈಗ ನಾವು ಉದ್ಯೋಗಕ್ಕೆ ಅನುಕೂಲ ಆಗಲಿ ಎಂದು ನಗರ ಪ್ರದೇಶದಲ್ಲಿ ಬಾಡಿಗೆ ಮನೆಯಲ್ಲಿ ಇದ್ದೇವೆ. ಹೀಗಾಗಿ ಹೊಸ ಮನೆಯನ್ನು ಬಾಡಿಗೆಗೆ ಕೊಡುವ ಸಾಧ್ಯತೆ ಇದೆ. ಈ ಮನೆ ನಿರ್ಮಾಣಕ್ಕೆ ಬ್ಯಾಂಕಿನಿಂದ ಒಂದಿಷ್ಟು ಸಾಲ ಪಡೆದಿದ್ದೇವೆ. ನನ್ನ ಪ್ರಶ್ನೆ ಏನೆಂದರೆ, ಈ ಬಾಡಿಗೆ ಮೊತ್ತವನ್ನು ಆಕೆ ತೆರಿಗೆಗಾಗಿ ತೋರಿಸಿಕೊಳ್ಳಬೇಕೆ? ಆಕೆಗೆ ಬೇರಾವ ಆದಾಯ ಇಲ್ಲ.**

ಉತ್ತರ: ನೀವು ಈಗ ಬಾಡಿಗೆ ಮನೆಯಲ್ಲಿದ್ದು, ಭವಿಷ್ಯದ ಉದ್ದೇಶಕ್ಕೆ ಮನೆ ಕಟ್ಟಿಸಿರುತ್ತೀರಿ. ಈ ಹಂತದಲ್ಲಿ ಸಹಜವಾಗಿ ನಿಮ್ಮ ಪತ್ನಿಯ ಬ್ಯಾಂಕ್ ಖಾತೆ ಮೂಲಕ ಮನೆಯ ನಿರ್ಮಾಣಕ್ಕೆ ಸಂಬಂಧಿಸಿ ಹಣ ಸಂದಾಯ ಮಾಡಿರುತ್ತೀರಿ. ಈ ಹಣದ ಮೂಲ ನಿಮ್ಮ ವೇತನದ ಭಾಗವಾಗಿದೆ ಹಾಗೂ ಸಂಬಂಧಿತ ತೆರಿಗೆಯನ್ನು ಕಟ್ಟಿರುತ್ತೀರಿ. ಈ ಮನೆಯನ್ನು ಅವರ ಹೆಸರಲ್ಲಿ ದಾಖಲಿಸಿದ್ದೀರಿ. ಇದು ಆದಾಯ ತೆರಿಗೆಯ ದೃಷ್ಟಿಯಲ್ಲಿ ನಿಮ್ಮ ಪತ್ನಿಗೆ ನೀವು ನೀಡಿರುವ ಉಡುಗೊರೆ ಎಂದೂ ಊಹಿಸಬಹುದು. ಆದರೆ, ಅವರು ಸ್ವತಂತ್ರ ಆದಾಯ ಇಲ್ಲದ ವ್ಯಕ್ತಿಯಾಗಿರುವುದರಿಂದ ಆದಾಯ ತೆರಿಗೆ ಕಾನೂನಿನ ದೃಷ್ಟಿಯಲ್ಲಿ ಈ ವರ್ಗಾವಣೆಯನ್ನು ಪ್ರತ್ಯೇಕ ರೀತಿಯಲ್ಲಿ ಪರಿಗಣಿಸಬೇಕಾಗುತ್ತದೆ.

ಆದಾಯ ತೆರಿಗೆಯ ಸೆಕ್ಷನ್ 64(1)(IV) ಪ್ರಕಾರ ಪತಿ-ಪತ್ನಿಯ ಆದಾಯ ಲೆಕ್ಕ ಹಾಕುವಾಗ, ಸಮರ್ಪಕ ಪರಿಹಾರ ಮೊತ್ತ ನೀಡದೆ ಪರಸ್ಪರ ವರ್ಗಾಯಿಸಿದ ಆಸ್ತಿಯ ಮೇಲೆ ಸಿಗುವ ಆದಾಯವು ಮೂಲತಃ ಅವರಿಬ್ಬರಲ್ಲಿ ಯಾರು ವರ್ಗಾಯಿಸಿರುತ್ತಾರೋ ಅವರದೇ ಹೆಸರಲ್ಲಿ ತೆರಿಗೆಗೆ ಒಳಪಡುತ್ತದೆ. ಮಾತ್ರವಲ್ಲ, ಆದಾಯ ತೆರಿಗೆಯ ಸೆಕ್ಷನ್ 27(1)ರ ಅನ್ವಯ, ಮನೆ ಬಾಡಿಗೆಗೆ ಸಂಬಂಧಿಸಿದಂತೆ, ತೆರಿಗೆ ಪಾವತಿಸಬೇಕಾದ ಮಾಲೀಕರ ಜವಾಬ್ದಾರಿಯ ವಿಚಾರ ಬಂದಾಗಲೂ, ಮಾಲೀಕತ್ವದ ವರ್ಗಾವಣೆಯು ಯಾವುದೇ ಸಮರ್ಪಕ ಪರಿಹಾರ ಮೊತ್ತ ನೀಡದೆ, ಕೇವಲ ಹೆಸರಿಗಾಗಿ ಮಾತ್ರ ವರ್ಗಾಯಿಸಿದಾಗಲೂ, ಅದರ ಒಡೆತನವು ಖರೀದಿಗೆ ಹಣ ನೀಡಿದ ಪತಿ ಅಥವಾ ಪತ್ನಿಯ ಹೆಸರಲ್ಲೇ ನಿರ್ಣಯವಾಗುತ್ತದೆ.

ಹೀಗಾಗಿ, ಮೇಲ್ನೋಟಕ್ಕೆ ನಿಮ್ಮ ಹೊಸ ಮನೆಯ ಒಡೆತನ ನಿಮ್ಮ ಪತ್ನಿಯ ಹೆಸರಲ್ಲಿ ಇದ್ದರೂ, ಕಾನೂನಿನ ದೃಷ್ಟಿಯಲ್ಲಿ ನೀವೇ ಅದರ ನಿಜವಾದ ಮಾಲೀಕರಾಗಿದ್ದೀರಿ. ಈ ಆಸ್ತಿ ಅವರದ್ದೇ ಸಂಪಾದನೆಯ ಭಾಗ ಎಂಬುದನ್ನು ಸಾಬೀತುಪಡಿಸಲು ಇರುವ, ನಿಮ್ಮ ಪತ್ನಿಯ ಹೆಸರಲ್ಲಿ ಸಲ್ಲಿಸಿರುವ ಹಳೆಯ ವರ್ಷಗಳ ತೆರಿಗೆ ವಿವರ ಇಲ್ಲದ ಹೊರತು ಅವರೇ ಅದರ ಮಾಲೀಕರೆನ್ನುವುದು ಸರಿಯಲ್ಲ. ಹೀಗಾಗಿ, ನಿಮ್ಮ ವೇತನ ಆದಾಯ ಅಲ್ಲದೆ, ಬರುವ ಬಾಡಿಗೆ ಆದಾಯವನ್ನು, ಮೇಲಿನ ನಿಯಮಗಳಂತೆ ನಿಮ್ಮ ಆದಾಯದಲ್ಲೇ ಸೇರಿಸಬೇಕಾಗುತ್ತದೆ.

ರವಿಕುಮಾರ್ ಪಿ., ಬೆಂಗಳೂರು

• **ಪ್ರಶ್ನೆ: ನಾನು ಪಿಎಸಿಎಲ್ ಎಂಬ ಕಂಪನಿಯಲ್ಲಿ ಕೆಲವು ವರ್ಷಗಳ ಹಿಂದೆ ವಿಮಾ ಪಾಲಿಸಿ ಮಾಡಿಸಿದ್ದು, ಆ ಕಂಪನಿಯನ್ನು ಸೆಬಿ ಮುಟ್ಟುಗೋಲು ಹಾಕಿಕೊಂಡಿದೆ. ಇದು ನಡೆದದ್ದು ಐದಾರು ವರ್ಷಗಳ ಹಿಂದೆ. ನನ್ನ ಪಾಲಿಸಿಯ ಮೆಚ್ಯುರಿಟಿ ಏಳು ವರ್ಷಗಳ ಹಿಂದೆಯೇ ಆಗಿತ್ತು. ಆದರೆ ಹಣ ಮರಳಿ ಸಿಗಲಿಲ್ಲ. ನಾನು ನನ್ನ ಹಣವನ್ನು ಹಿಂಪಡೆಯಲು ಸೂಕ್ತ ಮಾಹಿತಿ ನೀಡಬೇಕಾಗಿ ವಿನಂತಿ. ನನ್ನಲ್ಲಿ ಎಲ್ಲಾ ಸೂಕ್ತ ದಾಖಲೆ ಇವೆ.**

ಉತ್ತರ: ನೀವು ಪ್ರಶ್ನೆಯಲ್ಲಿ ಉಲ್ಲೇಖಿಸಿರುವ ಪಿಎಸಿಎಲ್ ಎಂಬ ಕಂಪನಿಯು ಅನೇಕ ಹೂಡಿಕೆದಾರರಿಗೆ ತಮ್ಮ ಹಣವನ್ನು ಕ್ರಮಬದ್ಧವಾಗಿ ಹಿಂದಿರುಗಿಸುವಲ್ಲಿ ಹಾಗೂ ಹೂಡಿಕೆದಾರರ ವಿಶ್ವಾಸ ಉಳಿಸಿಕೊಳ್ಳುವಲ್ಲಿ ವಿಫಲವಾದ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ 2016ರಲ್ಲಿ ಮಹತ್ವದ ತೀರ್ಪೊಂದನ್ನು ನೀಡಿತು. ಅದರ ಪ್ರಕಾರ, ಹೂಡಿಕೆದಾರರ ಹಿತಾಸಕ್ತಿ ಕಾಯ್ದುಕೊಳ್ಳುವ ಉದ್ದೇಶದಿಂದ, ಸೆಬಿ ಸಂಸ್ಥೆಯ ಮಧ್ಯಸ್ಥಿಕೆಯೊಂದಿಗೆ ನ್ಯಾಯಮೂರ್ತಿ ಆರ್.ಎಂ. ಲೋಧಾ ಅವರ ನೇತೃತ್ವದ ಸಮಿತಿಯೊಂದನ್ನು ರಚಿಸಿ ಸಂಸ್ಥೆಯ ಸುಪರ್ದಿಯಲ್ಲಿದ್ದ ಎಲ್ಲಾ ಆಸ್ತಿಗಳನ್ನು ಮುಟ್ಟುಗೋಲು ಹಾಕಿ, ಹರಾಜು ಪ್ರಕ್ರಿಯೆಯಿಂದ ಸಂಗ್ರಹವಾದ ಹಣವನ್ನು ಹೂಡಿಕೆದಾರರಿಗೆ ಅರ್ಹತೆಯ ಮೇರೆಗೆ ಬಟವಾಡೆ ಮಾಡಿದೆ ಹಾಗೂ ಆ ದಿಸೆಯಲ್ಲಿ ಕಾರ್ಯ ಜಾರಿಯಲ್ಲಿದೆ.

ಮೋಸಹೋದ ಗ್ರಾಹಕರ ಹಣ ಮರಳಿ ಪಡೆಯುವುದಕ್ಕಾಗಿ ಇದ್ದ ಈ ಪ್ರಕ್ರಿಯೆಯಲ್ಲಿ ನೆರವಾಗಲು, ಆಯಾ ರಾಜ್ಯ ಸರ್ಕಾರಗಳ ಮೂಲಕವೂ ಇ-ಸೇವಾ ಕೇಂದ್ರದ ವ್ಯವಸ್ಥೆಯ ಜೊತೆಗೆ, ಅಗತ್ಯ ಮಾಹಿತಿ ಸಲ್ಲಿಸಲು ಅನುಕೂಲವಾಗುವ ರೀತಿಯಲ್ಲಿ ಸೆಬಿ ಪ್ರತ್ಯೇಕವಾದ ಪೋರ್ಟಲ್ (https://www.sebipaclrefund.co.in) ತೆರೆದಿರುವುದು ನಿಮ್ಮ ಗಮನಕ್ಕೆ ಬಂದಿಲ್ಲ ಎಂದು ಭಾವಿಸಿ ಉತ್ತರಿಸಬೇಕಾಗುತ್ತದೆ. ಅರ್ಹ ಹೂಡಿಕೆದಾರರಿಂದ ಅರ್ಜಿ ಪಡೆಯಲು ಪ್ರತ್ಯೇಕವಾದ ಸಾರ್ವಜನಿಕ ವಿನಂತಿಯನ್ನೂ ಮಾಡಲಾಗಿತ್ತು ಮತ್ತು ಅದರ ವಿಸ್ತರಿಸಿದ ಕಾಲಾವಧಿ 2024ರ ಜೂನ್ 13ರತನಕ ಇತ್ತು ಎಂಬುದು ನಿಮ್ಮ ಗಮನಕ್ಕೆ ಬರದೆ ಇದ್ದಿರಬಹುದೇನೋ.

ಅದೇನೇ ಇದ್ದರೂ, ಸೆಬಿ ಸಾರ್ವಜನಿಕವಾಗಿ ನೀಡಿರುವ ಮಾಹಿತಿ ಪ್ರಕಾರ, ಹೊಸ ವಿನಂತಿ ಸಲ್ಲಿಸಲು ವಂಚಿತ ಗ್ರಾಹಕರು ಕಾಯಬೇಕು. ಪ್ರಸ್ತುತ ₹20,000ದವರೆಗಿನ ವಿನಂತಿಗಳನ್ನಷ್ಟೇ 2025ರ ಮಾರ್ಚ್ 31ರತನಕ ಪುರಸ್ಕರಿಸಲಾಗಿದೆ. ಅದಕ್ಕಿಂತ ಹೆಚ್ಚಿನ ಮೊತ್ತದ ಬಟವಾಡೆಯನ್ನು, ವಿದೇಶದಲ್ಲೂ ಇರುವ ಇನ್ನೂ ಹೆಚ್ಚಿನ ಆಸ್ತಿಗಳ ಮುಟ್ಟುಗೋಲು ಪ್ರಕ್ರಿಯೆ ನಡೆಯುತ್ತಿರುವುದರಿಂದ, ಹಣದ ಲಭ್ಯತೆ ಹಾಗೂ ನಷ್ಟ ಪರಿಹಾರದ ಆದ್ಯತೆ ಕೆಳ ಹಂತದ ಮೊತ್ತದಿಂದ ಮೇಲಿನ ಹಂತಕ್ಕೆ ಸಾಗುವುದರಿಂದ, ಹಣ ಬಿಡುಗಡೆ ಕೂಡ ಇಂತಹ ದೀರ್ಘ ಪ್ರಕ್ರಿಯೆಯಲ್ಲಿ ಅದೇ ರೀತಿ ನಡೆಯುತ್ತದೆ ಎಂಬುದು ಗಮನವಿಡಬೇಕಾದ ಸಂಗತಿ. ಆದರೆ ನಿಮ್ಮ ಹೂಡಿಕೆ ಮಾಹಿತಿ ಹಾಗೂ ಅಗತ್ಯ ದಾಖಲೆಗಳನ್ನು ಇನ್ನೂ ಸಲ್ಲಿಸದಿದ್ದರೆ ಸೆಬಿ ಸಂಸ್ಥೆಗೆ ಅಧಿಕೃತವಾಗಿ ಬರೆದು ಸಲ್ಲಿಸಿ. ನಿಮ್ಮ ಒಟ್ಟಾರೆ ಹೂಡಿಕೆ ಎಷ್ಟಿದೆಯೋ ತಿಳಿದಿಲ್ಲ. ಆದರೂ ಈ ಪ್ರಕ್ರಿಯೆ ಪೂರ್ಣ ಆಗುವವರೆಗೂ ಕಾಯಬೇಕಾಗಬಹುದು.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ವಿದ್ಯಾರ್ಥಿನಿ ಮೇಲೆ ಅತ್ಯಾಚಾರ

ಒಂದನೇ ಪುಟದಿಂದ...

ನೋಟ್ಸ್ ನೀಡುವ ನೆಪದಲ್ಲಿ ಕೃತ್ಯ: 'ಭೌತವಿಜ್ಞಾನ ವಿಭಾಗದ ಉಪನ್ಯಾಸಕ ನರೇಂದ್ರ ನೋಟ್ಸ್ ನೀಡುವ ನೆಪದಲ್ಲಿ ವಿದ್ಯಾರ್ಥಿನಿಗೆ ಹತ್ತಿರವಾಗಿದ್ದ. ಬಳಿಕ ಆಕೆಯ ಜತೆಗೆ ವಾಟ್ಸ್‌ಆ್ಯಪ್‌ನಲ್ಲಿ ಚಾಟ್ ಮಾಡುವುದು, ನೋಟ್ಸ್ ಕಳುಹಿಸುವುದು ಮಾಡುತ್ತಿದ್ದ. ಅಲ್ಲಿ ಶಿಕ್ಷಣ ಪೂರೈಸಿ ಆಕೆ ಬೆಂಗಳೂರಿಗೆ ಬಂದ ನಂತರವೂ ಸಂದೇಶ ಕಳುಹಿಸುತ್ತಿದ್ದ. ನೋಟ್ಸ್ ನೀಡುವುದನ್ನೂ ಮುಂದುವರಿಸಿದ್ದ. ಅದೇ ನೆಪದಲ್ಲಿ ಮಾರತ್‌ಹಳ್ಳಿಯ ಗೆಳೆಯನ ಕೊಠಡಿಗೆ ಕರೆದೊಯ್ದು ಅತ್ಯಾಚಾರ ಎಸಗಿದ್ದ. ಈ ವಿಷಯವನ್ನು ಯಾರಿಗಾದರೂ ಹೇಳಿದರೆ, ತೊಂದರೆ ಅನುಭವಿಸಬೇಕಾಗುತ್ತದೆ ಎಂಬುದಾಗಿ ಬೆದರಿಕೆ ಹಾಕಿದ್ದ' ಎಂದು ಮೂಲಗಳು ಹೇಳಿವೆ.

'ಕೆಲವು ದಿನಗಳ ನಂತರ ಜೀವವಿಜ್ಞಾನ ವಿಭಾಗದ ಉಪನ್ಯಾಸಕ ಸಂದೀಪ್‌ಗೂ ಈ ವಿಷಯ ಗೊತ್ತಾಗಿತ್ತು. 'ನೀನು ನರೇಂದ್ರನ ಜೊತೆಗಿರುವ ಫೋಟೊ ಹಾಗೂ ವಿಡಿಯೊಗಳು ನನ್ನ ಬಳಿಯಿವೆ. ನನ್ನ ಜತೆಗೆ ಸಹಕಾರ ನೀಡದಿದ್ದರೆ ಕಾಲೇಜಿನ ಎಲ್ಲರಿಗೂ ವಿಷಯ ತಿಳಿಯುವಂತೆ ಮಾಡುತ್ತೇನೆ ಎಂಬುದಾಗಿ ಬೆದರಿಕೆ ಹಾಕಿ ಬ್ಲ್ಯಾಕ್‌ಮೇಲ್ ಮಾಡಲು ಆರಂಭಿಸಿದ್ದ. ನಂತರ, ಸಂದೀಪ್ ಸಹ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರ ಎಸಗಿದ್ದ' ಎಂದು ಮೂಲಗಳು ತಿಳಿಸಿವೆ.

ಸ್ನೇಹಿತನಿಂದಲೂ ದೌರ್ಜನ್ಯ: ವಿದ್ಯಾರ್ಥಿನಿ ಮೇಲೆ ನರೇಂದ್ರ ಹಾಗೂ ಸಂದೀಪ್ ಅತ್ಯಾಚಾರ ಎಸಗಿದ್ದ ಕೊಠಡಿ ಅನೂಪ್‌ಗೆ ಸೇರಿತ್ತು. ಘಟನೆ ಬೆನ್ನಲ್ಲೇ ವಿದ್ಯಾರ್ಥಿನಿಯನ್ನು ಸಂಪರ್ಕಿಸಿದ್ದ ಅನೂಪ್, 'ನೀನು ನನ್ನ ಕೊಠಡಿಗೆ ಬಂದು ಹೋಗಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ನನ್ನ ಕೊಠಡಿಯಲ್ಲಿ ಕ್ಯಾಮೆರಾವಿದೆ. ನನ್ನ ಜತೆಗೂ ಸಹಕಾರ ನೀಡಬೇಕು ಎಂದು ಬ್ಲ್ಯಾಕ್‌ಮೇಲ್ ಮಾಡಿ ಅತ್ಯಾಚಾರ ಎಸಗಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಇಬ್ಬರು ಉಪನ್ಯಾಸಕರು ಹಾಗೂ ಆತನ ಸ್ನೇಹಿತನನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿದೆ. ಸಂತ್ರಸ್ತೆಗೆ ಆಪ್ತಸಮಾಲೋಚನೆ ನಡೆಸಿ ಧೈರ್ಯ ತುಂಬಲಾಗಿದೆ' ಎಂದು ಮೂಲಗಳು ಹೇಳಿವೆ.

'ಧೈರ್ಯದಿಂದ ದೂರು ನೀಡಿ'

'ವಾರದ ಹಿಂದೆ ಹೆಣ್ಣು ಮಗಳೊಬ್ಬಳು ಪೋಷಕರ ಜತೆಗೆ ಬಂದು ದೂರು ನೀಡಿದ್ದಳು. ಆ ಮಗುವಿಗೆ ಬ್ಲ್ಯಾಕ್‌ಮೇಲ್ ಮಾಡುತ್ತಾ ಶೋಷಣೆ ಮಾಡಿರುವುದು ಗೊತ್ತಾಗಿದೆ. ಆರೋಪಿಗಳು ಸಾಮಾಜಿಕ ಮಾಧ್ಯಮಗಳನ್ನೂ ಬಳಸಿಕೊಂಡು, ವಿದ್ಯಾರ್ಥಿನಿಗೆ ಬೆದರಿಕೆ ಹಾಕಿದ್ದಾರೆ. ಸದ್ಯ ಮೂವರನ್ನು ಪೊಲೀಸರು ಬಂಧಿಸಿದ್ದಾರೆ. ಸಂತ್ರಸ್ತೆಯೂ ತನ್ನ ಹೇಳಿಕೆ ದಾಖಲಿಸಿದ್ದಾಳೆ' ಎಂದು ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ತಿಳಿಸಿದ್ದಾರೆ.

'ಹೆಣ್ಣು ಮಗಳು ಧೈರ್ಯ ತೋರಿ ದೂರು ನೀಡಿದ್ದಾಳೆ. ಬ್ಲ್ಯಾಕ್‌ಮೇಲ್‌ಗೆ ಒಳಗಾಗದೇ ದೂರು ನೀಡಬೇಕು. ಹೆದರಿಕೊಂಡರೆ ನೀವೇ ಬಲಿಪಶು ಆಗುತ್ತೀರಿ. ಆರೋಪಿಗಳು ಶೋಷಣೆ ಮಾಡುತ್ತಲೇ ಇರುತ್ತಾರೆ. ಯಾವುದಾದರೂ ತಪ್ಪುಗಳು ನಡೆದರೆ ತಂದೆ –ತಾಯಿಗೆ ಮೊದಲು ತಿಳಿಸಬೇಕು. ನಂತರ, ಹತ್ತಿರದ ಠಾಣೆಗೆ ಮಾಹಿತಿ ನೀಡಬೇಕು. ಅದೂ ಸಾಧ್ಯವಾಗದಿದ್ದರೆ ಮಹಿಳಾ ಆಯೋಗಕ್ಕೆ ತಿಳಿಸಿ' ಎಂದು ನಾಗಲಕ್ಷ್ಮೀ ಮನವಿ ಮಾಡಿದರು.

ರಫ್ತು ವಹಿವಾಟು ಯಥಾಸ್ಥಿತಿ

ನವದೆಹಲಿ (ಪಿಟಿಐ): ಜೂನ್ ತಿಂಗಳಲ್ಲಿ ಭಾರತದ ರಫ್ತು ವಹಿವಾಟಿನಲ್ಲಿ ಹೆಚ್ಚಿನ ವ್ಯತ್ಯಾಸ ಕಂಡುಬಂದಿಲ್ಲ. ಜೂನ್‌ನಲ್ಲಿ ಭಾರತದ ರಫ್ತು ವಹಿವಾಟಿನ ಮೊತ್ತ ₹ 3 ಲಕ್ಷ ಕೋಟಿ (35.14 ಬಿಲಿಯನ್ ಡಾಲರ್) ಆಗಿದೆ. ಹಿಂದಿನ ವರ್ಷದ ಜೂನ್ ತಿಂಗಳಲ್ಲಿಯೂ ರಫ್ತು ವಹಿವಾಟಿನ ಮೊತ್ತವು ಸರಿಸುಮಾರು ಇಷ್ಟೇ ಇತ್ತು (35.16 ಬಿಲಿಯನ್ ಡಾಲರ್). ಆದರೆ ಆಮದು ವಹಿವಾಟಿನಲ್ಲಿ ತುಸು ಇಳಿಕೆ ಕಂಡುಬಂದಿದೆ. ಈ ವರ್ಷದ ಜೂನ್‌ನಲ್ಲಿ ₹4.63 ಲಕ್ಷ ಕೋಟಿ (53.92 ಬಿಲಿಯನ್ ಡಾಲರ್) ಮೌಲ್ಯದ ಆಮದು ವಹಿವಾಟು ನಡೆದಿದೆ. ಕಚ್ಚಾ ತೈಲ ಹಾಗೂ ಚಿನ್ನದ ಆಮದು ತಗ್ಗಿದ ಪರಿಣಾಮವಾಗಿ ಒಟ್ಟಾರೆ ಆಮದು ವಹಿವಾಟಿನ ಮೌಲ್ಯದಲ್ಲಿ ಇಳಿಕೆ ಕಂಡುಬಂದಿದೆ.

ಬಿಕ್ಕಟ್ಟಿನಲ್ಲಿ ನೆತನ್ಯಾಹು ಸರ್ಕಾರ



ಬೆಂಜಮಿನ್ ನೆತನ್ಯಾಹು

ಜೆರುಸಲೇಂ (ರಾಯಿಟರ್ಸ್): ಮಿಲಿಟರಿ ಸೇವೆಗೆ ಸಂಬಂಧಿಸಿದ ವಿವಾದಿತ ಮಸೂದೆಯನ್ನು ವಿರೋಧಿಸಿ ಯುನೈಟೆಡ್ ತೋರಾ ಜುಡಾಯಿಸಂ (ಯುಟಿಜೆ) ಪಕ್ಷವು ಇಸ್ರೇಲ್‌ನ ಆಡಳಿತಾರೂಢ ಮೈತ್ರಿಕೂಟದಿಂದ ಹೊರಬಂದಿದ್ದು, ಬೆಂಜಮಿನ್ ನೆತನ್ಯಾಹು ನೇತೃತ್ವದ ಸರ್ಕಾರ ಬಿಕ್ಕಟ್ಟಿಗೆ ಸಿಲುಕಿದೆ.

ಯುಟಿಜೆಯ ಆರು ಸದಸ್ಯರು ಸೋಮವಾರ ರಾತ್ರಿ ರಾಜೀನಾಮೆ ಸಲ್ಲಿಸಿದ್ದಾರೆ. ನೆತನ್ಯಾಹು ಸರ್ಕಾರ ಇದೀಗ ಸಂಸತ್ತಿನಲ್ಲಿ ಸರಳ ಬಹುಮತವನ್ನಷ್ಟೇ ಹೊಂದಿದೆ. ಯುಟಿಜೆ ಜತೆ ನಿಕಟ ಮೈತ್ರಿ ಹೊಂದಿರುವ ಶಾಸ್ ಪಕ್ಷ ಕೂಡಾ ಬೆಂಬಲ ಹಿಂತೆಗೆದುಕೊಂಡರೆ, ಸರ್ಕಾರ ಪತನಗೊಳ್ಳುವ ಸಾಧ್ಯತೆಯಿದೆ.

ಮಸೂದೆಗೆ ಸಂಬಂಧಿಸಿದಂತೆ ತಮ್ಮ ಬೇಡಿಕೆ ಈಡೇರಿಸಲು ಯುಟಿಜೆ 48 ಗಂಟೆಗಳ ಗಡುವು ನೀಡಿದೆ. ಸದಸ್ಯರ ರಾಜೀನಾಮೆ ನಿರ್ಧಾರ ಆ ಬಳಿಕ ಅಧಿಕೃತವಾಗಿ ಜಾರಿಗೆ ಬರಲಿದೆ ಎಂದಿದೆ.

ಹೊಸ ಮಸೂದೆಯು ತೀವ್ರ ಸಂಪ್ರದಾಯವಾದಿ ಯಹೂದಿ ಕುಟುಂಬದ ಮಕ್ಕಳಿಗೆ ಮಿಲಿಟರಿ ಸೇವೆ ಕಡ್ಡಾಯಗೊಳಿಸುತ್ತದೆ. ಯುಟಿಜೆ ಒಳಗೊಂಡಂತೆ ತೀವ್ರ ಸಂಪ್ರದಾಯವಾದಿ ಯಹೂದಿ ಪಕ್ಷಗಳು ಈ ಮಸೂದೆಗೆ ವಿರೋಧ ವ್ಯಕ್ತಪಡಿಸಿವೆ.

ಮುಂಬೈ ಧಾರಣೆ (ಶೇಂಗಾ) 15-07-2025	
ಜಾವಾ 70/80(ಹೊಸ)	9700-9800
ಜಾವಾ 80/90(ಹೊಸ)	9200-9300
ದಪ್ಪ ಮಧ್ಯಪ್ರದೇಶ (ಹೊಸ)	7700-7800
ದಪ್ಪ ಗುಜರಾತ್ (ಹೊಸ)	8000-8100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1450 (1450)
ಒಂದು ವಾರದ ಡೆಲಿವರಿ	1445 (1445)
ಪಾಮ್ ವಾರದ ಡೆಲಿವರಿ	1188 (1188)
ಸೂರ್ಯಕಾಂತಿ ಎಣ್ಣೆ ಕಚ್ಚಾ	1270 (1270)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	97,250(97,700)
ಬೆಳ್ಳಿ ಕೆ.ಜಿಗೆ	1,11,600 (1,13,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

'ಎಸ್‌ಎಂಎಸ್ ಉದ್ದೇಶ ಗುರುತಿಸುವಿಕೆ ಸುಲಭ'

ಒಂದನೇ ಪುಟದಿಂದ...

ಆದರೆ, ಅನಗತ್ಯವಾದ ಸಂದೇಶಗಳನ್ನು ಬಳಕೆದಾರರಿಗೆ ಕಳುಹಿಸಿ ಕಿರಿಕಿರಿ ಉಂಟುಮಾಡುವವರು ಒಟಿಟಿ ಆ್ಯಪ್‌ಗಳನ್ನು ಬಳಸಿ, ಸಂದೇಶ ಕಳುಹಿಸುತ್ತಿದ್ದಾರೆ ಎಂದು ಸಿಒಎಐ ಕಳವಳ ವ್ಯಕ್ತಪಡಿಸಿದೆ. ಅವರು ಈ ರೀತಿ ಮಾಡುತ್ತಿರುವುದರಿಂದಾಗಿ ಸ್ಪ್ಯಾಮ್ ಮತ್ತು ವಂಚನೆ ಉದ್ದೇಶದ ಸಂದೇಶಗಳಿಗೆ ಕಡಿವಾಣ ಹಾಕುವ ಉದ್ದೇಶದ ಕಠಿಣ ಕ್ರಮಗಳು ನಿರರ್ಥಕವಾಗುತ್ತಿವೆ ಎಂದು ಅದು ಹೇಳಿದೆ.

'ಎಸ್‌ಎಂಎಸ್ ಶೀರ್ಷಿಕೆಯಲ್ಲಿ ಇಂಗ್ಲಿಷ್‌ನ ನಿರ್ದಿಷ್ಟ ಅಕ್ಷರವನ್ನು ನಮೂದಿಸಿ, ಆ ಸಂದೇಶದ ಉದ್ದೇಶ ಏನು ಎಂಬುದನ್ನು ಬಳಕೆದಾರರಿಗೆ ತಿಳಿಸುವ ಕೆಲಸವನ್ನು ಎಲ್ಲ ದೂರಸಂಪರ್ಕ ಸೇವಾ ಕಂಪನಿಗಳು ಶುರು ಮಾಡಿವೆ' ಎಂದು ಸಿಒಎಐ ಮಹಾನಿರ್ದೇಶಕ ಎಸ್.ಪಿ. ಕೊಚ್ಚರ್ ಹೇಳಿದ್ದಾರೆ.

ಇದನ್ನು ಅನುಷ್ಠಾನಕ್ಕೆ ತಂದಿರುವ ಕಾರಣಕ್ಕೆ ಪಾರದರ್ಶಕತೆ ಹೆಚ್ಚಾಗಿದೆ, ಗ್ರಾಹಕರ ಹಿತ ಕಾಯಲು ಆಗಿದೆ. ಬಳಕೆದಾರರಿಗೆ ತಮಗೆ ಬಂದಿರುವ ಸಂದೇಶವು ಯಾವುದಕ್ಕೆ ಸಂಬಂಧಿಸಿದ್ದು ಎಂಬುದನ್ನು ಸುಲಭವಾಗಿ ಗುರುತಿಸಲು ಸಾಧ್ಯವಾಗುತ್ತಿದೆ ಎಂದು ಅವರು ಹೇಳಿದ್ದಾರೆ.

'ಪ್ರಚಾರ ಉದ್ದೇಶದ, ಸೇವಾ ಉದ್ದೇಶದ, ವಹಿವಾಟಿಗೆ ಸಂಬಂಧಿಸಿದ ಮತ್ತು ಸರ್ಕಾರಿ ಸಂದೇಶಗಳನ್ನು ಬಳಕೆದಾರರು ಸುಲಭವಾಗಿ ಒಂದೇ ನೋಟದಲ್ಲಿ ಗುರುತಿಸಬಹುದು. ನಿಜವಾದ ವಹಿವಾಟಿನ ಉದ್ದೇಶದ ಹಾಗೂ ಸೇವಾ ಉದ್ದೇಶದ ಎಸ್‌ಎಂಎಸ್‌ಗಳನ್ನು ಕೂಡ ಸುಲಭವಾಗಿ ಗುರುತಿಸಿ, ವಂಚನೆಗೆ ಈಡಾಗುವುದನ್ನು ಕಡಿಮೆ ಮಾಡಬಹುದು' ಎಂದು ಕೊಚ್ಚರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಆದರೆ ಸ್ಪ್ಯಾಮ್ ಸಂದೇಶ ಕಳುಹಿಸುವವರು ಹಾಗೂ ವಂಚನೆಯ ಉದ್ದೇಶ ಇರುವವರು ಸಂದೇಶ ಕಳುಹಿಸಲಿಕ್ಕಾಗಿಯೇ ಇರುವ ವಿವಿಧ ಆ್ಯಪ್‌ಗಳನ್ನು ಬಳಕೆ ಮಾಡಿಕೊಳ್ಳಬಹುದು. ಈ ಆ್ಯಪ್‌ಗಳಿಗೆ ಕಾನೂನಿನ ನಿಯಂತ್ರಣ ಇಲ್ಲ ಎಂದು ಅವರು ಹೇಳಿದ್ದಾರೆ.

ಶಾಂಘೈ ಸಹಕಾರ ಸಂಘಟನೆಯ ಸದಸ್ಯ ರಾಷ್ಟ್ರಗಳಿಗೆ ಎಸ್. ಜೈಶಂಕರ್ ಕರೆ

'ಉಗ್ರರ ವಿರುದ್ಧ ಹೋರಾಟ; ರಾಜಿ ಇಲ್ಲ'

ಬೀಜಿಂಗ್ (ಪಿಟಿಐ): ಶಾಂಘೈ ಸಹಕಾರ ಸಂಘಟನೆಯು (ಎಸ್‌ಸಿಒ) ಭಯೋತ್ಪಾದನೆ ವಿರುದ್ಧ ಹೋರಾಡುವ ತನ್ನ ಮೂಲ ಉದ್ದೇಶಕ್ಕೆ ಬದ್ಧವಾಗಿರಬೇಕು. ಈ ವಿಚಾರದಲ್ಲಿ ಯಾವುದೇ ರಾಜಿಗೆ ಮುಂದಾಗಬಾರದು ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಹೇಳಿದರು.

ಚೀನಾದ ತಿಯಾನ್‌ಜಿನ್ ನಗರದಲ್ಲಿ ಮಂಗಳವಾರ ಆರಂಭವಾದ ಎಸ್‌ಸಿಒ ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆಯಲ್ಲಿ ಮಾತನಾಡಿದ ಅವರು, ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಭಾರತದ ಪ್ರತ್ಯುತ್ತರವನ್ನು ಬಲವಾಗಿ ಸಮರ್ಥಿಸಿಕೊಂಡರು. ಪಾಕಿಸ್ತಾನ ಮತ್ತು ಚೀನಾ ಒಳಗೊಂಡಂತೆ ಎಸ್‌ಸಿಒ ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರು ಈ ವೇಳೆ ಹಾಜರಿದ್ದರು.

ಜಮ್ಮು ಮತ್ತು ಕಾಶ್ಮೀರದ ಪ್ರವಾಸೋದ್ಯಮ ಮತ್ತು ಆರ್ಥಿಕತೆಯನ್ನು ದುರ್ಬಲಗೊಳಿಸಲು ಹಾಗೂ ಧರ್ಮದ ಆಧಾರದಲ್ಲಿ ಸಮಾಜದಲ್ಲಿ ಒಡಕು ಉಂಟುಮಾಡಲು ಪಹಲ್ಗಾಮ್ ದಾಳಿಯನ್ನು 'ಉದ್ದೇಶಪೂರ್ವಕವಾಗಿ ನಡೆಸಲಾಗಿದೆ' ಎಂದು ಅವರು ಟೀಕಿಸಿದರು.

ಚೀನಾ ಅಧ್ಯಕ್ಷರ ಭೇಟಿ: ಜೈಶಂಕರ್ ಅವರು ಇದಕ್ಕೂ ಮುನ್ನ ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರನ್ನು ಭೇಟಿಯಾದರು.

'ಎಸ್‌ಸಿಒ ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರೊಂದಿಗೆ ಬೀಜಿಂಗ್‌ನಲ್ಲಿ ಮಂಗಳವಾರ ಬೆಳಿಗ್ಗೆ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರನ್ನು ಭೇಟಿಯಾದೆ' ಎಂದು ಅವರು 'ಎಕ್ಸ್'ನಲ್ಲಿ ಹೇಳಿದ್ದಾರೆ.

'ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ಶುಭಾಶಯಗಳನ್ನು ಚೀನಾ ಅಧ್ಯಕ್ಷರಿಗೆ ತಿಳಿಸಿದ್ದೇನೆ. ಭಾರತ–ಚೀನಾ ದ್ವಿಪಕ್ಷೀಯ ಸಂಬಂಧಗಳ ಈಚೆಗಿನ ಬೆಳವಣಿಗೆಯ ಬಗ್ಗೆ ಷಿ ಅವರೊಂದಿಗೆ ಮಾತನಾಡಿದೆ' ಎಂದು ಬರೆದುಕೊಂಡಿದ್ದಾರೆ.



ಎಸ್. ಜೈಶಂಕರ್ ಅವರು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರನ್ನು ಭೇಟಿಯಾದರು –ಪಿಟಿಐ ಚಿತ್ರ

ಎಸ್‌ಸಿಒ ಕಾರ್ಯವಿಧಾನ ಸುಧಾರಿಸಬೇಕು: ಭದ್ರತೆಗೆ ಸಂಬಂಧಿಸಿದ ಬೆದರಿಕೆಗಳು ಮತ್ತು ಸವಾಲುಗಳನ್ನು ಎದುರಿಸಲು ಎಸ್‌ಸಿಒ ಗುಂಪು ತನ್ನ ಕಾರ್ಯವಿಧಾನಗಳನ್ನು ಸುಧಾರಿಸಬೇಕು ಎಂದು ಷಿ ಜಿನ್‌ಪಿಂಗ್ ಅವರು ಸಂಘಟನೆಯ ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರುಗಳಿಗೆ ಸಲಹೆ ನೀಡಿದರು.

ಅಮೆರಿಕದ ಬೆಂಬಲ: ಸಂತಸ

ಕೀವ್ (ಎಎಫ್‌ಪಿ/ ರಾಯಿಟರ್ಸ್): ನ್ಯಾಟೊ ಮೂಲಕ ಉಕ್ರೇನ್‌ಗೆ ಹೆಚ್ಚಿನ ಶಸ್ತ್ರಾಸ್ತ್ರ ಪೂರೈಸಲು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒಪ್ಪಿಗೆ ಸೂಚಿಸಿರುವುದಕ್ಕೆ ಉಕ್ರೇನ್ ಅಧ್ಯಕ್ಷ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಸಂತಸ ವ್ಯಕ್ತಪಡಿಸಿದ್ದಾರೆ.

'ನಮ್ಮ ಜನರ ಜೀವ ರಕ್ಷಿಸಲು ಬೆಂಬಲ ನೀಡಿರುವ ಟ್ರಂಪ್ ಅವರಿಗೆ ಕೃತಜ್ಞನಾಗಿದ್ದೇನೆ' ಎಂದು ಝೆಲೆನ್‌ಸ್ಕಿ ಅವರು ಸೋಮವಾರ ರಾತ್ರಿ ತಿಳಿಸಿದ್ದಾರೆ.

ನ್ಯಾಟೊ ಮಿತ್ರರಾಷ್ಟ್ರಗಳ ಮೂಲಕ ಉಕ್ರೇನ್‌ನ 'ಪೇಟ್ರಿಯಟ್' ವಾಯು ರಕ್ಷಣಾ ವ್ಯವಸ್ಥೆ ಹಾಗೂ ಹೆಚ್ಚಿನ ಕ್ಷಿಪಣಿಗಳನ್ನು ಪೂರೈಸುವುದಾಗಿ ಟ್ರಂಪ್ ಸೋಮವಾರ ಹೇಳಿದ್ದರು.

ಉಕ್ರೇನ್ ಜತೆಗಿನ ಯುದ್ಧವನ್ನು ಕೊನೆಗೊಳಿಸಲು 50 ದಿನಗಳಲ್ಲಿ ಒಪ್ಪಂದ ಮಾಡಿಕೊಳ್ಳದಿದ್ದರೆ ರಷ್ಯಾದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಶೇ 100ರಷ್ಟು ಸುಂಕ ವಿಧಿಸುವುದಾಗಿಯೂ ಎಚ್ಚರಿಸಿದ್ದರು. ನ್ಯಾಟೊ ಪ್ರಧಾನ ಕಾರ್ಯದರ್ಶಿ ಮಾರ್ಕ್ ರುಟ್ಟೆ ಜತೆ ನಡೆದ ಮಾತುಕತೆ ಬಳಿಕ ಅವರು ಈ ಘೋಷಣೆ ಮಾಡಿದ್ದರು.

ಟ್ರಂಪ್ ಎಚ್ಚರಿಕೆ ಕಡೆಗಣಿಸುತ್ತೇವೆ (ಮಾಸ್ಕೊ ವರದಿ): ಅಮೆರಿಕದ ಅಧ್ಯಕ್ಷರು ನೀಡಿರುವ ಎಚ್ಚರಿಕೆಯನ್ನು 'ಕಡೆಗಣಿಸುತ್ತೇವೆ' ಎಂದು ರಷ್ಯಾದ ಮಾಜಿ ಅಧ್ಯಕ್ಷ ದಿಮಿತ್ರಿ ಮೆಡ್ವೆಡೆವ್ ಹೇಳಿದ್ದಾರೆ.

ಚೀನಾ ಖಂಡನೆ (ಬೀಜಿಂಗ್ ವರದಿ): ಅಮೆರಿಕವು ರಷ್ಯಾದ ಮೇಲೆ ನಿರ್ಬಂಧ ವಿಧಿಸಲು ಮುಂದಾಗಿರುವುದನ್ನು ಚೀನಾ ಖಂಡಿಸಿದೆ. 'ಎಲ್ಲಾ ಕಾನೂನುಬಾಹಿರ ಮತ್ತು ಏಕಪಕ್ಷೀಯ ನಿರ್ಬಂಧಗಳನ್ನು ಚೀನಾ ಬಲವಾಗಿ ವಿರೋಧಿಸುತ್ತದೆ. ಸುಂಕ ಸಮರದಲ್ಲಿ ಯಾರೂ ಗೆಲ್ಲುವುದಿಲ್ಲ. ಬೆದರಿಕೆ ಮತ್ತು ಒತ್ತಡದ ತಂತ್ರ ಸಮಸ್ಯೆಗಳನ್ನು ಪರಿಹರಿಸುವುದಿಲ್ಲ' ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಲಿನ್ ಜಿಯಾನ್ ಹೇಳಿದ್ದಾರೆ.

ಆಗಸ್ಟ್‌ನಲ್ಲಿ ಕೂಲಿ ಟ್ರೇಲರ್



ರಜನಿಕಾಂತ್, ಅಮೀರ್‌ಖಾನ್, ನಾಗಾರ್ಜುನ, ಉಪೇಂದ್ರ ಅಭಿನಯದ 'ಕೂಲಿ' ಚಿತ್ರ ಆ.14ರಂದು ತೆರೆಗೆ ಬರಲಿದೆ ಎಂದು ಈ ಹಿಂದೆಯೇ ಚಿತ್ರತಂಡ ಘೋಷಿಸಿತ್ತು. ಆ.2ರಂದು ಚಿತ್ರದ ಟ್ರೇಲರ್ ಬಿಡುಗಡೆಗೊಳ್ಳಲಿದೆ ಎಂದು ಚಿತ್ರದ ನಿರ್ದೇಶಕ ಲೋಕೇಶ್ ಕನಗರಾಜು ಹೇಳಿದ್ದಾರೆ. ವಿದೇಶಿ ಮಾಧ್ಯಮವೊಂದಕ್ಕೆ ಸಂದರ್ಶನ ನೀಡಿರುವ ಲೋಕೇಶ್ 'ಕೂಲಿ' ಹಾಗೂ ತಮ್ಮ ಮುಂದಿನ ಯೋಜನೆಗಳ ಕುರಿತು ಸಾಕಷ್ಟು ವಿಚಾರ ಹಂಚಿಕೊಂಡಿದ್ದಾರೆ.

ಹಲವು ಸ್ಟಾರ್ ನಟರು ತಾರಾಗಣದಲ್ಲಿರುವ ಈ ಚಿತ್ರ ಸಾಕಷ್ಟು ವಿಷಯಗಳಿಂದ ಕುತೂಹಲ ಮೂಡಿಸಿದೆ. 'ಕೈತಿ', 'ಮಾಸ್ಟರ್', 'ವಿಕ್ರಂ'ನಂಥ ಹಿಟ್ ಚಿತ್ರಗಳನ್ನು ನೀಡಿರುವ ಲೋಕೇಶ್ ಕನಗರಾಜು ರಜನಿಕಾಂತ್ ಜತೆ ಕೈಜೋಡಿಸಿದಾಗಲೇ ಚಿತ್ರದ ಕುರಿತು ನಿರೀಕ್ಷೆ ಹೆಚ್ಚಿತ್ತು. ಬಳಿಕ ದಕ್ಷಿಣದ ಎಲ್ಲ ಭಾಷೆಗಳಿಂದ ಓರ್ವ ಸೂಪರ್‌ಸ್ಟಾರ್ ಅನ್ನು ತಾರಾಗಣದಲ್ಲಿ ಸೇರಿಸಿಕೊಂಡಿದ್ದು ಚಿತ್ರದ ಮೇಲಿನ ನಿರೀಕ್ಷೆಯನ್ನು ಇಮ್ಮಡಿಗೊಳಿಸಿತು. ಚಿತ್ರದ ಬಜೆಟ್, ಕಲಾವಿದರು, ತಂತ್ರಜ್ಞರ ಸಂಭಾವನೆಯಿಂದಲೂ ಈ ಚಿತ್ರ ಸುದ್ದಿಯಾಯಿತು.

ತಮ್ಮ ಸಂಭಾವನೆ ಕುರಿತು ಸಂದರ್ಶನದಲ್ಲಿ ಉತ್ತರಿಸಿರುವ ಲೋಕೇಶ್, 'ನೀವು ನನ್ನ ₹50 ಕೋಟಿ ಸಂಭಾವನೆಯ ಬಗ್ಗೆ ಕೇಳುತ್ತಿದ್ದೀರಿ. ಆದರೆ ನನ್ನ ಕೊನೆಯ ಚಿತ್ರ 'ಲಿಯೋ' ₹600 ಕೋಟಿ ಗಳಿಕೆ ಕಂಡಿತ್ತು. ಹೀಗಾಗಿ ನನ್ನ ಸಂಭಾವನೆ ಕೂಡ ದ್ವಿಗುಣಗೊಂಡಿದೆ. ಅದಕ್ಕೆ ತಕ್ಕಂತೆ ತೆರಿಗೆ ಕಟ್ಟುತ್ತೇನೆ. ಇದು ಬೇಡಿಕೆ ಮತ್ತು ಪೂರೈಕೆಯ ಕ್ಷೇತ್ರ. ಚಿತ್ರಕ್ಕಾಗಿ ಹಲವು ವರ್ಷಗಳ ಶ್ರಮವಿದೆ. ಬಿಗ್ ಬಜೆಟ್ ಚಿತ್ರ. ಇಲ್ಲಿ ಎಲ್ಲರ ಸಂಭಾವನೆಯೂ ಹೆಚ್ಚಿದೆ. ರಜನಿಕಾಂತ್ ಅವರ ಸಂಭಾವನೆ ಕುರಿತು ನಾನು ಮಾತನಾಡಲಾರೆ' ಎಂದಿದ್ದಾರೆ.

ರಜನಿಕಾಂತ್ ಈ ಚಿತ್ರಕ್ಕಾಗಿ ₹150 ಕೋಟಿ ಸಂಭಾವನೆ ಪಡೆದಿದ್ದಾರೆ ಎಂಬ ಸುದ್ದಿಯಿದೆ. ಚಿತ್ರಕ್ಕೆ ಅನಿರುದ್ಧ್ ರವಿಚಂದರ್ ಸಂಗೀತವಿದ್ದು, 'ಚಿಟಿಕು' ಎಂಬ ಹಾಡು ಈಗಾಗಲೇ ಸಾಕಷ್ಟು ಸದ್ದು ಮಾಡಿದೆ. 'ಮೋನಿಕಾ' ಹಾಡು ಎಲ್ಲೆಡೆ ಹರಿದಾಡುತ್ತಿದೆ. ನಟಿ ಪೂಜಾ ಹೆಗ್ಡೆ ಹಾಗೂ ಮಲಯಾಳ ನಟ ಸೋಭಿನ್ ಈ ಹಾಡಿನಲ್ಲಿ ಹೆಜ್ಜೆ ಹಾಕಿದ್ದಾರೆ. ಈ ಚಿತ್ರಕ್ಕಾಗಿ ಅನಿರುದ್ಧ್ ಕೂಡ ₹10 ಕೋಟಿ ಸಂಭಾವನೆ ಪಡೆದಿದ್ದು, ತಮ್ಮ ಮುಂದಿನ ಸಿನಿಮಾಗಳಿಗೆ ₹12 ಕೋಟಿ ಕೇಳುತ್ತಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ.

'ಜೈಲರ್–2'ನಲ್ಲಿ ರಜನಿ

ರಜನಿಕಾಂತ್ ಕೂಡ 'ಕೂಲಿ' ಬಳಿಕ ಕೆಲ ಸಿನಿಮಾಗಳನ್ನು ಕೈಗೆತ್ತಿಕೊಳ್ಳಲಿದ್ದಾರೆ. 'ಜೈಲರ್- 2' ಅವರ ಮುಂದಿನ ಚಿತ್ರ. ಈಗಾಗಲೇ ನಿರ್ಮಾಣ ಹಂತದಲ್ಲಿದೆ. ಇದಾದ ಬಳಿಕ 'ಮಹಾರಾಜ' ಚಿತ್ರದ ನಿರ್ದೇಶಕ ನಿಥಿಲಾನ್ ಸ್ವಾಮಿನಾಥನ್ ಜತೆ ತಮಿಳಿನ ಸೂಪರ್‌ಸ್ಟಾರ್ ಕೈಜೋಡಿಸಲಿದ್ದಾರೆ ಎಂಬ ಸುದ್ದಿಯಿದೆ. ಅಲ್ಲದೇ ತೆಲುಗಿನ ನಾನಿ ಜತೆ ಕೆಲ ಸಿನಿಮಾಗಳನ್ನು ಮಾಡಿರುವ ವಿವೇಕ್ ಅತ್ರೇಯ ಅವರ ಜತೆಯೂ ಒಂದು ಕಥೆಯನ್ನು ಚರ್ಚಿಸಿದ್ದಾರೆ. ಸದ್ಯ ವಿಜಯ್ ಅವರ 'ಜನನಾಯಗನ್' ಚಿತ್ರ ನಿರ್ದೇಶಿಸುತ್ತಿರುವ ಎಚ್.ವಿನೋದ್ ಅವರ ಜತೆಯೂ ಮಾತುಕತೆ ನಡೆದಿದೆ' ಎಂದು ತಮಿಳು ಮಾಧ್ಯಮಗಳು ವರದಿ ಮಾಡಿವೆ.



ಅಮೀರ್ ಖಾನ್ ಜತೆ ಚಿತ್ರ

ಸದ್ಯ 'ಸಿತಾರೆ ಜಮೀನ್ ಪರ್' ಯಶಸ್ಸಿನ ಖುಷಿಯಲ್ಲಿರುವ ಅಮೀರ್ ಖಾನ್ ದಕ್ಷಿಣದ ನಿರ್ದೇಶಕರೊಬ್ಬರ ಜತೆ ಸಿನಿಮಾ ಮಾಡುತ್ತಾರೆ ಎಂಬ ಸುದ್ದಿ ಇತ್ತು. ಅದಕ್ಕೀಗ ಸ್ಪಷ್ಟತೆ ಸಿಕ್ಕಿದ್ದು, ಅವರು ಲೋಕೇಶ್ ಕನಗರಾಜು ಜತೆ ಕೈಜೋಡಿಸುತ್ತಿರುವುದು ಖಾತ್ರಿಯಾಗಿದೆ. 'ಕೂಲಿ' ಬಿಡುಗಡೆ ಬಳಿಕ 'ಕೈತಿ–2' ಚಿತ್ರ ಕೈಗೆತ್ತಿಕೊಳ್ಳುವೆ. ಅದಾದ ಮೇಲೆ ಅಮೀರ್ ಖಾನ್ ಜತೆ ಚಿತ್ರ ಮಾಡುವ ಯೋಜನೆಯಿದೆ. ಇದು ಬಾಲಿವುಡ್ ಸಿನಿಮಾ. ಆದರೆ ಕೇವಲ ಭಾರತೀಯ ಪ್ರೇಕ್ಷಕರಿಗೆ ಸೀಮಿತವಾಗಿರುವುದಿಲ್ಲ. ಜಾಗತಿಕ ಮಟ್ಟದ ಮಾಸ್ ಆ್ಯಕ್ಷನ್ ಚಿತ್ರವಾಗಿರಲಿದೆ. ಅಮೀರ್ ಸಾಕಷ್ಟು ವಿಷಯಗಳಲ್ಲಿ ಕಮಲ್ ಹಾಸನ್ ಅವರನ್ನು ಹೋಲುತ್ತಾರೆ. ಹೀಗಾಗಿ ಸೂಕ್ತ ಕಥೆ ಆಯ್ದುಕೊಂಡಿರುವೆ. ಈಗಲೇ ನಾನು ಇದೊಂದು ಸೂಪರ್ ಹೀರೊ ಸಿನಿಮಾ ಎನ್ನಲಾರೆ. ಆದರೆ ಅತಿದೊಡ್ಡ ಆ್ಯಕ್ಷನ್ ಸಿನಿಮಾ' ಎಂದು ಲೋಕೇಶ್ ಸಂದರ್ಶನದಲ್ಲಿ ತಿಳಿಸಿದ್ದಾರೆ.


ಲೋಕೇಶ್ ಕನಗರಾಜು

ಶಿವಣ್ಣ ಬಳಿ ಸಾಲು ಸಾಲು ಚಿತ್ರಗಳು



ನಟ ಶಿವರಾಜ್‌ಕುಮಾರ್ ಸಿನಿಪಯಣಕ್ಕೀಗ 40 ವರ್ಷ. 1986ರಲ್ಲಿ 'ಆನಂದ್' ಸಿನಿಮಾ ಮೂಲಕ ಚಂದನವನಕ್ಕೆ ಹೆಜ್ಜೆ ಇಟ್ಟ ಸೆಂಚುರಿ ಸ್ಟಾರ್ ಕೈಯಲ್ಲೀಗ ಸಾಲು ಸಾಲು ಪ್ರಾಜೆಕ್ಟ್‌ಗಳಿವೆ. ವರ್ಷಕ್ಕೊಂದು ಸಿನಿಮಾ ನೀಡುತ್ತಿರುವ ಅವರು ಸದ್ಯ ಈ ವರ್ಷದ ಬಹುನಿರೀಕ್ಷಿತ ಸಿನಿಮಾ '45'ರ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ.

ಇತ್ತೀಚೆಗೆ ಚಿತ್ರದಲ್ಲಿನ ಅವರ ಪಾತ್ರದ ಹೊಸ ಪೋಸ್ಟರ್ ಬಿಡುಗಡೆಯಾಗಿದೆ. 'ಚಿತ್ರೀಕರಣ ಪೂರ್ಣಗೊಂಡಿರುವ '45' ಚಿತ್ರದ ಗ್ರಾಫಿಕ್ಸ್ ಕೆಲಸಗಳು ನಡೆಯುತ್ತಿದ್ದು, ಸಾಕಷ್ಟು ವಿಶೇಷಗಳನ್ನೊಳಗೊಂಡಿರುವ ಈ ಚಿತ್ರ ಸದ್ಯದಲ್ಲೇ ಬಿಡುಗಡೆಯಾಗಲಿದೆ' ಎಂದು ಚಿತ್ರತಂಡ ತಿಳಿಸಿದೆ.


ಶಿವರಾಜ್‌ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ.ಶೆಟ್ಟಿ ಮುಖ್ಯಭೂಮಿಕೆಯಲ್ಲಿರುವ ಈ ಸಿನಿಮಾವನ್ನು ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ನಿರ್ದೇಶಿಸಿದ್ದಾರೆ. ಎಂ. ರಮೇಶ್ ರೆಡ್ಡಿ ಅವರು ತಮ್ಮ 'ಸೂರಜ್ ಪ್ರೊಡಕ್ಷನ್' ಬ್ಯಾನರ್‌ನಡಿ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ.

ಈ ಸಿನಿಮಾದ ಜೊತೆಗೆ ನಿರ್ದೇಶಕ ಹೇಮಂತ್ ಎಂ.ರಾವ್ ನಿರ್ದೇಶನದ '666 ಆಪರೇಷನ್ ಡ್ರೀಮ್ ಥಿಯೇಟರ್' ಸಿನಿಮಾದಲ್ಲಿ ಶಿವರಾಜ್‌ಕುಮಾರ್ ವಿಶೇಷ ಪಾತ್ರವೊಂದನ್ನು ಮಾಡುತ್ತಿದ್ದಾರೆ. ಶ್ರೀನಿ ನಿರ್ದೇಶನದ 'ಎ ಫಾರ್ ಆನಂದ್', ಕಾರ್ತಿಕ್ ಅದ್ವೈತ್ ಆ್ಯಕ್ಷನ್ ಕಟ್ ಹೇಳುತ್ತಿರುವ '#131' ಸಿನಿಮಾ, ತಮಿಳಿನಲ್ಲಿ ರಜನಿಕಾಂತ್ ಜೊತೆಗೆ 'ಜೈಲರ್ 2', ತೆಲುಗಿನಲ್ಲಿ ರಾಮ್‌ಚರಣ್ ಜೊತೆಗೆ 'ಪೆದ್ದಿ' ಸಿನಿಮಾ ಶಿವರಾಜ್‌ಕುಮಾರ್ ಸಿನಿ ಬ್ಯಾಂಕ್‌ನಲ್ಲಿರುವ ಸಿನಿಮಾಗಳಾಗಿದ್ದು, ಇವುಗಳೂ ಬಿಡುಗಡೆಗೆ ಸಜ್ಜಾಗುತ್ತಿದೆ.

ಸಬ್‌ಇನ್‌ಸ್ಪೆಕ್ಟರ್ ಪಾತ್ರದಲ್ಲಿ ಶಿವರಾಜ್‌ಕುಮಾರ್

ಶ್ರಿತಿಕ್ ಮೋಷನ್ ಪಿಕ್ಚರ್ಸ್‌ನಡಿ ಶಿವರಾಜ್‌ಕುಮಾರ್ ಅವರ ಹೊಸ ಸಿನಿಮಾ ಘೋಷಣೆಯಾಗಿದೆ. ಸಾಗರ್ ಶಾ, ಕೃಷ್ಣಕುಮಾರ್ ಬಿ. ಮತ್ತು ಸೂರಜ್ ಶರ್ಮಾ ಇನ್ನೂ ಶೀರ್ಷಿಕೆ ಅಂತಿಮವಾಗದ ಈ ಸಿನಿಮಾವನ್ನು ನಿರ್ಮಾಣ ಮಾಡುತ್ತಿದ್ದಾರೆ. ಚಿತ್ರವನ್ನು ಬಾಲಾಜಿ ಮಾಧವನ್ ನಿರ್ದೇಶನ ಮಾಡಲಿದ್ದು, ಚಿತ್ರಕ್ಕೆ ಕಥೆಯನ್ನು ಅವರೇ ಬರೆದಿದ್ದಾರೆ.

ಮರ್ಡರ್ ಮಿಸ್ಟ್ರಿ ಶೈಲಿಯ ಈ ಸಿನಿಮಾದಲ್ಲಿ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ಪಾತ್ರದಲ್ಲಿ ಶಿವರಾಜ್‌ಕುಮಾರ್ ಕಾಣಿಸಿಕೊಳ್ಳಲಿದ್ದಾರೆ. ಶೀಘ್ರದಲ್ಲೇ ಚಿತ್ರದ ಮುಹೂರ್ತ ನಡೆಯಲಿದ್ದು, ಅಂದೇ ಶೀರ್ಷಿಕೆ ಘೋಷಣೆ ಮಾಡುವುದಾಗಿ ಚಿತ್ರತಂಡ ತಿಳಿಸಿದೆ. ಈ ವರ್ಷಾಂತ್ಯದಲ್ಲಿ ಚಿತ್ರೀಕರಣ ಪ್ರಾರಂಭಿಸುವ ಯೋಜನೆ ಹಾಕಿಕೊಳ್ಳಲಾಗಿದೆ.



ಜುಲೈ 18ಕ್ಕೆ ಪ್ರೈಮ್‌ನಲ್ಲಿ 'ಕುಬೇರ'


ಧನುಷ್

ಕಳೆದ ಜೂನ್ 20ರಂದು ತೆರೆಕಂಡಿದ್ದ ತಮಿಳು ನಟ ಧನುಷ್ ನಟನೆಯ 'ಕುಬೇರ' ಸಿನಿಮಾ ಶೀಘ್ರದಲ್ಲೇ ಒಟಿಟಿ ವೇದಿಕೆಯಲ್ಲಿ ಬಿಡುಗಡೆಯಾಗಲಿದೆ. ಈ ಸಿನಿಮಾ ಪ್ರೈಮ್ ವಿಡಿಯೊದಲ್ಲಿ ಜುಲೈ 18ರಂದು ರಿಲೀಸ್ ಆಗಲಿದೆ.


'ಡಾಲರ್ ಡ್ರೀಮ್ಸ್', 'ಆನಂದ್', 'ಹ್ಯಾಪಿ ಡೇಸ್' ಖ್ಯಾತಿಯ ನಿರ್ದೇಶಕ ಶೇಖರ್ ಕಮ್ಮುಲ ನಿರ್ದೇಶನದ ಈ ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ₹100 ಕೋಟಿ ಗಳಿಕೆ ಮಾಡಿದೆ. ತೆಲುಗು ನಟ ನಾಗಾರ್ಜುನ, ರಶ್ಮಿಕಾ ಮಂದಣ್ಣ, ಜಿಮ್ ಸರಬ್ ಹಾಗೂ ದಿಲೀಪ್ ತಾಹಿಲ್ ಚಿತ್ರದ ತಾರಾಬಳಗದಲ್ಲಿದ್ದಾರೆ. ಚಿತ್ರದಲ್ಲಿ 'ದೇವ' ಎಂಬ ಪಾತ್ರದಲ್ಲಿ ಧನುಷ್ ನಟಿಸಿದ್ದು, ತಿರುಪತಿಯಲ್ಲಿ ನೆಲೆಸಿರುವ ಭಿಕ್ಷುಕನಾಗಿ ಕಾಣಿಸಿಕೊಂಡಿದ್ದಾರೆ. ಸುನೀಲ್ ನಾರಂಗ್ ಹಾಗೂ ಪುಸ್‌ಕುರ್ ರಾಮ್‌ಮೋಹನ್ ರಾವ್ ನಿರ್ಮಾಣ ಮಾಡಿರುವ ಈ ಚಿತ್ರವು ಐದು ಭಾಷೆಗಳಲ್ಲಿ ತೆರೆಕಂಡಿತ್ತು.

ಚುಟುಕೆ ಸುದ್ದಿ

ಸಿಪಿಐ ಮುಖಂಡನ ಹತ್ಯೆ

ಹೈದರಾಬಾದ್ (ಪಿಟಿಐ): ನಗರದ ಮಲಕಪೇಟದಲ್ಲಿ ತೆಲಂಗಾಣದ ಸಿಪಿಐ ಮುಖಂಡರೊಬ್ಬರನ್ನು ಅಪರಿಚಿತ ವ್ಯಕ್ತಿಗಳು ಗುಂಡು ಹಾರಿಸಿ ಮಂಗಳವಾರ ಬೆಳಿಗ್ಗೆ ಹತ್ಯೆ ಮಾಡಿದ್ದಾರೆ. ಸಿಪಿಐನ ರಾಜ್ಯ ಮಂಡಳಿ ಸದಸ್ಯ ಕೆ. ಚಂದು ನಾಯ್ಕ್ (47) ಮೃತ ವ್ಯಕ್ತಿ. ಮುಂಜಾವಿನ ವಾಯುವಿಹಾರ ನಡೆಸುತ್ತಿದ್ದ ಚಂದು ನಾಯ್ಕ್ ಮೇಲೆ ಕಾರಿನಲ್ಲಿ ಬಂದ ಅಪರಿಚಿತರು ಗುಂಡು ಹಾರಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

39 ಮಂದಿ ಬಂಧನ



ಇಟಾನಗರ (ಪಿಟಿಐ): ಇನ್ನರ್ ಲೈನ್ ಪರ್ಮಿಟ್ (ಐಎಲ್‌ಪಿ) ಇಲ್ಲದೆ ವಾಸಿಸುತ್ತಿದ್ದ 39 ಮಂದಿಯನ್ನು ಅರುಣಾಚಲ ಪ್ರದೇಶದ ಪೊಲೀಸರು ಬಂಧಿಸಿದ್ದಾರೆ. ಬಂದೇರ್‌ದೇವಾ, ಕರ್ಸಿಂಗ್ಸಾ, ನಾಹರ್ಲಾಗುನ್ ಹಾಗೂ ಪಪು ಹಿಲ್ಸ್ ಪ್ರದೇಶಗಳಲ್ಲಿ ಕಾರ್ಮಿಕರ ಶಿಬಿರಗಳು, ಕೆಲಸದ ಸ್ಥಳಗಳು ಹಾಗೂ ರಸ್ತೆ ಬದಿಗಳಲ್ಲಿ ಪೊಲೀಸರು ಕಾರ್ಯಾಚರಣೆ ನಡೆಸಿದರು. ಮುಂದಿನ ಕಾನೂನು ಕ್ರಮಕ್ಕಾಗಿ ಬಂಧಿತರನ್ನು ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಅವರ ವಶಕ್ಕೆ ನೀಡಲಾಗಿದೆ ಎಂದು ಎಸ್‌ಪಿ ನೈಲಾಮ್ ನೆಗಾ ತಿಳಿಸಿದ್ದಾರೆ. ಸ್ಥಳೀಯರಲ್ಲದ ಭಾರತೀಯ ನಾಗರಿಕರು ಅರುಣಾಚಲ ಪ್ರದೇಶದೊಳಗೆ ಪ್ರವೇಶಿಸಲು ಐಎಲ್‌ಪಿ ಅಗತ್ಯವಿದೆ. ಸ್ಥಳೀಯ ಬುಡಕಟ್ಟುಗಳ ಪರಂಪರೆ, ಸಾಂಸ್ಕೃತಿಕ ಅಸ್ಮಿತೆಯನ್ನು ರಕ್ಷಿಸಲು ಐಎಲ್‌ಪಿ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ.

ನಿಮಿಷ ಪ್ರಿಯಾ ಗಲ್ಲು ಮುಂದೂಡಿಕೆ

'ಬ್ಲಡ್ ಮನಿ' ನೀಡುವ ಕುರಿತು ಭಾರತದ ಕಡೆಯಿಂದ ಮಾತುಕತೆ ಯತ್ನ


ನಿಮಿಷ ಪ್ರಿಯಾ

ನವದೆಹಲಿ (ಪಿಟಿಐ): ಕೇರಳದ ನರ್ಸ್ ನಿಮಿಷ ಪ್ರಿಯಾ ಅವರಿಗೆ ವಿಧಿಸಲಾಗಿದ್ದ ಗಲ್ಲುಶಿಕ್ಷೆಯ ಜಾರಿಯನ್ನು ಯೆಮನ್‌ನ ಅಧಿಕಾರಿಗಳು ಮುಂದೂಡಿದ್ದಾರೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಜುಲೈ 16ರಂದು (ಬುಧವಾರ) ಅವರಿಗೆ ಗಲ್ಲುಶಿಕ್ಷೆ ಜಾರಿಗೊಳಿಸುವುದು ನಿಗದಿಯಾಗಿತ್ತು. 2017ರಲ್ಲಿ ಯೆಮನ್‌ನ ನಾಗರಿಕ ತಲಾಲ್ ಅಬ್ದೋ ಮಹ್ದಿ ಹತ್ಯೆ ಮಾಡಿದ ಆರೋಪದ ಮೇಲೆ ಕೇರಳದ ಪಾಲಕ್ಕಾಡ್ ಜಿಲ್ಲೆಯ ಕೊಲ್ಲಂಗೋಡ್‌ನ ನಿವಾಸಿ ನಿಮಿಷ ಪ್ರಿಯಾ ಅವರಿಗೆ ಗಲ್ಲುಶಿಕ್ಷೆ ವಿಧಿಸಲಾಗಿತ್ತು.

'ಯೆಮನ್‌ನ ಸ್ಥಳೀಯ ಅಧಿಕಾರಿಗಳು ಜುಲೈ 16ರಂದು ನಿಗದಿಯಾಗಿದ್ದ ಗಲ್ಲುಶಿಕ್ಷೆ ಜಾರಿಯನ್ನು ಮುಂದೂಡಿದ್ದಾರೆ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಮುಖ್ಯಾಂಶಗಳು

- ನಿಮಿಷ ಪ್ರಿಯಾಗೆ ಬುಧವಾರ ಗಲ್ಲು ಶಿಕ್ಷೆ ನಿಗದಿಯಾಗಿತ್ತು
- ಎ.ಪಿ. ಅಬೂಬಕ್ಕರ್ ಮುಸ್ಲಿಯಾರ್ ಮಧ್ಯಪ್ರವೇಶ

ಮುಸ್ಲಿಯಾರ್ ಮಧ್ಯಪ್ರವೇಶ: ಶಿಕ್ಷೆಯಿಂದ ಪಾರು ಮಾಡುವ ನಿಟ್ಟಿನಲ್ಲಿ ಕೇರಳದ ಪ್ರಭಾವಿ ಸುನ್ನಿ ಮುಸ್ಲಿಂ ಧಾರ್ಮಿಕ ಮುಖಂಡ ಕಾಂತಪುರಂ ಎ.ಪಿ. ಅಬೂಬಕ್ಕರ್ ಮುಸ್ಲಿಯಾರ್ ಮಧ್ಯಪ್ರವೇಶಿಸಿದ್ದರು.

94 ವರ್ಷದ ಶೇಕ್ ಅಬೂಬಕ್ಕರ್ ಅವರು ಯೆಮನ್‌ನಲ್ಲಿರುವ ಧಾರ್ಮಿಕ ಮುಖಂಡ, ಶೇಕ್ ಹಬೀಬ್ ಉಮರ್ ನೇತೃತ್ವದಲ್ಲಿ ಸಭೆ ನಡೆಸಿದ್ದು, ಇದರಲ್ಲಿ ಮಹ್ದಿ ಕುಟುಂಬದ ಸದಸ್ಯರು ಭಾಗವಹಿಸಿದ್ದರು.

> **ಗಲ್ಲುಶಿಕ್ಷೆ ಮುಂದೂಡಿಕೆಯಾಗಿರುವುದು ಸಂತಸ ಹಾಗೂ ಸಮಾಧಾನ ತಂದಿದೆ. ಶಿಕ್ಷೆ ತಡೆದು, ಸುರಕ್ಷಿತವಾಗಿ ಭಾರತಕ್ಕೆ ಮರಳಿ ತರುವ ನಿಟ್ಟಿನಲ್ಲಿ ಎಲ್ಲ ಪ್ರಯತ್ನಗಳು ಮುಂದುವರಿಯಲಿವೆ**
> **ಟಾಮಿ ಥಾಮಸ್,** ನಿಮಿಷ ಪ್ರಿಯಾ ಪತಿ

ನಿರಂತರ ಪ್ರಯತ್ನ: ಪ್ರಿಯಾ ಕುಟುಂಬದ ಸದಸ್ಯರು ಹಾಗೂ ಸಂತ್ರಸ್ತರ ಕುಟುಂಬದ ಜೊತೆಗೆ 'ಪರಸ್ಪರ ಒಪ್ಪುವ ಪರಿಹಾರ' ಹುಡುಕುವ ನಿಟ್ಟಿನಲ್ಲಿ ಭಾರತ ಸರ್ಕಾರವು ಇತ್ತೀಚಿನ ದಿನಗಳಲ್ಲಿ ನಿರಂತರ ಪ್ರಯತ್ನಗಳನ್ನು ನಡೆಸಿತ್ತು. ಪ್ರಕರಣದ ಆರಂಭದಿಂದಲೂ ಭಾರತ ಸರ್ಕಾರವು ಸಾಧ್ಯವಿರುವ ಎಲ್ಲ ರೀತಿಯ ನೆರವುಗಳನ್ನು ಒದಗಿಸುತ್ತಿದೆ. ಸೂಕ್ಷ್ಮ ಪ್ರಕರಣವಾಗಿದ್ದರೂ, ಜೈಲಿನ ಅಧಿಕಾರಿಗಳು ಹಾಗೂ ಪ್ರಾಸಿಕ್ಯೂಟರ್ ಕಚೇರಿಯ ಜೊತೆಗೆ ನಿರಂತರ ಸಂಪರ್ಕ ಸಾಧಿಸಿ, ಗಲ್ಲುಶಿಕ್ಷೆಯನ್ನು ಮುಂದೂಡುವಂತೆ ಒತ್ತಾಯಿಸಿದೆ.

ನಿಮಿಷ ಮಾಡಿದ ತಪ್ಪನ್ನು ಕ್ಷಮಿಸುವುದಕ್ಕಾಗಿ ಸಂತ್ರಸ್ತರು ಅಥವಾ ಅವರ ಕುಟುಂಬದವರಿಗೆ ಪ್ರಕರಣದ ಆರೋಪಿಗಳು ಪರಿಹಾರದ ರೂಪದಲ್ಲಿ 'ಬ್ಲಡ್ ಮನಿ' ನೀಡುವ ಕುರಿತು ಭಾರತದ ಕಡೆಯಿಂದ ಮಾತುಕತೆಗಳು ನಡೆದಿವೆ ಎಂದು ಮೂಲಗಳು ತಿಳಿಸಿವೆ.

38 ವರ್ಷದ ನಿಮಿಷ ಸದ್ಯ ಯೆಮನ್‌ನ ರಾಜಧಾನಿ ಸನಾ ಜೈಲಿನಲ್ಲಿ ಬಂಧಿಯಾಗಿದ್ದಾರೆ. ಈ ನಗರವು ಇರಾನ್ ಬೆಂಬಲಿತ ಹುಥಿ ಬಂಡುಕೋರರ ಹಿಡಿತದಲ್ಲಿದೆ.

ಕುಟುಂಬಸ್ಥರ ಸಂತಸ

ನಿಮಿಷ ಪ್ರಿಯಾ ಗಲ್ಲುಶಿಕ್ಷೆ ಜಾರಿ ಮುಂದೂಡಿಕೆಯಾಗಿರುವುದು ಕೇರಳದಲ್ಲಿರುವ ಅವರ ಕುಟುಂಬಸ್ಥರಿಗೆ ಸಂತಸ ತಂದಿದೆ. ರಾಜ್ಯದ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಹಾಗೂ ಧಾರ್ಮಿಕ ನಾಯಕರು ಕೂಡ ಸಂತಸ ವ್ಯಕ್ತಪಡಿಸಿದ್ದಾರೆ.

'ನಿಮಿಷ ಪ್ರಿಯ ಗಲ್ಲುಶಿಕ್ಷೆ ಮುಂದೂಡಿಕೆಯಾಗಲು ಶ್ರಮಿಸಿದ ಎಲ್ಲರಿಗೂ ಧನ್ಯವಾದ ಸಲ್ಲಿಸುತ್ತೇನೆ' ಎಂದು ಆಕೆಯ ಪತಿ ಟಾಮಿ ಥೋಮಸ್ ತಿಳಿಸಿದ್ದಾರೆ.

'ಪ್ರಿಯಾಳ ತಾಯಿ ಅವರೇ ಗಲ್ಲುಶಿಕ್ಷೆ ಮುಂದೂಡಿಕೆಯಾಗಿರುವುದನ್ನು ತಿಳಿಸಿದರು. ಶಿಕ್ಷೆಯಿಂದ ಪಾರಾಗುವ ನಿಟ್ಟಿನಲ್ಲಿ ನಿರಂತರ ಹೋರಾಟ ಮುಂದುವರಿಯಲಿದೆ' ಎಂದು ಹೇಳಿದ್ದಾರೆ.

'ಗಲ್ಲುಶಿಕ್ಷೆ ಮುಂದೂಡಿಕೆಯಾಗಿರುವುದು ಸಮಾಧಾನ ಹಾಗೂ ಭರವಸೆಗಳನ್ನು ಹುಟ್ಟುಹಾಕಿದೆ' ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ತಿಳಿಸಿದ್ದಾರೆ. 'ಸಹಾನುಭೂತಿ ಹೊಂದಿದ ಸಹೃದಯ ವ್ಯಕ್ತಿಗಳು ಈ ನಿಟ್ಟಿನಲ್ಲಿ ನಿರಂತರ ಕೆಲಸ ಮಾಡಿದ್ದಾರೆ. ನಿಮಿಷ ಅವರಿಗೆ ನ್ಯಾಯ ಒದಗಿಸಲು ಕಾಂತಪುರಂ ಎ.ಪಿ. ಅಬೂಬಕ್ಕರ್ ಮುಸ್ಲಿಯಾರ್ ಕೂಡ ನಿರಂತರ ಶ್ರಮಿಸಿದ್ದು, ಅವರಿಗೆ ಧನ್ಯವಾದ ಸಲ್ಲಿಸುತ್ತೇನೆ' ಎಂದು ತಿಳಿಸಿದ್ದಾರೆ.

ಹಾಜರಾತಿ: ಪ್ರಧಾನಿ, ಸಚಿವರಿಗೇಕೆ ವಿನಾಯಿತಿ?

ನವದೆಹಲಿ (ಪಿಟಿಐ): ಸಂಸತ್ತಿನ ಅಧಿವೇಶನದ ಹಾಜರಾತಿಯಿಂದ ಪ್ರಧಾನಿ ಹಾಗೂ ಸಚಿವರಿಗೆ ವಿನಾಯಿತಿ ನೀಡಿರುವುದಕ್ಕೆ ಕಾಂಗ್ರೆಸ್ ಆಕ್ಷೇಪ ವ್ಯಕ್ತಪಡಿಸಿದೆ.

ಮುಂಬರುವ ಮುಂಗಾರು ಅಧಿವೇಶನದಲ್ಲಿ ಮಲ್ಟಿ ಮೀಡಿಯಾ ಡಿವೈಸ್ (ಬಹು ಮಾಧ್ಯಮ ಸಾಧನ) ಆಧಾರಿತ ಹಾಜರಾತಿ ವ್ಯವಸ್ಥೆ ಪರಿಚಯಿಸುತ್ತಿರುವುದನ್ನು ಟೀಕಿಸಿದೆ.

ನೂತನ ಹಾಜರಾತಿ ವ್ಯವಸ್ಥೆಯು 'ದೋಷಪೂರಿತ'ವಾಗಿದೆ ಎಂದು ಲೋಕಸಭೆಯಲ್ಲಿ ಕಾಂಗ್ರೆಸ್‌ನ ಸಚೇತಕರಾಗಿರುವ ಮಣಿಕಂ ಟ್ಯಾಗೋರ್ ದೂರಿದ್ದಾರೆ.

ಹೊಸ ಪದ್ಧತಿಯು ಸಂಸದರ ಹೊಣೆಗಾರಿಕೆಯನ್ನು ಖಾತ್ರಿಪಡಿಸುವ ಗುರಿ ಹೊಂದಿರುವಾಗ, ಪ್ರಧಾನಿ ಮತ್ತು ಸಚಿವರಿಗೆ ಏಕೆ ವಿನಾಯಿತಿ ನೀಡಲಾಗಿದೆ ಎಂದು ಅವರು ಪ್ರಶ್ನಿಸಿದ್ದಾರೆ.

ಕೆಲವು ಸಂಸದರು ಹಾಜರಾತಿ ಹಾಕಿ, ಸದನದ ಪ್ರಕ್ರಿಯೆಗಳಲ್ಲಿ ಭಾಗ ವಹಿಸದೆ ಹೊರಹೋಗುವುದೂ ಇದೆ ಎಂದಿದ್ದಾರೆ.

'ದೋಷಪೂರಿತ ವ್ಯವಸ್ಥೆಯನ್ನು ಏಕೆ ಅಳವಡಿಸಬೇಕು' ಎಂದು 'ಎಕ್ಸ್'ನಲ್ಲಿ ಪ್ರಶ್ನಿಸಿರುವ ಮಣಿಕಂ, 'ಲೋಕಸಭೆಯನ್ನು ಪ್ರಧಾನಿ ಮುನ್ನಡೆಸಬೇಕಲ್ಲವೇ? ಆದರೆ ಅವರು ಎಷ್ಟು ದಿನ ಭಾಗಿಯಾಗುತ್ತಾರೆ. 18ರಿಂದ 28 ದಿನ ಅಧಿವೇಶನ ನಡೆದರೆ, ಕೇವಲ ಮೂರರಿಂದ ನಾಲ್ಕು ದಿನ ಭಾಗಿಯಾಗುತ್ತಾರೆ' ಎಂದು ಉಲ್ಲೇಖಿಸಿದ್ದಾರೆ.

'ಹಾಜರಾತಿಯ ಡಿಜಿಟಲೀಕರಣದ ಬದಲು ಸುಧಾರಣೆಯ ಅಗತ್ಯವಿದೆ. ಎಲ್ಲರಿಗೂ ಹಾಜರಾತಿಯನ್ನು ಕಡ್ಡಾಯಗೊಳಿಸಬೇಕಿದೆ. ಸದನದಲ್ಲಿ ಮಾತನಾಡುವುದು ಹಾಗೂ ಮತದಾನ ಪ್ರಕ್ರಿಯೆಯು ದಾಖಲೆಗಳಾಗಿ ಸ್ವಯಂ ಪ್ರಕಟಗೊಳ್ಳಬೇಕಿದೆ' ಎಂದಿದ್ದಾರೆ.

ಸಮಯ ಉಳಿತಾಯ: ನೂತನ ಹಾಜರಾತಿ ವ್ಯವಸ್ಥೆಯಲ್ಲಿ ಸಂಸದರು ಸಂಸತ್ತಿನ ಮೊಗಸಾಲೆಯಲ್ಲಿ ಸಹಿ ಮಾಡುವ ಬದಲು, ತಮಗೆ ನಿಗದಿಪಡಿಸಿದ ಸ್ಥಾನದಲ್ಲಿ ಕುಳಿತು ಬಹು ಮಾಧ್ಯಮ ಸಾಧನದ ಮೂಲಕ ಪಂಚ್ ಮಾಡಬೇಕಿದೆ.

ಕೆಲವೊಮ್ಮೆ ಸಂಸದರಿಂದ ಮೊಗಸಾಲೆ ಕಿಕ್ಕಿರಿದು ತುಂಬಿದ್ದಾಗ, ಸಮಯ ಉಳಿಸಲು ಈ ವ್ಯವಸ್ಥೆ ಸಹಾಯ ಮಾಡಲಿದೆ ಎಂದು ಮೂಲಗಳು ತಿಳಿಸಿವೆ.

ವಿಮಾನದ ಕಾಕ್‌ಪಿಟ್‌ಗೆ ನುಗ್ಗಲು ಯತ್ನ



ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿ ವಿಮಾನ ನಿಲ್ದಾಣದಲ್ಲಿ ಸೋಮವಾರ ಟೇಕಾಫ್ ಆಗುತ್ತಿದ್ದ ಸ್ಪೈಸ್‌ಜೆಟ್ ವಿಮಾನದ ಕಾಕ್‌ಪಿಟ್‌ಗೆ ನುಗ್ಗಲು ಯತ್ನಿಸಿ ಗೊಂದಲ ಸೃಷ್ಟಿಸಿದ ಇಬ್ಬರು ಪ್ರಯಾಣಿಕರನ್ನು ಕೆಳಗಿಳಿಸಿ, ಸಿಐಎಸ್‌ಎಫ್ (ಭದ್ರತಾ ಸಿಬ್ಬಂದಿ) ವಶಕ್ಕೆ ನೀಡಲಾಗಿದೆ.

ಜುಲೈ 14ರಂದು ದೆಹಲಿಯಿಂದ ಮುಂಬೈಗೆ ತೆರಳುತ್ತಿದ್ದ ವಿಮಾನದಲ್ಲಿ ಘಟನೆ ನಡೆದಿದೆ. 'ವಿಮಾನದ ಸಿಬ್ಬಂದಿ, ಸಹ ಪ್ರಯಾಣಿಕರು ಎಷ್ಟೇ ಮನವಿ ಮಾಡಿದರೂ ತಮ್ಮ ಆಸನಗಳಿಗೆ ಇಬ್ಬರೂ ಮರಳಿರಲಿಲ್ಲ. ಹೀಗಾಗಿ ನಿಲುಗಡೆ ಸ್ಥಳಕ್ಕೆ ವಾಪಸಾಗಿ ಅವರನ್ನು ಕೆಳಗಿಳಿಸಲಾಯಿತು' ಎಂದು ಸ್ಪೈಸ್‌ಜೆಟ್ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ನಿಗದಿಯಂತೆ ಮಧ್ಯಾಹ್ನ 12.30ಕ್ಕೆ ದೆಹಲಿಯಿಂದ ಹೊರಡಬೇಕಿದ್ದ ವಿಮಾನ ಸಂಜೆ 7.21ಕ್ಕೆ ನಿರ್ಗಮಿಸಿತ್ತು.

ಭೂ ಸ್ವಾಧೀನ: ಪುನರ್ವಸತಿ ಅಗತ್ಯವಲ್ಲ–ಸುಪ್ರೀಂ

ನವದೆಹಲಿ: 'ಭೂ ಸ್ವಾಧೀನಕ್ಕೆ ಸಂಬಂಧಿಸಿದ ಎಲ್ಲಾ ಪ್ರಕರಣಗಳಲ್ಲೂ ಭೂ ಮಾಲೀಕರಿಗೆ ಆರ್ಥಿಕ ಪರಿಹಾರದ ಜತೆಗೆ ಪುನರ್ವಸತಿಯನ್ನೂ ಕಲ್ಪಿಸಬೇಕೆಂಬ ಅಗತ್ಯವಿಲ್ಲ. ಅಪರೂಪದ ಪ್ರಕರಣಗಳಲ್ಲಿ ಮಾತ್ರ ಸರ್ಕಾರಗಳು ಪುನರ್ವಸತಿ ಯೋಜನೆಗಳನ್ನು ಘೋಷಿಸುವುದು ಸೂಕ್ತ' ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ಹರಿಯಾಣದ ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಭೂ ಮಾಲೀಕರ ವಿವಾದಕ್ಕೆ ಸಂಬಂಧಿಸಿದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಜೆ.ಬಿ. ಪಾರ್ದೀವಾಲಾ, ನ್ಯಾಯಮೂರ್ತಿ ಆರ್.ಮಹದೇವನ್ ಅವರನ್ನು ಒಳಗೊಂಡ ಪೀಠವು, 'ವಿರಳಾತಿ ವಿರಳ ಪ್ರಕರಣಗಳಲ್ಲಷ್ಟೇ ರಾಜ್ಯ ಸರ್ಕಾರವು ಪರಿಹಾರದ ಜೊತೆ ಪುನರ್ವಸತಿ ಯೋಜನೆಯನ್ನೂ ಜಾರಿಗೊಳಿಸಬಹುದು' ಎಂದಿದೆ.

'ಸಾರ್ವಜನಿಕ ಉದ್ದೇಶಕ್ಕೆ ಭೂ ಸ್ವಾಧೀನ ಕಾಯ್ದೆಯಡಿ ರಾಜ್ಯ ಸರ್ಕಾರಗಳು ಅಥವಾ ಸಂಬಂಧಿಸಿದ ಪ್ರಾಧಿಕಾರಗಳು ಜಮೀನನ್ನು ಸ್ವಾಧೀನಪಡಿಸಿಕೊಂಡರೆ, ಭೂ ಮಾಲೀಕರಿಗೆ ಕಾನೂನು ಬದ್ಧವಾಗಿ ಪರಿಹಾರ ನೀಡುವುದು ನ್ಯಾಯಸಮ್ಮತ' ಎಂದು ನ್ಯಾಯಪೀಠ ಹೇಳಿದೆ.

'ವಶಪಡಿಸಿಕೊಂಡ ಜಮೀನನ್ನು ಕಳೆದುಕೊಂಡರೆ ಮಾಲೀಕನ ಜೀವನದ ಮೂಲಭೂತ ಅವಶ್ಯಕತೆಗೆ ತೊಂದರೆಯಾಗುತ್ತದೆ ಎನ್ನುವ ಸ್ಥಿತಿ ಇದ್ದರೆ ಅಂಥ ವಿರಳ ಪ್ರಕರಣಗಳಲ್ಲಿ ಮಾತ್ರ ಪುನರ್ವಸತಿ ಕಲ್ಪಿಸಿಕೊಡಬೇಕಾಗುತ್ತದೆ' ಎಂದೂ ಪೀಠ ಹೇಳಿದೆ.

ಸಂಕ್ಷಿಪ್ತ ಸುದ್ದಿ

ಮಣಿಪುರ: ಐವರು ಉಗ್ರರು ಸೇರಿ ಏಳು ಮಂದಿ ಬಂಧನ

ಇಂಫಾಲ್ (ಪಿಟಿಐ): ಮಣಿಪುರದಲ್ಲಿ ಮೂರು ನಿಷೇಧಿತ ಉಗ್ರ ಸಂಘಟನೆಗಳ ಐವರು ಸೇರಿದಂತೆ ಏಳು ಮಂದಿಯನ್ನು ಬಂಧಿಸಲಾಗಿದೆ.

ಪೀಪಲ್ಸ್ ಲಿಬರೇಷನ್ ಆರ್ಮಿಯ ಒಬ್ಬ ಸಕ್ರಿಯ ಕಾರ್ಯಕರ್ತನನ್ನು ತೌಬಾಲ್ ಜಿಲ್ಲೆಯ ಲೀರೊಂಗ್ಥೆಲ್ ಪಿತ್ರಾದಲ್ಲಿ ಸೋಮವಾರ ಬಂಧಿಸಲಾಗಿದೆ. ಈತ ತೌಬಾಲ್ ಜಿಲ್ಲೆಯಲ್ಲಿ ಉಗ್ರರ ನೇಮಕಾತಿ ಹಾಗೂ ಸುಲಿಗೆಯಲ್ಲಿ ತೊಡಗಿದ್ದ ಎಂದು ಪೊಲೀಸರು ಹೇಳಿದ್ದಾರೆ.

ತಾಂಗಲ್ ಬಜಾರ್‌ನಲ್ಲಿ ನಿಷೇಧಿತ ಕೆಸಿಪಿ (ಎಂಎಫ್‌ಎಲ್) ಸಂಘಟನೆಯ ಇಬ್ಬರು ಉಗ್ರರನ್ನು ಬಂಧಿಸಲಾಗಿದೆ. ಇವರು ಕಣಿವೆ ಪ್ರದೇಶದ ವ್ಯಾಪಾರಿಗಳು ಹಾಗೂ ಅಂಗಡಿಗಳ ಮಾಲೀಕರನ್ನು ಬೆದರಿಸಿ ಸುಲಿಗೆ ಮಾಡುತ್ತಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಬಿಷ್ಣುಪುರ ಜಿಲ್ಲೆಯಲ್ಲಿ ಶಸ್ತ್ರಾಸ್ತ್ರಗಳನ್ನು ಸಾಗಿಸುತ್ತಿದ್ದಾಗ ಕಾಂಗ್ಲೆಯಿ ಯವೊಲ್ ಕನ್ನಾ ಲುಪ್ (ಕೆವೈಕೆಎಲ್) ಸಂಘಟನೆಯ ಇಬ್ಬರನ್ನು ಭಾನುವಾರ ಬಂಧಿಸಲಾಗಿದೆ. ಸಿಂಗ್ಜಮೆಯಿ ಚಿಂಗಮಖೋಂಗ್ ಪ್ರದೇಶದಲ್ಲಿ ಅಕ್ರಮ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ ವ್ಯಕ್ತಿಯನ್ನು ಬಂಧಿಸಿದ್ದು, ಒಂದು 7.65 ಎಂ.ಎಂ. ಪಿಸ್ತೂಲ್ ಹಾಗೂ ಮೂರು ಸುತ್ತಿನ ಮದ್ದುಗುಂಡುಗಳನ್ನು ಜಪ್ತಿ ಮಾಡಲಾಗಿದೆ. ನವೋಡಖೋಂಗ್ ಪ್ರದೇಶದಲ್ಲಿ ವ್ಯಕ್ತಿಯೊಬ್ಬನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.




ಕಂದಕಕ್ಕೆ ಟೆಂಪೊ: 5 ಸಾವು

ಜಮ್ಮು (ಪಿಟಿಐ): ಇಲ್ಲಿನ ದೋಡಾ ಜಿಲ್ಲೆಯಲ್ಲಿ ಮಂಗಳವಾರ ಪ್ರಯಾಣಿಕ ವಾಹನವೊಂದು ಕಂದಕಕ್ಕೆ ಉರುಳಿದ ಪರಿಣಾಮ ಒಬ್ಬ ಮಹಿಳೆ ಸೇರಿದಂತೆ ಐವರು ಮೃತಪಟ್ಟಿದ್ದಾರೆ. ಘಟನೆಯಲ್ಲಿ 17 ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೋಡಾ–ಬಹ್ರತ್ ಮಾರ್ಗವಾಗಿ ಚಲಿಸುತ್ತಿದ್ದ ಟೆಂಪೊ ಟ್ರಾವೆಲ್ಲರ್ ಕಂದಕಕ್ಕೆ ಬಿದ್ದಿದೆ. ಚಾಲಕನ ನಿಯಂತ್ರಣ ತಪ್ಪಿದ ಕಾರಣ ಈ ಘಟನೆ ನಡೆದಿದೆ. ಗಾಯಗೊಂಡಿರುವ 17 ಮಂದಿಯನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಪೈಕಿ ಕೆಲವರ ಸ್ಥಿತಿ ಗಂಭೀರವಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮೃತರನ್ನು ಮೊಹಮ್ಮದ್ ಅಶ್ರಫ್ (35), ಮಂಗ್ತಾ ವಾನಿ (51), ಅಟ್ಟಾ ಮೊಹಮ್ಮದ್ (33), ತಾಲಿಬ್ ಹುಸೈನ್ (35), ರಫೀಕಾ ಬೇಗಮ್ (60) ಎಂದು ಗುರುತಿಸಲಾಗಿದೆ.

'ಚೀನಾ ಆಕ್ರಮಣ: ಆಗಿನಂತೆ ಈಗ ಚರ್ಚೆ ಏಕೆ ಸಾಧ್ಯವಿಲ್ಲ'


ಜೈರಾಮ್ ರಮೇಶ್


ನವದೆಹಲಿ (ಪಿಟಿಐ): 'ಚೀನಾ ಪಡೆಗಳು 1962ರಲ್ಲಿ ಆಕ್ರಮಣ ಮಾಡಿದ್ದ ವೇಳೆ, ಗಡಿಯಲ್ಲಿನ ಪರಿಸ್ಥಿತಿ ಕುರಿತಂತೆ ಆಗ ಸಂಸತ್‌ನಲ್ಲಿ ಚರ್ಚೆ ನಡೆದಿತ್ತು. ಇದೇ ವಿಚಾರವಾಗಿ ಆಗಿನಂತೆ ಈಗ ಏಕೆ ಚರ್ಚೆ ಸಾಧ್ಯವಿಲ್ಲ' ಎಂದು ಕೇಂದ್ರ ಸರ್ಕಾರವನ್ನು ಕಾಂಗ್ರೆಸ್ ಮಂಗಳವಾರ ಪ್ರಶ್ನಿಸಿದೆ.

'ಮುಂದಿನ ವಾರ ಆರಂಭವಾಗಲಿರುವ ಸಂಸತ್‌ನ ಚಳಿಗಾಲದ ಅಧಿವೇಶನದಲ್ಲಿ ಈ ವಿಚಾರ ಕುರಿತು ಚರ್ಚೆ ನಡೆಸುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಕೊನೆಗೂ ಒಪ್ಪುವರು ಎಂಬ ಭರವಸೆ ಇದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಅವರು, 'ದೇಶದ ಭದ್ರತೆ ಹಾಗೂ ಆರ್ಥಿಕತೆಗೆ ಸಂಬಂಧಿಸಿ ಚೀನಾದಿಂದ ಎದುರಾಗಿರುವ ಸವಾಲುಗಳಂತಹ ಮಹತ್ವದ ವಿಚಾರಗಳ ಕುರಿತು ರಾಷ್ಟ್ರೀಯ ಸಹಮತ ರೂಪಿಸುವುದು ಅಗತ್ಯ' ಎಂದು ಪ್ರತಿಪಾದಿಸಿದ್ದಾರೆ.

ಭಯೋತ್ಪಾದನಾ ಚಟುವಟಿಕೆಯ ಜೊತೆ ನಂಟು ಹೊಂದಿರುವ ತ್ರಿವಳಿ ಕೊಲೆ ಪ್ರಕರಣ

ಗುಲಾಂ ಭಟ್ ಬಿಡುಗಡೆಗೆ ನಿರಾಕರಣೆ



ನವದೆಹಲಿ (ಪಿಟಿಐ): ಭಯೋತ್ಪಾದನಾ ಚಟುವಟಿಕೆಯ ಜೊತೆ ನಂಟು ಹೊಂದಿರುವ ತ್ರಿವಳಿ ಕೊಲೆ ಪ್ರಕರಣದ ಅಪರಾಧಿ ಗುಲಾಂ ಮೊಹಮ್ಮದ್ ಭಟ್‌ನನ್ನು ಅವಧಿಪೂರ್ವ ಬಿಡುಗಡೆ ಮಾಡಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

ಆದರೆ, ನ್ಯಾಯಮೂರ್ತಿಗಳಾದ ಅಹ್ಸಾನುದ್ದೀನ್ ಅಮಾನುಲ್ಲಾ ಹಾಗೂ ಎಸ್.ವಿ.ಎನ್. ಭಟ್ಟಿ ಅವರನ್ನೊಳಗೊಂಡ ಪೀಠವು, ಬಾಕಿ ಇರುವ ಮತ್ತೊಂದು ಪ್ರಕರಣದಲ್ಲಿ ಮಧ್ಯಂತರ ಅರ್ಜಿ ಸಲ್ಲಿಸಲು ಅವಕಾಶ ಕೊಟ್ಟಿತು.

27 ವರ್ಷ ಶಿಕ್ಷೆ ಅನುಭವಿಸಿರುವುದರಿಂದ, ಬಿಡುಗಡೆ ಮಾಡುವಂತೆ ಕೋರಿ ಭಟ್ ಸಲ್ಲಿಸಿದ್ದ ಮನವಿಯನ್ನು ನ್ಯಾಯಪೀಠ ವಿಚಾರಣೆ ನಡೆಸಿತು.

ಹಿರಿಯ ವಕೀಲ ಗೋನ್ಸಾಲ್ವೆಸ್ ಅವರು ಭಟ್ ಪರ ವಾದ ಮಂಡಿಸಿದರೆ, ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ. ನಟರಾಜ್ ಕೇಂದ್ರಾಡಳಿತ ಪ್ರದೇಶವನ್ನು ಪ್ರತಿನಿಧಿಸಿದರು.

ಸೇನಾ ಮಾಹಿತಿದಾರರ ನಿವಾಸಕ್ಕೆ ನುಗ್ಗಿ ಎಕೆ–47 ರೈಫಲ್‌ನಿಂದ ಗುಂಡಿನ ದಾಳಿ ನಡೆಸಿದ್ದರಿಂದ ಮೂವರು ಮೃತಪಟ್ಟಿದ್ದರು. ಸ್ಫೋಟಕ ಸಾಧನಗಳನ್ನು ಸ್ಥಳದಿಂದ ವಶಪಡಿಸಿಕೊಳ್ಳಲಾಗಿದೆ ಎಂದು ಭಟ್ ವಿರುದ್ಧ ಪ್ರಾಸಿಕ್ಯೂಷನ್ ಆರೋಪಿಸಿದೆ.

ಸೇನೆಗೆ ಮಾಹಿತಿ ನೀಡುತ್ತಾರೆ ಎಂದು ಜನರನ್ನು ಕೊಲ್ಲುವುದು ಭಯೋತ್ಪಾದಕ ಕೃತ್ಯ. ಆದ್ದರಿಂದ ಅವಧಿಪೂರ್ವ ಬಿಡುಗಡೆ ಮಾಡಬಾರದು ಎಂಬ ನಟರಾಜ್ ವಾದವನ್ನು ಪುರಸ್ಕರಿಸಿದ ನ್ಯಾಯಪೀಠವು, ಬಿಡುಗಡೆಗೆ ನಿರಾಕರಿಸಿತು.

ಆಕ್ಷೇಪಾರ್ಹ ಭಾಷೆ: 'ಸುಪ್ರೀಂ' ಖಂಡನೆ

ಸಾಮಾಜಿಕ ಮಾಧ್ಯಮಗಳಲ್ಲಿ ಆಕ್ಷೇಪಾರ್ಹ ಭಾಷೆ ಬಳಕೆ ಬಗ್ಗೆ ಸುಪ್ರೀಂ ಕೋರ್ಟ್ ಮಂಗಳವಾರ ಆಕ್ಷೇಪ ವ್ಯಕ್ತಪಡಿಸಿತು.

ಇದೇ ಸಂದರ್ಭದಲ್ಲಿ, ಪ್ರಧಾನಿ ನರೇಂದ್ರ ಮೋದಿ ಮತ್ತು ಆರ್‌ಎಸ್‌ಎಸ್ ಕಾರ್ಯಕರ್ತರ ಕುರಿತ ಆಕ್ಷೇಪಾರ್ಹ ವ್ಯಂಗ್ಯಚಿತ್ರವನ್ನು ಹಂಚಿಕೊಂಡ ಆರೋಪಕ್ಕೆ ಸಂಬಂಧಿಸಿದಂತೆ ವ್ಯಂಗ್ಯಚಿತ್ರಕಾರ ಹೇಮಂತ್ ಮಾಳವೀಯ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು ಎಂದು ಆದೇಶ ನೀಡಿತು.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸುಧಾಂಶು ಧುಲಿಯಾ ಮತ್ತು ಅರವಿಂದ ಕುಮಾರ್ ಅವರನ್ನು ಒಳಗೊಂಡ ನ್ಯಾಯಪೀಠವು, ಸಾಮಾಜಿಕ ಮಾಧ್ಯಮಗಳಲ್ಲಿನ ಆಕ್ಷೇಪಾರ್ಹ ಪೋಸ್ಟ್‌ಗಳನ್ನು ಹಂಚಿಕೊಳ್ಳುವುದನ್ನು ಮುಂದುವರಿಸಿದಲ್ಲಿ ಯಾವುದೇ ರೀತಿಯ ಕ್ರಮ ಕೈಗೊಳ್ಳಲು ರಾಜ್ಯವು ಸ್ವಾತಂತ್ರ್ಯ ಹೊಂದಿರುತ್ತದೆ ಎಂದು ಅರ್ಜಿದಾರರಾದ ಮಾಳವೀಯ ಅವರಿಗೆ ಸ್ಪಷ್ಟಪಡಿಸಿತು.

'ಸಾಮಾಜಿಕ ಮಾಧ್ಯಮಗಳಲ್ಲಿ ಎಂಥ ಹೇಳಿಕೆಗಳನ್ನಾದರೂ ನೀಡಲಾಗುತ್ತಿದೆ, ವ್ಯಕ್ತಿಯೊಬ್ಬರು ಇನ್ನೊಬ್ಬರ ಬಗ್ಗೆ ಏನನ್ನಾದರೂ ಹೇಳಬಹುದಾಗಿದೆ. ಇಂದಿನ ಪೀಳಿಗೆಗೆ ಏನಾಗಿದೆ' ಎಂದು ನ್ಯಾಯಪೀಠವು ಬೇಸರ ವ್ಯಕ್ತಪಡಿಸಿತು.

ಹುಬ್ಬಳ್ಳಿ ಟೈಗರ್ಸ್ ಬಳಗಕ್ಕೆ ದೇವದತ್ತ

ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಗೆ ಆಟಗಾರರ ಬಿಡ್: ಮೈಸೂರು ವಾರಿಯರ್ಸ್‌ಗೆ ಅನುಭವಿ ಮನೀಷ್ ಪಾಂಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಕ್ರಿಕೆಟ್ ತಂಡದ ಎಡಗೈ ಬ್ಯಾಟರ್ ದೇವದತ್ತ ಪಡಿಕ್ಕಲ್ ಅವರು ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯ ಮುಂಬರುವ ಆವೃತ್ತಿಗಾಗಿ ನಡೆದ ಹರಾಜು ಪ್ರಕ್ರಿಯೆಯಲ್ಲಿ ₹13.20 ಲಕ್ಷ ಗಳಿಸಿದರು. ಇದರೊಂದಿಗೆ ಈ ಬಿಡ್‌ನಲ್ಲಿ ಅತಿ ದೊಡ್ಡ ಮೊತ್ತ ಪಡೆದ ಆಟಗಾರನಾದರು. ಅವರನ್ನು ಹುಬ್ಬಳ್ಳಿ ಟೈಗರ್ಸ್ ತಂಡವು ಸೆಳೆದುಕೊಂಡಿತು.

ಮಂಗಳವಾರ ಇಲ್ಲಿ ನಡೆದ ಬಿಡ್‌ನಲ್ಲಿ ಅಭಿನವ್ ಮನೋಹರ್ ಮತ್ತು ಮನೀಷ್ ಪಾಂಡೆ ಅವರು ಪಡಿಕ್ಕಲ್ ಅವರಿಗಿಂತ ಒಂದು ಲಕ್ಷ ರೂಪಾಯಿ (ತಲಾ ₹12.20 ಲಕ್ಷ) ಕಡಿಮೆ ಮೊತ್ತ ಪಡೆದರು. ಅಭಿನವ್ ಕೂಡ ಹುಬ್ಬಳ್ಳಿ ತಂಡಕ್ಕೆ ಸೇರ್ಪಡೆಯಾದರು. ಅದರೆ ಹೋದ ಬಾರಿ ಹುಬ್ಬಳ್ಳಿ ಟೈಗರ್ಸ್‌ನಲ್ಲಿದ್ದ ಪಾಂಡೆ ಈ ಸಲ ಮೈಸೂರು ವಾರಿಯರ್ಸ್ ಬಳಗಕ್ಕೆ ಜಿಗಿದರು.

ವೇಗದ ಬೌಲರ್ ವಿದ್ವತ್ ಕಾವೇರಪ್ಪ ಅವರನ್ನು ಸೆಳೆದುಕೊಳ್ಳಲು ಪೈಪೋಟಿ ಏರ್ಪಟ್ಟಿತ್ತು. ಪಟ್ಟು ಬಿಡದ ಶಿವಮೊಗ್ಗ ಲಯನ್ಸ್ ₹10.80 ಲಕ್ಷಕ್ಕೆ ವಿದ್ವತ್ ಅವರನ್ನು ಖರೀದಿಸಿತು. ಇನ್ನೊಂದೆಡೆ ವೇಗಿ ವಿದ್ಯಾಧರ್ ಪಾಟೀಲ ಅವರನ್ನು ಬೆಂಗಳೂರು ಬ್ಲಾಸ್ಟರ್ಸ್ ತಂಡವು ₹ 8.30 ಲಕ್ಷ ನೀಡಿ ತನ್ನದಾಗಿಸಿಕೊಂಡಿತು.

ಆಲ್‌ರೌಂಡರ್‌ಗಳನ್ನು ಖರೀದಿಸುವಲ್ಲಿ ಮೈಸೂರು ವಾರಿಯರ್ಸ್ ತಂಡವು ಹೆಚ್ಚು ಆಸಕ್ತಿ ತೋರಿತು. ಕೆ.ಗೌತಮ್ (₹4.40ಲಕ್ಷ), ಯಶೋವರ್ಧನ್ ಪರಂತಾಪ್ (₹2 ಲಕ್ಷ), ಎಲ್.ಆರ್. ಕುಮಾರ್ (₹1.50ಲಕ್ಷ), ಎಡಗೈ ಸ್ಪಿನ್ನರ್ ಶಿಖರ್ ಶೆಟ್ಟಿ (₹4.70ಲಕ್ಷ), ವೇಗಿ ಎಂ. ವೆಂಕಟೇಶ್ (₹2 ಲಕ್ಷ) ಮತ್ತು ಗೌತಮ್ ಮಿಶ್ರಾ (₹2.25ಲಕ್ಷ) ಅವರನ್ನು ಮೈಸೂರು ತಂಡವು ಸೆಳೆದುಕೊಂಡಿತು. ಉದಯೋನ್ಮುಖ ವಿಕೆಟ್‌ಕೀಪರ್ ಹರ್ಷಿಲ್ ಧರ್ಮಾನಿ ಕೂಡ ಮೈಸೂರು ಪಾಲಾದರು.

ಬೆಂಗಳೂರು ತಂಡವು ಈ ಮೊದಲೇ ಮಯಂಕ್ ಅಗರವಾಲ್ (₹14 ಲಕ್ಷ) ಅವರನ್ನು ರಿಟೇನ್ ಮಾಡಿಕೊಂಡಿತ್ತು. ಆದ್ದರಿಂದ ಎ ಕೆಟಗರಿ ಆಟಗಾರರತ್ತ ಹೆಚ್ಚು ಒಲವು ತೋರಲಿಲ್ಲ. ಭರವಸೆಯ ಆಟಗಾರರ ಮೇಲೆ ವಿಶ್ವಾಸವಿಟ್ಟಿತು. ಎಲ್.ಆರ್. ಚೇತನ್, ರೋಹನ್ ಪಾಟೀಲ, ವಿದ್ಯಾಧರ್ ಪಾಟೀಲ, ರೋಹನ್ ನವೀನ್ ಮತ್ತು 16 ವರ್ಷ ವಯಸ್ಸಿನ ಮಾಧವ ಪ್ರಕಾಶ್ ಬಜಾಜ್ ಅವರನ್ನು ತಂಡಕ್ಕೆ ಸೆಳೆದುಕೊಳ್ಳುವಲ್ಲಿ ಯಶಸ್ವಿಯಾಯಿತು.

ಹುಬ್ಬಳ್ಳಿ ತಂಡವು ಅಗ್ರಕ್ರಮಾಂಕದ ಬ್ಯಾಟಿಂಗ್ ವಿಭಾಗವನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಆಟಗಾರರನ್ನು ಖರೀದಿಸಿತು. ಗುಲ್ಬರ್ಗ ತಂಡವು ವಿಕೆಟ್‌ಕೀಪರ್ ಕೆ.ವಿ. ಸಿದ್ಧಾರ್ಥ್, ವೇಗಿ ಮೊನಿಷ್ ರೆಡ್ಡಿ, ಹೋದ ಬಾರಿಯ ಟೂರ್ನಿಯಲ್ಲಿ ಹೆಚ್ಚು ವಿಕೆಟ್ ಗಳಿಸಿದ್ದ ಲವಿಶ್ ಕೌಶಲ್ ಅವರಿಗೆ ಮಣೆ ಹಾಕಿತು. ಕರ್ನಾಟಕ ತಂಡದ ಆರಂಭಿಕ ಆಟಗಾರ ನಿಕಿನ್ ಜೋಸ್ ಅವರಿಗೆ ಒಂದುಲಕ್ಷ ರೂಪಾಯಿ ನೀಡಿ ಖರೀದಿಸಿತು.



ಮಯಂಕ್ ಅಗರವಾಲ್ ಮತ್ತು ದೇವದತ್ತ ಪಡಿಕ್ಕಲ್



ಅಭಿನವ್ ಮನೋಹರ್



ಮನೀಷ್ ಪಾಂಡೆ



ವಿದ್ವತ್ ಕಾವೇರಪ್ಪ



ಶ್ರೇಯಸ್ ಗೋಪಾಲ್

ಅನುಭವಿ ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ₹8.60 ಲಕ್ಷ ಅವರನ್ನು ಮಂಗಳೂರು ಡ್ರ್ಯಾಗನ್ಸ್ ತಂಡವು ಸೆಳೆದುಕೊಂಡಿತು.

ಈ ಸಲದ ಟೂರ್ನಿಯು ಆಗಸ್ಟ್ 11 ರಿಂದ 27ರವರೆಗೆ ನಡೆಯಲಿದೆ. ಎಲ್ಲ ಪಂದ್ಯಗಳನ್ನೂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದು, ಪ್ರೇಕ್ಷಕರ ಪ್ರವೇಶವನ್ನು ನಿರ್ಬಂಧಿಸಲಾಗಿದೆ.

ಆಟಗಾರ	ಮೌಲ್ಯ (₹ ಲಕ್ಷಗಳಲ್ಲಿ)
ಮೈಸೂರು ವಾರಿಯರ್ಸ್	
ಮನೀಷ್ ಪಾಂಡೆ	12.20
ಕರುಣ್ ನಾಯರ್	6.80
ಶಿಖರ್ ಶೆಟ್ಟಿ	4.70
ಕೆ. ಗೌತಮ್	4.40
ಸಿ.ಎ. ಕಾರ್ತಿಕ್	4.20
ಹರ್ಷಿಲ್ ಧರ್ಮಾನಿ	3.20
ಗೌತಮ್ ಮಿಶ್ರಾ	2.25
ಪ್ರಸಿದ್ಧಕೃಷ್ಣ	2.00
ಯಶೋವರ್ಧನ್ ಪರಂತಾಪ್	2.00
ಎಂ. ವೆಂಕಟೇಶ್	2.00
ಕುಮಾರ್ ಎಲ್.ಆರ್	1.50
ಶರತ್ ಶ್ರೀನಿವಾಸ್	1.00
ಸುಮಿತ್ ಕುಮಾರ್	1.00
ಕೆ.ಎಸ್. ಲಂಕೇಶ್	0.50
ಕಾರ್ತಿಕ್ ಎಸ್.ಯು	0.50
ಧನುಷ್ ಗೌಡ	0.50
ಕುಶಾಲ್ ಎಂ ವಾಧ್ವಾನಿ	0.50
ಶಮಂತ್ ಎಸ್.ಎಂ	0.50

ಬೆಂಗಳೂರು ಬ್ಲಾಸ್ಟರ್ಸ್	
ಮಯಂಕ್ ಅಗರವಾಲ್*	14.00
ವಿದ್ಯಾಧರ್ ಪಾಟೀಲ	8.30
ಎಲ್.ಆರ್. ಚೇತನ್	5.10
ಶುಭಾಂಗ್ ಹೆಗಡೆ*	4.30
ರೋಹನ್ ನವೀನ್	4.25
ಮಾಧವಪ್ರಕಾಶ್ ಬಜಾಜ್	3.15
ಎ. ರೋಹನ್ ಪಾಟೀಲ	2.70
ಎಂ.ಜಿ. ನವೀನ್	2.30
ಸೂರಜ್ ಅಹುಜಾ*	1.00
ಮೊಹಸೀನ್ ಖಾನ್	1.00
ಪ್ರತೀಕ್ ಜೈನ್	1.00
ಸಿದ್ಧಾರ್ಥ್ ಅಖಿಲ್	0.50
ಕೃತಿಕ್ ಕೃಷ್ಣ	0.50
ಎಸ್. ಇಶಾನ್	0.50
ಅದ್ವೈತ್ ಎಂ ಶೆಟ್ಟಿ	0.25
ಭುವನ್ ಮೋಹನರಾಜು	0.25
ರೋಹನ್ ಎಂ ರಾಜು	0.25
ನಿರಂಜನ್ ನಾಯಕ್	0.25

ಗುಲ್ಬರ್ಗ ಮಿಸ್ಟಿಕ್ಸ್	
ವೈಶಾಖ ವಿಜಯಕುಮಾರ್*	8.80
ಲವಿಶ್ ಕೌಶಲ್	7.75
ಲವನೀತ್ ಸಿಸೋಡಿಯಾ*	7.20
ಪ್ರವೀಣ ದುಬೆ*	6.80
ಕೆ.ವಿ. ಸಿದ್ಧಾರ್ಥ್	6.10
ಮೊನಿಷ್ ರೆಡ್ಡಿ	4.65
ಆರ್. ಸ್ಮರಣ್*	3.15
ಎಸ್.ಜೆ. ನಿಕಿನ್ ಜೋಸ್	1.00
ಲಿಖಿತ್ ಎಂ ಬೆನ್ನೂರ	0.80
ಪೃಥ್ವಿರಾಜ್	0.69
ಪ್ರಜ್ವಲ್ ಪವನ್	0.50
ಇ.ಜೆ. ಜಾಸ್ಪರ್	0.50
ಬಿ.ಎ. ಮೋಹಿತ್	0.50
ಫೈಜನ್ ರೈಝ್	0.25
ಸೌರಭ್ ಎಂ ಮುತ್ತೂರ	0.25
ಶೀಥಲ್ ಕುಮಾರ್	0.25
ಹರ್ಷವರ್ಧನ್ ಖುಬಾ	0.25
ಯೂನುಸ್ ಅಲಿ ಬೇಗ್	0.25

ಹುಬ್ಬಳ್ಳಿ ಟೈಗರ್ಸ್	
ದೇವದತ್ತ ಪಡಿಕ್ಕಲ್	13.20
ಅಭಿನವ್ ಮನೋಹರ್	12.20
ಮೊಹಮ್ಮದ್ ತಹಾ	4.60
ಕೆ.ಸಿ. ಕಾರಿಯಪ್ಪ*	4.20
ಸಮರ್ಥ್ ನಾಗರಾಜ್	3.20
ಕೆ.ಎಲ್. ಶ್ರೀಜಿತ್*	2.10
ಕೆ.ಪಿ.ಕಾರ್ತಿಕೇಯ	1.20
ಶ್ರೀಶಾ ಎಸ್ ಆಚಾರ್	1.05
ರಿತೇಶ್ ಎಲ್ ಭಟ್ಕಳ್	1.00
ಎಲ್. ಮನ್ವಂತ್ ಕುಮಾರ್*	1.00
ಬಿ.ವಿಜಯರಾಜ್	0.50
ಪ್ರಖರ್ ಚತುರ್ವೇದಿ	0.50
ಎಸ್.ಎಸ್. ಸಂಕಲ್ಪ	0.50
ಎಸ್. ರಕ್ಷಿತ್	0.50
ನಿತಿನ್ ಶಾಂತವೇರಿ ನಾಗರಾಜ	0.25
ಯಶ್ ರಾಜ್ ಪುಂಜಾ	0.25
ನೇಥನ್ ಜೋಕಿಮ್ ಫ್ರಾನ್ಸಿಸ್ ಡಿಮೆಲೊ	0.25
ನಿಶ್ಚಿತ್ ಪೈ	0.25

ಶಿವಮೊಗ್ಗ ಲಯನ್ಸ್	
ವಿದ್ವತ್ ಕಾವೇರಪ್ಪ	10.80
ಅನೀಶ್ವರ್ ಗೌತಮ್	8.20
ವಾಸುಕಿ ಕೌಶಿಕ್*	5.90
ಹಾರ್ದಿಕ್ ರಾಜ್*	5.80
ಅವಿನಾಶ್ ಡಿ*	5.40
ಅನಿರುದ್ಧ ಜೋಶಿ	3.60
ನಿಹಾಲ್ ಉಲ್ಲಾಳ*	2.10
ದೀಪಕ್ ದೇವಾಡಿಗಾ	1.20
ಎಂ.ಬಿ. ದರ್ಶನ್	1.10
ತುಷಾರ್ ಸಿಂಗ್	1.05
ಧ್ರುವ ಪ್ರಭಾಕರ್	0.50
ಸಂಜಯ್ ಅಶ್ವಿನ್ ಸಿ	0.50
ಆನಂದ ದೊಡ್ಡಮನಿ	0.50
ಸಾಹಿಲ್ ಶರ್ಮಾ	0.25
ಭರತ್ ಧೂರಿ	0.25
ರೋಹಿತ್ ಕುಮಾರ್ ಕೆ	0.25
ಮರಿಬಸವ ಚಂದ್ರಶೇಖರ ಗೌಡ	0.25
ಸಿರೀಶ್ ಬಲ್ಗಾರ್	0.25

ಮಂಗಳೂರು ಡ್ರ್ಯಾಗನ್ಸ್	
ಶ್ರೇಯಸ್ ಗೋಪಾಲ್	8.60
ಎಸ್.ಶಿವರಾಜ್	6.55
ಅಭಿಲಾಶ್ ಶೆಟ್ಟಿ*	6.30
ಮೇಲು ಕ್ರಾಂತಿಕುಮಾರ್	5.60
ಮೆಕ್ನಿಲ್ ಹ್ಯಾಡ್ಲಿ ನೊರೊನಾ*	5.00
ರೋನಿತ್ ಮೋರೆ	3.40
ಆದರ್ಶ ಪ್ರಜ್ವಲ್	3.25
ಅಭಿಷೇಕ್ ಪ್ರಭಾಕರ್	3.07
ಬಿ.ಆರ್. ಶರತ್	2.20
ಆದಿತ್ಯ ನಾಯರ್	1.10
ಸಚಿನ್ ಶಿಂಧೆ	1.00
ಕೆ.ವಿ. ಅನೀಶ್	1.00
ಪಲ್ಲವಕುಮಾರ್ ದಾಸ್	1.00
ತಿಪ್ಪಾರೆಡ್ಡಿ	0.80
ಲೋಚನ್ ಎಸ್ ಗೌಡ*	0.55
ಪಾರಸ್ ಗುರುಭಕ್ಷ್ ಆರ್ಯ*	0.50

* ಗುರುತು ಇರುವ ಆಟಗಾರರು ಆಯಾ ತಂಡಗಳಿಂದ ರಿಟೇನ್ ಆದವರು

ಇನಿಂಗ್ಸ್ ಒಂದರಲ್ಲಿ ತಂಡದ ಕನಿಷ್ಠ ರನ್ (ಟೆಸ್ಟ್)				
ರನ್	ತಂಡ	ಎದುರಾಳಿ	ತಾಣ	ವರ್ಷ
26	ನ್ಯೂಜಿಲೆಂಡ್	ಇಂಗ್ಲೆಂಡ್	ಆಕ್ಲೆಂಡ್	1955
27	ವೆಸ್ಟ್ ಇಂಡೀಸ್	ಆಸ್ಟ್ರೇಲಿಯಾ	ಕಿಂಗ್‌ಸ್ಟನ್	2025
30	ದಕ್ಷಿಣ ಆಫ್ರಿಕಾ	ಇಂಗ್ಲೆಂಡ್	ಗ್ವಬೇಹಾ	1896
30	ದಕ್ಷಿಣ ಆಫ್ರಿಕಾ	ಇಂಗ್ಲೆಂಡ್	ಬರ್ಮಿಂಗ್‌ಹ್ಯಾಮ್	1924
35	ದಕ್ಷಿಣ ಆಫ್ರಿಕಾ	ಇಂಗ್ಲೆಂಡ್	ಕೇಪ್‌ಟೌನ್	1899

ಮಿಚೆಲ್ ಸ್ಟಾರ್ಕ್ ಬಿರುಗಾಳಿಗೆ ವೆಸ್ಟ್ ವಿಂಡೀಸ್ ಧೂಳೀಪಟ

ಕಿಂಗ್‌ಸ್ಟನ್ (ಜಮೈಕಾ) (ಪಿಟಿಐ): ಎಡಗೈ ವೇಗಿ ಮಿಚೆಲ್ ಸ್ಟಾರ್ಕ್ ಅವರ ಬಿರುಗಾಳಿ ವೇಗದ ದಾಳಿಗೆ ಆತಿಥೇಯ ವೆಸ್ಟ್ ಇಂಡೀಸ್ ತರಗೆಲೆಯಂತೆ ಹಾರಿಹೋಯಿತು. ಕೇವಲ 27 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡು ಹೀನಾಯ ಸೋಲಿಗೆ ಶರಣಾಯಿತು.

ಸಬಿನಾ ಪಾರ್ಕ್‌ನಲ್ಲಿ ಸೋಮವಾರ ತಡರಾತ್ರಿ ಮುಕ್ತಾಯವಾದ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು 176 ರನ್‌ಗಳ ಭಾರಿ ಜಯ ಸಾಧಿಸಿತು. ಹೊನಲು ಬೆಳಕಿನ ಪಂದ್ಯದಲ್ಲಿ 204 ರನ್‌ಗಳ ಗುರಿಯನ್ನು ಬೆನ್ನಟ್ಟಿದ್ದ ವಿಂಡೀಸ್ ತಂಡದಲ್ಲಿ ಎರಡಂಕಿ ಸ್ಕೋರ್ ಮಾಡಿದ್ದು ಜಸ್ಟಿನ್ ಗ್ರೀವ್ಸ್ (11; 24ಎ) ಅವರೊಬ್ಬರೇ. ಏಳು ಬ್ಯಾಟರ್ ಗಳು ಸೊನ್ನೆ ಸುತ್ತಿದರು. ಕೇವಲ 14.3 ಓವರ್‌ಗಳಲ್ಲಿ ಆತಿಥೇಯರ ಇನಿಂಗ್ಸ್‌ಗೆ ತೆರೆ ಬಿತ್ತು. ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ಎರಡನೇ ಕನಿಷ್ಠ ಇನಿಂಗ್ಸ್ ಮೊತ್ತವನ್ನು ವೆಸ್ಟ್ ಇಂಡೀಸ್ ದಾಖಲಿಸಿತು.

ಆಸ್ಟ್ರೇಲಿಯಾ ತಂಡವು ಮೂರು ಪಂದ್ಯಗಳ ಸರಣಿಯನ್ನು ಕ್ಲೀನ್‌ಸ್ವೀಪ್ ಮಾಡಿತು.



ಆರು ವಿಕೆಟ್ ಪಡೆದ ಮಿಚೆಲ್ ಸ್ಟಾರ್ಕ್ ಎಪಿ ಚಿತ್ರ

ಸ್ಟಾರ್ಕ್ (7.3–4–9–6) ಮತ್ತು ಹ್ಯಾಟ್ರಿಕ್ ಸಾಧಿಸಿದ ಸ್ಕಾಟ್ ಬೊಲ್ಯಾಂಡ್ (2–1–2–3) ಅವರ ದಾಳಿಯ ಮುಂದೆ ವಿಂಡೀಸ್ ಬ್ಯಾಟರ್‌ಗಳ ಆಟ ನಡೆಯಲಿಲ್ಲ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: 70.3 ಓವರ್‌ಗಳಲ್ಲಿ 225. ವೆಸ್ಟ್ ಇಂಡೀಸ್: 52.1 ಓವರ್‌ಗಳಲ್ಲಿ 143, ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ: 37 ಓವರ್‌ಗಳಲ್ಲಿ 121 (ಅಲ್ಝರಿ ಜೋಸೆಫ್ 27ಕ್ಕೆ5, ಶಾಮರ್ ಜೋಸೆಫ್ 34ಕ್ಕೆ4) ವೆಸ್ಟ್ ಇಂಡೀಸ್: 14.3 ಓವರ್‌ಗಳಲ್ಲಿ 27 (ಜಸ್ಟಿನ್ ಗ್ರೀವ್ಸ್ 11, ಮಿಚೆಲ್ ಸ್ಟಾರ್ಕ್ 9ಕ್ಕೆ6, ಸ್ಕಾಟ್ ಬೊಲ್ಯಾಂಡ್ 2ಕ್ಕೆ3) ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 176 ರನ್ ಜಯ.
ಪಂದ್ಯಶ್ರೇಷ್ಠ: ಮಿಚೆಲ್ ಸ್ಟಾರ್ಕ್

ಲಾಯ್ಡ್, ರಿಚರ್ಡ್ಸ್, ಲಾರಾಗೆ ಮನವಿ

ದಶಕಗಳ ಹಿಂದೆ ಕ್ರಿಕೆಟ್ ಲೋಕದ ದೈತ್ಯ ಶಕ್ತಿಯಾಗಿದ್ದ ವೆಸ್ಟ್ ಇಂಡೀಸ್ ಈಗ ಅಧಃಪತನ ಕಂಡಿದೆ. ಅದನ್ನು ಮತ್ತೆ ಪುನರುಜ್ಜೀವನಗೊಳಿಸುವ ನಿಟ್ಟಿನಲ್ಲಿ ವೆಸ್ಟ್ ಇಂಡೀಸ್ ಕ್ರಿಕೆಟ್ ಮಂಡಳಿ ಮಹತ್ವದ ಹೆಜ್ಜೆ ಇಟ್ಟಿದೆ.

ತವರಿನಂಗಳಲ್ಲಿ ವಿಂಡೀಸ್ ತಂಡವು 0–3ರಿಂದ ಆಸ್ಟ್ರೇಲಿಯಾ ಎದುರು ಸೋತಿದೆ. ಈ ಹಿನ್ನೆಲೆಯಲ್ಲಿ ವಿಂಡೀಸ್ ದಿಗ್ಗಜರಾದ ಕ್ಲೈವ್ ಲಾಯ್ಡ್, ವಿವಿಯನ್ ರಿಚರ್ಡ್ಸ್ ಮತ್ತು ಬ್ರಯನ್ ಲಾರಾ ಅವರ ನೆರವನ್ನು ಮಂಡಳಿಯು ಕೋರಿದೆ.

‘ನಮ್ಮ ಮೂವರು ಶ್ರೇಷ್ಠ ಆಟಗಾರರಾದ ಸರ್ ಕ್ಲೈವ್ ಲಾಯ್ಡ್, ಸರ್ ವಿವಿಯನ್ ರಿಚರ್ಡ್ಸ್ ಮತ್ತು ಬ್ರಯನ್ ಲಾರಾ ಅವರಿಗೆ ಆಹ್ವಾನ ನೀಡಿದ್ದೇವೆ. ಸದ್ಯ ಸಮಿತಿಯಲ್ಲಿರುವ ಶಿವನಾರಾಯಣ ಚಂದ್ರಪಾಲ್, ಡೆಸ್ಮಂಡ್ ಹೇಯ್ನ್ಸ್, ಇಯಾನ್ ಬ್ರಾಡ್‌ಶಾ ಅವರೊಂದಿಗೆ ಮೂವರು ದಿಗ್ಗಜರೂ ಸೇರಿಕೊಂಡು ತಂಡವನ್ನು ಉತ್ತಮಗೊಳಿಸುವ ಕುರಿತು ಯೋಜನೆ ಮಾಡಲಿದ್ದಾರೆ’ ಎಂದು ಕ್ರಿಕೆಟ್ ವೆಸ್ಟ್ ಇಂಡೀಸ್ (ಸಿಡಬ್ಲ್ಯುಐ) ಅಧ್ಯಕ್ಷ ಕಿಶೋರ್ ಶಾಲೋ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಿಟಿಕೆ ಸುದ್ದಿ

ದಯಾಳ್ ಬಂಧನಕ್ಕೆ ಹೈಕೋರ್ಟ್ ತಡೆ




ಪ್ರಯಾಗರಾಜ್ (ಪಿಟಿಐ): ಮಹಿಳೆಯ ಮೇಲಿನ ಲೈಂಗಿಕ ಶೋಷಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ರಿಕೆಟಿಗ ಯಶ್ ದಯಾಳ್ ಬಂಧನಕ್ಕೆ ಅಲಹಾಬಾದ್ ಹೈಕೋರ್ಟ್ ಮಂಗಳವಾರ ತಡೆ ನೀಡಿದೆ.

ಎಫ್‌ಐಆರ್ ಪ್ರಶ್ನಿಸಿ ದಯಾಳ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ನ್ಯಾಯಮೂರ್ತಿಗಳಾದ ಸಿದ್ಧಾರ್ಥ ವರ್ಮಾ ಮತ್ತು ಅನಿಲ್ ಕುಮಾರ್ ಅವರಿದ್ದ ವಿಭಾಗೀಯ ಪೀಠ ಈ ಆದೇಶ ನೀಡಿದೆ.

27 ವರ್ಷದ ದಯಾಳ್ ವಿರುದ್ಧ ಜುಲೈ 6ರಂದು ಗಾಜಿಯಾಬಾದ್ ಜಿಲ್ಲೆಯ ಇಂದಿರಾಪುರಂ ಪೊಲೀಸ್ ಠಾಣೆಯಲ್ಲಿ ಭಾರತೀಯ ನ್ಯಾಯ ಸಂಹಿತೆ ವಿಧಿ 69ರ ಅನ್ವಯ (ಮೋಸದ ದಾರಿಯಲ್ಲಿ ಲೈಂಗಿಕ ಸಂಪರ್ಕ, ಮದುವೆಯಾಗುವುದಾಗಿ ಸುಳ್ಳು ಭರವಸೆ) ಎಫ್‌ಐಆರ್ ದಾಖಲಾಗಿದೆ.

ಈಕ್ವೆಸ್ಟ್ರಿಯನ್: ಶುಭ್ ಚೌಧರಿಗೆ 3 ಪದಕ



ಬೆಂಗಳೂರು: ಶುಭ್ ಚೌಧರಿ ಅವರು, ಎಂಬಸಿ ಅಂತರ ರಾಷ್ಟ್ರೀಯ ರೈಡಿಂಗ್ ಶಾಲೆಯಲ್ಲಿ ಈಚೆಗೆ ನಡೆದ ಕರ್ನಾಟಕ ರಾಜ್ಯ ಈಕ್ವೆಸ್ಟ್ರಿಯನ್ ಸ್ಪರ್ಧೆಯಲ್ಲಿ ಎರಡು ಬೆಳ್ಳಿ ಹಾಗೂ ಒಂದು ಕಂಚಿನ ಪದಕ ಗೆದ್ದುಕೊಂಡರು.

15 ವರ್ಷ ವಯಸ್ಸಿನ ಶುಭ್, ಶೋ ಜಂಪಿಂಗ್ ವಿಭಾಗದ 110 ಸೆಂ.ಮೀ. ಸ್ಪರ್ಧೆಯಲ್ಲಿ ತಲಾ ಒಂದು ಬೆಳ್ಳಿ ಹಾಗೂ ಕಂಚಿನ ಪದಕ ಗೆದ್ದರು. 100 ಸೆಂ.ಮೀ. ಸ್ಪರ್ಧೆಯಲ್ಲಿ ರಜತ ಪದಕವನ್ನು ತಮ್ಮದಾಗಿಸಿಕೊಂಡರು. ಶುಭ್ ಅವರು ಚೆನ್ನೈನವರಾಗಿದ್ದು, ಬೆಂಗಳೂರಿನಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಇಂಗ್ಲೆಂಡ್ ತಂಡಕ್ಕೆ ಮರಳಿದ ಲಿಯಾಮ್

ಲಂಡನ್ (ಪಿಟಿಐ): ಎಡಗೈ ಸ್ಪಿನ್ನರ್ ಲಿಯಾಮ್ ಡಾಸನ್ ಅವರು ಎಂಟು ವರ್ಷಗಳ ಬಳಿಕ ಇಂಗ್ಲೆಂಡ್ ಟೆಸ್ಟ್ ತಂಡಕ್ಕೆ ಮರಳಿದ್ದಾರೆ.

ಲಾರ್ಡ್ಸ್‌ನಲ್ಲಿ ನಡೆದ ಭಾರತದ ಎದುರಿನ ಮೂರನೇ ಟೆಸ್ಟ್ ಪಂದ್ಯದಲ್ಲಿ ಬೆರಳು ಮುರಿದುಕೊಂಡಿದ್ದ ಶೋಯಬ್ ಬಶೀರ್ ಅವರ ಸ್ಥಾನಕ್ಕೆ ಲಿಯಾಮ್ ಅವರನ್ನು ಇಂಗ್ಲೆಂಡ್ ಕ್ರಿಕೆಟ್ ಮಂಡಳಿ ಆಯ್ಕೆ ಮಾಡಿದೆ.

35 ವರ್ಷ ವಯಸ್ಸಿನ ಡಾಸನ್, 2017 ರಲ್ಲಿ ಕೊನೆಯಬಾರಿ ಟೆಸ್ಟ್ ಪಂದ್ಯದಲ್ಲಿ ಆಡಿದ್ದರು. ದಕ್ಷಿಣ ಆಫ್ರಿಕಾ ಎದುರಿನ ಮೂರು ಪಂದ್ಯಗಳ ಸರಣಿಯಲ್ಲಿ ಏಳು ವಿಕೆಟ್ ಪಡೆದುಕೊಂಡಿದ್ದರು.

ಪಾರಮ್ಯದ ವಿಶ್ವಾಸದಲ್ಲಿ ಭಾರತ

ಸೌತಾಂಪ್ಟನ್ (ಪಿಟಿಐ): ಇಂಗ್ಲೆಂಡ್ ವಿರುದ್ಧ ಟಿ20 ಸರಣಿ ಗೆದ್ದು ಚಾರಿತ್ರಿಕ ಸಾಧನೆ ಮಾಡಿರುವ ಭಾರತದ ವನಿತೆಯರು ಬುಧವಾರ ಆರಂಭವಾಗಲಿರುವ ಮೂರು ಏಕದಿನಪಂದ್ಯಗಳ ಸರಣಿಯಲ್ಲೂ ಪಾರಮ್ಯ ಮೆರೆಯುವ ವಿಶ್ವಾಸದಲ್ಲಿದ್ದಾರೆ.

ಹರ್ಮನ್‌ಪ್ರೀತ್ ಕೌರ್ ಬಳಗವು ಇಂಗ್ಲೆಂಡ್ ವಿರುದ್ಧದ ಐದು ಪಂದ್ಯಗಳ ಟಿ20 ಸರಣಿಯನ್ನು 3–2 ಅಂತರದಿಂದ ಗೆದ್ದು ಇತಿಹಾಸ ನಿರ್ಮಿಸಿದೆ. ಇದೇ ವರ್ಷಾಂತ್ಯದಲ್ಲಿ ತವರಿನಲ್ಲಿ ಏಕದಿನ ವಿಶ್ವಕಪ್ ಟೂರ್ನಿ ನಡೆಯಲಿದೆ. ಅದರ ಪೂರ್ವತಯಾರಿಯ ಭಾಗವಾಗಿ ಈ ಸರಣಿಯು ಮಹತ್ವ ಪಡೆದಿದೆ.

ಮೇ ತಿಂಗಳಿನಲ್ಲಿ ನಡೆದಿದ್ದ ಶ್ರೀಲಂಕಾ ಮತ್ತು ದಕ್ಷಿಣ ಆಫ್ರಿಕಾ ತಂಡಗಳನ್ನು ಒಳಗೊಂಡ ತ್ರಿಕೋನ ಏಕದಿನ ಸರಣಿಯನ್ನು ಭಾರತ ಗೆದ್ದುಕೊಂಡಿತ್ತು. ಇದೀಗ ಇಂಗ್ಲೆಂಡ್ ವಿರುದ್ಧದ ಸರಣಿಯನ್ನೂ ಜಯಿಸಿ, ತಂಡದ ಸ್ಥಿರತೆಯನ್ನು ಉತ್ತಮಗೊಳಿಸಲು ಕೌರ್ ಪಡೆ ಎದುರು ನೋಡುತ್ತಿದೆ.

‘ಎರಡು ವರ್ಷಗಳಿಂದ ನಾವು ಏಕದಿನ ಕ್ರಿಕೆಟ್ ಮಾದರಿಯ ಆಟದಲ್ಲಿ ಸುಧಾರಣೆ ಕಂಡಿದ್ದೇವೆ. ಯಾವಾಗಲೂ 300ಕ್ಕೂ ಹೆಚ್ಚು ರನ್ ಗಳಿಸುವತ್ತ ಗಮನ ಹರಿಸಿದ್ದೇವೆ. ಇದು ನಮ್ಮ ಬೌಲರ್‌ಗಳ ಮೇಲಿನ ಒತ್ತಡ ಕಡಿಮೆ ಮಾಡುತ್ತದೆ’ ಎಂದು ನಾಯಕಿ ಹರ್ಮನ್‌ಪ್ರೀತ್ ಹೇಳಿದ್ದಾರೆ.

ಪಂದ್ಯ ಆರಂಭ: ಸಂಜೆ 5.30

ಮಹಿಳಾ ಏಕದಿನ ವಿಶ್ವಕಪ್: ಇಂಗ್ಲೆಂಡ್, ನ್ಯೂಜಿಲೆಂಡ್ ಎದುರು ಅಭ್ಯಾಸ ಪಂದ್ಯ

ದುಬೈ (ಪಿಟಿಐ): ಮಹಿಳಾ ಏಕದಿನ ವಿಶ್ವಕಪ್ ಟೂರ್ನಿ ಆರಂಭಕ್ಕೂ ಮೊದಲು, ಭಾರತದ ವನಿತೆಯರು ಇಂಗ್ಲೆಂಡ್ ಹಾಗೂ ನ್ಯೂಜಿಲೆಂಡ್ ತಂಡದ ಎದುರು ತಲಾ ಒಂದು ಅಭ್ಯಾಸ ಪಂದ್ಯ ಆಡಲಿದ್ದಾರೆ.

ಭಾರತ ಮಹಿಳಾ ತಂಡವು, ಬೆಂಗಳೂರಿನ ಹೊರವಲಯದಲ್ಲಿರುವ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ಸೆಪ್ಟೆಂಬರ್ 25ರಂದು ಇಂಗ್ಲೆಂಡ್ ತಂಡದ ವಿರುದ್ಧ ಅಭ್ಯಾಸ ಪಂದ್ಯ ಆಡಲಿದೆ. ಸೆಪ್ಟೆಂಬರ್ 27ರಂದು ನ್ಯೂಜಿಲೆಂಡ್ ತಂಡದ ಎದುರು ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೆಣಸಲಿದೆ.

‘ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ, ಬಿಸಿಸಿಐ ಶ್ರೇಷ್ಠತಾ ಕೇಂದ್ರ, ಕೊಲಂಬೊದ ಆರ್. ಪ್ರೇಮದಾಸ ಕ್ರೀಡಾಂಗಣ ಹಾಗೂ ಕೊಲಂಬೊ ಕ್ರಿಕೆಟ್ ಕ್ಲಬ್ ಅಂಗಳದಲ್ಲಿ ಸೆಪ್ಟೆಂಬರ್ 25ರಿಂದ 28ರವರೆಗೆ ಒಟ್ಟು 9 ಅಭ್ಯಾಸ ಪಂದ್ಯಗಳು ನಡೆಯಲಿವೆ’ ಎಂದು ಐಸಿಸಿ ಮಂಗಳವಾರ ಪ್ರಕಟಣೆಯಲ್ಲಿ ತಿಳಿಸಿದೆ.

ಭಾರತವು 12 ವರ್ಷಗಳ ನಂತರ ಇದೇ ಮೊದಲ ಬಾರಿ ಈ ಟೂರ್ನಿಯ ಆತಿಥ್ಯ ವಹಿಸಿದೆ. ಕೊಲಂಬೊವನ್ನು ತಟಸ್ಥ ತಾಣವಾಗಿ ಆಯ್ಕೆ ಮಾಡಲಾಗಿದ್ದು, ಪಾಕಿಸ್ತಾನ ತನ್ನ ಎಲ್ಲ ಪಂದ್ಯಗಳನ್ನು (ಅಭ್ಯಾಸ ಪಂದ್ಯಗಳೂ ಒಳಗೊಂಡಂತೆ) ಇಲ್ಲಿ ಆಡಲಿದೆ.

ಭಾರತ ಕ್ರಿಕೆಟ್ ತಂಡದ ನಾಯಕ ಶುಭಮನ್ ಗಿಲ್‌ಗೆ ಕಿಂಗ್ ಚಾರ್ಲ್ಸ್ ಪ್ರಶ್ನೆ

‘ಕೊನೆ ಬ್ಯಾಟರ್ ಔಟಾದಾಗ ಹೇಗನಿಸಿತು’

ಲಂಡನ್ (ಪಿಟಿಐ): ‘ನಿಮ್ಮ ಕೊನೆಯ ಬ್ಯಾಟರ್ ಮೊಹಮ್ಮದ್ ಸಿರಾಜ್ ಅವರು ಔಟಾಗಿದ್ದು ದುರದೃಷ್ಟಕರ. ಆದರೆ ಆ ಸಂದರ್ಭದಲ್ಲಿ ನಿಮಗೆ ಹೇಗನಿಸಿತು?’–

ಬ್ರಿಟನ್‌ನ ಮೂರನೇ ಕಿಂಗ್ ಚಾರ್ಲ್ಸ್ ಅವರು ಮಂಗಳವಾರ ಭಾರತ ತಂಡದ ನಾಯಕ ಶುಭಮನ್ ಗಿಲ್ ಅವರಿಗೆ ಕೇಳಿದ ಪ್ರಶ್ನೆ ಇದು.

ಭಾರತದ ಪುರುಷ ಮತ್ತು ಮಹಿಳಾ ಕ್ರಿಕೆಟ್ ತಂಡಗಳು ಕಿಂಗ್ ಚಾರ್ಲ್ಸ್ ಅವರ ಆಹ್ವಾನದ ಮೇರೆಗೆ ‘ಗಾರ್ಡನ್ಸ್ ಆಫ್ ಕ್ಲಾರೆನ್ಸ್ ಹೌಸ್’ಗೆ ಭೇಟಿ ನೀಡಿದ್ದವು. ಈ ಸಂದರ್ಭದಲ್ಲಿ 76 ವರ್ಷದ ಚಾರ್ಲ್ಸ್ ಅವರು ಆಟಗಾರರೊಂದಿಗೆ ಹೆಚ್ಚು ಹೊತ್ತು ಸಂವಾದ ನಡೆಸಿದರು.

ಗಿಲ್, ಕಾರ್ಯಕ್ರಮದ ನಂತರ ಮಾಧ್ಯಮಗಳೊಂದಿಗೆಮಾತನಾಡಿದರು.

‘ಚಾರ್ಲ್ಸ್ ಅವರು ತುಂಬಾ ಅದ್ಭುತವಾದ ವ್ಯಕ್ತಿ. ಹೃದಯ ವೈಶಾಲ್ಯವಿರುವವರು. ಅವರೊಂದಿಗೆ ಉತ್ತಮ ಸಂವಾದ ನಡೆಸಿದ್ದು ಸಂತಸವಾಗಿದೆ. ರೋಚಕ ಟೆಸ್ಟ್‌ನಲ್ಲಿ ನಮ್ಮ ಕೊನೆಯ ಬ್ಯಾಟರ್ ಸಿರಾಜ್ ಅವರು ಔಟಾದಾಗ ನಮಗೆಲ್ಲ ಹೇಗನಿಸಿತು ಎಂದು ಚಾರ್ಲ್ಸ್ ಕೇಳಿದರು. ಅದಕ್ಕೆ ಪ್ರತಿಕ್ರಿಯಿಸಿದ ನಾವು, ಅದೊಂದು ದುರದೃಷ್ಟಕರ ಪಂದ್ಯ. ಸರಣಿಯ ಮುಂದಿನ ಎರಡೂ ಪಂದ್ಯಗಳಲ್ಲಿ ಅದೃಷ್ಟ ನಮ್ಮ ಪರವಾಗಿರುವ ನಿರೀಕ್ಷೆ ಇದೆ ಎಂದೆವು. ಅವರೊಂದಿಗೆ ಇನ್ನೂ ಬಹಳಷ್ಟು ಅರ್ಥಪೂರ್ಣ ಮಾತುಕತೆಗಳನ್ನು ಮಾಡಿದೆವು’ ಎಂದರು.



ಬ್ರಿಟನ್‌ನ ಕಿಂಗ್ ಚಾರ್ಲ್ಸ್ ಅವರು ಮಂಗಳವಾರ ಭಾರತದ ಮಹಿಳಾ ಮತ್ತು ಪುರುಷರ ಕ್ರಿಕೆಟ್ ತಂಡದ ಆಟಗಾರರೊಂದಿಗೆ ಮಾತುಕತೆ ನಡೆಸಿದರು ಎಪಿ/ಪಿಟಿಐ ಚಿತ್ರ

ಸೋಮವಾರ ಲಾರ್ಡ್ಸ್‌ನಲ್ಲಿ ಭಾರತ ತಂಡವು 22 ರನ್‌ಗಳಿಂದ ಸೋತಿತು. ಕೊನೆಯ ವಿಕೆಟ್ ಜೊತೆಯಾಟದಲ್ಲಿ ರವೀಂದ್ರ ಜಡೇಜ ಮತ್ತು ಮೊಹಮ್ಮದ್ ಸಿರಾಜ್ ಅವರ ವೀರೋಚಿತ ಹೋರಾಟದಿಂದಾಗಿ ತಂಡಕ್ಕೆ ಗೆಲುವಿನ ನಿರೀಕ್ಷೆ ಮೂಡಿತ್ತು. ಆದರೆ, ಇಂಗ್ಲೆಂಡ್ ಆಫ್‌ಸ್ಪಿನ್ನರ್ ಶೋಯಬ್ ಬಶೀರ್ ಅವರ ಎಸೆತವನ್ನು ಸಿರಾಜ್ ರಕ್ಷಣಾತ್ಮಕವಾಗಿ ಆಡಿದರು. ಚೆಂಡು ನೆಲದ ಮೇಲೆ ನಿಧಾನವಾಗಿ ಉರುಳುತ್ತಾ ಹೋಗಿ ಸ್ಟಂಪ್‌ಗೆ ಬಡಿದು ಬೇಲ್ಸ್ ಉರುಳಿತು. ಅದರೊಂದಿಗೆ ಭಾರತಕ್ಕೆ ಸೋಲಿನ ನಿರಾಸೆ ಕಾಡಿತು.

‘ಸರಣಿಯ ಕಳೆದ ಮೂರು ಪಂದ್ಯಗಳೂ ಅದ್ಭುತವಾಗಿದ್ದವು. ಉನ್ನತ ದರ್ಜೆಯ ಈ ಪಂದ್ಯಗಳಿಂದಾಗಿ ಜನರಲ್ಲಿ ಟೆಸ್ಟ್ ಕ್ರಿಕೆಟ್ ಕುರಿತ ಆಸಕ್ತಿ ಹೆಚ್ಚಿದೆ. ನಮ್ಮ ತಂಡಕ್ಕೂ ಇಲ್ಲಿಯ ಸ್ಥಳೀಯರು ಬೆಂಬಲ ನೀಡುತ್ತಿದ್ದಾರೆ. ಎಲ್ಲಿ ಹೋದರೂ ಉತ್ತಮ ಬೆಂಬಲ ಸಿಗುತ್ತಿರುವುದು ನಮ್ಮ ಅದೃಷ್ಟ. ಸರಣಿಯ ಆರಂಭದ ಕೆಲವು ದಿನಗಳಲ್ಲಿ ಇಂಗ್ಲೆಂಡ್ ಅಭಿಮಾನಿಗಳು ಹೆಚ್ಚಿದ್ದರು. ಆದರೆ ಲಾರ್ಡ್ಸ್ ಪಂದ್ಯದಲ್ಲಿ ಕಳೆದ ಮೂರು ದಿನಗಳಲ್ಲಿ ನಮಗೆ ಅಪಾರಬೆಂಬಲದೊರೆಯಿತು’ಎಂದರು.

ಜಯದ ಅವಕಾಶ ಇತ್ತು: ಗಂಗೂಲಿ

ಮುಂಬೈ (ಪಿಟಿಐ): ಭಾರತ ತಂಡದಲ್ಲಿರುವ ಬ್ಯಾಟರ್‌ಗಳ ಸಾಮರ್ಥ್ಯವನ್ನು ನೋಡಿದರೆ ಲಾರ್ಡ್ಸ್ ಟೆಸ್ಟ್ ಗೆಲ್ಲುವುದು ಕಷ್ಟವೇನಾಗಿರಲಿಲ್ಲ. ಈ ಸೋಲಿನಿಂದ ಬೇಸರವಾಗಿದೆ ಎಂದು ಕ್ರಿಕೆಟಿಗ ಸೌರವ್ ಗಂಗೂಲಿ ಹೇಳಿದ್ದಾರೆ.

‘ಭಾರತ ತಂಡದ ಡ್ರೆಸ್ಸಿಂಗ್ ರೂಮ್‌ನಲ್ಲಿ ಉತ್ತಮ ಬ್ಯಾಟರ್‌ಗಳಿದ್ದಾರೆ. ಒಂದಿಷ್ಟು ತಾಳ್ಮೆಯಿಂದ ಆಡಬೇಕಿತ್ತು. 190 ರನ್ ಗುರಿಯನ್ನು ಸಾಧಿಸುವುದು ಕಷ್ಟವೇನಾಗಿರಲಿಲ್ಲ. ರವೀಂದ್ರ ಜಡೇಜ ಹೋರಾಟ ಮತ್ತು ಅವರು ರನ್ ಗಳಿಸಿದ್ದನ್ನು ನಾವು ನೋಡಿದೆವು. ಮೇಲಿನ ಕ್ರಮಾಂಕದ ಬ್ಯಾಟರ್‌ಗಳೂ ಅಂತಹ ಆಟ ಆಡಬಹುದಿತ್ತು. ಸರಣಿಯಲ್ಲಿ 2–1ರ ಮುನ್ನಡೆ ಸಾಧಿಸುವ ಅವಕಾಶ ಕೈತಪ್ಪಿತು’ ಎಂದು ವಿಷಾದಿಸಿದರು.

‘ಅಗ್ರಸ್ಥಾನದಲ್ಲಿರುವ ಬ್ಯಾಟರ್‌ಗಳು ಒಂದಿಷ್ಟು ಹೋರಾಟ ತೋರಿದ್ದರೆ ಮತ್ತು ರನ್‌ಗಳನ್ನು ಪೇರಿಸಿದ್ದರೆ ಗೆಲುವಿನ ಹಾದಿ ಸುಲಭವಾಗುತ್ತಿತ್ತು’ ಎಂದರು. ಅವರು ಇಂಡಿಯನ್ ರೇಸಿಂಗ್ ಲೀಗ್ ಮತ್ತು ಎಫ್4 ಇಂಡಿಯಾ ಚಾಂಪಿಯನ್‌ಷಿಪ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದರು.

ಕರ್ನಾಟಕ ರಾಜ್ಯ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿ

ಇಶಾನ್, ಜೋಹನ್ನಾ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಯಚೂರಿನ ಇಶಾನ್ ಪಾಠಕ್ ಮತ್ತು ಬೆಂಗಳೂರು ನಗರದ ಜೋಹನ್ನಾ ಅಹಿಲನ್ ಇಲ್ಲಿನ ಪೇಸ್ ಅಕಾಡೆಮಿಯಲ್ಲಿ ನಡೆದ ಕರ್ನಾಟಕ ರಾಜ್ಯ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ 13 ವರ್ಷದೊಳಗಿನವರ ಬಾಲಕರ ಮತ್ತು ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ಗೆದ್ದರು.



ಕರ್ನಾಟಕ ರಾಜ್ಯ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ 11 ಮತ್ತು 13 ವರ್ಷದೊಳಗಿನವರ ವಿಭಾಗಗಳ ಸಿಂಗಲ್ಸ್ ಮತ್ತು ಡಬಲ್ಸ್ ಸ್ಪರ್ಧೆಗಳ ವಿಜೇತರು

ಫೈನಲ್‌ನಲ್ಲಿ ಇಶಾನ್ 21-15, 22-24, 22-20 ರಿಂದ ಆರನೇ ಶ್ರೇಯಾಂಕದ ದಕ್ಷ್ ಧೋತ್ರದ್ (ಬೆಂಗಳೂರು ನಗರ) ಅವರಿಗೆ ಆಘಾತ ನೀಡಿದರು. ಜೋಹನ್ನಾ 13-21, 21-18, 21-12 ರಿಂದ ಅಗ್ರ ಶ್ರೇಯಾಂಕದ ಪುಣ್ಯಾ ಎಂ.ಎನ್ (ಬೆಂಗಳೂರು ನಗರ) ಅವರನ್ನು ಹಿಮ್ಮೆಟ್ಟಿಸಿದರು.

ಬಾಲಕರ ಡಬಲ್ಸ್ ಫೈನಲ್‌ನಲ್ಲಿ ರಾಯಚೂರಿನ ಇಶಾನ್ ಮತ್ತು ರೋಹನ್ ಕೆ. 23-21, 21-13ರಿಂದ ಬೆಂಗಳೂರಿನ ದಕ್ಷ್ ಮತ್ತು ಸಂಶ್ರೆ ಸುನಿಲ್ ಅವರನ್ನು ಮಣಿಸಿದರು.

ಬಾಲಕಿಯರ ಡಬಲ್ಸ್ ಫೈನಲ್‌ನಲ್ಲಿ ಬೆಂಗಳೂರಿನ ಜೋಹನ್ನಾ ಮತ್ತು ಪುಣ್ಯಾ 17-21, 21-14, 21-10ರಿಂದ ಬೆಂಗಳೂರಿನ ದಕ್ಷಿತಾ ಮುಂಡ್ಲಾ ಮತ್ತು ಜನ್ಯಶ್ರೀ ಬಿ, ಜೋಡಿಯನ್ನು ಸೋಲಿಸಿದರು.

ಅಗಸ್ತ್ಯ ಚಾಂಪಿಯನ್: 11 ವರ್ಷದೊಳಗಿನ ಬಾಲಕರ ಸಿಂಗಲ್ಸ್ ಪ್ರಶಸ್ತಿಯನ್ನು ಬೆಂಗಳೂರಿನ ಅಗಸ್ತ್ಯ ಎ. ಗೆದ್ದುಕೊಂಡರು. ಅವರು ಫೈನಲ್‌ನಲ್ಲಿ 21-17, 21-17ರಿಂದ ಬೆಂಗಳೂರು ಗ್ರಾಮಾಂತರದ ದಕ್ಷ್ ರಘುನಂದ ಅಯ್ಯಂಗಾರ್ ಅವರನ್ನು ಮಣಿಸಿದರು.

ಬಾಲಕಿಯರ ವಿಭಾಗದ ಪ್ರಶಸ್ತಿ ಬೆಂಗಳೂರು ನಗರದ ಶ್ರೀಯಾ ಎ. ರಾವ್ ಪಾಲಾಯಿತು. ಪ್ರಶಸ್ತಿ ಸುತ್ತಿನಲ್ಲಿ 21-13, 21-18ರಿಂದ ಯಶೋನಿಧಿ ಟಿ. ಅವರನ್ನು ಸೋಲಿಸಿದರು.

ಬೆಂಗಳೂರಿನ ನೀವ್ ಶುಶ್ರುತ್ ಮತ್ತು ಪ್ರಣವ್ ಎನ್. ಜೋಡಿ ಬಾಲಕರ ಡಬಲ್ಸ್ ಫೈನಲ್‌ನಲ್ಲಿ 21-9 21-6ರಿಂದ ಜೆ.ಪಿ. ಪಾರ್ಥಿವ್ ಸಾಮಾನ್ಯು ಮತ್ತು ಸೆಲ್ವಪ್ರಾಣೇಶ್ ಸೆಲ್ವಪ್ರಭು ವಿರುದ್ಧ ಗೆದ್ದಿತು.

ಬಾಲಕಿಯರ ಡಬಲ್ಸ್ ಪ್ರಶಸ್ತಿ ಸುತ್ತಿನಲ್ಲಿ ನಿಹಾರಿಕಾ ರಾಜ್ ಮತ್ತು ಶ್ರೀಯಾ 21-13, 22-20ರಿಂದ ಕ್ರಿಶಾ ಸಿಂಗದೇವ್ ಮತ್ತು ಖುಷಿ ಆರ್. ಅವರನ್ನು ಮಣಿಸಿತು.

ಮ್ಯಾರಥಾನ್ ಓಟಗಾರ ಫೌಜಾ ಸಿಂಗ್ ಸಾವು

ಚಂಡೀಗಢ (ಪಿಟಿಐ): ‘ಶತಾಯುಷಿ’ ಮ್ಯಾರಥಾನ್ ಓಟಗಾರ ಫೌಜಾ ಸಿಂಗ್ ಅವರು ವಾಹನ ಡಿಕ್ಕಿ ಹೊಡೆದು ಸೋಮವಾರ ಮೃತಪಟ್ಟಿದ್ದಾರೆ. ಅವರಿಗೆ 114 ವರ್ಷ ವಯಸ್ಸಾಗಿತ್ತು.

ಪಂಜಾಬ್‌ನ ಜಲಂಧರ್ ಜಿಲ್ಲೆಯ ಬಿಯಾಸ್ ಗ್ರಾಮದ ರಸ್ತೆಯಲ್ಲಿ ಮಧ್ಯಾಹ್ನ 3.30ರ ಸುಮಾರಿಗೆ ನಡೆದುಕೊಂಡು ಹೋಗುತ್ತಿದ್ದಾಗ, ಭೋಗ್ಪುರ ಕಡೆಯಿಂದ ಬಂದ ಕಾರು ಡಿಕ್ಕಿ ಹೊಡೆದಿದ್ದರಿಂದ ಅವರ ತಲೆಗೆ ತೀವ್ರ ಗಾಯವಾಗಿತ್ತು. ಕೂಡಲೇ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಘಟನೆ ಬಳಿಕ ಕಾರು ಚಾಲಕ ಪರಾರಿಯಾಗಿದ್ದಾನೆ. ಆತನ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.



ಫೌಜಾ ಸಿಂಗ್

ಸಿಂಗ್ ನಿಧನದ ಸುದ್ದಿಯನ್ನು ಲೇಖಕ, ಪಂಜಾಬ್ ರಾಜ್ಯ ಮಾಜಿ ಮಾಹಿತಿ ಆಯುಕ್ತ ಖುಷ್ವಂತ್ ಸಿಂಗ್ ದೃಢಪಡಿಸಿದ್ದಾರೆ. ಖುಷ್ವಂತ್ ಅವರು ಫೌಜಾ ಸಿಂಗ್ ಅವರ ಜೀವನಚರಿತ್ರೆಯನ್ನು ‘ದಿ ಟರ್ಬನ್ಡ್ ಟೊರ್ನಾಡೊ’ ಹೆಸರಿನಲ್ಲಿ ರಚಿಸಿದ್ದಾರೆ.

1911ರಲ್ಲಿ ಕೃಷಿ ಕುಟುಂಬದಲ್ಲಿ ಜನಿಸಿದ ಸಿಂಗ್, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ಮ್ಯಾರಥಾನ್‌ಗಳಲ್ಲಿ ಭಾಗವಹಿಸಿ ಅನೇಕ ದಾಖಲೆಗಳನ್ನು ಮುಡಿಗೇರಿಸಿಕೊಂಡಿದ್ದರು. ಮ್ಯಾರಥಾನ್‌ನಲ್ಲಿ ಭಾಗವಹಿಸಿದ್ದ ಪ್ರಥಮ ಶತಾಯುಷಿ ಎಂಬ ಕೀರ್ತಿಗೂ ಪಾತ್ರರಾಗಿದ್ದರು.

2028ರ ಒಲಿಂಪಿಕ್ಸ್: ಕ್ರಿಕೆಟ್ ವೇಳಾಪಟ್ಟಿ ಪ್ರಕಟ

ಲಾಸ್ ಏಂಜಲೀಸ್ (ಪಿಟಿಐ): 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ಗೆ ಪುನರಾಗಮನ ಮಾಡಲಿರುವ ಕ್ರಿಕೆಟ್‌ನ ವೇಳಾಪಟ್ಟಿ ಪ್ರಕಟಿಸಲಾಗಿದೆ. ಜುಲೈ 12ರಿಂದ ಜುಲೈ 29ರತನಕ ಪುರುಷರು ಮತ್ತು ಮಹಿಳೆಯರ ವಿಭಾಗದಲ್ಲಿ ಪಂದ್ಯಗಳು ನಡೆಯಲಿವೆ.

128 ವರ್ಷಗಳ ನಂತರ ಒಲಿಂಪಿಕ್ ಕ್ರೀಡಾಕೂಟದಲ್ಲಿ ಇದೇ ಮೊದಲ ಬಾರಿ ಕ್ರಿಕೆಟ್ ಪಂದ್ಯಾಟ ಆಯೋಜಿಸಲಾಗಿದೆ. ಇದಕ್ಕಾಗಿ ಲಾಸ್ ಏಂಜಲೀಸ್‌ನಿಂದ ಸುಮಾರು 50 ಕಿ.ಮೀ. ದೂರದಲ್ಲಿರುವ ಪೊಮೆನಾ ನಗರದ ಫೇರ್‌ಗ್ರೌಂಡ್ಸ್ ಕ್ರೀಡಾಂಗಣ ಸಜ್ಜಾಗಲಿದೆ. ಜುಲೈ 20ರಂದು ಮಹಿಳೆಯರ ಮತ್ತು 29ರಂದು ಪುರುಷರ ಪದಕ ಸುತ್ತಿನ (ಫೈನಲ್) ಪಂದ್ಯಗಳು ನಡೆಯಲಿವೆ.

ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ತಲಾ ಆರು ತಂಡಗಳು ಪೈಪೋಟಿ ನಡೆಸಲಿವೆ. ಪ್ರತಿ ತಂಡದಲ್ಲಿ 15 ಸದಸ್ಯರಿದ್ದು, ಒಟ್ಟು 180 ಆಟಗಾರರು ಕಣಕ್ಕಿಳಿಯಲಿದ್ದಾರೆ. ಸ್ಪರ್ಧೆಯು ಟಿ20 ಮಾದರಿಯಲ್ಲಿದ್ದು, ಹೊಸ ಪ್ರೇಕ್ಷಕರನ್ನು ಸೆಳೆಯುವ ಗುರಿಯನ್ನು ಹೊಂದಲಾಗಿದೆ.

ಜುಲೈ 14 ಮತ್ತು 21ರಂದು ಮಾತ್ರ ಯಾವುದೇ ಪಂದ್ಯವಿರುವುದಿಲ್ಲ. ಡಬಲ್ ಹೆಡರ್ ಸೇರಿ ಉಳಿದ ದಿನಗಳಲ್ಲಿ ಪಂದ್ಯಗಳು ನಡೆಯಲಿವೆ ಎಂದು ಒಲಿಂಪಿಕ್ಸ್ ಸಂಘಟನಾ ಸಮಿತಿ ತಿಳಿಸಿದೆ.

1900ರಲ್ಲಿ ಇಂಗ್ಲೆಂಡ್ ಮತ್ತು ಫ್ರಾನ್ಸ್ ನಡುವಿನ ಪಂದ್ಯವೇ ಒಲಿಂಪಿಕ್ಸ್‌ನ ಏಕೈಕ ಕ್ರಿಕೆಟ್ ಪಂದ್ಯವಾಗಿತ್ತು. ಈ ಪಂದ್ಯವನ್ನು ಗೆದ್ದ ಇಂಗ್ಲೆಂಡ್, ಚಿನ್ನದ ಪದಕ ತನ್ನದಾಗಿಸಿಕೊಂಡಿತ್ತು. ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯು 2028ರ ಕ್ರೀಡಾಕೂಟದಲ್ಲಿ ಕ್ರಿಕೆಟ್, ಸ್ಕ್ವಾಷ್ ಸೇರಿದಂತೆ ಐದು ಹೊಸ ಕ್ರೀಡೆಗಳನ್ನು ಸೇರಿಸಲು ಅನುಮೋದನೆ ನೀಡಿದೆ.